ಸಂವಾದ

ಜೂನ್ 2003 ರೂ. 10/- ಮಾಸ ಪತ್ರಿಕೆ

ರಾಷ್ಟ್ರೀಯ ಮನಸ್ಸಾಕ್ಷಿಯ ತುಮುಲಗಳು

● ಡಾ॥ ಆನಂದ್ ತೇಲ್‌ತುಂಬ್ಡೆ

ಬ್ರಾಹ್ಮಣರ 'ಕಷ್ಟ'ದಲ್ಲಿ ದಲಿತರಿಗೂ ಪಾಲು ಇರಲಿ

● ಡಾ॥ ನಟರಾಜ್ ಹುಳಿಯಾರ್

ಅವಲೋಕನ

● ಡಾ॥ ಎಲ್. ಹನುಮಂತಯ್ಯ
● ಅಗ್ರಹಾರ ಕೃಷ್ಣಮೂರ್ತಿ
● ಮೋಹನ ನಾಗಮ್ಮನವರ



ಭೋಪಾಲ್ ಘೋಷಣೆ

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 8

ಜೂನ್ 2003

ಸಂಪಾದಕ :

ಇಂದೂಧರ ಹೊನ್ನಾಪುರ

ನೆರವು :

ಕೆ.ಸಿ. ಶಿವರಾಂ

ಹಾಲ್ಕುರಿಕೆ ಶಿವಶಂಕರ್

ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091

ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
ANJANANAGARA, MAGADI ROAD
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಬ್ರಾಹ್ಮಣರ 'ಕಷ್ಟ'ದಲ್ಲಿ ದಲಿತರಿಗೂ ಪಾಲು ಇರಲಿ!
  ○ ಡಾ. ನಟರಾಜ್ ಹುಳಿಯಾರ್ 6
- ಒಡವೆ ಸೀರೆ ಮೀರಿದ ಮನಸ್ಸುಗಳು
  ○ ಬಿ.ಟಿ. ಲಲಿತಾ ನಾಯಕ್ 8
- ರಾಷ್ಟ್ರೀಯತೆ, ದೇಶಪ್ರೇಮ ಯಾರ ಸೊತ್ತು?
  ○ ಸನತ್‌ಕುಮಾರ್ ಬೆಳಗಲಿ 10
- ಜಾನಪದ ನಾಯಕತ್ವ ಇಂದಿನ ಅವಶ್ಯಕತೆ
  ○ ಡಾ|| ಹಿ.ಶಿ. ರಾಮಚಂದ್ರೇಗೌಡ 12



- ಮಠಾಧೀಶರ ಸಮಾವೇಶ?
  ○ ವಿಶ್ವಾರಾಧ್ಯ ಸತ್ಯಂಪೇಟೆ 16
- ಐ.ಐ.ಟಿ.ಗಳಲ್ಲಿನ ಶೈಕ್ಷಣಿಕ ಭಯೋತ್ಪಾದನೆ
  ○ ಸಿರಿಯಾವನ್ ಆನಂದ್ 18
- ಹೆಣ್ಣನ್ನು ದೇವತೆ ಎಂದು ಸ್ತುತಿಸುವ ದೇಶಕ್ಕೆ 89ನೇ ಸ್ಥಾನ ! 21
- ಝೂನ್ : ತೋರು ಬೆರಳು 26
- ರಾಷ್ಟ್ರೀಯ ಮನಸ್ಸಾಕ್ಷಿಯ ತುಮುಲಗಳು
  ○ ಡಾ|| ಆನಂದ್ ತೇಲ್‌ತುಂಬ್ಡೆ 30
- ಭೋಪಾಲ್ ಸಮಾವೇಶದ ಘೋಷಣೆಗಳು 32
- ದಲಿತ ಚರಿತ್ರೆಯ ಆಕರಗಳು
  ○ ಎಸ್. ಎಸ್. ಹಿರೇಮಠ 36
- ಅವಲೋಕನ-ಸಂವಾದ 22
  ○ ಡಾ|| ಎಲ್. ಹನುಮಂತಯ್ಯ
  ○ ಅಗ್ರಹಾರ ಕೃಷ್ಣಮೂರ್ತಿ
  ○ ಮೋಹನ ನಾಗಮ್ಮನವರ
- ವಸಂತಮೂನರ ಅಗಲಿಕೆ ; ಭರಿಸಲಾಗದ ನಷ್ಟ 41
- ಅಂಬೇಡ್ಕರ್ ಹೀಗೆ ಹೇಳುತ್ತಾರೆ 42

ಕವನಗಳು : ❑ ಪಾದ ಪುರಾಣ - 38, ❑ ಮಗು - 39

ಮುಖಪುಟ ಕಲಾವಿದ: ಜಾನ್ ದೇವರಾಜ್ ವಿನ್ಯಾಸ: ರಾಥೋಡ್



ಉತ್ಕೃಷ್ಟ ವಿಶೇಷಾಂಕ, ವಿಚಾರ

ಮಾನ್ಯರೆ,

ಆಡು ಮುಟ್ಟದ ಸೊಪ್ಪಿಲ್ಲ. ಅಂಬೇಡ್ಕರ್ ಮುಟ್ಟದ ಕ್ಷೇತ್ರವಿಲ್ಲ ಎಂಬ ಮಾತನ್ನು ಕಳೆದ ಸಂಚಿಕೆ "ಸಂವಾದ ಅಂಬೇಡ್ಕರ್ ವಿಶೇಷಾಂಕ" ದೃಢಪಡಿಸಿದೆ. ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅಂಬೇಡ್ಕರ್‌ರವರ ಅನೇಕ ಲೇಖನಗಳನ್ನು ಹೊತ್ತ ಸಂವಾದ ನಿಜವಾಗಿಯೂ ಉತ್ಕೃಷ್ಟವಾಗಿ ಮೂಡಿ ಬಂದಿದೆ.

ಅಧಿಕಾರ ಮತ್ತು ಕುರ್ಚಿಯ ಆಸೆಗಾಗಿ ಎಂತಹ ಕೀಳು ಮಟ್ಟದ ರಾಜಿಗಾದರೂ ಸೈ ಎನ್ನುವ ಅವಕಾಶವಾದಿತನದಿಂದ ಕೂಡಿರುವ ರಾಜಕಾರಣಿಗಳೇ ತುಂಬಿರುವ ನಮ್ಮ ನಡುವಿನ ಎಲ್ಲಾ ವರ್ಗದ ರಾಜಕಾರಣಿಗಳಿಗೆ ಅಧಿಕಾರಿಗಳಿಗೆ "ಅಂಬೇಡ್ಕರ್‌ರವರ ನಾನೇಕೆ ಮಂತ್ರಿ ಪದವಿ ಬಿಡಬೇಕಾಯ್ತು" ಲೇಖನ ಸಕಾಲಿಕವಾಗಿದೆ.

ತಮ್ಮ ಕ್ಷುಲ್ಲಕ ಆಸೆಗಾಗಿ ತಮ್ಮದೇ ಮುಗ್ಧ ಸಮುದಾಯದ ಜನರ ಬದುಕಿಗೆ ಆತ್ಮ ಗೌರವ-ಆತ್ಮಸ್ಥೈರ್ಯ ಎರಡನ್ನೂ ತಂದುಕೊಟ್ಟ ಅಂಬೇಡ್ಕರ್‌ರವರನ್ನು ತಲೆ ಹಿಡಿಯಲೂ ಹಿಂಜರಿಯದ ಗೋಸುಂಬೆ ರೂಪದ ದಲಿತ ಅಧಿಕಾರಿ-ರಾಜಕೀಯ ಧುರೀಣರು ಇನ್ನಾದರೂ ತಮ್ಮ ಸಣ್ಣತನಗಳನ್ನು ಬದಿಗಿಟ್ಟು ಮೇಲ್ವರ್ಗದವರ ಎದುರು ಡೊಗ್ಗು ಸಲಾಮು ಹಾಕುವ ಬದಲು ಸ್ವಾಭಿಮಾನದೊಂದಿಗೆ ದಲಿತ ಸಮುದಾಯದ ಹಿತಾಸಕ್ತಿಗಾಗಿ ಕಾರ್ಯೋನ್ಮುಖರಾಗಲಿ. ಆ ಮಟ್ಟಿಗೆ "ಸಂವಾದ" ಇವರ ಕಣ್ತೆರೆಸಲಿ.

ಪ್ರಕಾಶ್, ಗಿರಿನಗರ, ಬೆಂಗಳೂರು

ಲೇಖನ, ವಿನ್ಯಾಸ ಇಷ್ಟವಾಯಿತು

ಪ್ರೀತಿಯ ಇಂಧೂದರ ಹೊನ್ನಾಪುರ,

ವಂದನೆಗಳು, ತಮ್ಮ ಸಂಪಾದಕತ್ವದ 'ಸಂವಾದ' ಪ್ರತಿ ನನಗೆ ಮೈಸೂರಿನಲ್ಲಿ ಇತ್ತೀಚೆಗೆ ಜರುಗಿದ ವಿಚಾರ ಸಂಕಿರಣವೊಂದರಲ್ಲಿ ಲಭ್ಯವಾಯಿತು. ನಿಮ್ಮ 'ಸಂವಾದ' ವಿನ್ಯಾಸ, ಲೇಖನಗಳು ತುಂಬಾ ಇಷ್ಟವಾಯಿತು. 'ಪಂಚಮ'ದ ನಂತರ ವೈಚಾರಿಕ ಸಾಹಿತ್ಯದ ಭೋಜನವಿಲ್ಲದೆ ಕಂಗೆಟ್ಟಿದ ನಮ್ಮಂಥ ಹಳೇ ದಸಂಸದ ಗೆಳೆಯರಿಗೆ 'ಪಂಚಮ' ಸಿಕ್ಕಿದಷ್ಟೇ ಖುಷಿಯಾಯ್ತು.

ನಿಮ್ಮ ಈ ಪ್ರಯತ್ನಕ್ಕೆ ಶುಭ ಹಾರೈಕೆಗಳು.

ಸಿ. ಹರಕುಮಾರ್, ಮೈಸೂರು

ನೆಲದ ಜೀವಗಳೊಂದಿಗೆ ಸಂವಾದಿಸಲಿ

ಇಂಧೂಧರ ಹೊನ್ನಾಪುರ

ನಮಸ್ಕಾರಗಳು,

'ಸಂವಾದ' ಪತ್ರಿಕೆ ಬಂತು. ಒಂದೇ ಬೈಟಕ್‌ನಲ್ಲಿ ಪತ್ರಿಕೆ ಓದಿಸಿಕೊಂಡು ಹೋಯ್ತು. ಇದೇ ಈ ಪತ್ರಿಕೆಯ ವೈಶಿಷ್ಟ್ಯ ಮತ್ತು ಜೀವಂತಿಕೆ. ಸಮಕಾಲೀನ ಸಮಸ್ಯೆಗಳೊಂದಿಗೆ ಸಾಂಸ್ಕೃತಿಕ-ಆರೋಗ್ಯಪೂರ್ಣ-ಕಳಕಳಿಯ ಲೇಖನಗಳು ಈ ಪತ್ರಿಕೆಗೆ ಒಂದು ಗರಿ. ಮುಂದೆ ಈ ನೆಲದ ಜೀವಗಳೊಂದಿಗೆ 'ಸಂವಾದಿ'ಸುವ ಸ್ಪಷ್ಟ ಸೂಚನೆ.

ಇಂತಿ,

ವಿಶ್ವಾರಾಧ್ಯ ಸತ್ಯಂಪೇಟೆ

ಶಹಾಪುರ

ದಲಿತ ಚಳುವಳಿಯ ಅರಿವಿನ ಮರು ಹುಟ್ಟು

ಪ್ರಿಯ ಸಂಪಾದಕರೆ,

ಇಂದು ಮಾಧ್ಯಮಗಳಲ್ಲಿ ಜಾತಿ ಹಾಗೂ ಬಂಡವಾಳಶಾಹಿ ಅಧಿಕಾರ "ಜನಪ್ರಿಯತೆ" ಎಂಬ ಮಾರುಕಟ್ಟೆಯನ್ನು ನಿರ್ಮಿಸುವ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಜನರಲ್ಲಿ ಸೂಕ್ಷ್ಮತೆಯನ್ನು ಬೆಳೆಸುವುದು ಅಪಾಯಕಾರಿ ಎಂದು ಜಾತಿ ಹಾಗೂ ಬಂಡವಾಳ ಶಾಹಿ ಅಧಿಕಾರ ಎಚ್ಚರವಹಿಸುತ್ತಿದೆ. ಇಂಥ ಸಂದರ್ಭದಲ್ಲಿ "ಸಂವಾದ" ಒಂದು ಮಾನವೀಯವಾದ ಪ್ರಜ್ಞಾ ಚಳುವಳಿಯನ್ನು ಆರಂಭಿಸಲು ಹೊರಟಿದೆ. ಐದು ಸಾವಿರಕ್ಕೂ ಹೆಚ್ಚು ವರ್ಷದಿಂದ ಹಿಂಸಿಸುತ್ತಿರುವ ಜಾತಿ ಪದ್ಧತಿಯನ್ನು ಭಗ್ನಗೊಳಿಸಲು ಹೋರಾಡಿದ 'ದಲಿತ ಚಳುವಳಿ' 'ಸಂವಾದ' ಮೂಲಕ ಹೊಸ ಅರಿವಿನೊಂದಿಗೆ ಮರುಹುಟ್ಟು ಪಡೆಯುತ್ತಿದೆ.

ಈ ಪತ್ರಿಕೆ ಎಲ್ಲ ಜನಾಂಗದ ಮನೆ ಮನಗಳನ್ನು ಪ್ರವೇಶಿಸಲೆಂದು ಆಶಿಸುತ್ತೇನೆ.

ಎಸ್.ಕೆ. ಹನುಮಂತಯ್ಯ, ತಿಪಟೂರು

ಚಿಂತಶೀಲ ಮನಸ್ಸುಗಳ ಸಂವಾದ

ಮಾನ್ಯ ಸಂಪಾದಕರೆ,

'ಸಂವಾದ'ವನ್ನು ನಿರಂತರವಾಗಿ ಓದುತ್ತಿದ್ದೇನೆ. ಪತ್ರಿಕೆಯು ಎಲ್ಲಾ ಶೋಷಿತ ಜೀವಗಳ ಜೀವನಾಡಿಯಾಗ ಬೇಕೆಂಬ ತುಡಿತವನ್ನಿಟ್ಟುಕೊಂಡು ಬರುತ್ತಿರುವುದು ಸಂತಸದ ವಿಚಾರದ ಜಾಗತಿಕ ಮಟ್ಟದ ತಾಂತ್ರಿಕ ಸ್ಪರ್ಧೆಗಳ ನಡುವೆ ಭಾರತೀಯ ಸಮಾಜದ ಬಹುರೂಪಗಳ ಸಂಸ್ಕೃತಿಯನ್ನು ಛಿದ್ರಗೊಳಿಸಿ ಹಿಂದುತ್ವದ ಏಕಾಕೃತಿಯನ್ನು ಹೇರಲು ಅವಿರತವಾಗಿ ಯತ್ನಿಸುತ್ತಿರುವ ಕೋಮುವಾದಿಗಳ ನಡುವೆ ನಮ್ಮ ಎಲ್ಲ ಬಹುಮುಖಿ ಸಂವೇದನೆಗಳು ಒಂದೇ ಸೂರಿನಡಿ ನಿಲ್ಲಬೇಕಾದ ಅನಿವಾರ್ಯತೆ ಇದೆ. 'ಸಂವಾದ' ಅಂತಹ ಬಹುಧ್ವನಿಗಳ ಒಂದೇ ವೇದಿಕೆಯಾಗುವ ಲಕ್ಷಣಗಳನ್ನು ಹೊಂದಿದೆ.

ಜಗತ್ತಿನ ಎಲ್ಲಾ ಪ್ರಗತಿಪರ ಚಿಂತಕರ ಆಲೋಚನೆ ಹಾಗೂ ಕ್ರಿಯೆಗಳನ್ನು ತಳಹದಿಯಾಗಿಟ್ಟುಕೊಂಡು ಇಂಡಿಯಾದ ಎಲ್ಲ ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ, ಮಹಿಳೆಯರ, ಆದಿವಾಸಿ, ಬುಡಕಟ್ಟುಗಳ ಬದುಕುಗಳನ್ನು ಕ್ರಿಯಾಶೀಲಗೊಳಿಸುವ ಪ್ರಯತ್ನಗಳು 'ಸಂವಾದ'ದಂತಹ ಪತ್ರಿಕೆಗಳಿಂದ ಸಾಧ್ಯವಾಗುತ್ತದೆ.

ನಾಡಿನ ಎಲ್ಲ ಚಿಂತನಶೀಲ ಮನಸ್ಸುಗಳು 'ಸಂವಾದ'ದ ಬೆನ್ನಿಗೆ ಇರುತ್ತವೆ; ಇರಬೇಕು ಎಂದು ಅಂದುಕೊಂಡಿದ್ದೇನೆ.

ತಮ್ಮ ವಿಶ್ವಾಸಿ,

ಮಂಜುನಾಥ್ ಗೀತಾ

ತಗಡೂರು

ಸಂಗ್ರಹ ಯೋಗ್ಯ

ಬಂಧುಗಳೇ,

ನೀವು ಏಪ್ರಿಲ್ ತಿಂಗಳಲ್ಲಿ ತಂದಿರುವ "ಅಂಬೇಡ್ಕರ್ ವಿಶೇಷಾಂಕ" ಸುಂದರವಾಗಿ ಮೂಡಿ ಬಂದಿದೆ. ಬಹುಶಃ ಅಂಬೇಡ್ಕರ್ ಹಿಂದುತ್ವದ ಹೀರೋ ಅಂದಿರುವ ಚೆಡ್ಡಿಗಳ ತೇವವಾಗಿರುವುದರಲ್ಲಿ ಅನುಮಾನವಿಲ್ಲ. ನಾನು ಈ ಪ್ರತಿಯನ್ನು ಖಾಸಗಿ ಗ್ರಂಥಾಲಯದಲ್ಲಿ ಗಮನಿಸಿದೆ. ಇದು ಸಂಗ್ರಹಕ್ಕೆ ಯೋಗ್ಯವಾದ ಕೃತಿಯಾಗಿರುವುದರಿಂದ ತಾವು ದಯವಿಟ್ಟು ನನಗೆ ಪ್ರತಿಯನ್ನು ಕಳುಹಿಸಿಕೊಡಿ. ತಗಲುವ ವೆಚ್ಚವನ್ನು ಕಳುಹಿಸಿಕೊಡುತ್ತೇನೆ. ತಪ್ಪದೇ ಕಳುಹಿಸಿಕೊಡಿ.

ಹೆಚ್.ಎನ್. ದಯಾನಂದ ಗೌಡ,

(B.A.L., L.L.B.),

ದೊಡ್ಡಬಳ್ಳಾಪುರ

ಇಷ್ಟವಾದ ವಿನ್ಯಾಸ

ಆತ್ಮೀಯರಾದ ಶ್ರೀ ಇಂಧೂದರ ಹೊನ್ನಾಪುರ ಅವರಿಗೆ,

ಮೇ-2003ರ 'ಸಂವಾದ' ತಲುಪಿದೆ. ಪತ್ರಿಕೆಯ ಒಟ್ಟಾರೆ ವಿನ್ಯಾಸ ಮತ್ತು ಅದರ ಧೋರಣೆಗಳು ಇಷ್ಟವಾದವು.

'ಸ್ತ್ರೀ ವಾದದ ಜಾತಿ ಪ್ರಶ್ನೆ...' ಮತ್ತು 'ಬಸವಣ್ಣನವರ ಬ್ಯಾಂಕ್ ಬ್ಯಾಲೆನ್ಸ್ ನಿಲ್ ಮಾಡಿದವರು' ಲೇಖನಗಳು ಚಿಂತನಾರ್ಹವಾಗಿದೆ. ದುರ್ಗಾಬಾಯಿ ಅವರ ಮುಖಪುಟದ ರೇಖಾಚಿತ್ರ ತುಂಬಾ ಸುಂದರವಾಗಿದೆ.

ಸ್ನೇಹದಿಂದ

ಶಶಿಕಲಾ ಸ್ವಾಮಿ

ಧಾರವಾಡ

ಮದುವೆಗೆ ಕರೆದು ಅಸ್ಪೃಶ್ಯತೆ ಆಚರಣೆ

ಹಾಸನ, ಮೇ 23: ಬೇಲೂರು ತಾಲ್ಲೂಕಿನ ಅಂಗಡಿಹಳ್ಳಿಯ ಹಕ್ಕಿಪಿಕ್ಕಿ ಜನಾಂಗದವರನ್ನು ಮದುವೆಗೆ ಆಹ್ವಾನಿಸಿ ಮೇಲ್ವರ್ಗದವರ ಊಟವಾದ ನಂತರ ಊಟ ಹಾಕುವುದಾಗಿ ಕಾಯಿಸಿ ಅಸ್ಪೃಶ್ಯತಾಚರಣೆ ಮಾಡಿರುವ ಘಟನೆ ಇಂದು ಸಂಜೆ ನಡೆದಿದೆ.

ಊಟಕ್ಕೆ ಕಾಯುತ್ತಿದ್ದಾಗ ಮದುವೆಗೆ ಬಂದಿದ್ದ ಹಕ್ಕಿಪಿಕ್ಕಿ ಜನಾಂಗದ ಒಬ್ಬ ಮಹಿಳೆಯನ್ನು ಯಾರೋ ಒಬ್ಬ ಕೆಣಕಿದಾಗ ಕೆರಳಿದ ಹಕ್ಕಿಪಿಕ್ಕಿ ಜನಾಂಗದವರು ಪ್ರಶ್ನಿಸಲಾಗಿ ಹಲವರು ಸೇರಿ ಹಲ್ಲೆ ನಡೆಸಿದ್ದರಿಂದ 8-9ಮಂದಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಹಗರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಅಂಗಡಿಹಳ್ಳಿಯ ಕರುನಾಡು ಯುವಕ ಸಂಘದ ಕಾರ್ಯದರ್ಶಿ ತಿಳಿಸಿದರು.

ಅಂಗಡಿಹಳ್ಳಿಗೆ ಹೊಂದಿ ಕೊಂಡಂತೆ ಇರುವ ಮಾದಿಹಳ್ಳಿ ಕೊಪ್ಪಲಿನಲ್ಲಿ ರಾಮೇಗೌಡ ಎಂಬುವವರ ಮಗನ ಮದುವೆಗೆ ಗ್ರಾಮದ 300ಕ್ಕೂ ಹೆಚ್ಚು ಮಂದಿ ಹೋಗಿದ್ದರು. ಮುಯ್ಯಿ ಮಾಡಿದ ನಂತರ ಮೇಲ್ವರ್ಗದ ಜನರ ಊಟವಾದ ಮೇಲೆ ನಿಮಗೆ ಊಟ ಕೊಡಲಾಗುತ್ತದೆ. ಅಲ್ಲಿಯವರೆಗೆ ಸ್ವಲ್ಪ ಹೊತ್ತು ಕುಳಿತುಕೊಳ್ಳಿ ಎಂದು ತೋಟದಲ್ಲಿ ಕೂರಿಸಿದ್ದರು. (ಪ್ರಜಾವಾಣಿ)

ದಲಿತ ರೈತನನ್ನು ದಂಗುಬಡಿಸಿದ ಚೆಕ್

ಲಕ್ನೋ, ಮೇ 13 : ಉತ್ತರ ಪ್ರದೇಶದ ಪ್ರತಿಷ್ಠಿತ ಅಮೇಥಿಯ ದಲಿತ ರೈತ ದಿಲೀಪ್ ಕುಮಾರ್‌ಗೆ ಮಾಯಾವತಿ ಸರ್ಕಾರದ ನಿಧಿಯಿಂದ ಬಂದ ಹದಿನಾರು ರೂಪಾಯಿ ಚೆಕ್ ಆತನನ್ನೀಗ ಪೇಚಿಗೆ ಸಿಕ್ಕಿಸಿದೆ.

ದಿಪೀಲ್‌ಕುಮಾರ್ ಹದಿನಾರು ರೂಪಾಯಿ ಚೆಕ್ ಅನ್ನು ನಗದೀಕರಿಸಲು ಐದುನೂರು ರೂಪಾಯಿಗಳನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟು ಉಳಿತಾಯ ಖಾತೆ ತೆರೆಯಬೇಕಾಗಿದೆ.

ಬರದಿಂದ ತತ್ತರಿಸಿ ಕಂಗಾಲಾಗಿರುವ ಆತ ಚೆಕ್ ಪಡೆದು ಈಗ ಮತ್ತಷ್ಟು ಕಂಗಾಲಾಗಿದ್ದಾರೆ.

(ಹಿಂದೂಸ್ಥಾನ್ ಟೈಮ್ಸ್)

ಡಾ|| ಅಂಬೇಡ್ಕರ್ ನಾಮಫಲಕ ವಿರೂಪ

ದೇವನಹಳ್ಳಿ, ಮೇ 23 : ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ಗಂಗಾವರ ಗ್ರಾಮದಲ್ಲಿ ಇತ್ತೀಚೆಗೆ ಹೊಸದಾಗಿ ಹಾಕಲಾಗಿದ್ದ ಡಾ|| ಬಿ.ಆರ್. ಅಂಬೇಡ್ಕರ್ ಗ್ರಾಮೀಣಾಭಿವೃದ್ಧಿ ಸಂಘದ ನಾಮ ಫಲಕದಲ್ಲಿರುವ ಅಂಬೇಡ್ಕರ್ ಭಾವಚಿತ್ರಕ್ಕೆ ಟಾರ್ ಬಳಿದು ವಿರೂಪಗೊಳಿಸಿರುವ ಘಟನೆ ನಡೆದಿದೆ.

ರಾತ್ರಿಯ ವೇಳೆಯಲ್ಲಿ ಕಿಡಿಗೇಡಿಗಳು ಜಾತಿ ವೈಷಮ್ಯದಿಂದ ಈ ಕೃತ್ಯವೆಸಗಿದ್ದಾರೆ. ಆರೋಪಿಗಳನ್ನು ಕೂಡಲೆ ಬಂಧಿಸಿ ಗಡಿಪಾರು ಮಾಡದೆ ಹೋದರೆ (ಜಿಲ್ಲೆಯಿಂದ) ತಾಲ್ಲೂಕು ಕಛೇರಿ ಮುಂದೆ ಅನಿರ್ದಿಷ್ಟ ಧರಣಿ ಹೂಡುವುದಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸ್ಥಳೀಯ ಶಾಖೆಯ ಎಂ. ಲೋಕೇಶ್, ಎಂ. ಕೆಂಪರಾಜು, ಮೂರ್ತಿ ನರಸಿಂಹರಾಜು, ಮುನಿಲಕ್ಷ್ಮಯ್ಯ, ಪ್ರಸನ್ನಕುಮಾರ್ ಮುಂತಾದವರು ಪತ್ರಿಕಾ ಹೇಳಿಕೆಯ ಮೂಲಕ ಒತ್ತಾಯಿಸಿದ್ದಾರೆ.

ಈ ಕುರಿತು ದೇವನಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸಬ್ ಇನ್ಸ್‌ಪೆಕ್ಟರ್ ಯೋಗೇಂದ್ರನಾಥ, ಆರಕ್ಷಕ ನಿರೀಕ್ಷಕ ಎ.ಬಿ. ದೇವಮ್ಮನವರ ನೇತೃತ್ವದಲ್ಲಿ ತನಿಖೆ ಮುಂದುವರೆಸಿ ಒಬ್ಬ ಆರೋಪಿಯನ್ನು ಬಂಧಿಸಿದ್ದು, ಇನ್ನುಳಿದ ಇಬ್ಬರು ಆರೋಪಿಗಳ ಬಂಧನಕ್ಕಾಗಿ ತನಿಖೆ ನಡೆಸುತ್ತಿದ್ದಾರೆ.

(ಉದಯವಾಣಿ)

ಮೇರಾ ಭಾರತ್ ಮಹಾನ್

ಮರೂರಿನಲ್ಲಿ ಸಾಮೂಹಿಕ ಬಹಿಷ್ಕಾರ

ಸೊರಬ, ಮೇ 8 : ಪಟ್ಟಣದಿಂದ ಕೇವಲ ಮೂರು ಕಿ.ಮೀ. ದೂರದ ಮರೂರು ಎಂಬ ಗ್ರಾಮದಲ್ಲಿ ದೀವರ ಬಡರೈತ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ವಿಧಿಸಿದ ಪ್ರಕರಣವೊಂದು ಬೆಳಕಿಗೆ ಬಂದಿದೆ.

ಎಲ್ಲಾ ಜಾತಿಯ ಸುಮಾರು ಐವತ್ತು ಮನೆಗಳಿರುವ ಈ ಊರಿನಲ್ಲಿ ವಾಸವಾಗಿರುವ ಕೋವಿ ಈರಪ್ಪನ ಕುಟುಂಬದ ಮೇಲೆ "ಕಟ್ಟು" ಹೇರಲಾಗಿದೆ ಎಂದು ಬಹಿಷ್ಕಾರಕ್ಕೊಳಗಾದ ಈರಪ್ಪ ಪೊಲೀಸರಿಗೆ ಪಿರ್ಯಾದು ಕೊಟ್ಟಿದ್ದಾರೆ.

ಘಟನೆಯ ಹಿನ್ನಲೆ : ಈರಪ್ಪನವರ ಪಿರ್ಯಾದಿನ ಪ್ರಕಾರ ಈಗ್ಗೆ ಮೂರು ವರ್ಷಗಳಿಂದ ಗ್ರಾಮಸ್ಥರು ಇವರೊಂದಿಗೆ ಕ್ಷುಲ್ಲಕ ಕಾರಣಕ್ಕಾಗಿ ಜಗಳ ತೆಗೆದು ಊರೊಟ್ಟಿನ ಹಬ್ಬ ಹರಿದಿನ, ಮದುವೆ, ಮುಂಜಿ ದೇವರ ಕಾರ್ಯಗಳಿಗೆ ಪಾಲ್ಗೊಳ್ಳಲು ಆಸ್ಪದ ಕೊಡುತ್ತಿಲ್ಲ.

ಈ ಬಗ್ಗೆ ಮೂರು ಬಾರಿ ಪೊಲೀಸರಿಗೆ ದೂರು ನೀಡಿದಾಗಲೂ ಯಾವುದೇ ಪ್ರಯೋಜನವಾಗಲಿಲ್ಲ. ಆರೋಪಿಗಳಿಗೆ ಸಬ್ ಇನ್ಸ್‌ಪೆಕ್ಟರ್ ಎಷ್ಟೇ ಎಚ್ಚರಿಕೆ ಕೊಟ್ಟರೂ "ಕಟ್ಟು" ಮುಂದುವರಿಸಲಾಗಿದೆ ಎಂದು ವಿವರಿಸಲಾಗಿದೆ. (ಪ್ರಜಾವಾಣಿ)

ಗಂಗಾವತಿಯಲ್ಲಿ ದಲಿತ ಯುವಕರ ಮೇಲೆ ದೌರ್ಜನ್ಯ

ಗಂಗಾವತಿ, ಮೇ 27 : ಇಲ್ಲಿಂದ 15 ಕಿ.ಮೀ. ದೂರವಿರುವ ಮರಕುಂಬಿ ಗ್ರಾಮದಲ್ಲಿ 5 ಜನ ದಲಿತ ಯುವಕರು ಭತ್ತ ಕಳುವು ಮಾಡಿದ್ದಾರೆ ಎಂದು ಆರೋಪಿಸಿ ಅವರನ್ನು ಅಲ್ಲಿನ ಸವರ್ಣೀಯರು ಭಾನುವಾರ ರಾತ್ರಿ ಅರೆ ಬೆತ್ತಲೆ ಮಾಡಿ ಗ್ರಾಮದಲ್ಲಿನ ಹನುಮಂತ ದೇವರ ಗುಡಿಯ ಮುಂಭಾಗದ ಕಂಬಕ್ಕೆ ಕಟ್ಟಿ ಮನ ಬಂದಂತೆ ಥಳಿಸಿ ದೌರ್ಜನ್ಯ ನಡೆಸಿದ ಘಟನೆ ನಡೆದಿದೆ.

ಮರುದಿನ ಸೋಮವಾರ ಮುಂಜಾನೆ ಗ್ರಾಮದಲ್ಲಿ ಸಭೆ ಸೇರಿದ ಜನರು ಆ ಐವರು ಯುವಕರಿಗೆ 2500 ರೂಪಾಯಿ ದಂಡ ಹಾಕಿದ ಅಮಾನವೀಯ ಘಟನೆಯೂ ಜರುಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೋಲೀಸರು ನಾಲ್ವರನ್ನು ಬಂಧಿಸಿದ್ದಾರೆ.

(ಪ್ರಜಾವಾಣಿ)

ಕ್ಷುಲ್ಲಕ ಜಗಳ : ದಲಿತರಿಗೆ ಸಾಮೂಹಿಕ ಬಹಿಷ್ಕಾರ

ರಾಮದುರ್ಗ, ಮೇ 7 : ಕುಡಿಯುವ ನೀರಿನ ವಿಷಯವಾಗಿ ದಲಿತರು ಮತ್ತು ಸವರ್ಣೀಯರ ನಡುವೆ ಉಂಟಾದ ಕ್ಷುಲ್ಲಕ ಜಗಳದಿಂದಾಗಿ ತಾಲ್ಲೂಕಿನ ಕುಳ್ಳೂರು ಗ್ರಾಮದ ದಲಿತರ ಕುಟುಂಬಗಳಿಗೆ ನಿನ್ನೆ ಸಾಮೂಹಿಕ ಬಹಿಷ್ಕಾರ ಹಾಕಿರುವ ಘಟನೆ ನಡೆದಿದೆ.

ಸುದ್ದಿ ತಿಳಿಯುತ್ತಿದ್ದಂತೆ ತಹಶೀಲ್ದಾರ ಎಸ್.ಜಿ. ಅಮ್ಮಣಗಿ ನೇತೃತ್ವದ ಅಧಿಕಾರಿಗಳ ತಂಡ ಗ್ರಾಮಕ್ಕೆ ತೆರಳಿ ಸಂಧಾನದ ಮೂಲಕ ಗ್ರಾಮಸ್ಥರ ಮನವೊಲಿಸಿ ಶಾಂತಿ ನೆಲೆಸುವಂತೆ ಮಾಡಿತು.

ಘಟನೆಯ ಹಿನ್ನೆಲೆ : ಕುಡಿಯುವ ನೀರಿನ ವಿಷಯವಾಗಿ ಸವರ್ಣೀಯ ಹುಡುಗರು ಮತ್ತು ದಲಿತ ಯುವತಿಯರ ನಡುವೆ ಕಳೆದ ಎಂಟು ದಿನಗಳ ಹಿಂದೆಯೇ ಚಿಕ್ಕ ಜಗಳವಾಗಿತ್ತು ಎನ್ನಲಾಗಿದೆ.

ಎಂಟು ದಿನಗಳಿಂದಲೂ ಬೂದಿ ಮುಚ್ಚಿದ ಕೆಂಡವಾಗಿದ್ದ ಈ ಜಗಳ ಸಾಮೂಹಿಕ ಬಹಿಷ್ಕಾರದೊಂದಿಗೆ ಸ್ಫೋಟಗೊಂಡಿತು ಎಂದು ಸ್ಥಳಕ್ಕೆ ಬೇಟಿ ನೀಡಿದ "ಪ್ರಜಾವಾಣಿಗೆ" ಗ್ರಾಮಸ್ಥರು ತಿಳಿಸಿದರು. (ಪ್ರಜಾವಾಣಿ)

ಅಂತರಂಗ

ಮೀಸಲಾತಿ ನೀತಿಯ ಬುಡಮೇಲು



ಈ ರಾಜಕಾರಣಿಗಳೇ ಹೀಗೆ. ಚುನಾವಣೆ ಹತ್ತಿರ ಬಂತೆಂದರೆ ಒಬ್ಬರು ಮತ್ತೊಬ್ಬರನ್ನು ಮೀರಿಸುವಂತೆ ಆಶ್ವಾಸನೆಗಳ ಸ್ಪರ್ಧೆಗಳಿಯುತ್ತಾರೆ. ಕಾರ್ಯಕ್ರಮಗಳ ಮೇಲೆ ಕಾರ್ಯಕ್ರಮಗಳನ್ನು ಪ್ರಕಟಿಸುತ್ತಾರೆ. ಯೋಜನೆಗಳ ಮಹಾಪೂರವನ್ನೇ ಹರಿಸಿ ಜನರನ್ನು ದಾರಿ ತಪ್ಪಿಸುತ್ತಾರೆ: ಈ ವಿಚಾರದಲ್ಲಿ ಯಾವುದೇ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಇಲ್ಲ. ಯಾವುದೇ ಸಾಮಾಜಿಕ ನ್ಯಾಯಾ-ನ್ಯಾಯಗಳ ಪರಿವೆಯೂ ಇಲ್ಲ. ಜನರನ್ನು ದಾರಿ ತಪ್ಪಿಸಿ ಮತಗಳಿಸುವುದಷ್ಟೇ ಗುರಿ!

ತೀರಾ ಈಚಿನ ಘಟನೆಯನ್ನೇ ನೋಡಿ. ರಾಜಸ್ತಾನದಲ್ಲಿವುದು ಕಾಂಗ್ರೆಸ್ ಸರ್ಕಾರ. ರಾಜ್ಯದಲ್ಲಿ ಚುನಾವಣೆ ಹತ್ತಿರವಾದದ್ದೇ ತಡ. 'ಮೇಲ್ಜಾತಿ ಬಡವರಿಗೆ ಮೀಸಲಾತಿ' ನೀಡುವ ಘೋಷಣೆಯನ್ನು ಅಲ್ಲಿನ ಮುಖ್ಯಮಂತ್ರಿ ಮಾಡಿಯೇ ಬಿಟ್ಟರು. ಬಿ.ಜೆ.ಪಿ. ಏನು ಕಡಿಮೆಯೆ? ಕಾಂಗ್ರೆಸ್ ರಾಜಸ್ತಾನದಲ್ಲಿ ಜಾರಿಗೆ ತಂದರೆ ತಾನು ಇಡೀ ದೇಶದಲ್ಲೇ 'ಮೇಲ್ಜಾತಿ ಬಡವರಿಗೆ ಮೀಸಲಾತಿ' ತರುತ್ತೇನೆಂದು ಹಿಮ್ಮೇಳ ಹಾಡಿತು! ಇಂಥ ವಿಚಾರದಲ್ಲಿ ಎಂದೂ ಮುಂದಿರುವ ಬಿ.ಜೆ.ಪಿ. ಕೂಡಲೇ ಕಾರ್ಯತತ್ಪರವೂ ಆಯಿತು. ಜನರನ್ನು ದಾರಿ ತಪ್ಪಿಸುವ ವಿಚಾರದಲ್ಲಿ ಈ ರಾಜಕೀಯ ಪಕ್ಷಗಳು ಹೇಗೆ ಒಂದಾಗುತ್ತವೆ ನೋಡಿ!

ಆಶ್ಚರ್ಯ ಎಂದರೆ ಈ ಎರಡೂ ಪಕ್ಷಗಳಿಗೆ ಮೀಸಲಾತಿಯ ಪರಿಕಲ್ಪನೆಯೇ ಇಲ್ಲದಿರುವುದು. ಬಿ.ಜೆ.ಪಿ.ಗೆ. ಹೋಗಲಿ ಕಾಂಗ್ರೆಸ್‌ಗಾದರೂ ಈ ಪರಿಜ್ಞಾನವಿರಬೇಕಾಗಿತ್ತು. ರಾಜೀವ್‌ಗಾಂಧಿ ಹಾಗೂ ನಂತರದ ಕಾಂಗ್ರೆಸ್, ಬಿ.ಜೆ.ಪಿ.ಯ ಹಿಂಬಾಗಿಲ ನೆಂಟ ಆಗಿರುವುದು ಇದರಿಂದಲೇ ಗೊತ್ತಾಗುತ್ತದೆ. ಈ ರಾಜೀವ್‌ಗಾಂಧಿ ಪ್ರಧಾನಿಯಾಗಿದ್ದಾಗಲೇ ಬಾಬರಿ ಮಸೀದಿಗೆ ಶನಿ ವಕ್ರಿಸಿದ್ದು, ನಂತರದ್ದು ನಮ್ಮ ಮುಂದಿನ ಇತಿಹಾಸ.

ಮೀಸಲಾತಿ ಪರಿಕಲ್ಪನೆ ಹುಟ್ಟಿದ್ದೇ ಸಾಮಾಜಿಕ ಅಸಮಾನತೆಗೊಳಗಾದ ಎಲ್ಲ ಅಪಮಾನಿತ ಹಾಗೂ ನಿರ್ಲಕ್ಷಿತ ಜನಾಂಗಗಳಿಗೆ ಸಮಾನ ಅವಕಾಶ ಒದಗಿಸುವ ಮಹತ್ವಕಾಂಕ್ಷೆಯಿಂದ. ಅಮೇರಿಕಾದಂತ ಅಭಿವೃದ್ಧಿ ಹೊಂದಿದ ರಾಷ್ಟ್ರದಲ್ಲಿ ಕೂಡ ಕಪ್ಪು ಜನರಿಗೆ ಇದೇ ಆಧಾರದ ಮೇಲೆ ಮೀಸಲಾತಿ ಇಂದಿಗೂ ಜಾರಿಯಲ್ಲಿದೆ. ಇಂಥ ಸ್ಥಿತಿಯಲ್ಲಿ ಮೀಸಲಾತಿ ವ್ಯವಸ್ಥೆಯನ್ನೇ ಸಂಪೂರ್ಣ ನಾಶಗೊಳಿಸುವ ದುರುದ್ದೇಶದಿಂದಲೇ ರಾಜಕೀಯ ಪಕ್ಷಗಳು ಈ 'ಮೇಲ್ಜಾತಿ ಬಡವರ ಮೀಸಲಾತಿ'ಯ ಪಿತೂರಿ ಹೂಡಿವೆ.

ಜಾಗತೀಕರಣದ ಮೂಲಕ ಪರೋಕ್ಷವಾಗಿ ಮೀಸಲಾತಿಯ ವಿನಾಶ ಹಾಗೂ ಜಾತೀಯತೆಯ ಪೋಷಣೆ ಎರಡನ್ನೂ ಎಲ್ಲ ಸರ್ಕಾರಗಳೂ ಜಾರಿಗೆ ತರುತ್ತಿವೆ. ಅದರ ಮುಂದುವರೆದ ಭಾಗವಾಗಿ ಈಗ ಆರ್ಥಿಕ ಮಾನದಂಡದ ಮೂಲಕ ಮೀಸಲಾತಿ ಜಾರಿಗೊಳಿಸಲು ಹೊರಟಿರುವುದು ಬಹುದೊಡ್ಡ ಸಾಮೂಹಿಕ ಅಪರಾಧವಾಗಿದೆ.

ಆರ್ಥಿಕ ಮಾನದಂಡ ಎನ್ನುವುದೇ ಒಂದು ಅವಾಸ್ತವ ಸ್ಥಿತಿ. ಸುಳ್ಳು ಜಾತಿ ಪ್ರಮಾಣ ಪತ್ರವನ್ನೇ ಸುಲಭವಾಗಿ ದಕ್ಕಿಸಿಕೊಳ್ಳಬಹುದಾದ ಈ ಅನೈತಿಕ ಸಮಾಜದಲ್ಲಿ, ಸುಳ್ಳು ಆರ್ಥಿಕ ಪ್ರಮಾಣ ಪತ್ರ ಪಡೆಯುವುದು. ಅತಿ ಸುಲಭದ ಕೆಲಸ. ಹಾಗಾಗಿ ಆರ್ಥಿಕ ಮೀಸಲಾತಿಯ ಕಲ್ಪನೆ ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ನಾಶಮಾಡುವಂತದ್ದು. ಬಿ.ಪಿ.ಎಲ್. ಪಡಿತರ ಚೀಟಿಗಳು, ಹಾಗೂ ಯಾವುದೇ ಆದಾಯ ಪ್ರಮಾಣ ಪತ್ರ ನೋಡಿದರೆ ಇದು ಎಂಥ ದುಃಸ್ಥಿತಿ ಮುಟ್ಟಬಹುದೆಂಬುದು ಅರಿವಿಗೆ ಬರುತ್ತದೆ.

ಸ್ವಾತಂತ್ರ್ಯ ಬಂದ ಈ ಐದು ದಶಕಗಳಲ್ಲಿ ದಲಿತರಿಗೆ ನೀಡಲಾಗಿರುವ ಮೀಸಲಾತಿ ಅನುಷ್ಠಾನದಲ್ಲಿ 'ಬದ್ಧತೆ'ಯನ್ನು ತೋರದ ವಿವಿಧ ರಾಜ್ಯಗಳು ಮತ್ತು ಕೇಂದ್ರದ ಎಲ್ಲಾ ಸರ್ಕಾರಗಳು, ದಲಿತ ಸಮೂಹಕ್ಕೆ ತಾವು ಮಾಡಿರುವ ವಂಚನೆಯನ್ನು ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿತ್ತು. ಅದು ಬಿಟ್ಟು ತಮ್ಮ ತಮ್ಮ ರಾಜಕೀಯ ವಿರೋಧಿಗಳನ್ನು ಮಟ್ಟಹಾಕಲು ಹೊಸ ಹೊಸ 'ರಾಜಕೀಯ ವರಸೆ'ಗಳನ್ನು ಹುಟ್ಟುಹಾಕಿ, ಅಧಿಕಾರ ಕಬಳಿಸಲು ಹೊಂಚು ಹಾಕುತ್ತಿರುವುದು, ಆ ಮೂಲಕ ಸಾಮಾಜಿಕ ವೈರುಧ್ಯಗಳನ್ನು ಹೆಚ್ಚು ಮಾಡುತ್ತಿರುವುದು ಒಂದು ಹೇಯ ನಡವಳಿಕೆಯಾಗಿದೆ.

ಬಡತನವು ಜಾತಿ ಸಮಸ್ಯೆಯಲ್ಲ, ಅದು, ಭಾರತದ ಬಹುದೊಡ್ಡ ಸಮಸ್ಯೆ. ಎಲ್ಲಾ ಜಾತಿಯಲ್ಲೂ ಬಡವರಿದ್ದಾರೆ. ಹೀಗಾಗಿ ಅದು ಸಾರ್ವತ್ರಿಕವಾದುದು. ಆದರೆ ಸಾಮಾಜಿಕ ಅಸಮಾನತೆ ಎಲ್ಲ ಅವಮಾನಿತ ಜಾತಿಗಳ ಸಮಸ್ಯೆ. ಇದು ಸಾರ್ವತ್ರಿಕವಲ್ಲ. ಈ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ನಿರ್ದಿಷ್ಟ ಅವಕಾಶಗಳನ್ನು ಕಡ್ಡಾಯಗೊಳಿಸಲಾಗಿದೆ. ಕಾನೂನು ಬದ್ಧ ಮಾಡಲಾಗಿದೆ. ಆದ್ದರಿಂದ ಬಡತನದ ಮೂಲೋತ್ಪಾಟನೆಗೆ ರೂಪಿಸಬೇಕಾದ ಕಾರ್ಯಕ್ರಮವೇ ಬೇರೆ. ಈಗಿನ ಮೇಲ್ಜಾತಿ ಬಡವರಿಗೆ ಮೀಸಲಾತಿ ವಿಚಾರ ಸರ್ಕಾರ ವಾಸ್ತವವಾಗಿ ಬಡವರನ್ನೇ ವಂಚಿಸುವಂತದ್ದಾಗಿದೆ.

ಕೊಳೆಗೇರಿಗಳು ಪ್ರಗತಿ, ಆಧುನಿಕತೆ, ಅಭಿವೃದ್ಧಿಗಳು ಸೃಷ್ಟಿಸಿರುವ ನವ ಅಸ್ಪೃಶ್ಯತೆಯ ತಾಣಗಳಾಗಿವೆ. ಅಲ್ಲಿ ವಾಸಿಸುವ ಎಲ್ಲಾ ಜಾತಿಯ ಜನರೂ ನವ ಅಸ್ಪಶ್ಯರಾಗಿರುತ್ತಾರೆ. ಕೊಳಗೇರಿಗಳಲ್ಲಿ ವಾಸಿಸುವವರ ಜತೆ ಯಾವುದೇ ಸಂಬಂಧಗಳಿಗೆ ಯಾವ ಜಾತಿಯವರೂ ಒಪ್ಪದ ಸ್ಥಿತಿ ಇಂದು ನಿರ್ಮಾಣವಾಗಿದೆ. ಆಧುನಿಕ ಸಮಾಜದ ಪಾಪದ ಕೂಸಾಗಿರುವ ಈ ಕೊಳೆಗೇರಿಗಳಿಗೆ ಮುಕ್ತಿ ಸಿಗದಿದ್ದರೆ ಭಾರತಕ್ಕೂ ಮುಕ್ತಿ ಇಲ್ಲ. ಆದುದರಿಂದ ಆರ್ಥಿಕ ಮಾನದಂಡದ ಮೂಲಕ ಮೀಸಲಾತಿ ನೀಡುವುದಾದರೆ ಕೊಳೆಗೇರಿವಾಸಿಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಬಹುದು. ಕೊಳಗೇರಿಯಲ್ಲಿ ವಾಸಿಸುವ ಯಾರೇ ಆಗಲಿ (ಬ್ರಾಹ್ಮಣರೂ ಸೇರಿದಂತೆ) ಅವರಿಗೆ ಮೀಸಲಾತಿ ನೀಡಬಹುದು. ಆರ್ಥಿಕ ಮಾನದಂಡ ಎಂದರೆ ಸತ್ಯಕ್ಕೆ ಹತ್ತಿರವಾದದ್ದು ಇದು ಮಾತ್ರ

ಬಡತನ ಇಡೀ ಇಂಡಿಯಾದ ಸಮಸ್ಯೆ, ಆಳುವವರು ಮನುಷ್ಯ ಕೇಂದ್ರಿತ ಕಾರ್ಯಕ್ರಮಗಳ ಮೂಲಕ ಉದ್ಯೋಗ ಸೃಷ್ಟಿ ಮಾಡಬೇಕು. ಮೀಸಲಾತಿ ಮೂಲಕ ಬಡತನ ನಿರ್ಮೂಲನೆ ಮಾಡುತ್ತೇವೆನ್ನುವುದು ದಲಿತ ವಿರೋಧಿ ಕೃತ್ಯ ಹಾಗೂ ಬಡವರನ್ನು ದಾರಿತಪ್ಪಿಸುವಂತದ್ದು. ಬಡವರ ಆರ್ಥಿಕ ಅವಲಂಬನೆ ನರಕವಾದರೆ, ಜಾತಿ ಅಪಮಾನಿತರ ಆರ್ಥಿಕ ಅವಲಂಬನೆ ರೌರವ ನರಕ.

ಭಾರತದ ಸುಪ್ತ ಮನಸ್ಸು ಹೇಗಿರುತ್ತದೆ ಎಂದರೆ, ಆದಿವಾಸಿಗಳು ಆಧುನಿಕ ಸಾಮಾಜಿಕ ಸ್ಥಿತಿಗತಿಗಳಿಂದ ಶತಮಾನಗಳ ಹಿಂದೆ ಇದ್ದಾರೆ. ಅವರಿಗೆ Shift ಸಿಕ್ಕಿದರೆ, ಸಮಾಜ ಅವನರ್ನು ಒಪ್ಪಿಕೊಳ್ಳುತ್ತದೆ. ಆದರೆ ಅಸ್ಪೃಶ್ಯರಿಗೆ Shift ಸಿಕ್ಕಿದರೆ ಸಮಾಜ ಅವರನ್ನು ಒಪ್ಪುವುದಿಲ್ಲ. ಮೀಸಲಾತಿಗೆ ಇದು ಮಾನದಂಡವಾಗಬೇಕು. ಮೀಸಲಾತಿ ಕುರಿತಾದ ಯಾವುದೇ ಕಾರ್ಯಕ್ರಮ ರೂಪಿಸುವವರಿಗೆ ಈ ಅರಿವು ಇರಬೇಕು.

ದಲಿತರು ಮುಖ್ಯವಾಹಿನಿಗೆ ಬರಲು ಆರಂಭಿಸುತ್ತಿದ್ದಂತೆ ಅವರನ್ನು ಹಿಮ್ಮೆಟ್ಟಿಸುವ ಕೆಲಸ ಆರಂಭವಾಗಿದೆ. ಜಾತೀಕರಣ ಮತ್ತು ಖಾಸಗೀಕರಣ ಅದರ ಮೊದಲ ಹೆಜ್ಜೆ. ಮೇಲ್ಜಾತಿ ಬಡವರ ಮೀಸಲಾತಿ ಅದರ ಚರಮ ಗೀತೆ.

○ ಇಂದೂಧರ ಹೊನ್ನಾಪುರ

ಸಂಪಾದಕ

ಬ್ರಾಹ್ಮಣರ 'ಕಷ್ಟ'ದಲ್ಲಿ ದಲಿತರಿಗೂ ಒಂದು ಪಾಲು ಇರಲಿ!

'ಸಂವಾದ'ದ ಮೇ 2003ರ ಸಂಚಿಕೆಯಲ್ಲಿ, ಖಾಸಗಿ ರಂಗದಲ್ಲಿ ಅಪಾರ ಶೋಷಣೆಯಿರುವುದರಿಂದ ಅಲ್ಲಿಗೆ ಹೋಗಿ ದಲಿತರು ನರಳದಿರಲಿ ಎಂಬ ಕಳಕಳಿಯನ್ನು ಎನ್.ಕೆ. ಮೋಹನರಾಂ ಪ್ರಕಟಿಸಿದ್ದಾರೆ. ಸಾರ್ವಜನಿಕ ವಲಯವನ್ನು ಬಲಪಡಿಸಬೇಕೆಂಬ ಅವರ ವಾದವೇನೋ ಸರಿ. ಆದರೆ ಬ್ರಾಹ್ಮಣರು ಅಪಾರ 'ಕಷ್ಟಪಡುತ್ತಿರುವ' ಖಾಸಗಿ ವಲಯಕ್ಕೆ ದಲಿತರೂ ಹೋಗುವುದು ಬೇಡವೆಂಬ ಅವರ ಜಾಣ ಹಿತವಚನ ಮಹಾರೊಮ್ಯಾಂಟಿಕ್ ಆಗಿದೆ; ಅಪಾಯಕಾರಿಯಾಗಿದೆ. ದಲಿತರು ನವಬ್ರಾಹ್ಮಣರಾದರೂ ಪರವಾಗಿಲ್ಲ, ಅವರಿಗೆ ವಿಪ್ರೋ, ಇನ್‌ಫೋಸಿಸ್‌ಗಳಲ್ಲಿ 25000 ರೂಪಾಯಿ ಸಂಬಳದ ಕೆಲಸ ಕೊಡಿಸಬೇಕೆಂದು ಮೋಹನರಾಮ್ ಅವರಲ್ಲಿ ನನ್ನ ಬಿನ್ನಹ. ಅಲ್ಲಿ ಬ್ರಾಹ್ಮಣರು ಪಡುವ 'ಕಷ್ಟ'ದಲ್ಲಿ ದಲಿತರಿಗೂ ಪಾಲು ಇರಲಿ.

ಈ 'ಕಷ್ಟ'ದ ನಡುವೆಯೂ ದಲಿತರು ಗಳಿಸಿದ ಹಣದಲ್ಲಿ ಒಂದು ಭಾಗವಾದರೂ ಅವರ ಊರಿನ ಕೇರಿ ತಲುಪುತ್ತದೆ. ಹಳ್ಳಿಯ ದಲಿತ ಹುಡುಗ, ಹುಡುಗಿಯರಿಗೆ ನಗರದ ಕಾಲೇಜುಗಳು, ಹಾಸ್ಟೆಲ್‌ಗಳು ಎಲ್ಲಿವೆಯೆಂಬುದು ಕೂಡ ಗೊತ್ತಿರುವುದಿಲ್ಲ. ಇಂಥ ಸ್ಥಿತಿಯಲ್ಲಿ ನಗರದಲ್ಲಿ



2000 ರೂಪಾಯಿನ ಕೆಲಸದಲ್ಲಿರುವ ದಲಿತ ಕೂಡ ಕೊನೇ ಪಕ್ಷ ಹತ್ತು ಜನ ಊರ ದಲಿತರಿಗೆ ಯಾವುದಾದರೂ ಒಂದು ಹಾದಿ ಕಾಣಿಸುತ್ತಿರುತ್ತಾನೆ. ನಗರದಲ್ಲಿ ಓದುವ, ಉದ್ಯೋಗದಲ್ಲಿರುವ ದಲಿತನೆಂದರೆ ಅವನ ಕೇರಿಯ ಮನೆಯವರಿಗೆ ಕೇವಲ ಹಣದ ಬೆಂಬಲ ಮಾತ್ರ ಅಲ್ಲ; ಈತ, ದಲಿತರ ಮೇಲೆ ಸಲೀಸಾಗಿ ಕೈಯೆತ್ತುವ ಮೇಲುಜಾತಿಗಳಿಗೆ ತಡೆಗೋಡೆ ಕೂಡ. ನಗರದ ಹೋಟೆಲ್‌ನಲ್ಲಿ ಕೆಲಸ ಮಾಡುವ ದಲಿತ ಹುಡುಗ ಕೂಡ ಹಳ್ಳಿಯ ಭಯಂಕರ ಅಸ್ಪೃಶ್ಯತೆ, ಪರಕೀಯತೆ ಹಾಗೂ ಕೀಳರಿಮೆಯಿಂದ ಪಾರಾಗುವ ಹಾದಿಯಲ್ಲಾದರೂ ಇರುತ್ತಾನೆ. ಮೋಹನರಾಂ ಭ್ರಮಿಸಿರುವಂತೆ ಹಳ್ಳಿಯ ದಲಿತರಲ್ಲಿ ಈಗ ಇದೆಯೆನ್ನಲಾದ 'ಬಡತನದ ಸಂತೋಷ' ಮೋಹನರಾಂ ಥರದ ನಗರ ಜೀವಿಗಳ ರಮ್ಯ ಕನಸಾಗಿರಬಹುದಷ್ಟೆ ಹೊರತು, ಅದು ಯಾವ ಬಡವನೂ ಬಯಸಿದ ಸ್ಥಿತಿಯಾಗಿರಲಾರದು. ಆದ್ದರಿಂದ, ಖಾಸಗಿ ರಂಗದಲ್ಲಿ 'ಬಡಪಾಯಿ' ಬ್ರಾಹ್ಮಣರು ಪಡುತ್ತಿರುವ 'ಕಷ್ಟ' ದಲಿತರಿಗೂ, ಹಿಂದುಳಿದವರಿಗೂ ಇರಲಿ.

ದಲಿತರಿಗೆ 'ಕಷ್ಟ'ವೆಂದು ದೂರ ಇಡಲಾದ ಕ್ಷೇತ್ರಗಳೆಲ್ಲೆಲ್ಲಾ ಕಳೆದ 50 ವರ್ಷಗಳಲ್ಲಿ ದಲಿತರು ಈಜಿದಂತೆ ಖಾಸಗಿ ರಂಗದಲ್ಲೂ ಈಜುತ್ತಾರೆ. ಅಷ್ಟೇ ಅಲ್ಲ, ಬೆಂಗಳೂರಿನ 'ಸ್ಕೂಟರ್ ಪುರೋಹಿತರು' ನೂರಕ್ಕೆ ನೂರು ಗುತ್ತಿಗೆ ಹಿಡಿದಿರುವ ಉಗುಳು ಮಂತ್ರದ ಬಿಸಿನೆಸ್ಸಿನ ಖಾಸಗಿ ರಂಗದಲ್ಲೂ ದಲಿತರ ಉಚ್ಚಾರಣೆ ಜೈಸಬಲ್ಲದು. ಮೋಹನರಾಂಗೆ ವೃಥಾ ಆತಂಕ ಬೇಡ.

○ ಡಾ|| ನಟರಾಜ್ ಹುಳಿಯಾರ್

ಪೂರ್ವಾಗ್ರಹ ಪೀಡಿತ ಲೇಖನ

ಸಂವಾದ ಬಳಗಕ್ಕೆ ನನ್ನ ನಮನಗಳು

ಇತ್ತೀಚಿನ ಕೆಲವು ವರ್ಷಗಳಿಂದ ಸಾಮಾಜಿಕ ಬದಲಾವಣೆಯ ಹಂಬಲ ಮತ್ತು ಸಮಾನತೆಯಿಂದ ಕೂಡಿದ ಬದುಕಿನ ಬಗೆಗೆ ನೂರೆಂಟು ಕನಸು ಹೊತ್ತ ಯುವ ಮನಸ್ಸಿನೊಂದಿಗೆ ನನ್ನ ಭಾಗದ ಬಹುತೇಕ ಎಲ್ಲ ಪ್ರಗತಿಪರ ಚಳುವಳಿಗಳಲ್ಲಿ ಗುರುತಿಸಿಕೊಳ್ಳುತ್ತಿರುವ ನನಗೆ ಆಕಸ್ಮಾತಾಗಿ ಸಂವಾದ ಪತ್ರಿಕೆಯ ಕಳೆದ ಸಂಚಿಕೆ ನನ್ನ ಕೈಗೆ ಬಂತು. ಪತ್ರಿಕೆಯಲ್ಲಿನ ಎಲ್ಲಾ ಲೇಖನಗಳನ್ನೂ ಓದಿದೆ. ನಿಜವಾಗಿಯೂ ತೀರಾ ಗೊಂದಲಮಯ ವಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಚಳುವಳಿಗೆ ಕಾಲಿಡುತ್ತಿರುವ ನನ್ನಂತಹವರಿಗೆ ವೈಚಾರಿಕ ಪ್ರಜ್ಞೆಯ ತಳಹದಿ ರೂಪಿಸಿಕೊಳ್ಳಲು 'ಸಂವಾದ' ಸಹಾಯಕವಾಗುತ್ತದೆ ಎಂದೇ ನನ್ನ ನಂಬಿಕೆ. ಒಂದೆರಡು ದಿನಗಳಲ್ಲಿ ನನಗಿಂತ ಹಿರಿಯರಾದ ಅನೇಕ ಚಳುವಳಿಗಾರರು, ಲೇಖಕರು, ಚಿಂತಕರ ಕೈಯಲ್ಲಿ-ಬ್ಯಾಗಲ್ಲಿ 'ಸಂವಾದ'ವಿದ್ದುದನ್ನು ಕಂಡು ನನ್ನ ನಂಬಿಕೆ ದೃಢವಾಯಿತು.

ಅದಾದ ಒಂದು ವಾರದಲ್ಲಿ ಸಂಚಿಕೆಯಲ್ಲಿದ್ದ ಲೇಖನಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಚರ್ಚೆಯಲ್ಲಿ ಸೇರಿದವರು ಮತ್ತೆ ಮತ್ತೆ ಮಾತನಾಡುತ್ತಿದ್ದುದು 'ಖಾಸಗಿ ರಂಗದಲ್ಲಿ ಮೀಸಲಾತಿ ಅಗತ್ಯವೆ?' ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿದ್ದ ಲೇಖನದ ಬಗ್ಗೆ ಸೇರಿದ್ದವರಲ್ಲಿ ತೀರಾ ಹಿರಿಯರಾದವರೊಬ್ಬರು ಮಾತನಾಡುತ್ತಾ, 'ಈ ಲೇಖನ ಬರೆದಿರುವವರು ಹೆಚ್ಚು ಪೂರ್ವಾಗ್ರಹ ಪೀಡಿತರಾಗಿದ್ದಾರೆ ಹಾಗೂ ಮೀಸಲಾತಿ ವಿರೋಧಿಗಳಾಗಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದನ್ನೇ ತಮ್ಮ ಅಸ್ಪಷ್ಟ ನಿಲುವು ಮತ್ತು ಬರವಣಿಗೆಯಲ್ಲಿ ಹೇಳಲು ತಿಣುಕಾಡಿದ್ದಾರೆ. ಇಡೀ ವಿಶ್ವವೇ ಜಾಗತೀಕರಣದ ಕಬಂಧ ಬಾಹುಗಳಿಗೆ ಸಿಕ್ಕು ನರಳುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಶತಮಾನಗಳಿಂದಲೂ ಶೋಷಣೆಯ ಸಂಕೋಲೆಗೆ ಸಿಕ್ಕು ನರಳುತ್ತಿರುವ ದಲಿತ ಸಮುದಾಯಗಳು ಸಂವಿಧಾನದ ರಕ್ಷಣೆಯಲ್ಲಾದರೂ ನಮ್ಮ ಬದುಕು ಬದಲಾಗುತ್ತದೆ. ದಮನದಿಂದ ದೂರಾಗುತ್ತೇವೆ ಎಂದು 5 ದಶಕಗಳಿಂದಲೂ ಕಾಯುತ್ತಲೇ ಇದ್ದಾಗ್ಯೂ ಅದು ದಕ್ಕದೆ, ದಿಕ್ಕು ಕಾಣದಾಗಿದ್ದಾರೆ. ಖಾಸಗೀರಂಗದಲ್ಲೂ ಇವರಿಗೆ ಮೀಸಲಾತಿ ರಕ್ಷಣೆ ಇಲ್ಲವೆಂದಾದರೆ ಮುಂದಿನ ಗತಿ ಏನೆಂದು ಈ ಲೇಖಕರಿಗೆ ಅದೇಕೆ ಹೊಳೆಯುತ್ತಿಲ್ಲ ಎಂದು ಮಮ್ಮಲ ಮರುಗಿದರು.

ಸಂವಾದದಲ್ಲಿ ಇಂಥ ಜನ ವಿರೋಧಿ ಲೇಖನ ಹೇಗೆ ಪ್ರಕಟವಾಯಿತು ಎಂಬ ಬಗ್ಗೆ ಕೂಡಾ ಅಲ್ಲಿ ಪ್ರಸ್ತಾಪವಾಯಿತು. ಅಲ್ಲಿದ್ದ ಮತ್ತೊಬ್ಬ ಗೆಳೆಯರು ಖಾಸಗೀ ರಂಗದಲ್ಲಿನ ಮೀಸಲಾತಿ ಕುರಿತು ಆರೋಗ್ಯಪೂರ್ಣವಾದ ಚರ್ಚೆ ನಡೆಯಲಿ ಎಂಬುದು 'ಸಂವಾದ'ದ ಆಶಯವಿರಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಆಮೇಲೆ ಭಾಗವಹಿಸಿದವರೆಲ್ಲರೂ ಲೇಖನ ಕುರಿತು ತಮ್ಮ ತಮ್ಮ ನಿಲುವುಗಳನ್ನು ಬರೆದು ಕಳುಹಿಸಬೇಕು ಎಂದು ತೀರ್ಮಾನಿಸಲಾಯಿತು. ಕೆಲವರು ಲೇಖಕರ ಬಗ್ಗೆ ತುಂಬಾ ಗಂಭೀರ ಆಪಾದನೆ ಮಾಡಿದರಾದರೂ ವೈಯಕ್ತಿಕ ನಿಂದನೆಗೆ ಇಳಿಯ ಬಾರದೆಂದು ಕೆಲವರು ಅವರನ್ನು ಸಮಾಧಾನ ಪಡಿಸಿದರು.

ಚರ್ಚೆಯಿಂದ ನನಗೆ ಅನ್ನಿಸಿದ್ದು ಇಷ್ಟು. ಸ್ವಾತಂತ್ರ್ಯ ಬಂದು 55 ವರ್ಷಗಳಾಗುತ್ತಿದ್ದರೂ, ಶೋಷಿತ ಸಮುದಾಯದ ಪ್ರಗತಿಗಾಗಿ ಸಂವಿಧಾನಬದ್ಧವಾಗಿ ನೀಡಲೇಬೇಕಾಗಿದ್ದ ಕನಿಷ್ಟ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ನೀಡದೆ ವಂಚಿಸುತ್ತಾ, ಸುಳ್ಳು-ಸುಳ್ಳು ಭರವಸೆಗಳನ್ನು, ಪುಟಗಟ್ಟಲೆ ವರದಿಗಳನ್ನು ನೀಡುತ್ತಾ ಬರುತ್ತಿರುವ ಸರ್ಕಾರಗಳು ಜಾಗತೀಕರಣದ ಹೆಸರಿನಲ್ಲಿ ಖಾಸಗೀಕರಣದ ಹಿಂದೆ ಬಿದ್ದಿರುವ ಈಗ ದಲಿತರನ್ನು, ಹಿಂದುಳಿದವರನ್ನು ಮಹಿಳೆಯರನ್ನು ಬೇರೆ ಬೇರೆ ಕಾರಣಗಳಿಗಾಗಿ ಬೀದಿಗೆ ತಳ್ಳಿ ಶೋಷಿಸುವ ಬದಲು ಖಾಸಗೀ ರಂಗದಲ್ಲಿ ಮೀಸಲಾತಿ ಸೌಲಭ್ಯ ನೀಡುವಂತೆ ಆಗ್ರಹಿಸಿ ಅಂಬೇಡ್ಕರ್‌ರವರ ಕನಸನ್ನು ನನಸು ಮಾಡುವ ಜತೆಗೆ ಇಂತಹ ಜಾತೀಯ ಮನಸ್ಸುಗಳು ಈಗಲಾದರೂ ಮೀಸಲಾತಿ ಪರ ದನಿ ಎತ್ತಿ ಬಹುಕಾಲದ ತಮ್ಮ ಪಾಪದಿಂದ ಮುಕ್ತರಾಗಬೇಕಿದೆ.

○ ಬೇಲೂರು ಮಂಜನಾಥ್
ಬೆಂಗಳೂರು

ಅಪಮಾನದ ಧರ್ಮ ಪೋಷಣೆ ಆತ್ಮವಂಚನೆ

ಪ್ರಿಯ ಸಂಪಾದಕರೇ,

ಇವತ್ತಿನ ದಲಿತರ ಮುಂದಿರುವ ಮುಖ್ಯ ಸಮಸ್ಯೆಗಳನ್ನು ಚರ್ಚೆಗಿಡುವುದು, ದಲಿತರು ತಮ್ಮ ದಾರಿಯನ್ನು ಹುಡುಕಿಕೊಳ್ಳಲು ವ್ಯವಸ್ಥೆ, ದಲಿತರಿಗೆ ನೀತಿ ನಿರೂಪಣೆ ಮಾಡಲು ಸಹಕಾರಿಯಾಗುತ್ತದೆ. ಪ್ರಶ್ನೆಗಳು ಅಂಬೇಡ್ಕರ್‌ವಾದ, ರಾಜಕೀಯ ನೀತಿ, ಮತಾಂತರ, ಮೀಸಲಾತಿ, ಜಾಗತೀಕರಣ ಇವೆಲ್ಲವನ್ನೂ ಒಳಗೊಂಡಿರುವುದು ಸಂವಾದದ ಮಹತ್ವವನ್ನು ಹೆಚ್ಚಿಸಿದೆ. ನನಗೆ ಕುತೂಹಲ ಹುಟ್ಟಿಸಿದ ವಿಚಾರವೆಂದರೆ ಚಿಂತಕರು ಮತಾಂತರವನ್ನು ಕುರಿತು ನೀಡಿದ ಪ್ರತಿಕ್ರಿಯೆ. ಇಬ್ಬರು ದಲಿತೇತರ ಚಿಂತಕರು ಮತಾಂತರವನ್ನು ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ನೀಡಿದರೆ, ಮೂವರು ದಲಿತ ಚಿಂತಕರು ಗೊಂದಲದಲ್ಲಿ ಬಿದ್ದಂತೆ ಕಾಣುತ್ತದೆ. ಬಹುಶಃ ಈ ಕಾರಣದಿಂದಲೇ ದಲಿತರ ಪ್ರಶ್ನಾತೀತ ನಾಯಕರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಬೌದ್ಧ ಧರ್ಮಕ್ಕೆ ಮತಾಂತರಗೊಂಡು ಐವತ್ತು ವರ್ಷಗಳಾಗುತ್ತಾ ಬಂದರೂ ತಮ್ಮ ಹಿಂಬಾಲಕರನ್ನು ಪ್ರೇರೇಪಿಸಲು ಸಾಧ್ಯವಾಗಿಲ್ಲ ಎಂದು ನನಗನ್ನಿಸುತ್ತದೆ.

"ದಲಿತರು ಹಿಂದೂ ಧರ್ಮದಲ್ಲಿದ್ದುಕೊಂಡು ತಂತಮ್ಮ ಒಗ್ಗಟ್ಟು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಛಲ ಸಾಧಿಸಿದರೆ ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವಿದೆ" ಎಂದು ದಲಿತ ಮುಖಂಡರಾದ ಟಿ. ನಾರಾಯಣಸ್ವಾಮಿ ಹೇಳುತ್ತಾರೆ. ಇದು ಅಂಬೇಡ್ಕರರ ಸುದೀರ್ಘ, ಆಳ ಅಧ್ಯಯನ, ಚಿಂತನೆಗಳ ಪ್ರವಾಹವನ್ನು ತಲ್ಲಣಗೊಳಿಸುವಂತಿದೆ. ಅಂಬೇಡ್ಕರ್‌ವಾದದ ಪ್ರಸ್ತುತತೆಯನ್ನು ಒಪ್ಪುವ ಇವರು ಇಲ್ಲಿ ವಿರುದ್ಧ ಹೇಳಿಕೆ ನೀಡುತ್ತಾರೆ. ಜಕ್ಕಪ್ಪನವರು ಪರಿಶಿಷ್ಟರು ಮತಾಂತರ ಮಾಡಬೇಕಿಲ್ಲ. ಪರಿಶಿಷ್ಟರು ಆದಿಯಲ್ಲಿ ಬೌದ್ಧ ಮತೀಯರಾಗಿದ್ದರು, ಇಂದು ಇದ್ದಾರೆ ಎಂದು ಹೇಳುತ್ತಾರೆ. ಈ ವಾಕ್ಯದ ಮೊದಲರ್ಧ ಹಿಂದೂ ಮೂಲಭೂತವಾದಿಗಳ ಕೈಗೆ ಸಿಕ್ಕಿ ವಿಜೃಂಭಿಸುತ್ತದೆ, ಉಳಿದರ್ಧವನ್ನು ಅವರು ಜಾಣತನದಿಂದ ಮರೆ ಮಾಡಬಲ್ಲರು. ಆದರೆ ಎಸ್. ಗಣೇಶನ್‌ರ "ದಲಿತರಿಗೆ ಧರ್ಮ ಎನ್ನುವುದು ಗೌಣ" ಎಂಬ ಮಾತು ಯಾಕೋ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತದೆ. ಗಣೇಶನ್ ಚಳವಳಿಯಲ್ಲಿದ್ದವರು, ವೈಯಕ್ತಿಕವಾಗಿಯಾದರೂ ಈ ಒಗಟನ್ನು ಬಿಡಿಸಿ ಹೇಳಬೇಕೆಂದು ಬಯಸುತ್ತೇನೆ.

ಮತಾಂತರದ ಮುಖ್ಯ ಉದ್ದೇಶಗಳು ಅಂಬೇಡ್ಕರರ ದೃಷ್ಟಿಯಲ್ಲಿ ಎರಡು (1) ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಕೊಳ್ಳುವುದು, (2) ಸ್ವಾಭಿಮಾನವನ್ನು ಗಳಿಸಿಕೊಳ್ಳುವುದು.

ಮೊದಲ ಉದ್ದೇಶ ಸಫಲವಾಗಿರುವುದನ್ನು ನಟರಾಜ್ ಹುಳಿಯಾರ್ ಸ್ಪಷ್ಟವಾಗಿ ಹೇಳಿದ್ದಾರೆ. ಧಾರ್ಮಿಕ ಮತಾಂತರದ ಮೂಲಕವೇ ದಲಿತರು ಅಸ್ಪೃಶ್ಯತೆಯಿಂದ ಪಾರಾದರೆಂದೂ, ಕ್ರೈಸ್ತ ಧರ್ಮಕ್ಕೆ ಹೋದ ದಲಿತರು ಒಂದೇ ತಲೆಮಾರಿನಲ್ಲಿ ಹೊಸ ವ್ಯಕ್ತಿತ್ವ ಪಡೆದಿರುವುದನ್ನು ನೋಡಿದ್ದೇವೆಂದು ಹೇಳುತ್ತಾರೆ. ಇನ್ನು ಅಸ್ಪೃಶ್ಯ ಮತ್ತು ಕ್ಷೌರಿಕ ಜಾತಿಗಳನ್ನುಳಿದು ಸಾರ್ವಜನಿಕವಾಗಿ ಜಾತಿ ಹೇಳಿಕೊಳ್ಳಲು ಬೇರೆಯವರು ಸಂಕೋಚಿಸದಿರುವುದರಿಂದ, ಬೇರೆ ಯಾವುದೇ ಧರ್ಮ ಹೇಳಿಕೊಳ್ಳಲು ನಾಚಿಕೆ ತರದು. ಅಂದರೆ ಸ್ವಾಭಿಮಾನ ತಂದುಕೊಡುತ್ತದೆ. ಇಲ್ಲಿ ಕಳಂಕ (stigma)ದ ಉಚ್ಚಾಟನೆ ಮತ್ತು ಸ್ವಾಭಿಮಾನದ ಪ್ರತಿಷ್ಠಾಪನೆ ಎರಡೂ ಏಕ ಕಾಲಕ್ಕೆ ಜರುಗುತ್ತವೆ. ವಿದ್ಯೆ, ಸಾಮಾಜಿಕ ಸ್ಥಾನಮಾನ, ಆರ್ಥಿಕ ಬೆಂಬಲ ಸ್ವಾಭಿಮಾನವನ್ನು ತುಂಬಿಕೊಡಲಾರವು ಎಂಬುದನ್ನು ಚರಿತ್ರೆಯಲ್ಲಿ ದಾಖಲಾಗಿ ಹೋದ ಎರಡು ಘಟನೆಗಳು ಸಾಬೀತುಪಡಿಸುತ್ತವೆ.

ಮತಾಂತರವು ಒಂದೇ ತಲೆಮಾರಿಗೆ ಗೌರವಯುತ ಅಸ್ತಿತ್ವವನ್ನು ದಯಪಾಲಿಸುವುದು ಕಷ್ಟವಾದರೂ ನಮ್ಮ ಮುಂದಿನ ತಲೆಮಾರಿಗೆ ಕಳಂಕವನ್ನು, ಅವಮಾನವನ್ನು ವರ್ಗಾಯಿಸದಿರುವುದು ನಾವು ಮಾಡಬಹುದಾದ ಅತ್ಯಂತ ಉದಾರವಾದ ಮಹತ್ವದ ಕೊಡುಗೆ.

1) ಜಗಜೀವನರಾಂರವರು ಕಾಶಿಯಲ್ಲಿ ಸಂಪೂರ್ಣಾನಂದರ ಪುತ್ಥಳಿಯನ್ನು ಅನಾವರಣ ಮಾಡಿ ಅವಮಾನಕ್ಕೊಳಗಾದರು.

2) ಕೆ.ಆರ್. ನಾರಾಯಣನ್ ಪ್ಯಾರಿಸ್‌ಗೆ ಹೋದಾಗ ಪತ್ರಿಕೆಗಳು An untouchable in Elsi Palace ಎಂದು ಬರೆದು ಅವಮಾನಿಸಿದ್ದು.

ಈ ವಿಚಾರವಾಗಿ ನಾನು ಈಗಾಗಲೇ ಬೇರೆಡೆಯಲ್ಲಿ ಬರೆದಿದ್ದೇನೆ. ಮತಾಂತರವು ಒಂದೇ ತಲೆಮಾರಿಗೆ ಗೌರವಯುತ ಅಸ್ತಿತ್ವವನ್ನು ದಯಪಾಲಿಸುವುದು ಕಷ್ಟವೆಂಬುದನ್ನು ನಟರಾಜ್ ಸರಿಯಾಗಿ ಗುರುತಿಸಿರುತ್ತಾರೆ. ಅಂಬೇಡ್ಕರ್‌ರ ಉದ್ದೇಶವು ಇದೇ ಆಗಿದೆ. ನಮ್ಮ ಮುಂದಿನ ತಲೆಮಾರಿಗೆ ಕಳಂಕವನ್ನು, ಅವಮಾನವನ್ನು ವರ್ಗಾಯಿಸದಿರುವುದು ನಾವು ಮಾಡಬಹುದಾದ ಅತ್ಯಂತ ಉದಾರವಾದ ಮಹತ್ವದ ಕೊಡುಗೆ. ಇದನ್ನು ಪುಷ್ಟೀಕರಿಸಲು ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಒಮ್ಮೆ ಗೆಳೆಯ ಎಫ್.ಎಚ್. ಜಕ್ಕಪ್ಪನವರನ್ನು ಮೊಬೈಲ್ ಫೋನಿನಲ್ಲಿ ಸಂಪರ್ಕಿಸಿದೆ. ಅವರು "ಸರ್, ಹತ್ತು ನಿಮಿಷ ಬಿಟ್ಟು ನಾನೇ ಮಾಡುತ್ತೇನೆ, ಬಸವಲಿಂಗಪ್ಪನವರ ಮಗನ ಮನೆಯಲ್ಲಿ ಸತ್ಯನಾರಾಯಣ ಪೂಜೆ ನಡೆಯುತ್ತಿದೆ" ಎಂದರು. ನನಗೆ ಶಾಕ್ ಆಯಿತು. ಬಸವಲಿಂಗಪ್ಪನವರ ಉಚ್ಛ್ವಾಸ, ನಿಶ್ವಾಸಗಳು ಬುದ್ಧ, ಅಂಬೇಡ್ಕರ್ ಆಗಿದ್ದವು. ಕರ್ನಾಟಕಾದ್ಯಂತ ಅಸಂಖ್ಯಾತ ದಲಿತ ಯುವಕರನ್ನು ಬುದ್ಧನೆಡೆಗೆ, ಅಂಬೇಡ್ಕರ್‌ವಾದಕ್ಕೆ ಆಕರ್ಷಿಸಿದವರು. ಅವರು, ನನಗೂ ಒಮ್ಮೆ ಅಂಬೇಡ್ಕರರ ಮೂಲ ಇಂಗ್ಲೀಷ್ ವರ್ಶನ್ ಅನ್ನು ಬಾಂಬೆಯಿಂದ ತರಿಸಿಕೊಂಡು ಓದು ಎಂದು ಹೇಳಿದ್ದರು. ಇಂತಹವರ ಮನೆಯಲ್ಲಿ ಸತ್ಯನಾರಾಯಣ ಪೂಜೆ ನಡೆಯುವುದು ಇತಿಹಾಸದ ಕ್ರೂರ ವ್ಯಂಗ್ಯವೇ ಸರಿ. ಬುದ್ಧ ಆತ್ಮದ ಇರುವನ್ನು ಒಪ್ಪುವುದಿಲ್ಲ. ಬಸವಲಿಂಗಪ್ಪನವರು ನರ ನಾಡಿಗಳಲ್ಲಿ ಬೌದ್ಧರಾಗಿದ್ದುದರಿಂದ ಅವರಿಗೂ ಆತ್ಮವಿಲ್ಲ. ಇದ್ದಿದ್ದರೆ ಅದು ಅಂದು ವಿಲವಿಲ ಒದ್ದಾಡುತ್ತಿತ್ತು. ಅಷ್ಟರಮಟ್ಟಿಗೆ ಅವರು ದುಃಖವನ್ನು ನಿವಾರಿಸಿಕೊಂಡಿದ್ದಾರೆ.

ಹಿಂದೂ ಧರ್ಮದಲ್ಲಿ ಶೂದ್ರರಾಗಿರುವುದು ಕೊಳಕು ಬಟ್ಟೆಯನ್ನು ಧರಿಸಿರುವಂತೆ ಅಸ್ಪೃಶ್ಯರಾಗಿರುವುದು ಕೊಳಕಿನ ಜೊತೆಗೆ ತೊಳೆಯಲಾರದ ಕಲೆ ಅಂಟಿಸಿಕೊಂಡ ಬಟ್ಟೆಯನ್ನು ಧರಿಸಿದಂತೆ. ಈಗ ಶೂದ್ರರು ಸಂಸ್ಕೃತೀಕರಣವೆಂಬ ಡ್ರೈಕ್ಲೀನ್‌ಗೆ ತಮ್ಮನ್ನು ಒಡ್ಡಿಕೊಂಡು ಕೊಳಕನ್ನು ನಿವಾರಿಸಿಕೊಳ್ಳುತ್ತಿದ್ದಾರೆ. ಆದರೆ ಅಸ್ಪೃಶ್ಯರಿಗೆ ಕಲೆಯುಕ್ತ ಅಂಗಿಯನ್ನು ತೊರೆಯದ ಹೊರತು ಕೊಳಕು ನಿವಾರಣೆಯಾಗುವುದಿಲ್ಲ.

ದಲಿತ ಮುಖಂಡರು ಅಸ್ಪೃಶ್ಯರಿಗೆ ಮತಾಂತರದಿಂದ ಪರಿಹಾರವಿಲ್ಲ ಎಂದು ಹೇಳಿದೊಡನೆ ಅದರ ಅಪರೋಕ್ಷ ಅನುಕೂಲವನ್ನು ಪಡೆದುಕೊಳ್ಳುವವರು ವೈದಿಕ ವ್ಯವಸ್ಥೆಯ ಪ್ರತಿಪಾದಕರೇ ಎಂಬುದನ್ನು ಹೇಳಬೇಕಾಗಿಲ್ಲವಷ್ಟೆ, ಹಿಂದೂಗಳ ಸಂಖ್ಯೆ ಎಲ್ಲಿಯವರೆಗೆ ದಲಿತರನ್ನು ಒಳಗೊಂಡಿರುತ್ತದೋ ಅಲ್ಲಿಯವರೆಗೆ ಹಿಂದೂ ಧರ್ಮಕ್ಕೆ ನಷ್ಟವಿಲ್ಲ. ಅವರು ಬ್ರಾಹ್ಮಣ್ಯದ ಉಳಿವಿಗೆ ಹೋರಾಟ ನಡೆಸಬಲ್ಲ ಕಾಲಾಳು ಸೈನಿಕರಾಗೇ ಬಳಸಲ್ಪಡುತ್ತಾರೆ. ಬಸವಲಿಂಗಪ್ಪನವರ ಮೊಮ್ಮಕ್ಕಳ ಕೈಗೆ ತ್ರಿಶೂಲ ಇತ್ಯಾದಿ ಆಯುಧಗಳು ಬಂದು ಬಿಡುತ್ತವೆ. ಇಷ್ಟೇ ಅಲ್ಲ ಅಂಥವರು ಮುಸಲ್ಮಾನರ ವಿರುದ್ಧ ಕೆಂಡಕಾರುವಂತಹರಾಗುತ್ತಾರೆ. ಇದರ ಬದಲು ಬುದ್ಧನ ಸ್ಥಿತಪ್ರಜ್ಞತೆಯನ್ನು ಬೆಳೆಸಿಕೊಳ್ಳುವ, ಧರ್ಮದ ಬಗ್ಗೆ ನಿರ್ಲಿಪ್ತತೆಯನ್ನು ಹೊಂದುವ ಮಾನವೀಯತೆಯನ್ನು ಬಯಸುವ ಮತಾಂತರದಿಂದ ಮುಂದಿನ ತಲೆಮಾರು ಈ ದೇಶಕ್ಕೆ ಒಳ್ಳೆಯದನ್ನೇ ಬಯಸುವುದಿಲ್ಲವೇ?

ಇಷ್ಟು ಸರಳವಾದ ವಿಚಾರಗಳು ನಮ್ಮ ಮುಖಂಡರಿಗೆ ಮನವರಿಕೆಯಾಗದಿರುವುದು ನನಗೆ ಖೇದವೆನಿಸುತ್ತದೆ. ನನ್ನಂತಹ ಲೇಖಕರ ಹಳಹಳಿಕೆ ಬೌದ್ಧಿಕ ಚರ್ಚೆಯಲ್ಲಿ ಮುಕ್ತಾಯವಾಗುತ್ತದೆ. ಹೆಚ್ಚೆಂದರೆ ಪುಸ್ತಕದೊಳಗೆ ಅವಿತು ಕಪಾಟು ಸೇರುತ್ತದೆ. ಆದರೆ, ಜಕ್ಕಪ್ಪನವರು, ನಾರಾಯಣಸ್ವಾಮಿಯವರು, ಸಾಮಾನ್ಯರ ನಡುವೆ ಬೆರೆಯುವ ಅವಕಾಶವಿರುವವರು. ಅವರ ಗ್ರಹಿಕೆಯೇ ಸಾಮಾನ್ಯರನ್ನು ತಲುಪುತ್ತದೆ. ಆದ್ದರಿಂದ ಇಷ್ಟೆಲ್ಲ ಮಾತು. ಅವಮಾನಿಸುವ ಧರ್ಮವನ್ನು ಪ್ರತಿಷ್ಠೆಯನ್ನು ಕುಗ್ಗಿಸುವ ಧರ್ಮವನ್ನು ಪೋಷಿಸುವುದು ಆತ್ಮವಂಚನೆಯಾಗುತ್ತದೆ ಎಂದು ಹೇಳಿ ನನ್ನ ಪ್ರತಿಕ್ರಿಯೆಯನ್ನು ಮುಗಿಸುತ್ತೇನೆ.

○ ಮೂಡ್ನಾಕೂಡು ಚಿನ್ನಸ್ವಾಮಿ

ಒಡವೆ, ಸೀರೆ ಮೀರಿದ ಮನಸ್ಸುಗಳು

ಶೂದ್ರ ಹೆಣ್ಣು ಮಕ್ಕಳಿಗೂ ಶಿಕ್ಷಣ ಅಗತ್ಯವಿದೆ ಎಂಬುದನ್ನು ಮನದಷ್ಟು ಮಾಡಿಕೊಟ್ಟು ವಿರೋಧದ ನಡುವೆಯೂ ಶಾಲೆ ಪ್ರಾರಂಭಿಸಿದ ಜ್ಯೋತಿ ಬಾ ಫುಲೆ ರಾಜಕೀಯದಲ್ಲಿ ಮಹಿಳೆಯೂ ಪಾಲುಗೊಳ್ಳಬೇಕೆಂದು ಕರೆ ನೀಡಿದ ಮಹಾತ್ಮಗಾಂಧಿ, ಪ್ರಜಾಸತ್ತೆಯಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನಹಕ್ಕುಳ್ಳವರು ಎಂದು ಕಾನೂನು ಬರೆದ ಸಂವಿಧಾನ ಶಿಲ್ಪಿ ಡಾ|| ಬಾಬಾ ಸಾಹೇಬ ಅಂಬೇಡ್ಕರ್‌ರಂತಹ ಮಹಾನುಭಾವರಿಂದ ಮಹಿಳಾ ಚಳುವಳಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ದೊರಕಿತು. ಇದಕ್ಕೆ ಹಿಂದೆ 12ನೇ ಶತಮಾನದಲ್ಲಿ ಮಹಿಳೆಯರ ಹಾಗೂ ತುಳಿತಕ್ಕೊಳಗಾದವರ ಏಳಿಗೆಗಾಗಿ ಮಾನ-ಸಮ್ಮಾನಕ್ಕಾಗಿ ಅಪಾರವಾಗಿ ಶ್ರಮಿಸಿದ ಕರ್ನಾಟಕದ ಬಸವೇಶ್ವರರನ್ನು ಮಹಿಳಾ ಜಗತ್ತು ಕೃತಜ್ಞತೆಯಿಂದ ನೆನೆಯಬೇಕಾಗಿದೆ.

○ ಬಿ.ಟಿ. ಲಲಿತಾ ನಾಯಕ್

ಮಹಿಳೆಯರ ಮೇಲಿನ ದೌರ್ಜನ್ಯ, ಅವಳಿಗಾಗುತ್ತಿರುವ ಮಾನಸಿಕ, ದೈಹಿಕ ಶೋಷಣೆ ಕುರಿತು ವಿವಿಧ ಮಹಿಳಾ ಸಂಘಟನೆಗಳು, ರಾಜಕೀಯ ಪಕ್ಷಗಳು, ದೊಡ್ಡ ಪ್ರಮಾಣದ ಚಳುವಳಿಯನ್ನೇ ಪ್ರಾರಂಭಿಸಿವೆ. ಇದು ನೆನ್ನೆ ಮೊನ್ನೆ ಹುಟ್ಟಿಕೊಂಡ ಹೋರಾಟವಲ್ಲ. ಕಳೆದ ಶತಮಾನದಲ್ಲಿಯೇ ಕೆಲವು ಸಮಾಜ ಸುಧಾರಕರು ಮಹಿಳೆಯನ್ನು ಸಂಕಷ್ಟದಿಂದ ಪಾರು ಮಾಡಲು ತನುಮನದಿಂದ ಹೋರಾಟವನ್ನು ಹಮ್ಮಿಕೊಂಡರು.

ಸತಿ ಸಹಗಮನದಂಥಹ ಒಂದು ಅಮಾನುಷ ಪದ್ಧತಿಯನ್ನು ತೊಡೆದು ಹಾಕಲು ರಾಜಾರಾಂ ಮೋಹನ್‌ರಾಯ್ ಸತತ ಪ್ರಯತ್ನಿಸಿದರು. ಬಂಗಾಳ ಒಂದರಲ್ಲೇ ಮೊಗಲ್ ಸಾಮ್ರಾಜ್ಯದ ಪತನದ ನಂತರ ವರ್ಷ ಒಂದಕ್ಕೆ ಸುಮಾರು 7000 ಮಹಿಳೆಯರು ಸಹಗಮನದಲ್ಲಿ ಬೆಂದುಹೋಗುತ್ತಿದ್ದರು. ಮಾರವಾಡದ ರಾಜ ಅಜಿತ್‌ಸಿಂಗ್‌ನ ಚಿತೆಯ ಮೇಲೆ ಒಂದೇ ಬಾರಿಗೆ 64 ಮಂದಿ ಪತ್ನಿಯರು ಸಹಗಮನ ಮಾಡಿದರು. ಈ ದುರಂತಮಯ ಕಪ್ಪು ಚರಿತ್ರೆಯನ್ನು ಅಳಿಸಿ ಹಾಕಲು ನಡೆದ ಹೋರಾಟಕ್ಕೆ ಬೆಂಬಲಿಸಿ 1829ರಲ್ಲಿ ಸಹಗಮನ ಪದ್ಧತಿ ನಿಷೇದ ಕಾಯ್ದೆಯನ್ನು ಜಾರಿಗೆ ತಂದ ಕೀರ್ತಿ ಲಾರ್ಡ್ ವಿಲಿಯಂ ಬೆಂಟಿಂಕ್‌ಗೆ ಸಲ್ಲುತ್ತದೆ.

ಅದೇ ರೀತಿ ಶೂದ್ರ ಹೆಣ್ಣು ಮಕ್ಕಳಿಗೂ ಶಿಕ್ಷಣದ ಅಗತ್ಯವಿದೆ ಎಂಬುದನ್ನು ಮನದಟ್ಟು ಮಾಡಿಕೊಟ್ಟು ವಿರೋಧದ ನಡುವೆಯೂ ಶಾಲೆ ಪ್ರಾರಂಭಿಸಿದ ಜ್ಯೋತಿ ಬಾ ಫುಲೆ ರಾಜಕೀಯದಲ್ಲಿ ಮಹಿಳೆಯೂ ಪಾಲುಗೊಳ್ಳಬೇಕೆಂದು ಕರೆ ನೀಡಿದ ಮಹಾತ್ಮಗಾಂಧಿ, ಪ್ರಜಾಸತ್ತೆಯಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನಹಕ್ಕುಳ್ಳವರು ಎಂದು ಕಾನೂನು ಬರೆದ ಸಂವಿಧಾನ ಶಿಲ್ಪಿ ಡಾ|| ಬಾಬಾ ಸಾಹೇಬ ಅಂಬೇಡ್ಕರ್‌ರಂತಹ ಮಹಾನುಭಾವರಿಂದ ಮಹಿಳಾ ಚಳುವಳಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ದೊರಕಿತು. ಇದಕ್ಕೆ ಹಿಂದೆ 12ನೇ ಶತಮಾನದಲ್ಲಿ ಮಹಿಳೆಯರ ಹಾಗೂ ತುಳಿತಕ್ಕೊಳಗಾದವರ ಏಳಿಗೆಗಾಗಿ ಮಾನ-ಸಮ್ಮಾನಕ್ಕಾಗಿ ಅಪಾರವಾಗಿ ಶ್ರಮಿಸಿದ ಕರ್ನಾಟಕದ ಬಸವೇಶ್ವರರನ್ನು ಮಹಿಳಾ ಜಗತ್ತು ಕೃತಜ್ಞತೆಯಿಂದ ನೆನೆಯಬೇಕಾಗಿದೆ.

ಇಷ್ಟಾಗಿಯೂ ಕೂಡ ಮಹಿಳೆ ಈವತ್ತಿಗೂ ಎರಡನೇ ದರ್ಜೆ ಪ್ರಜೆಯಾಗಿಯೇ ಗುರುತಿಸಲ್ಪಡುತ್ತಿರುವುದುಏಕೆ? ಇದರ ಮೂಲ ಕಾರಣವೇನು? ಎಂಬುದನ್ನು ನಾವು ಸಾವಧಾನವಾಗಿ ಚಿಂತನೆ ಮಾಡಬೇಕಾಗಿದೆ.

ಶತಮಾನಗಳಿಂದಲೂ ಪುರಾಣ-ವೇದ-ಗಾದೆ ಇತ್ಯಾದಿಗಳು ಮಹಿಳೆಯನ್ನು ಕುರಿತು ಹೀಗೆ ಹೇಳುತ್ತಾ ಬಂದಿವೆ :

"ಸ್ತ್ರೀ ಒಂದು ವಸ್ತು ಪದಾರ್ಥ" (ಶಾಕ್ತ)

"ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು ಬಿರುಗಾಳಿಯಂತೆ ಅಸ್ಥಿರಳು" (ರಾಮಾಯಣ)

"ಅವಳು ಎಲ್ಲಾ ಕೆಡುಕಿನ ಬೇರು" (ಮಹಾಭಾರತ)

"ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು. ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ" (ಯೂರೋಪಿನ ಧರ್ಮಬೋಧಕ)

"ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುತ್ತದೆ" (ಚೀನಿ ಗಾದೆ)

ಇತ್ಯಾದಿಯಾಗಿ ಮಹಿಳೆಯ 'ಗುಣಗಾನ', ಮಾಡಿರುವುದನ್ನು ಗಮನಿಸಬಹುದಾಗಿದೆ. ಮಹಿಳೆ ಎಂದರೆ ಮಹಾ-ಇಳೆ "ಭೂಮಿಯಂತೆ ಸಹನೆಯುಳ್ಳವರು" "ಸ್ತ್ರೀ" ಎಂದರೆ ಸೂತ್ರಿ ಮಕ್ಕಳನ್ನು ಹೆರುವವಳು" ಎಂದು.

ಇದಾವುದು ಸುಳ್ಳಂತು ಅಲ್ಲ, ಆದರೆ ಈ ಗುಣಲಕ್ಷಣಗಳ ಜೊತೆಗೆ ಮಹಿಳೆ ಇನ್ನೂ ಅನೇಕ ಲಕ್ಷಣ-ಅವಲಕ್ಷಣಗಳನ್ನು ಹೊಂದುತ್ತಾಳೆ, ಹೊಂದಬಲ್ಲಳು, ಹೊಂದಬೇಕು ಎಂಬ ಮನೋಭಾವವನ್ನು ಜನಸಮುದಾಯ ಬೆಳೆಸಿಕೊಂಡರೆ ಮಾತ್ರ ಮಹಿಳೆಯ ಪ್ರಗತಿ ಸಾಧ್ಯವಾಗುತ್ತದೆ.

ಸ್ತ್ರೀ ಹಾಗೂ ಪುರುಷ (ಎಂದರೆ ಪೌರುಷ)ರಲ್ಲಿ ದೈಹಿಕ ಭೇದವಿರುವುದನ್ನು ಅಲ್ಲಗಳೆಯುವಂತಿಲ್ಲ. ಆತನಿಗೆ ಮಗುವಿನ ತಂದೆಯಾಗುವ ಅವಕಾಶ ಲಭ್ಯವಿದ್ದರೆ ಹೆಣ್ಣಿಗೆ ತಾಯಿಯಾಗುವ ಅವಕಾಶ ದೊರಕಿದೆ. ಒಬ್ಬರಿಗಿರುವ ಸೌಲಭ್ಯ ಮತ್ತೊಬ್ಬರಿಗಿಲ್ಲ. ಆದರೆ ತಾಯಿಯಾಗುವವಳಿಗೆ ಪ್ರಕೃತಿಯು ಪುರುಷನಿಗಿಂತಲೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಿದೆ ಮತ್ತು ವಾತ್ಸಲ್ಯದ ಮೊತ್ತವನ್ನು ಹೆಚ್ಚಿಸಿದೆ. ಜನಿಸಿದ ಮಗುವನ್ನು ಪುರುಷ ಕೇವಲ ನಂಬಿಕೆಯ ಮೇಲೆ ತನ್ನದೆಂದು ವಾತ್ಸಲ್ಯ ತೋರಿ ಸ್ವೀಕರಿಸಿದರೆ ಸ್ತ್ರೀ ತನ್ನ ಕರುಳ ಕುಡಿಯನ್ನು ಯಾವ ಅಪನಂಬಿಕೆಯೂ ಪಡದೆ ತನ್ನ ದೇಹದ ಒಂದು ಭಾಗವನ್ನಾಗಿ ಸ್ವೀಕರಿಸುತ್ತಾಳೆ. ಆದ್ದರಿಂದ ತಾಯಿ-ಮಗುವಿಗೆ ಅನಿವಾರ್ಯವಾಗಿ ಅಂಟಿದ ನಂಟು ಬೆಳೆಯುತ್ತದೆ. ತಂದೆಗೆ ಅಂಟಿಕೊಳ್ಳದ ದೂರದ ನಂಟು ಮಾತ್ರ ಉಳಿಯುತ್ತದೆ.

ಪುರುಷ ಒಂದು ಹೆಣ್ಣಿನ ಸಂಗ ಬೆಳೆಸಿ 'ಮದುವೆ' ಎಂಬ ಬಂಧನಕ್ಕೆ ಒಳಗಾಗದೆ ಮತ್ತೆ ಇನ್ನೊಬ್ಬ ಅಥವಾ ಹಲವಾರು ಹೆಣ್ಣುಗಳ ಸಂಗ ಸಹವಾಸದಲ್ಲಿದ್ದು ತನ್ನ ಆಯುಷ್ಯವನ್ನು ಕಳೆದುಬಿಡಬಹುದು. ಇದರಿಂದ ದೈಹಿಕವಾಗಿ ಆತನಿಗೆ ಯಾವ ಬಾಧಕವೂ ಇಲ್ಲ.

ಆದರೆ ಮಹಿಳೆಯೊಬ್ಬಳು ಇದೇ ನೀತಿಯನ್ನು ಅನುಸರಿಸಿ ಪುರುಷನಷ್ಟೇ ಆರಾಮವಾಗಿ ಇದ್ದು ಜೀವಿತಾವಧಿಯನ್ನು ಕಳೆಯುವುದು ದುಸ್ತರವೇ ಸರಿ. ಶೇ. 99ರಷ್ಟು ಮಹಿಳೆಯರು ತನ್ನವನೇ ಆದ ಪತಿ, ತನ್ನದೇ ಆದ ಮಕ್ಕಳು, ತನ್ನದೇ ಮನೆ ಇರಬೇಕು. ಅದೇ ಸ್ವಾತಂತ್ರ್ಯ ಅದೇ ಸುಖ ಎಂಬ ಭಾವನೆಯನ್ನು ಹೊಂದಿರುತ್ತಾರೆ.

ಪುರುಷರಾದರೂ ತನ್ನವಳೇ ಆದ ಮಡದಿ-ಮಕ್ಕಳು-ಮನೆ ಹೊಂದಿರಬೇಕು. ಅವರುಗಳು ತನ್ನನ್ನು ಗುರುತಿಸಿ ಆದರಿಸಬೇಕು. ಉಪಚರಿಸಬೇಕು ಎಂಬ ಹಂಬಲವುಳ್ಳವರಾಗಿರುತ್ತಾರೆ.

ಆದ್ದರಿಂದಲೇ ಅವನನ್ನು ಹೆಣ್ಣು ಹೆಚ್ಚು ಕಟ್ಟುಪಾಡುಗಳಿಗೆ ಒಳಗಾಗಿಸಿದರೆ ತನ್ನನ್ನು ತನ್ನ ಮಕ್ಕಳನ್ನು ತೊರೆದುಬಿಡಲು ಹೇಸಲಾರ ಎಂಬ ಭಯ ಮಹಿಳೆಗಿದೆ. ಅಂತಲೇ ಅವಳು ಬದುಕಿನುದ್ದಕ್ಕೂ ರಿಯಾಯಿತಿ ತೋರುತ್ತಾ ನಿಧಾನವಾಗಿ ಅವನನ್ನು ಸಂಸಾರದ ನೊಗಕ್ಕೆ ಕಟ್ಟಿಹಾಕಲು ಶ್ರಮಿಸತೊಡಗಿದಳು. ನೀನು ಕಟ್ಟಿದ ತಾಳಿ ಇದು ಒಮ್ಮೆ ಕಟ್ಟಿದ್ದನ್ನು ಬಿಚ್ಚಬೇಡ. ನಾನು ನಿನ್ನ ಪತ್ನಿ ದಯವಿಟ್ಟು ನನಗೆ ನನ್ನ ಮಕ್ಕಳಿಗೆ ಆಸರೆಯಾಗಿರು ಎಂದು ಗೋಗರೆದಳು. ತನ್ನ ಹೊರತು ಇನ್ನೂ ಹಲವು ಪತ್ನಿಯರನ್ನು ಆತ ಮದುವೆಯಾದರೂ ಮೌನವಾಗಿ ಸಹಿಸಿಕೊಂಡಳು. "ಗಂಡ ಪಂಡಿತರಾಯ ರಂಡೀಯ ಮಾಡಿದರ ಭಂಡ ಮಾಡುವರ ಮಗಳಲ್ಲ ಕೊರಳಾನ ಗುಂಡು ಬೇಡಿದರ ಕೊಡುವೇನ"

ಆದರೆ ಪುರುಷ ಅವಳ ರೀತಿಯಲ್ಲಿ ಹೇಳುವ ಅವಶ್ಯಕತೆ ಇದೆ ಎಂದು ಭಾವಿಸಿಲ್ಲ. ಈ ತಾಳಿಯನ್ನು ನಾನು ನಿನಗೆ ಕಟ್ಟಿದ್ದೇನೆ. ಆದ್ದರಿಂದ ನನ್ನನ್ನು ಬಿಟ್ಟುಹೋಗಬೇಡ ನನಗೆ ನನ್ನ ಮಕ್ಕಳಿಗೆ ಆಸರೆಯಾಗಿ ನಿಲ್ಲು, ಎಂದು ಆತ ಹೇಳುವ ಬದಲಾಗಿ ನಾನು ಇರುವುದೇ ಹೀಗೆ ನಿನಗೆ ನಾನು ಬೇಕಾದರೆ ನನ್ನನ್ನು ಹೊಂದಿಕೊಂಡು ಇರು, ಬೇಡವಾದರೆ ಬಿಟ್ಟುಹೋಗು ಎನ್ನುವುದು ಪುರುಷ ಪ್ರಧಾನ ಸಮಾಜದ ಪ್ರತಿಕ್ರಿಯೆ.

ಸ್ತ್ರೀ-ಪುರುಷರ ಇಂತಹ ಮನಃಸ್ಥಿತಿಯಿಂದಾಗಿ ಅವರಿಬ್ಬರ ನಡುವಿನ ಸಾಮಾಜಿಕ ಸ್ಥಾನ-ಮಾನಗಳು ಸಹಜವಾಗಿಯೇ ಅಸಮಾನತೆಯಿಂದ ಕೂಡಿದ್ದು, ಪುರುಷನ ಕಡೆಗೆ ಹೆಚ್ಚುವಾಲಿದೆ.

ಸ್ತ್ರೀ ತನ್ನ ಅಸಹಾಯಕತೆಯಿಂದಾಗಿ ತನ್ನ ಮಗಳಿಗೆ ಮೊಮ್ಮಗಳಿಗೆ, ಮರಿಮಗಳಿಗೆ ಗಂಡನೊಡನೆ ಮನೆಯವರೊಡನೆ ಹೊಂದಿಕೊಂಡು ಬಾಳುವೆ ನಡೆಸಲು ಉಪದೇಶಿಸುತ್ತಾ ಬಂದಳು. ತಾನು ಹೇಳಬೇಕಾದುದನ್ನೆಲ್ಲಾ ಸ್ತ್ರೀಯರೇ ಹೇಳುತ್ತಾ ತನಗೆ ಯಜಮಾನ ಪಟ್ಟ ಕಟ್ಟಿದ್ದರಿಂದ ಸಂತೃಪ್ತನಾದ ಪುರುಷ ಧನ, ಕನಕ, ಭೂಮಿಯ ಜೊತೆಗೆ ಪತ್ನಿಯನ್ನು ತನ್ನ ಆಸ್ತಿಯ ಪಟ್ಟಿಗೆ ಸೇರಿಸಿಕೊಂಡ.

ಚಿನ್ನ ಬೆಳ್ಳಿಗೆ ಬಂದ ಬೆಲೆಯೇ ತನಗೂ ದೊರಕಿತಲ್ಲಾ ಅಷ್ಟೇ ಸಾಕು ಎಂದು ಸಮಾಧಾನ ಪಟ್ಟ ಹೆಣ್ಣು ಗಂಡಿನ ಕೃಪಾಕಟಾಕ್ಷ ಗಳಿಸಲು ಅವನ ದಾಸಿಯಾಗಿ ಬದುಕಲು ಮನಃಪೂರ್ವಕ ಒಪ್ಪಿಕೊಂಡಳು. ತನ್ನ ರಕ್ಷಣೆ ತನ್ನ ಮಕ್ಕಳ ಭವಿಷ್ಯ ಇವೆರಡು ತನ್ನ ಪತಿಯ ಪ್ರಸನ್ನತೆಯಲ್ಲಿದೆ ಎಂಬುದನ್ನು ಗ್ರಹಿಸಿದ ಆಕೆ ತನ್ನ ಸಂಸಾರ ಸುಖಮಯವಾಗಲು ಯಾವ ತ್ಯಾಗಕ್ಕೂ ಸಿದ್ಧಳಾದಳು.

ಅದರ ಫಲವಾಗಿಯೇ 'ಸತಿಗೆ ಪತಿಯೇ ದೈವ' ಎಂಬುದು ಅವಳ ತಲೆಯಲ್ಲಿ ಬಲವಾಗಿ ಬೇರೂರಿತು. ಅವನು ಲಂಪಟನಾಗಿರಲಿ, ರೋಗಿಯಾಗಿರಲಿ, ಜೂಜುಕೋರನಾಗಿರಲಿ, ತನ್ನನ್ನು ಪಣವನ್ನಾಗಿಯೂ ಇಡಲಿ, ಕಾಡಿಗಟ್ಟಲಿ, ಬೆಂಕಿಗೆ ದೂಡಲಿ ತಾನು ಮಹಾ-ಇಳೆಯಾಗಿ ಅದೆಲ್ಲವನ್ನು ಸೈರಿಸಿಕೊಳ್ಳಬೇಕು ಎಂಬುದನ್ನು ಮನಗಂಡಳು.

ಅವನಿಲ್ಲದ ಬಾಳು-ನಾಯಿ ಬಾಳು ಎಂದು ಬಗೆದಳು. ಜಾಹರ್‌ಪದ್ಧತಿ, ಸತಿಪದ್ಧತಿ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ ಮುಂತಾದು ದುಷ್ಟಪದ್ಧತಿಗಳು ಅವಳ ಕೀಳರಿಮೆಯ ಫಲಗಳಾದವು.

ವಿದ್ಯೆಯಿಂದ ವಂಚಿತೆಯಾಗಿ, ಮೂಢನಂಬಿಕೆಗಳ ಆಗರವಾಗಿ, ಕಂದಾಚಾರದ ಸರಮಾಲೆಯನ್ನೇ ಕೊರಳಿಗೆ ಸುತ್ತಿಕೊಂಡು ದೀನತೆಯ ಬದುಕನ್ನು ತನ್ನದಾಗಿಸಿಕೊಂಡಳು. ಇದು ಸ್ತ್ರೀ-ಪುರುಷರ ನಡುವಿನ ಸಾಮಾಜಿಕ ಅಸಮಾನತೆಗೆ ಮೂಲಕಾರಣ. ಪುರುಷನಿಗಿಂತಲೂ ಅವಳ ದುಡಿಮೆ ದುಪ್ಪಟ್ಟು, ಹೊಲ-ಮನೆ-ಅಡಿಗೆ-ಒಪ್ಪ-ಓರಣ, ಹಬ್ಬ ಹರಿದಿನ, ಮಕ್ಕಳ ಆರೈಕೆ, ಪತಿಯ ಸೇವೆ. ವಯಸ್ಸಾದವರ ಯೋಗಕ್ಷೇಮ ಇವೆಲ್ಲದರ

ಜವಾಬ್ದಾರಿಯನ್ನು ಅವಳು ಸಲೀಸಾಗಿ ಹೊತ್ತು 'ಮನೆತನ' ಮುನ್ನಡೆಯಲು ಕಾರಣೀಭೂತಳಾದಳು.

ಇದರಿಂದಾಗಿ ಪುರುಷ ಹೂವಿಂದ ಹೂವಿಗೆ ಹಾರುವ ದುಂಬಿಯಾಗದೆ, ಕಾರ್ಯೇಷು ದಾಸಿ, ಕರುಣೇಶು ಮಂತ್ರಿ, ಶಯನೇಷು ರಂಭ, ಭೋಜ್ಯೇಷು ಮಾತಾ, 'ಕ್ಷಮಯಾ ಧರಿತ್ರಿ'ಯಾಗಿ ತನ್ನನ್ನು ತನ್ನ ಕುಟುಂಬವನ್ನು ಜೋಪಾನ ಮಾಡುವ ಪತ್ನಿಯನ್ನು ಮೆಚ್ಚಿಕೊಂಡ. 'ಅಳುವವನಿಗೆ ಏಳು ಹೆಂಡಿರಾದರು ನಡೆದೀತು' ಎಂಬುದು ಎಲ್ಲರೂ ಒಪ್ಪತಕ್ಕ ರೂಢಿಯ ಮಾತಾಯಿತು.

ತನ್ನವಳ ಮಕ್ಕಳು ತನ್ನ ಮಕ್ಕಳೇ ಹೌದು ಅವರ ಪಾಲನೆ ಪೋಷಣೆಯ ಭಾರವನ್ನು ತಾನು ಹೊರಬೇಕು. ಉಳಿದ ಭಾರವನ್ನು ಮಕ್ಕಳ ತಾಯಿಯೇ ಹೊರಲಿ ಎಂಬ ನಿರ್ಧಾರಕ್ಕೆ ಬದ್ಧನಾದ.

ಇಂತಹ ವಾತಾವರಣದಲ್ಲಿ ಬದುಕುತ್ತಿರುವ ಮಹಿಳೆ ವಿದ್ಯಾವಂತೆಯಾಗಬೇಕು. ಸಾಮಾಜಿಕ, ರಾಜಕೀಯ, ಆರ್ಥಿಕ ಸಮಾನತೆ ಪಡೆಯಬೇಕು ಎಂದು ಹೋರಾಟ ನಡೆಸಿದಾಗ ಅವಳಿಗೆದುರಾಗುವ ತೊಡಕುಗಳು ಯಾವುವು? ಎಂಬುದನ್ನು ಪರಿಶೀಲಿಸಬಹುದು.

ಮೊಟ್ಟಮೊದಲನೆಯದಾಗಿ ಅವಳ ಇಚ್ಛೆಗೆ ಮನೆಯವರ ಪ್ರೋತ್ಸಾಹ ಸಿಗಬೇಕು. ಶ್ರೀಮಂತ ವರ್ಗದ ಜನ ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ರಾಜಕೀಯವಾಗಿ ಬೆಳೆಯಲೂ ಬಿಡಬಲ್ಲರು.

ದೇಶದ ಚರಿತ್ರೆಯನ್ನು ನೋಡಿದಾಗ ಆಡಳಿತ ನಡೆಸಿರುವ ರಾಣಿಯರು-ಶ್ರೀಮಂತ ಪುತ್ರಿಯರು ಅಥವಾ ಶ್ರೀಮಂತ ಪತ್ನಿಯರು ಎಂಬುದು ತಿಳಿದುಬರುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ-ಬಹುಪಾಲು ಸ್ತ್ರೀಯರು ಯುದ್ಧದಲ್ಲಿಯೋ ಅಥವಾ ರೋಗರುಜಿನಗಳಿಂದಲೋ ಅವಸಾನ ಹೊಂದಿದ ರಾಜನ ವಿಧವೆಯರು, ಗಂಡುಮಕ್ಕಳು ಇಲ್ಲವಾದಾಗ ಅಥವಾ ಅಪ್ರಾಪ್ತವಯಸ್ಕರಿದ್ದಾಗ ಮಾತ್ರ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ತಮ್ಮ ಶೌರ್ಯ ಧೀಮಂತಿಕೆ ತೋರಿದವರಾಗಿದ್ದಾರೆ.

ಆದರೂ ಕೂಡ ರಾಜನ ಇತಿಹಾಸ ಬರೆದಂತೆ ರಾಣಿಯರ ಇತಿಹಾಸ ಗುರುತಿಸಲ್ಪಟ್ಟಿಲ್ಲ. ಹೆಣ್ಣಿನ ಸಂಗೀತ, ನೃತ್ಯ, ಅಭಿನಯ, ಕಲೆಯನ್ನು ವರ್ಣಿಸುವಾಗ ಇರಬಹುದಾದ ಹುರುಪು ಆಕೆಯ ಆಡಳಿತ ಕ್ರಮ, ರಾಜಕೀಯ ನೀತಿ ದಾಖಲಾಗಿಸುವುದರಲ್ಲಿ ಕಂಡುಬರುವುದಿಲ್ಲ.

ಶ್ರೀಮಂತ ವರ್ಗದ ಹೆಣ್ಣೂ ಸಹ ಓರ್ವನ ಪತ್ನಿ-ಮಕ್ಕಳ ತಾಯಿಯಾದ್ದರಿಂದ ಪುರುಷನಷ್ಟು ಸಲೀಸಾಗಿ ಆಕೆ ತನಗೆ ಇಷ್ಟವಾದ ಮಾರ್ಗದಲ್ಲಿ ಮುನ್ನಡೆಯಲು ಸಾಧ್ಯವಾಗುವುದಿಲ್ಲ. ತಮ್ಮ ಮನೆತನದ ಮಾನ ಮರ್ಯಾದೆ, ಘನತೆ ಎಲ್ಲವನ್ನೂ ಪ್ರತಿನಿಧಿಸುವವಳು ಮನೆಯ ಗೃಹಿಣಿ. ಅವಳೇ ಮನೆ ಮಠ ಬಿಟ್ಟು ರಾಜಕೀಯ ಮಾಡುತ್ತಾ ತಿರುಗಿದರೆ ಇಲ್ಲಿ ಮನೆಯ ಗತಿ ಏನು? ಮನೆಯ ಯಜಮಾನನಾದವನು 'ಹೆಣ್ಣಿಗ'ನಾಗಿ ಮನೆಯಲ್ಲಿ ಕುಳಿತು ಇವಳ ವೈಭವವನ್ನು, ಅಟ್ಟಹಾಸವನ್ನು ನೋಡಿಕೊಂಡಿರಲು ಸಾಧ್ಯವೇ? ಎಂಬ ವಿಚಾರ ಆಕೆಯ ಪತಿ ಹಾಗೂ ಕುಟುಂಬ ವರ್ಗ-ಬಂಧು ಬಳಗದವರ ತಲೆ ತಿನ್ನಲಾರಂಭಿಸುತ್ತದೆ. ಇನ್ನು ಮಧ್ಯಮ ವರ್ಗದ ಹೆಣ್ಣುಮಗಳು ಅಲ್ಪಸ್ವಲ್ಪ ವಿದ್ಯೆ ಕಲಿತರೂ ಸಹ ತನ್ನ ಸಂಸಾರ ತೂಗಿಸಿಕೊಂಡು ರಾಜಕೀಯದ ಬಗ್ಗೆ ಆಲೋಚಿಸಲು ಕೂಡ ಅವಳಿಗೆ ಸಮಯವಿಲ್ಲವಾಗುತ್ತದೆ. ನಗರ-ಪಟ್ಟಣವಾಸಿಯಾಗಿದ್ದರೆ "ಮನೆಗೆಲಸವನ್ನೆಲ್ಲ ಮುಗಿಸಿ" ಮಕ್ಕಳನ್ನು ಶಾಲಾ ಕಾಲೇಜಿಗೆ ಕಳುಹಿಸಿ, ತಾನೂ ಸಿದ್ಧಳಾಗಿ ಬಸ್ಸು-ಆಟೋ ಹಿಡಿದು ಯಾವುದೇ ಸಭೆ ಸಮಾರಂಭಕ್ಕೆ ಬಂದು ಕುಳಿತರೂ ಅವಳ ಮನಸ್ಸು ಅಲ್ಲಿ ನೆಲೆಗೊಳ್ಳಲೂ ಸಾಧ್ಯವಾಗುವುದಿಲ್ಲ.

ಸಂಜೆಯ ಅಡಿಗೆ-ಊಟ, ಹಾಲು, ತರಕಾರಿ, ದೋಬಿ, ಪಾತ್ರೆ, ಬಟ್ಟೆ ಸ್ವಚ್ಛತೆ, ಕೆಲಸದವಳು, ವಯಸ್ಸಾದವರು

(11ನೇ ಪುಟಕ್ಕೆ)

ರಾಷ್ಟ್ರೀಯತೆ, ದೇಶಪ್ರೇಮ ಯಾರ ಸೊತ್ತು?

ಸಂಘ ಪರಿವಾರಿಗಳ ಹಿಂದುತ್ವದ ಬೇರುಗಳು ಸಾವರ್ಕರ ಮತ್ತು ಗೋಳ್ವಲಕರ ಕಲ್ಪನೆಯ ಫ್ಯಾಸಿಸ್ಟ್ ವೈದಿಕ ಶಾಹಿಯ ಕಲ್ಪನೆಯಲ್ಲಿದೆ. ಸಮಕಾಲೀನ ಪ್ರಶ್ನೆಗಳಿಗೆ ಕೌಟಿಲ್ಯನಲ್ಲಿ ಇವರು ಉತ್ತರವನ್ನು ಹುಡುಕಲು ಹೊರಟಿದ್ದಾರೆ. ಇವರಿಗೆ ಹಿಂದು ಸಮಾಜದ ಸುಧಾರಣೆ ಬೇಕಾಗಿಲ್ಲ. ಇಲ್ಲಿ ಕ್ಯಾನ್ಸರ್ ಗಡ್ಡೆಯಂತಿರುವ ಜಾತಿ ಪದ್ಧತಿಯನ್ನು ತೊಲಗಿಸಲು ಇವರಿಗೆ ಮನಸ್ಸಿಲ್ಲ. ವರದಕ್ಷಿಣೆ ನಿರ್ಮೂಲನೆ ಇವರಿಗೆ ಬೇಕಾಗಿಲ್ಲ. ಅಸ್ಪೃಶ್ಯತೆ ನಿವಾರಣೆ ಇವರ ಆದ್ಯತೆಯ ಪಟ್ಟಿಯಲಿಲ್ಲ. ಈಗ ಇವರಲ್ಲಿ ಹಿಂದುಳಿದ ಸಮುದಾಯದ ಬಗ್ಗೆ ಮೂಡಿರುವ ದಿಢೀರ್ ಪ್ರೇಮಕ್ಕೆ ಕಾರಣ ಬೇರೇನೂ ಅಲ್ಲ. ಹಿಂದುತ್ವದ ಮುಸುಕಿನಲ್ಲಿ ಜಾತಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಹುನ್ನಾರವಾಗಿದೆ. ಅಲ್ಪಸಂಖ್ಯಾತರನ್ನು ಹತ್ತಿಕ್ಕಲು ಇದೇ ಶೂದ್ರ ಶಕ್ತಿಯನ್ನು ಈ ಫ್ಯಾಸಿಸ್ಟ್ ಶಕ್ತಿಗಳು ಬಳಸಿಕೊಳ್ಳುತ್ತಿವೆ.

○ ಸನತ್‌ಕುಮಾರ ಬೆಳಗಲಿ

ಭಾರತದ ಇಂದಿನ ದುರವಸ್ಥೆಗೆ ಏನು ಕಾರಣ? ಈ ದೇಶ ಯಾಕೆ ಹೀಗಾಯಿತು? ಇದೇ ದಾರಿಯಲ್ಲಿ ಸಾಗಿದರೆ ಇದೊಂದು ರಾಷ್ಟ್ರವಾಗಿ ಉಳಿದೀತೆ? ಇಂಥ ಪ್ರಶ್ನೆಗಳಿಗೆಲ್ಲ ಕೋಮುವಾದಿಗಳ ಬಳಿ ಇರುವ ಒಂದೇ ಉತ್ತರ ಉಜ್ವಲ ರಾಷ್ಟ್ರೀಯತೆಯ ಕೊರತೆ. ನಮ್ಮ ಸಂಸ್ಕೃತಿ, ಪರಂಪರೆ ಬಗ್ಗೆ ತಾತ್ಸಾರದ ಭಾವನೆ ಬೆಳೆಸಿಕೊಂಡಿರುವುದು ಇಂದಿನ ದುರಂತಕ್ಕೆ ಕಾರಣ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಾಧವ ಸದಾಶಿವ ಗೋಳ್ವಲಕರ ಸಿದ್ಧಾಂತದಲ್ಲಿ ನಂಬಿಕೆ ಹೊಂದಿದವರೆಲ್ಲ ಇಂಥದೇ ವಾದವನ್ನು ಮುಂದಿಡುತ್ತಾರೆ. ಆದರೆ ಇಂಥ ಭವ್ಯ ಪರಂಪರೆ ಹೊಂದಿದ ದೇಶ ಯಾಕೆ ಪದೇ ಪದೇ ವಿದೇಶಿಯರ ದಾಳಿಗೆ ತುತ್ತಾಯಿತು? ಮೊಗಲರು, ಬ್ರಿಟಿಷರು ಏಳೆಂಟು ನೂರು ವರ್ಷಕಾಲ ಈ ದೇಶವನ್ನಾಳಲು ಹೇಗೆ ಸಾಧ್ಯವಾಯಿತು. ವಿದೇಶಿಯರು ಈ ನೆಲಕ್ಕೆ ಕಾಲಿಡುವ ಮುನ್ನವಾದರೂ ಈ ದೇಶ ಒಂದಾಗಿ ಇತ್ತೆ?

ಇಂಥ ಪ್ರಶ್ನೆಗಳಿಗೆಲ್ಲ ಸಂಪ್ರದಾಯವಾದಿಗಳು ಸ್ಪಷ್ಟ ಉತ್ತರ ನೀಡುವುದಿಲ್ಲ. ಆದರೆ ಡಾ|| ಬಿ.ಆರ್. ಅಂಬೇಡ್ಕರ್ ಕೆಲವೇ ಶಬ್ದಗಳಲ್ಲಿ ಇದಕ್ಕೆ ಉತ್ತರ ನೀಡಿದ್ದಾರೆ. "ಅಸ್ಪೃಶ್ಯರಾದ ನಮ್ಮನ್ನು ಅತ್ಯಂತ ಕೀಳಾಗಿ ಕಾಣುವ ಈ ಭಾರತದ ನೆಲ ಹಾಗೂ ಧರ್ಮವನ್ನು ನನ್ನದು ಎಂದು ಹೇಗೆ ಭಾವಿಸಲಿ? ಇದಕ್ಕಾಗಿ ನನ್ನನ್ನು ದೇಶದ್ರೋಹಿ ಎಂದು ಕರೆದರೂ ವಿಷಾದಿಸುವುದಿಲ್ಲ ಎಂದು ಬಾಬಾ ಸಾಹೇಬ್ ಹೇಳಿದರು". ಇಂಥ ಅಂಬೇಡ್ಕರ್‌ರನ್ನೆ ಬ್ರಿಟಿಷ್ ಏಜೆಂಟ್ ಎಂದು ಕರೆದು ಅವರನ್ನು ನಿಂದಿಸಲೆಂದೇ ಬೃಹತ್ ಗ್ರಂಥ ಬರೆದ ಅರುಣ್‌ಶೌರಿ ಈಗ ಕೇಂದ್ರ ಸಚಿವ. ಸಂಘ ಪರಿವಾರದ ಚಿಂತನೆಯ ಚಿಲುಮೆ. ಹೀಗೆ ಒಂದು ಜನ ಸಮೂಹವನ್ನೇ ನಾಯಿ ಬೆಕ್ಕುಗಳಿಗಿಂತ ಕಡೆಯಾಗಿ ಕಂಡ ದೇಶದಲ್ಲಿ ರಾಷ್ಟ್ರೀಯತೆ ಎನ್ನುವುದು ಸ್ಪಷ್ಟ ಆಕಾರ ಪಡೆಯಲು ಹೇಗೆ ಸಾಧ್ಯ? ತಮ್ಮ ಮೈ ಬೆವರಿನಿಂದ ಭಾರತ ಎಂಬ ದೇಶವನ್ನು ಕಟ್ಟಿದವರನ್ನೇ ಕಾಲ ಕಸವನ್ನಾಗಿ ಕಂಡರೆ ಹೇಗೆ?

ತಮ್ಮದು ಸಾಂಸ್ಕೃತಿಕ ರಾಷ್ಟ್ರವಾದ ಎಂದು ಹೇಳಿಕೊಳ್ಳುವವರ ಹಿಂದುತ್ವವಾದರೂ ಎಂಥದು? ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕುವ ಪ್ರಾಮಾಣಿಕ ಕಾಳಜಿ ಇವರಿಗಿದ್ದಿದ್ದರೆ ಜುಜಾರ್‌ನಲ್ಲಿ ಆಕಳ ಚರ್ಮ ಸಾಗಿಸುತ್ತಿದ್ದ ದಲಿತರ ಹತ್ಯೆ ನಡೆಯುತ್ತಿತ್ತೆ? ಹಿಂದುಗಳಲ್ಲಿ ಯಾಕೆ ಒಗ್ಗಟ್ಟು ಮೂಡುತ್ತಿಲ್ಲ ಎಂದು ಆರ್.ಎಸ್.ಎಸ್. ಮುಖ ಪತ್ರ ಪಾಂಚಜನ್ಯದ ಸಂಪಾದಕ ತರುಣವಿಜಯ ಇತ್ತೀಚೆಗೆ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಹಿಂದುತ್ವವನ್ನು ಹಿಂದೂಗಳೇ ವಿರೋಧಿಸುತ್ತಿದ್ದಾರೆಂಬ ಆತಂಕ ಅವರಿಗಿದೆ. ಆದರೆ ಈ ದೇಶದಲ್ಲಿ ನೆಲೆಸಿದ ಎಲ್ಲರನ್ನು ಹಿಂದುಗಳೆಂದು ಕರೆಯಲು ಅವರಿಗೆ ಯಾರು ಅಧಿಕಾರ ನೀಡಿದರು. ಅನೇಕತೆಯೇ ಈ ನೆಲದ ಸಂಸ್ಕೃತಿ ಎನ್ನುವುದಾದರೆ ಹಿಂದುತ್ವದ ಹೆಸರಿನಲ್ಲಿ ಪುರೋಹಿತಶಾಹಿಯನ್ನು ಹೇರುವ ಹುನ್ನಾರವೇಕೆ ನಡೆದಿದೆ? ಹೆಗ್ಡೆವಾರ, ಗೋಳ್ವಲಕರ ಪ್ರತಿಪಾದಿಸುವ ಹಿಂದುತ್ವ ಮಾತ್ರವೇ ಹಿಂದೂ ಸಂಸ್ಕೃತಿಯೇ? ವೇದಾಂತದ ಮನಸ್ಸು, ಇಸ್ಲಾಂನ ದೇಹ ಸೇರಿ ಈ ಸಂಸ್ಕೃತಿ ರೂಪುಗೊಳ್ಳಬೇಕೆಂಬ ಸ್ವಾಮಿ ವಿವೇಕಾನಂದರ ವಿಚಾರಧಾರೆ ಹಿಂದೂ ವಿರೋಧಿಯೆ?

ಈ ದೇಶದಲ್ಲಿ ದಲಿತರ ಮೇಲೆ ಅತ್ಯಾಚಾರ ನಡೆಯದ ದಿನವೇ ಇಲ್ಲ. ಅಸ್ಪೃಶ್ಯ ಮಹಿಳೆಯರ ಬೆತ್ತಲೆ ಮೆರವಣಿಗೆಯ ಘಟನೆಗಳು ಸಂಭವಿಸುತ್ತಲೇ ಇವೆ. ಇತ್ತೀಚೆಗೆ ಬೆಳಗಾವಿಯಲ್ಲಿ ಹದಿನಾಲ್ಕರ ಅನಾಥ ಬಾಲಕಿಯೊಬ್ಬಳನ್ನು ಯಾರೋ ದುಷ್ಟರು ಎಳೆದೊಯ್ದು ರೇಪ್ ಮಾಡಿದರು. ಆಕೆ ಈಗ ಗರ್ಭಿಣಿಯಾಗಿದ್ದಾಳೆ. ಆ ಊರಿನ ಬೀದಿಯಲ್ಲಿ ಅಲೆದಾಡುತ್ತಿದ್ದಾಳೆ. ಹಿಂದು ಸಮಾಜಕ್ಕೆ ಸೇರಿದ ಈ ಹುಡುಗಿಗೆ ಆಸರೆ ನೀಡಲು ಯಾವ ಹಿಂದೂವು ಮುಂದೆ ಬರಲಿಲ್ಲ. ಹಿಂದುತ್ವದ ಹೆಸರಿನಲ್ಲಿ ಓಟು ಗಿಟ್ಟಿಸಿಕೊಂಡು ಅಧಿಕಾರಕ್ಕೆ ಬರುವ ವಿಶ್ವ ಹಿಂದೂ ಪರಿಷತ್ತೂ ನೆರವಿಗೆ ಬರಲಿಲ್ಲ. ಆದರೆ ಯಾವುದೋ ಅಲ್ಪಸಂಖ್ಯಾತ ಸಂಸ್ಥೆಯೊಂದು ಆಶ್ರಯದ ಭರವಸೆ ನೀಡಿತು. ಕೊನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆಕೆಗೆ ರಕ್ಷಣೆ ನೀಡಿದೆ.

1988ರಲ್ಲಿ ಪ್ರಕಟವಾದ ಅಧಿಕೃತ ಅಂಕಿ ಅಂಶಗಳ ಪ್ರಕಾರ ದಲಿತರ ಮೇಲೆ 25,600 ಹಲ್ಲೆಯ ಪ್ರಕರಣಗಳು ಆ ವರ್ಷ ನಡೆದಿವೆ. ಈ ಪ್ರಕರಣಗಳು ದಾಖಲಾಗಿದ್ದರೂ ಯಾವುದೇ ತನಿಖೆ ನಡೆದಿಲ್ಲ. ಅಪರಾಧಿಗೆ ಶಿಕ್ಷೆಯಾಗಿಲ್ಲ. ಇತ್ತೀಚೆಗೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಗುಮ್ಮನಹಳ್ಳಿಯಲ್ಲಿ ದಲಿತರ ಮೇಲೆ ಸಾಮೂಹಿಕ ಹಲ್ಲೆ ನಡೆಯಿತು. ದಲಿತರು ಅಲ್ಲಿನ ಕೆರೆಯಿಂದ ನೀರು ತರದಂತೆ ಬಹಿಷ್ಕಾರ ಹಾಕಲಾಗಿದೆ. ಯಾರೋ ಜೆಹಾದಿಗಳು ಈ ಕೃತ್ಯ ಎಸಗಿಲ್ಲ. ಈ ಸಮಾಜದಲ್ಲಿರುವ ರೋಗಗ್ರಸ್ತ ಮನಸ್ಸುಗಳೆ ಇದಕ್ಕೆ ಕಾರಣ. ಅದೇ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಮಸೀದಿ ಕೆಡವಿ ಮಂದಿರ ನಿರ್ಮಿಸಲು ಕರೆ ನೀಡುವ ಸಂಘ ಪರಿವಾರ ಈ ಘಟನೆ ಬಗ್ಗೆ ತುಟಿ ಬಿಚ್ಚಲ್ಲ.

ಅಂತಲೇ ಡಾ. ಅಂಬೇಡ್ಕರ್ ಈ ಧರ್ಮವನ್ನು, ನೆಲವನ್ನು ನನ್ನದು ಎಂದು ಹೇಗೆ ಹೇಳಲಿ? ಎಂದು ಕೇಳಿದುದರಲ್ಲಿ ತಪ್ಪೇನಿದೆ. ರಾಷ್ಟ್ರೀಯತೆಯ ಬಗ್ಗೆ ಬೊಗಳೆ ಹೊಡೆಯುವವರು ಈ ರಾಷ್ಟ್ರಕ್ಕಾಗಿ ಏನೂ ಮಾಡಿಲ್ಲ. ತುಳಿತಕ್ಕೊಳಗಾದ ಜನವರ್ಗಗಳ ಬೆವರು ಮತ್ತು ನೆತ್ತರ ಧಾರೆಯಿಂದ ಈ ದೇಶ ಮೇಲೆದ್ದು ನಿಂತಿದೆ. ಪಾಕಿಸ್ತಾನದ ಜೊತೆಗೆ ಯುದ್ಧ ನಡೆದಾಗ ಮಾತ್ರ ವ್ಯಕ್ತವಾಗುವ ದೇಶಪ್ರೇಮ ನಿಜವಾದ ದೇಶಪ್ರೇಮವಲ್ಲ. ಈ ಯುದ್ಧದಲ್ಲೂ ಗಡಿಯಲ್ಲಿ ಶತ್ರು ಸೇನೆಯ ಗುಂಡಿಗೆ ಬಲಿಯಾಗುವವರು ಈ ದೇಶದ ಬಡವರ ಅಸ್ಪೃಶ್ಯರ, ಹಿಂದುಳಿದವರ, ಅಲ್ಪಸಂಖ್ಯಾತರ ಮಕ್ಕಳು ಮಾತ್ರ. ರಾಷ್ಟ್ರೀಯತೆ ಬಗ್ಗೆ ಧಾರಾಳವಾಗಿ ಉಪದೇಶ ಹೇಳುವವರು ಎಂದೂ ಗಡಿ ಪ್ರದೇಶಕ್ಕೆ ಹೋಗುವುದಿಲ್ಲ. ದೇಶಕ್ಕಾಗಿ ಬಲಿದಾನ ಮಾಡಿದ ಪರಂಪರೆಯೇ ಇವರದಲ್ಲ.

ಇದು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ರಾಷ್ಟ್ರೀಯತೆಯ ಬಗ್ಗೆ ಬೊಬ್ಬೆ ಹಾಕುವವರೆಲ್ಲ ಎಂದೂ ರಾಷ್ಟ್ರಕ್ಕಾಗಿ ಬಲಿದಾನ ಮಾಡಿದ ಉದಾಹರಣೆಗಳಿಲ್ಲ. ಜಾರ್ಜ್ ಬುಷ್ ಮಕ್ಕಳು ಎಂದೂ ರಣರಂಗಕ್ಕೆ ಹೋಗಿ ಸೆಣಸುವುದಿಲ್ಲ. ಎಲ್ಲರೂ ಹಾಗೆಂದಲ್ಲ, ತನ್ನ ಜನರೊಂದಿಗೆ ಸೆಣಸಿ ಬಲಿದಾನ ಮಾಡಿದ ಟಿಪ್ಪು ಸುಲ್ತಾನ, ಸುಭಾಷ್‌ಚಂದ್ರ ಬೋಸ್ ಉದಾಹರಣೆಗಳೂ ನಮ್ಮಲ್ಲಿವೆ. ಆದರೆ ಸಾಂಸ್ಕೃತಿಕ ರಾಷ್ಟ್ರವಾದದ ಪ್ರತಿಪಾದಕರು ಟಿಪ್ಪುಸುಲ್ತಾನ್‌ರನ್ನು ದೇಶದ್ರೋಹಿ ಎಂದು ಕರೆಯುತ್ತಾರೆ, ಮುಸಲ್ಮಾನ ತಂದೆಯ ಮಗನಾಗಿ ಜನಿಸಿದ್ದೆ ಅವನ ಅಪರಾಧವಾಗಿದೆ. ಅಂತಲೆ ಶಂಕರಮೂರ್ತಿ ಅವರಂಥ ಬಿಜೆಪಿ ನಾಯಕರು ಟಿಪ್ಪುಸುಲ್ತಾನರ ರಾಷ್ಟ್ರನಿಷ್ಠೆಯನ್ನು ಪ್ರಶ್ನಿಸುತ್ತಾರೆ. ಆದರೆ ಟಿಪ್ಪುವಿಗೆ ಕೊನೆಯ ಗಳಿಗೆಯಲ್ಲಿ

ಕೈಕೊಟ್ಟ ಪೂರ್ಣಯ್ಯನ ಬಗ್ಗೆ, ಕಿತ್ತೂರು ಚೆನ್ನಮ್ಮ ರಾಣಿಗೆ ದ್ರೋಹ ಮಾಡಿದ ಮಲ್ಲಪ್ಪ ಶೆಟ್ಟಿ, ವೆಂಕಟರಾವ್ ಬಗ್ಗೆ ಇವರು ಮಾತಾಡುವುದಿಲ್ಲ. ಹಿಂದುಗಳು ದೇಶದ್ರೋಹ ಮಾಡಿದರೂ ತಪ್ಪಲ್ಲ.

ಸಂಘ ಪರಿವಾರಿಗಳ ಹಿಂದುತ್ವದ ಬೇರುಗಳು ಸಾವರ್ಕರ ಮತ್ತು ಗೋಳ್ವಲಕರ ಕಲ್ಪನೆಯ ಫ್ಯಾಸಿಸ್ಟ್ ವೈದಿಕ ಶಾಹಿಯ ಕಲ್ಪನೆಯಲ್ಲಿದೆ. ಸಮಕಾಲೀನ ಪ್ರಶ್ನೆಗಳಿಗೆ ಕೌಟಿಲ್ಯನಲ್ಲಿ ಇವರು ಉತ್ತರವನ್ನು ಹುಡುಕಲು ಹೊರಟಿದ್ದಾರೆ. ಇವರಿಗೆ ಹಿಂದು ಸಮಾಜದ ಸುಧಾರಣೆ ಬೇಕಾಗಿಲ್ಲ. ಇಲ್ಲಿ ಕ್ಯಾನ್ಸರ್ ಗಡ್ಡೆಯಂತಿರುವ ಜಾತಿ ಪದ್ಧತಿಯನ್ನು ತೊಲಗಿಸಲು ಇವರಿಗೆ ಮನಸ್ಸಿಲ್ಲ. ವರದಕ್ಷಿಣೆ ನಿರ್ಮೂಲನೆ ಇವರಿಗೆ ಬೇಕಾಗಿಲ್ಲ. ಅಸ್ಪೃಶ್ಯತೆ ನಿವಾರಣೆ ಇವರ ಆದ್ಯತೆಯ ಪಟ್ಟಿಯಲ್ಲಿಲ್ಲ. ಈಗ ಇವರಲ್ಲಿ ಹಿಂದುಳಿದ ಸಮುದಾಯದ ಬಗ್ಗೆ ಮೂಡಿರುವ ದಿಢೀರ್ ಪ್ರೇಮಕ್ಕೆ ಕಾರಣ ಬೇರೇನೂ ಅಲ್ಲ. ಹಿಂದುತ್ವದ ಮುಸುಕಿನಲ್ಲಿ ಜಾತಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಹುನ್ನಾರವಾಗಿದೆ. ಅಲ್ಪಸಂಖ್ಯಾತರನ್ನು ಹತ್ತಿಕ್ಕಲು ಇದೇ ಶೂದ್ರ ಶಕ್ತಿಯನ್ನು ಈ ಫ್ಯಾಸಿಸ್ಟ್ ಶಕ್ತಿಗಳು ಬಳಸಿಕೊಳ್ಳುತ್ತಿವೆ.

ಹಿಂದೂ ಧರ್ಮದಲ್ಲಿನ ಈ ಹೊಲಸನ್ನೆಲ್ಲ ಹಾಗೇ ಇಟ್ಟುಕೊಂಡು ಅಲ್ಪಸಂಖ್ಯಾತರು ಸುಧಾರಣೆಯಾಗಬೇಕು, ಎಂದು ಆರ್.ಎಸ್.ಎಸ್. ನಾಯಕರು ಕರೆ ಕೊಡುತ್ತಾರೆ. ಮುಸಲ್ಮಾನ ಬಂಧುಗಳು ಬದಲಾದ ಸನ್ನಿವೇಶಕ್ಕೆ ಸ್ಪಂದಿಸಬೇಕೆಂಬಲ್ಲಿ ಎರಡಭಿಪ್ರಾಯವಿಲ್ಲ. ಈ ದೃಷ್ಟಿಯಿಂದ ಕ್ರೈಸ್ತ ಸಂಸ್ಥೆಗಳು ನಡೆಸುವ ಶಾಲೆಗಳು ಮಾದರಿಯಾಗಿವೆ. ಅಲ್ಲಿ ವ್ಯಾಸಂಗ ಮಾಡುವ ಎಲ್ಲ ಜಾತಿ ಮತಗಳ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಪಠ್ಯ ಪುಸ್ತಕಗಳಿವೆ ಸ್ವತಃ ಅಡ್ವಾಣಿ, ಖುರಾನಾರಂತಹ ಬಿಜೆಪಿ ನಾಯಕರು ಕ್ರೈಸ್ತ ಮಿಷನರಿಗಳು ನಡೆಸುವ ಶಾಲೆಗಳಲ್ಲೇ ವ್ಯಾಸಂಗ ಮಾಡಿದವರೆಂಬುದು ಗಮನಾರ್ಹ ಸಂಗತಿಯಾಗಿದೆ.

> **ಭಾರತದ ರಾಷ್ಟ್ರೀಯತೆ ಎಂಬುದು ಬರೀ ಹಿಂದೂಗಳ ಗುತ್ತಿಗೆಯಲ್ಲ. ಒಂದು ಕೋಮಿನ ಖಾಸಗಿ ಸ್ವತ್ತಲ್ಲ, ಮುಸಲ್ಮಾನರಿಗೂ, ಕ್ರೈಸ್ತರಿಗೂ, ಬೌದ್ಧರಿಗೂ, ಜೈನರಿಗೂ, ವೀರಶೈವರಿಗೂ ಹಾಗೂ ಸಿಖ್ಖರಿಗೂ ಕೂಡ ಈ ದೇಶದಲ್ಲಿ ಹಿಂದೂಗಳಷ್ಟೇ ಹಕ್ಕಿದೆ. ಈ ನೆಲದಲ್ಲಿ ವೇದ, ಭಗವದ್ಗೀತೆ ಹಾಗೂ ಪುರಾಣಗಳು ಮಾತ್ರ ಅಂತರ್ಗತವಾಗಿಲ್ಲ.**

ಕುರಾನ್‌ನಲ್ಲಿರುವ ಕೆಲ ಅಂಶಗಳ ಬಗ್ಗೆ ಸುದರ್ಶನ್, ತೊಗಾಡಿಯಾ ತಕರಾರು ವ್ಯಕ್ತಪಡಿಸುತ್ತಾರೆ. ಆದರೆ ಹಿಂದು ಧರ್ಮಗ್ರಂಥಗಳ ಬಗ್ಗೆ ಯಾಕೆ ಇವರು ತುಟಿ ಬಿಚ್ಚುವುದಿಲ್ಲ. ದಲಿತರನ್ನು ಶೂದ್ರರನ್ನು ಹೀನಾಯವಾಗಿ ಕಂಡಿರುವ ಧಾರ್ಮಿಕ ಗ್ರಂಥಗಳನ್ನು ನಿಷೇಧಿಸಲು ಸಂಘ ಪರಿವಾರ ತಯಾರಿದೆಯೇ? ಉಳಿದ ಧರ್ಮಗಳ ಬಗ್ಗೆ ಮಾತನಾಡುವ ಮೊದಲು ಇವರು ತಮ್ಮ ತಟ್ಟೆಯಲ್ಲಿ ಕತ್ತೆ ಸತ್ತು ಬಿದ್ದಿರುವುದನ್ನು ಗಮನಿಸಲಿ. ಶೂದ್ರರನ್ನು, ಮಹಿಳೆಯರನ್ನು ಕಾಲಕಸವಾಗಿ ಕಾಣುವ ಮನು ಸ್ಮೃತಿಯನ್ನು ಮೊದಲು ಕಿತ್ತು ಬಿಸಾಡಲಿ. ಹಿಂದು ಧರ್ಮದಲ್ಲಿನ ಲೋಪಗಳ ಬಗ್ಗೆ ಉಳಿದ ಧರ್ಮಗಳ ಪ್ರಜ್ಞಾವಂತರು ಮಾತಾಡಿದರೆ 'ನಮ್ಮ ಧರ್ಮದಲ್ಲಿ ನೀವೇಕೆ ಕೈಹಾಕುತ್ತೀರಿ?" ಎಂದು ಅರಚುವ ಇವರೇಕೆ ಇತರ ಧರ್ಮಗ್ರಂಥಗಳ ಬಗ್ಗೆ ತಕರಾರು ತೆಗೆಯುತ್ತಾರೆ.

ಭಾರತದ ರಾಷ್ಟ್ರೀಯತೆ ಎಂಬುದು ಬರೀ ಹಿಂದೂಗಳ ಗುತ್ತಿಗೆಯಲ್ಲ. ಒಂದು ಕೋಮಿನ ಖಾಸಗಿ ಸ್ವತ್ತಲ್ಲ, ಮುಸಲ್ಮಾನರಿಗೂ, ಕ್ರೈಸ್ತರಿಗೂ, ಬೌದ್ಧರಿಗೂ, ಜೈನರಿಗೂ, ವೀರಶೈವರಿಗೂ ಹಾಗೂ ಸಿಖ್ಖರಿಗೂ ಕೂಡ ಈ ದೇಶದಲ್ಲಿ ಹಿಂದೂಗಳಷ್ಟೇ ಹಕ್ಕಿದೆ. ಈ ನೆಲದಲ್ಲಿ ವೇದ, ಭಗವದ್ಗೀತೆ ಹಾಗೂ ಪುರಾಣಗಳು ಮಾತ್ರ ಅಂತರ್ಗತವಾಗಿಲ್ಲ. ಕುರಾನ್, ಬೈಬಲ್, ತ್ರಿಪಿಟಿಕಾ, ಗುರು ಗ್ರಂಥ ಸಾಹೀಬ್ ಹಾಗೂ ಬಸವಣ್ಣನವರ ವಚನ ಸಾಹಿತ್ಯವು ಕೂಡ ಭಾರತದ ಪರಂಪರೆಯ ಅವಿಭಾಜ್ಯ ಅಂಗವಾಗಿದೆ ಎಂಬುದನ್ನು ಮರೆಯಬಾರದು. ದಲಿತ ಹಿಂದುಳಿದ ಸಮುದಾಯದ ಜನರು ಈ ನೆಲದ ನಿಜವಾದ ವಾರಸುದಾರರಾಗಿದ್ದಾರೆ.

ದೇಶದ ಮೇಲೆ ಏಕ ಸಂಸ್ಕೃತಿ, ಏಕ ಆಹಾರ ಪದ್ಧತಿಯನ್ನು ಹೇರಲು ಹೊರಟಿರುವ ಜನಾಂಗ ದ್ವೇಷಿ ಶಕ್ತಿಗಳನ್ನು ಮಣ್ಣುಮುಕ್ಕಿಸಬೇಕಿದೆ. ಮುಸ್ಲಿಂ ಮತ್ತು ಕ್ರೈಸ್ತ ಅಲ್ಪಸಂಖ್ಯಾತ ಬಾಂಧವರು ಈ ದೇಶದ ಜಾತ್ಯತೀತ ಪರಂಪರೆಯೊಂದಿಗೆ ಇನ್ನಷ್ಟು ಪರಿಪೂರ್ಣವಾಗಿ ಗುರುತಿಸಿಕೊಳ್ಳಬೇಕಾಗಿದೆ. ಹಿಂದುಳಿದವರು, ದಲಿತರು ಎಡಪಂಥೀಯ ಶಕ್ತಿಗಳು ಮತ್ತು ಸಮಾನತೆ, ಸೌಹಾರ್ದತೆಯನ್ನು ಒಪ್ಪುವ ಎಲ್ಲರೂ ಒಂದುಗೂಡಿದರೆ ಮಾತ್ರ ಫ್ಯಾಸಿಸ್ಟ್ ಸವಾಲನ್ನು ಎದುರಿಸಲು ಸಾಧ್ಯವಾಗುತ್ತದೆ. ●

ಒಡವೆ, ಸೀರೆ ಮೀರಿದ ಮನಸ್ಸುಗಳು

(8ನೇ ಪುಟದಿಂದ)

ಮನೆಯಲ್ಲಿದ್ದರೆ ಅವರ ಪರಿಸ್ಥಿತಿ ಇತ್ಯಾದಿಗಳ ಬಗ್ಗೆ ಮನಸ್ಸು ಲೆಕ್ಕ ಹಾಕುತ್ತಿದ್ದು, ಸಭೆಯಲ್ಲಿ ಏನು ನಡೆಯಿತು ಎಂಬುದೇ ಒಮ್ಮೊಮ್ಮೆ ತಲೆಗೆ ಹೋಗದೆ ಇರುವ ಸಾಧ್ಯತೆಗಳಿವೆ.

ಗ್ರಾಮೀಣ ಪ್ರದೇಶದ ಶ್ರೀಮಂತ ಮನೆತನದವರು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ನೀಡಬಹುದಾದರೂ, ಕೇವಲ ಹೆಣ್ಣು ಎಂಬ ಒಂದೇ ಕಾರಣಕ್ಕಾಗಿ ಅವಳನ್ನು ನಾಲ್ಕು ಗೋಡೆಯ ನಡುವೆ ಸಿಂಗಾರದ ಗೊಂಬೆಯಾಗಿಸಿ ಸಂತೋಷಪಡುವ ಮನೋಭಾವ ಹೊಂದಿರುತ್ತಾರೆ.

ಕೆಳವರ್ಗದ ಗ್ರಾಮೀಣ ಹೆಣ್ಣು ಮಕ್ಕಳು ಮೇಲೆ ಹೇಳಿದ ಇತರೆ ವರ್ಗದ ಹೆಣ್ಣು ಮಕ್ಕಳಿಗಿಂತಲೂ ಹೆಚ್ಚು ಸ್ವತಂತ್ರರಾಗಿರುತ್ತಾರೆ. ಆದರೆ ಅವರು ಕೂಲಿನಾಲಿಗೆ ಹೋಗಬೇಕು. ಮನೆ-ಗಂಡ ಮಕ್ಕಳನ್ನು ಜೋಪಾನ ಮಾಡಬೇಕು. ಇದರಲ್ಲಿಯೇ ಅವರ ಸಮಯ ಸರಿಯುತ್ತದೆ. ಇವರು ಗಂಡನ ಸರಿಸಮ ದುಡಿಯಬಲ್ಲರು-ಕುಡಿಯಬಲ್ಲರು-ಕುಡುಕ ಗಂಡ ಕಾಡಿಸಿ ಕೈ ಮಾಡ ಬಂದಾಗ ತಿರುಗಿ ಆತನನ್ನು ಹೊಡೆಯಬಲ್ಲರು. ಬೇರೆ ಬೇರೆ ಹೆಣ್ಣುಗಳ ಸಂಗ ಮಾಡಿದರೆ ಕಸಪರಿಕೆಯಿಂದ ಆಕೆಯನ್ನು, ಆತನನ್ನು ಬಾರಿಸಬಲ್ಲರು.

ಸೌದೆ ಹೊರೆ ಹೊತ್ತು ಅಥವಾ ಸಣ್ಣಪುಟ್ಟ ವ್ಯಾಪಾರ ವಹಿವಾಟು ಮಾಡಿ ಸಂಸಾರವನ್ನು ಸ್ವತಃ ತೂಗಿಸಬಲ್ಲ ಛಾತಿಯುಳ್ಳವರಾಗಿರುತ್ತಾರೆ. ಕೃಷಿ ಕಾರ್ಮಿಕರಾದರೆ ಮುಂಜಾವಿನಿಂದ ಸಂಜೆಯವರೆಗೆ ಹೊಲದಲ್ಲಿ ದುಡಿದು ಕತ್ತಲಾದೊಡನೆ ಕಣ್ಣು ತುಂಬ ನಿದ್ದೆ ತುಂಬಿಕೊಳ್ಳುವವರು.

ಇವರಿಗೆ ಶಿಕ್ಷಣ ಕನಸಿನ ಮಾತು, ದೇವರು, ಮಾಟ, ಮಂತ್ರ, ತಾಯಿತ, ಬೂದಿ, ಭಸ್ಮ ಇವುಗಳ ಹೊರತು ಬೇರೆ ವಿಚಾರ ಹತ್ತಿರ ಸುಳಿಯುವುದು ಕಷ್ಟ.

ಇತ್ತೀಚೆಗೆ ಮಹಿಳಾ ಮೀಸಲಾತಿಯಿಂದಾಗಿ ಪಂಚಾಯ್ತಿಗಳಲ್ಲಿ ಶೇ. 33ಕ್ಕೂ ಹೆಚ್ಚಿನ ಮಹಿಳೆಯರು ಆರಿಸಿ ಬಂದಿದ್ದಾರೆ.

ತಮಗೆ ಸಿಕ್ಕಿರುವ ಸ್ಥಾನಮಾನ ಕೆಲವರಿಗೆ ಸಂತೋಷ-ಸಂಭ್ರಮ ಉಂಟು ಮಾಡಿದರೆ ಹೆಚ್ಚಿನವರಿಗೆ ಆತಂಕ, ದುಗುಡ, ಅಪಮಾನದಂತಹ ಕಹಿ ಅನುಭವವನ್ನು ಉಂಟು ಮಾಡುತ್ತಿರುವುದು ವಿಷಾದನೀಯ.

ಶಿಕ್ಷಣದ ಕೊರತೆ, ಅರಿಯದ ಭಾಷಾ ಪ್ರಯೋಗ, ಬುದ್ಧಿಗೆ ನಿಲುಕದ ವಿಚಾರಗಳು ಇವುಗಳಿಂದಾಗಿ ದಿಕ್ಕೆಟ್ಟ ಆಕೆ ಸಹಾಯಕ್ಕಾಗಿ ಪುರುಷರತ್ತ ದೀನನೋಟ ಬೀರಬೇಕಾಗಿದೆ. ಆದರೂ ವಿದ್ಯಾವಂತೆಯಾದ ಮಹಿಳೆಯರು ತಮ್ಮ ಮೀಸಲಾತಿ ಕೇಳುವಾಗ ಮಹಿಳೆಯರು ಮಾನಸಿಕವಾಗಿ ಸಿದ್ಧರಾಗಬೇಕು. ಶಿಕ್ಷಣ ಲಭ್ಯವಾದರೆ ಉಳಿದ ವಿಚಾರ ಕಲಿತುಕೊಳ್ಳಲು ಅವರಿಗೆ ಅನುಕೂಲ, ರಾಜಕೀಯ ಎಂದರೇನು? ಅದರಲ್ಲಿ ನಮ್ಮ ಪಾತ್ರವೇನು? ಎಂಬುದರ ಬಗ್ಗೆ ಸ್ಪಷ್ಟ ಅರಿವು ಹುಟ್ಟಿಸುವ ಕೆಲಸವಾಗಬೇಕು. ಮಹಿಳೆಯರ ಏಳಿಗೆ ಹಿಂದೆ ಪುರುಷನ ಸಹಕಾರ ಇದ್ದೇ ಇರಬೇಕಾಗುತ್ತದೆ. ಹಿಂದೆ ಅನಾಗರಿಕನಾಗಿ ಮಾಡಿದ ದೋಷಗಳು ನಾಗರಿಕ ಪ್ರಪಂಚದಲ್ಲಿ ಮತ್ತೆ ತಲೆ ಎತ್ತದಂತೆ ನೋಡಿಕೊಳ್ಳಬೇಕಾದುದು ಅವನ ಕರ್ತವ್ಯ. ಒಡವೆ-ವಸ್ತು-ಸೀರೆ ಬಟ್ಟೆಗಳಿಗೂ ಮೀರಿ ಸ್ತ್ರೀ ಬೆಳೆಯಬೇಕಾದರೆ ಮನೆ ಮನೆಯಲ್ಲಿಯೂ ಸ್ತ್ರೀವಾದಿ ನೆಲೆಯಲ್ಲಿ ಯೋಚಿಸುವ ಮನಸ್ಸುಗಳು ತಯಾರಾಗಬೇಕು. ಹೆಣ್ಣು ಎಂಬ ಒಂದೇ ಕಾರಣಕ್ಕಾಗಿ ಅವಳು ಅವಕಾಶ ವಂಚಿತಳಾಗದಂತೆ ನೋಡಿಕೊಂಡಿದ್ದಾದರೆ ಹೆಣ್ಣಿಗೆ ನ್ಯಾಯ ಸಿಕ್ಕಿದಂತೆಯೇ ಸರಿ. ●

ಜನಪದ ನಾಯಕತ್ವ : ಇಂದಿನ ಅವಶ್ಯಕತೆ

ಟಿಪ್ಪಣಿ - 1

ಜನಪದ (Folk) ಎಂಬುದು ಒಂದು ಪ್ರದೇಶದಲ್ಲಿ ತನ್ನದೇ ಆದ ಸ್ವಂತ ಸಂಸ್ಕೃತಿಯನ್ನು ಇಟ್ಟುಕೊಂಡು ಅನೇಕ ಕಾಲಗಳಿಂದ ಬದುಕುತ್ತಾ ಬಂದಿರುವ ಒಂದು ಜನರ ಗುಂಪು. ಈ ಸಂಸ್ಕೃತಿ ತನ್ನದೆ ನಂಬಿಕೆ, ನಡವಳಿಕೆ, ವಿಚಾರ ಮತ್ತು ಆಚಾರಗಳನ್ನು ಹೊಂದಿರುತ್ತದೆ. ಈ ನಂಬಿಕೆ ಎಂಬುದು 'ಬೆಳಗಿನಾಗೆ ಎದ್ದೆ ಕೆಟ್ಟದ್ದನ್ನು ನೋಡಬೇಡಿ ಎಂಬ ಸಣ್ಣ ನಂಬಿಕೆ ಆಗಿರಬಹುದು. ಅಥವಾ ತನ್ನದೆಂಬ ದೇವರು, ಧರ್ಮ ಅಥವಾ ನಾಯಕ ಆಗಿರಬಹುದು. ಈ ನಂಬಿಕೆಯಂತೆ ನಡವಳಿಕೆ, ಅದರಂತೆ ವಿಚಾರ ಮತ್ತು ಆಚಾರಗಳು ಇರುತ್ತವೆ. ಜನಪದರಲ್ಲಿ ದೊಡ್ಡ ದೊಡ್ಡ ದೇವರು ಮತ್ತು ಧರ್ಮಕ್ಕಿಂತ ತಮ್ಮ ನಾಯಕನಲ್ಲಿ ಹೆಚ್ಚಿನ ನಿಷ್ಠೆ. ವೀರಶೈವರ ಬಸವಣ್ಣ, ದಲಿತರ ಅಂಬೇಡ್ಕರ್ ಮತ್ತು ಒಕ್ಕಲಿಗರಲ್ಲಿಯ ಕುವೆಂಪು ಅವರು ವಿಶಾಲ ಅರ್ಥದಲ್ಲಿ ಇದಕ್ಕೆ ಉದಾಹರಣೆ ಆಗಬಹುದು. ಇವರನ್ನು ಹೊಗಳುವ ಮತ್ತು ವಿಮರ್ಶಿಸುವ ಸಾಂಸ್ಕೃತಿಕ ಹಕ್ಕನ್ನು ಆ ಜನ ಹೊಂದಿರುತ್ತಾರೆ. ಆದಿವಾಸಿ ಗುಂಪುಗಳಲ್ಲಿ ಅವರ ಸಾಂಸ್ಕೃತಿಕ ನಾಯಕನ ಬಗ್ಗೆ ಇನ್ನಿಲ್ಲದ ಹೆಮ್ಮೆ ಮತ್ತು ಗೌರವ ಇದೆ.

ಈ ನಾಯಕ ಯಾರು? ಪುರಾಣ-ಪುಣ್ಯಕತೆಯ ನಾಯಕನಂತೆ ದೊಡ್ಡ ಆದರ್ಶದ, ಸತ್ಯದ ಸಾಕಾರ ಮೂರ್ತಿಯಲ್ಲ. ತನ್ನ ಭೌತಿಕ ಅವಶ್ಯಕತೆಗಳನ್ನು ಶೋಧಿಸಿಕೊಡಲು ಜನಪದ ಈ ನಾಯಕನನ್ನು ಕಂಡುಕೊಳ್ಳುತ್ತದೆ. ಈತ ಅವಶ್ಯಕತೆ (need) ನಾಯಕ. ಸಾಮ್ರಾಜ್ಯ ಕಟ್ಟುವ ದುರಾಸೆ (greed). ನಾಯಕ ಅಲ್ಲ ಅಥವಾ ನಮ್ಮ ಪ್ರಜಾಪ್ರಭುತ್ವದ ಆಯ್ಕೆ (Elect) ನಾಯಕ ಅಲ್ಲ; ಒಂದು ಜನಾಂಗ, ಬುಡಕಟ್ಟು ಅಥವ ವರ್ಗದ ಜನರ ಅವಶ್ಯಕತೆಗಳ ಕೊರತೆಯನ್ನು ತುಂಬಲು ಹುಟ್ಟುವವನು. ದ್ರೌಪದಿಗೆ ಸೌಗಂಧಿಕಾ ಪುಷ್ಪವನ್ನು ತಂದುಕೊಡುವ ಭೀಮನ ಹಾಗೆ, ಸತ್ಯಭಾಮಾಳಿಗೆ ಪಾರಿಜಾತ ತಂದುಕೊಡುವ ಕೃಷ್ಣ ಜನಪದ ನಾಯಕರು ಇಡೀ ಬ್ರಹ್ಮಾಂಡವೇ ತನ್ನ ಹೊಟ್ಟೆ ಒಳಗೆ ಇದೆ ಎಂದು ಬುರುಡೆ ಹೊಡೆಯುವ ಕೃಷ್ಣನಂತೆ ಅಲ್ಲ. ಅಷ್ಟೆಲ್ಲ ಚಾತುರ್ಯ ಜನಪದ ನಾಯಕನಿಗೆ ಅಗತ್ಯವಿರುವುದಿಲ್ಲ. ಯಾಕೆಂದರೆ ಅವನು ರಾಜ್ಯ-ಸಾಮ್ರಾಜ್ಯ ಕಟ್ಟುವವನಲ್ಲ; ಹೆಂಡತಿಗೆ ಹೊಸ ಸೀರೆ ಮತ್ತು ರವಿಕೆ ತಂದುಕೊಟ್ಟು ಅವಳನ್ನು ರಮಿಸುವಷ್ಟರ ಮಟ್ಟಿನ ಸರಳ ವ್ಯಕ್ತಿ. ಗಾಳಿ, ನೀರು, ಬೆಳಕು, ವಸತಿ, ಊಟ, ಸಾರಿಗೆಯಂಥ ಸಾಮಾನ್ಯ ಸೌಲಭ್ಯಗಳನ್ನು ಒದಗಿಸಿಕೊಡುವವನು ಮತ್ತು ಕೇವಲ ಭರವಸೆ ಕೊಡದಿರುವವನೆ ಜನಪದ ನಾಯಕ.

ಸಮಕಾಲೀನ ಸಾಮಾನ್ಯ ಅವಶ್ಯಕತೆಗಳನ್ನು ಪೂರೈಸಿಕೊಡುವ ನಾಯಕ ಜನಪದರ ಮಧ್ಯೆ ಜನಜನಿತವಾಗಿ ಉಳಿಯುತ್ತಾನೆ. ಇಲ್ಲದಿದ್ದಲ್ಲಿ ಜನ

> ಜನಪದ ನಾಯಕತ್ವ ಕುರಿತ ವಿಚಾರ ಮೇಳವೊಂದನ್ನು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈಚೆಗೆ ಬೆಂಗಳೂರಿನಲ್ಲಿ ನಡೆಸಿತು. ರಾಜಕೀಯ ಹಾಗೂ ಧಾರ್ಮಿಕ ಪುಢಾರಿಗಿರಿಯನ್ನೇ 'ನಾಯಕತ್ವ' ಎಂದು ಭ್ರಮಿಸಿರುವ ಇಂದಿನ ಸಾಮಾಜಿಕ ಸಂದರ್ಭದಲ್ಲಿ 'ಜನಪದ ನಾಯಕತ್ವ'ದ ಕಲ್ಪನೆ ನಮ್ಮೆಲ್ಲರ ಆಲೋಚನಾ ಕ್ರಮಕ್ಕೆ ಹೊಸ ದಿಕ್ಕನ್ನು ತೋರಿಸಬಲ್ಲದಾಗಿದೆ. 'ಸಂವಾದ' ಓದುಗರಿಗೂ ಈ ವಿಚಾರ ಮುಟ್ಟಲಿ ಎಂಬ ಉದ್ದೇಶದಿಂದ ವಿಚಾರ ಮೇಳ ಆಯೋಜಿಸಿದ್ದ ಅಕಾಡೆಮಿ ಅಧ್ಯಕ್ಷರಾದ ಡಾ|| ರಾಮಚಂದ್ರೇಗೌಡರ ಪ್ರಾಸ್ತಾವಿಕ ಟಿಪ್ಪಣಿಯನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.
>
> ○ ಡಾ|| ಹಿ.ಶಿ. ರಾಮಚಂದ್ರೇಗೌಡ

ನಿಧಾನವಾಗಿ ಅವನನ್ನು ತಮ್ಮ ಮನಸ್ಸಿನಿಂದ ಜಾರಿಸಿ ಬಿಡುತ್ತಾರೆ, ಮತ್ತು ಮತ್ತೊಬ್ಬನನ್ನು ಕಷ್ಟವಿಲ್ಲದೆ ಹುಟ್ಟುಹಾಕಿಕೊಳ್ಳುತ್ತಾರೆ. ಇವನು 'ಸಂಭವಾಮಿ ಯುಗೇ ಯುಗೇ' ನಾಯಕ ಅಲ್ಲ. ಆತ ತನ್ನ ಜನಪದದ ಒಳಗಿನ ಅಮೂಲ್ಯ ಸಾಂಸ್ಕೃತಿಕ ಅಂಶಗಳನ್ನು ರಕ್ಷಿಸಬೇಕು. ಅಗತ್ಯವೆನಿಸುವ ಅಕ್ಕಪಕ್ಕದ ಜನಪದಗಳ ಸಾಂಸ್ಕೃತಿಕ ಅಂಶಗಳನ್ನು ಸ್ವೀಕರಿಸಬೇಕು. ಬಹಳ ಮುಖ್ಯವಾಗಿ ಹೊರಗಿನ ಆಕ್ರಮಣ ಸಂಸ್ಕೃತಿಗೆ ತನ್ನ ಸಂಸ್ಕೃತಿಯನ್ನು ಹಾಕಿಕೊಡಬಾರದು.

ಜನಪದವೊಂದಕ್ಕೆ ಸಂಸ್ಕೃತಿ ಎಂಬುದು ನಂಬಿಕೆ ಮತ್ತು ಆಚರಣೆ ಮಾತ್ರವಾಗಿರದೆ ಆ ಜನಾಂಗದ ಭೌತಿಕ ಜ್ಞಾನ-ವಿಜ್ಞಾನವೂ ಆಗಿರುತ್ತದೆ. ಪ್ರತಿಯೊಂದು ಜನಪದ ಅಥವಾ ದೇಶಕ್ಕೆ ಇಂಥದೊಂದು ಅನನ್ಯ ಸಂಸ್ಕೃತಿ ಇರುತ್ತದೆ. ಯಾರೋ ಕೇಂದ್ರಿತ ಭೌತಿಕ ಆಧುನಿಕತೆ ಬಂದ ಅನಂತರ ಮೂರನೇ ಜಗತ್ತಿನ ದೇಶಗಳು ಸ್ವಂತ ತಂತ್ರಜ್ಞಾನ ಶೋಧದಲ್ಲಿ ಹಿಂದೆ ಬಿದ್ದವು. ಕೊಳ್ಳುವ ಚಟದವನಿಗೆ ಸೃಷ್ಟಿಶೀಲತೆ ಕಷ್ಟವಾಗುತ್ತದೆ. ಹೀಗೆ ಹೊರಗಿನ ಜ್ಞಾನವನ್ನು ತಂತ್ರಜ್ಞಾನ ಎಂದು ಕರೆದು ಈ ರಾಷ್ಟ್ರಗಳು ನಮ್ಮದು ಸಂಸ್ಕೃತಿ ಮಾತ್ರ ಎಂದು ನಂಬಿಕೊಂಡವು. ನಮ್ಮ ದೇಶ ನಂಬಿ ಬದುಕಿದ್ದೇ ಹೊರತು ಪ್ರಶ್ನಿಸಿ ನಡೆದದ್ದಲ್ಲ. ಇಂಥ ಕಡೆ ವಿಜ್ಞಾನದ ಬೆಳವಣಿಗೆ ಬಹಳ ನಿಧಾನ, ಧರ್ಮಗಳ ಹುಟ್ಟು ಇಲಿ ಮರಿಗಳ ಥರ ಆಗುತ್ತದೆ. ವಸ್ತು ಪೈಪೋಟಿಗಿಂತ ನಂಬಿಕೆಗಳ ಬಗೆಯ ಪೈಪೋಟಿಯೇ ಮುಖ್ಯ. ಇಂಥ ಕಡೆ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಹುಟ್ಟುವುದಿಲ್ಲ. ಮಾರುಕಟ್ಟೆಯ ವಸ್ತು ಎಂದರೇನು ಇವರು ಅನುಮಾನ ಮತ್ತು ಆತಂಕಕ್ಕೆ ಒಳಗಾಗುತ್ತಾರೆ. ಒಳಗಿನದಕ್ಕೆ ಬೆಲೆ, ಹೊರಗೆ ಚಲಿಸಿದರೆ ಅಪಮಾನ.

ಜಾಗತೀಕರಣ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಜನಪದ ಸಂಸ್ಕೃತಿಗಳು ಎರಡು ರೀತಿಯ ವಿಮಂಚನೆಗೆ ಒಳಗಾಗಿವೆ.

(1) ಕೆಲವು ಜನಪದಗಳು ಜಾಗತೀಕರಣದಿಂದ ತಮಗೆ ಹೊಸ ಅನುಕೂಲಗಳು ಸಿಗುತ್ತವೆ ಎಂದು ತಿಳಿದಿವೆ. ಕೆಳ ಮತ್ತು ದಲಿತ ವರ್ಗದಲ್ಲಿ ಈ ನಂಬಿಕೆ ಹುಟ್ಟಿದೆ. ಜಾತಿ ಅಥವಾ ವರ್ಗಗಳ ಮೂಲಕವಾಗಿ ಬರದೆ ಈ ಜಾಗತೀಕರಣ ನೇರವಾಗಿ ಎಲ್ಲರ ಎದುರೂ ಬರುವುದರಿಂದ ಸಾಂಪ್ರದಾಯಿಕ ಅಡೆ ತಡೆಗಳಿಂದ ನಮಗೆ ಬಿಡುಗಡೆ ಇದೆ ಎಂದು ತಿಳಿದಂತಿದೆ. ತಾವು ಕೊಳ್ಳಲು ಬೇಕಾದ ಉತ್ಪತ್ತಿಯ ಬಗ್ಗೆ ಇವರು ಯೋಚಿಸಿದಂತಿಲ್ಲ.

(2) ಹಲವು ಜನಪದಗಳು ತಮ್ಮ ಕೈಗೆಟುಕುವ ಮತ್ತು ತಮ್ಮ ಅಸ್ತಿತ್ವದಲ್ಲಿರುವ ತಂತ್ರಜ್ಞಾನವನ್ನು ಕಳೆದುಕೊಳ್ಳುವ ಭಯದಲ್ಲಿದ್ದಾರೆ. ತಮ್ಮ ಈ ಶೋಧ ತಮ್ಮ ಸಂಸ್ಕೃತಿಯ ಭಾಗ ಆಗಿದ್ದು ಅದನ್ನೂ ಕಳೆದುಕೊಂಡರೆ ನಮ್ಮಲ್ಲಿ ಉಳಿಯುವುದೇನು? ಬಹಳ ಮುಖ್ಯವಾಗಿ ತಮ್ಮ ಜನಾಂಗ, ಜಾತಿ ಅಥವಾ ವರ್ಗದ ನಾಯಕತ್ವ ತಪ್ಪಿಹೋಗುತ್ತದೆ. ಜಾಗತೀಕರಣ ಎಂಬುದಕ್ಕೆ ನಿರ್ದಿಷ್ಟ ಸಂಸ್ಕೃತಿ ಎಂಬುದಿಲ್ಲ ಅದು ಮಾರುವ ಹಾಗೂ ಸಂಪಾದಿಸುವ ದಲ್ಲಾಳಿ. ಅದಕ್ಕೆ ನಮ್ಮವರು-ತಮ್ಮವರು ಎಂಬುವವರು ಇರುವುದಿಲ್ಲ. ಆಗ ತಮ್ಮನ್ನು ಹತ್ತಿರದಿಂದ ನೋಡುವವರು, ಮಾತನಾಡಿಸುವವರು ಮತ್ತು ರಕ್ಷಿಸುವವರು ಇಲ್ಲವಾಗುತ್ತಾರೆ. ಜಾಗತೀಕರಣದಿಂದ ಸ್ಥಳೀಯವಾಗಿ ಹುಟ್ಟುವ ನಾಯಕತ್ವ ಎಲ್ಲವನ್ನೂ ಬಿಕರಿ ಮಾಡುವುದಾಗಿದ್ದು ನಮ್ಮ ಸಾಹಿತ್ಯ, ಸಂಸ್ಕೃತಿ, ವೈದ್ಯ, ಊಟೋಪಚಾರವನ್ನೆಲ್ಲ ಉದ್ಯಮ ಮಾಡಿ ಉದ್ಯಮಪತಿಗೆ ಮಾರಿಬಿಡಬಹುದು. ಹೆಣ್ಣು ಮಕ್ಕಳಿಗೂ ಇದೇ ಪರಿಸ್ಥಿತಿ ಬಂದರೆ 'ಪತಿ' ಎಂಬುವನನೂ 'ಸತಿ' ಎಂಬುವವಳೂ ಕಾಣೆಯಾಗಿ ಬಿಡುತ್ತಾರೆ. ಇಂಥ ಸಂದರ್ಭದಲ್ಲಿ ದೂರದ ಸ್ವರ್ಗವನ್ನು ಬಯಸಿ ಸ್ಥಳೀಯ ವಾಸ್ತವತೆಯನ್ನು ಮರೆತಂತಾಗುತ್ತದೆ. ಕಾರಣವಾಗಿ ನಮ್ಮ ಜನಪದದ, ಜಾತಿಯ, ಅಥವಾ ಪಂಗಡದ ನಾಯಕತ್ವವನ್ನು ತಮ್ಮಲ್ಲಿ ಉಳಿಸಿಕೊಳ್ಳಬೇಕು ಎಂಬ ಮನೋಧರ್ಮ ಬೆಳೆಯುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಪ್ರತಿಯೊಂದು ಜಾತಿ ಮತ್ತು ಪಂಗಡದ ಜನಪದರು ತಮ್ಮದೇ ಧರ್ಮಗುರು ಮತ್ತು ಮಠವನ್ನು ಕಟ್ಟಲು (ಧರ್ಮ ಯಾವುದು ಎಂಬುದು

ಗೊತ್ತಾಗಿಲ್ಲ) ಹಾತೊರೆಯುತ್ತಿರುವ ಒಂದು ಸರಳ ಉದಾಹರಣೆಯನ್ನು ಇಲ್ಲಿ ಕೊಡಬಹುದು.

ಇನ್ನೊಂದು ಕಡೆ ಸಂಸ್ಕೃತಿ ವಿಮರ್ಶಕರು ಈ ಎರಡೂ ವರ್ಗದ ಜನಪದಗಳ ಮಧ್ಯೆ ಸ್ಥಳೀಯ ಮತ್ತು ದೇಶದ ಸಂದರ್ಭದಲ್ಲಿ ಆಗುತ್ತಿರುವ ಸಾಂಸ್ಕೃತಿಕ ಮತ್ತು ನಾಯಕತ್ವದ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಪ್ರತಿಯೊಂದು ಜನಪದ ಸಂಸ್ಕೃತಿಗೂ ಅಂತರಂಗ ಎಂಬುದೊಂದು ಇದೆ. ಅದು ತಮ್ಮೊಳಗೆ ಮತ್ತು ತನ್ನ ಸನಿಹದಲ್ಲಿ ಶಾಂತಿ, ಸಹಬಾಳ್ವೆ, ಸಹಕಾರ, ಅನ್ಯೋನ್ಯತೆ, ಅಂತಃಕರಣವನ್ನು ಬಯಸುತ್ತದೆ ಮತ್ತು ಆ ಮೂಲಕ ಮಾನವ ಸಂಬಂಧಗಳು ಮೌಲ್ಯ ಆಗುವುದನ್ನು ಬಯಸುತ್ತದೆ. ಆದರೆ ಜಾಗತೀಕರಣವೆಂಬುದು ಬಾಹ್ಯ ಬೆಳವಣಿಗೆಯ ಚೋದನ ಶಕ್ತಿಯಾಗಿದ್ದು ವಸ್ತುವಿನ ಅಳತೆಯ ಮೂಲಕ ವ್ಯಕ್ತಿಯನ್ನು ಅಳೆಯುತ್ತಿದೆ. ವ್ಯಕ್ತಗಳು-ವ್ಯಕ್ತಿತ್ವಗಳಾಗದೆ ವಸ್ತುಗಳೇ ಆಗಿಬಿಟ್ಟರೆ ಯಾರೊಡನೆ ಮಾತನಾಡುವುದು ಎಂಬ ಚಿಂತನೆಗೆ ಬಿದ್ದಿದ್ದಾರೆ. ಜಾಗತೀಕರಣ ಅಭಿವೃದ್ಧಿ ಚಿಂತನೆ ಮನುಷ್ಯ ಕೇಂದ್ರಿತ ಮತ್ತು ಏರುಮುಖಿ ಚಲನೆಯದಾಗಿದ್ದು ಅಕ್ಕ-ಪಕ್ಕ ಎಂಬ ಮನುಷ್ಯ ಸಮಾಜ ಮತ್ತು ಜೀವಜಾಲ ಬಳಸುವ ಕಚ್ಚಾ ಮಾಲು ಆಗಿಬಿಟ್ಟರೆ; ಈ ಜಗತ್ತು; ನೀರು, ನೆಲ, ಜಲ, ಖನಿಜ, ಮರ-ಸಸ್ಯ, ಪ್ರಾಣಿ-ಪಕ್ಷಿ...ಎಷ್ಟು ಬೇಗೆ ತಿರುಪತಿ ತಲೆ ಆಗಿ ಬಿಡಬಹುದೊ ಎಂಬ ಭವಿಷ್ಯದ ಭಯಕ್ಕೆ ಒಳಗಾಗಿದ್ದಾರೆ.

ತಂತ್ರಜ್ಞಾನವಿಲ್ಲದೆ ಅಭಿವೃದ್ಧಿ ಎಂದೂ ಸಾಧ್ಯವಾಗದು. ಅದು ಜನೋದ್ದೇಶಿತವಾಗಿರಬೇಕು; ಉದ್ಯಮಪತಿಯ ಉದ್ದೇಶ ಅಲ್ಲ. ಯೂರೋ ದೊರೆಗಳು ಉದ್ಯಮಪತಿಗಳೇ ಹೊರತು ವಿಜ್ಞಾನಿಗಳೂ ಅಲ್ಲ, ಮನುಷ್ಯರೂ ಅಲ್ಲ. ಇವರು ಮೊದಲು ನಾಶಮಾಡುವುದು ಮೂರನೆ ಜಗತ್ತಿನ ರಾಜಕೀಯವನ್ನು ಅಂದರೆ ನಾಯಕರನ್ನು ಈ ನಾಯಕರನ್ನು ಮಧ್ಯವರ್ತಿಗಳನ್ನಾಗಿ ಪರಿವರ್ತಿಸಿದರೆ ಇಡೀ ರಾಜಕೀಯ ಶಕ್ತಿ ತಮ್ಮ ಲಾಭಕ್ಕೆ ನಿಲ್ಲುತ್ತದೆ. ಸ್ಥಳೀಯ ತಂತ್ರಜ್ಞಾನವನ್ನು ಆ ಮೂಲಕ ನಾಶ ಮಾಡಿ ತಮ್ಮ ನೆಲೆಯನ್ನು ಸ್ಥಾಪಿಸಬಹುದು. ಆಗ ಜನ - ಜನಪದ ಮತದಾರನಾಗಿ ಮಾತ್ರ ಉಳಿದು ಸಾಂಸ್ಕೃತಿಕ ಪ್ರಾತಿನಿಧಿಕತೆಯನ್ನು ಕಳೆದುಕೊಳ್ಳುತ್ತಾರೆ. ಇದು ಮೊಲದ ಮನೆಯ ಬಾಗಿಲು ತೆಗೆದಂತೆ.

ಬಹುಜನ, ಬಹುಮನ ಮತ್ತು ಬಹು ಸಂಸ್ಕೃತಿಗಳನ್ನು ಏಕಕಾಲಕ್ಕೆ ರೂಪಿಸಲು ಜಾಗತೀಕರಣಕ್ಕೆ ಬಾಗಿಲುಗಳು ತೆರೆದಿವೆ. ಆದರೆ ಈ ಕೆಳಜನ ಮತ್ತು ಸಂಸ್ಕೃತಿಯಿಂದ ಈಗ ತಾನೆ ಹುಟ್ಟುತ್ತಿರುವ ರಾಜಕೀಯ ನಾಯಕತ್ವ ಮೊಳಕೆಯಲ್ಲಿ ಹುಸಿ ಹೊಡೆದು ಹೋಗುತ್ತದೆ. ಹುಟ್ಟುವ ಮಕ್ಕಳಲ್ಲಿ ನೆಲೆ ನಿಲ್ಲುವ ಆಸೆ, ಹೋರಾಡುವ ಮನಸ್ಸು ಉಳಿಯುವುದಿಲ್ಲ. ತನ್ನ ಸಂಸ್ಕೃತಿಯನ್ನು ಕಳಕೊಂಡವನು ನಂಬಿಕೆಯನ್ನು ಕಳೆದುಕೊಳ್ಳುತ್ತಾನೆ. ನನ್ನಲ್ಲಿ ಇರುವ ಹಾಗೂ ತನ್ನ ಸಮಾಜಕ್ಕೆ ಬೇಕಾದ ನಾಯಕನನ್ನು ಕಳೆದುಕೊಳ್ಳುತ್ತಾನೆ.

ಟಿಪ್ಪಣಿ - 2

ಈಗ ಮೂರನೆಯ ಜಗತ್ತು ಒಂದು ಕಠಿಣ ಸವಾಲಿಗೆ ಎದುರಾಗಿದೆ. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ದಾಟಿಕೊಂಡುದು ಒಂದು ದೊಡ್ಡ ಸಾಧನೆ. ಪ್ರಜಾಪ್ರಭುತ್ವವಾದಿಗಳೇ ನಿರ್ಮಿಸಿದ್ದ ವಸಾಹತು ಪ್ರಭುತ್ವವನ್ನು ಮೀರಿ ತಮ್ಮದೆ ಪ್ರಜಾಪ್ರಭುತ್ವವನ್ನು ನಿರ್ಮಿಸಿಕೊಂಡದ್ದಾಯಿತು. ಅದೇ ವಸಾಹತು ಪ್ರಭುಗಳು ಜಾಗತೀಕರಣವೆಂಬ ಹೊಸ ವಸಾಹತು ಸೈನ್ಯವನ್ನು ಈಗಾಗಲೇ ನಮ್ಮೊಳಕ್ಕೆ ನುಗ್ಗಿಸಿದ್ದಾರೆ. ಈ ಸೈನ್ಯ ವ್ಯಕ್ತಿ ರೂಪದಲ್ಲಿ ಇಲ್ಲ; ವಸ್ತು ರೂಪದಲ್ಲಿದೆ. ಅದರ ಎದುರು

ಕಲೆ : ಜಾನ್ ದೇವರಾಜ್

ನಿಂತು ಯುದ್ಧ ಹೂಡುವ ಅವಕಾಶ ಇಲ್ಲ. ಆದ್ದರಿಂದ ಒಪ್ಪಿಗೆ ಅಥವಾ ಸೋಲು ಅನಿವಾರ್ಯ. ಈ ಅವ್ಯಕ್ತ ಯುದ್ಧ ಇಪ್ಪತ್ತೊಂದನೆಯ ಶತಮಾನದ ನವನವೀನ ಶೋಧವಾಗಿದೆ. ಈ ಸೈನ್ಯ ಶತ್ರುವೋ ಅಥವಾ ಮಿತ್ರನೋ ಎಂದು ಗುರುತಿಸುವುದು ಕೂಡ ಕಷ್ಟವಾಗಿದೆ. ಈತ ನಾಯಕನೋ ಅಥವಾ ಪ್ರತಿನಾಯಕನೋ ಎಂದು ಹೆಸರಿಸುವುದು ಕೂಡ ಸಾಧ್ಯವಾಗುತ್ತಿಲ್ಲ. ತಮ್ಮನ್ನು ಮರೆತು, ಜನ ಇವನನ್ನು ಆಹ್ವಾನಿಸುತ್ತಿದ್ದಾರೆ. ಈಗ ಗೋಪಿಕೆಯರ (ಅಪೇಕ್ಷೆಯ) ಕೃಷ್ಣನೋ ಅಥವಾ ಸದ್ದಾಂಗೆ ಅವತರಿಸಿದ ಜಾರ್ಜ್ ಡಬ್ಲ್ಯು ಬುಷ್‌ನೋ ಇನ್ನೂ ತಿಳಿಯಬೇಕಿದೆ.

ಸಂಸ್ಕೃತಿ ಸಂದರ್ಭದಲ್ಲಿ ಒಂದು ವ್ಯಕ್ತಿತ್ವ ಮತ್ತೊಂದು ವ್ಯಕ್ತಿತ್ವವನ್ನು ಗುರುತಿಸುವುದು ಅಥವಾ ನಿರಾಕರಿಸುವುದು ಸುಲಭ. ವ್ಯಕ್ತಿತ್ವವೇ ಕಣ್ಣಿಗೆ ಬೀಳದಿರುವುದು, ಮನಸ್ಸಿಗೆ ತಟ್ಟದಿರುವುದು, ಬಾಂಧವ್ಯಕ್ಕೆ ಈಡಾಗದಿರುವುದು ಯಾರನ್ನಾದರೂ ಆತಂಕಕ್ಕೆ ಈಡುಮಾಡುವುದು ಸಹಜ. ನಮ್ಮ ಸಂಸ್ಕೃತಿಯಲ್ಲಿ ನಮ್ಮದೇ ಆದ ಭಗವಂತನನ್ನು ಕಲ್ಪಿಸಿಕೊಂಡಿದ್ದೇವೆ. ಅವನು ವಿಘ್ನ ನಿವಾರಕ ಹಾಗೂ ಸುಖ ಪ್ರದಾಯಕನಾಗಿ ಸಂಕೇತಿಸಲ್ಪಟ್ಟಿದ್ದಾನೆ. ಆದರೆ ಈ ಜಾಗತಿಕ ಅನ್ನುವವನು ನಮಗೆ, ನಮ್ಮ ಸೃಷ್ಟಿಗೆ ಅಥವಾ ಕಲ್ಪನೆಗೆ ಕಾರಣಕರ್ತನಾಗಿ ಬರುತ್ತಿಲ್ಲ, ನೇರವಾಗಿ ಸಿದ್ಧವಸ್ತುವಿನ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ಪ್ರತಿಯೊಂದು ಸಂಸ್ಕೃತಿಯೊಳಗೆ ಅವಶ್ಯವೆನಿಸಿದ ಸಿದ್ಧ ವಸ್ತುಗಳಿವೆ ಮತ್ತು ವ್ಯಕ್ತಿಗಳಿದ್ದಾರೆ. ಇವು ಆ ಸಂಸ್ಕೃತಿಯ ಉತ್ಪತ್ತಿ, ಹಂಚಿಕೆ ಮತ್ತು ಬಳಕೆಯ ನಿಯಮಕ್ಕೆ ಒಳಪಟ್ಟಿವೆ. ಈ ನಿಯಮವೆ ಇಲ್ಲಿನ ನಾಯಕ. ದುಡಿದು ತಿನ್ನು, ಹಸಿದವನಿಗೆ ಅನ್ನ ಹಾಕು, ಬಡವನಿಗೆ ಭಿಕ್ಷೆ ನೀಡು, ಹಾಸಿಗೆ ಇದ್ದಷ್ಟು ಕಾಲು ಚಾಚು, ಉಪ್ಪು ತಿಂದವನು ನೀರು ಕುಡಿಯುತ್ತಾನೆ. ಇಂಥ ಹೊಂದಾಣಿಕೆ ಮತ್ತು ನಿರಾಕರಣೆಗಳ ಮೊತ್ತವೆ ಸಂಸ್ಕೃತಿಯಾಗಿರುತ್ತದೆ. ಈ ಸಂಸ್ಕೃತಿ ಅಥವಾ ನಾಯಕ ಇಲ್ಲದಿದ್ದರೆ ಏನೇ ಉಂಡುತಿಂದು ಸುಖಪಡುತ್ತೇನೆ ಎಂದರೂ ಆ ಜನರ ಮನಸ್ಸಿಗೆ ನೆಮ್ಮದಿ ಅಥವಾ ಸಮಾಧಾನ ಎಂಬುದು ಇರುವುದಿಲ್ಲ. ಎಲ್ಲೆಲ್ಲ, ಎಷ್ಟೆಲ್ಲ ಅದ್ದೂರಿಯಾಗಿ ಬದುಕಿದರೂ ಒಬ್ಬ ವ್ಯಕ್ತಿ ತನ್ನ ಮನ ಅಥವಾ ತನ್ನ ನೆಲೆಯಲ್ಲಿ ಇದ್ದು ಸಾಯಬೇಕು ಅನ್ನುತ್ತಾನಲ್ಲ ಯಾಕೆ? ಅಲ್ಲಿ ಅವನನ್ನು ಗುರುತಿಸುವ ಒಂದು ಸಂಸ್ಕೃತಿ ಅಥವಾ ನಾಯಕ ಇರುತ್ತಾನೆ ಎಂದಲ್ಲವೆ?

ಜಾಗತಿಕ ಎನ್ನುವ ನಾಯಕ ನಮ್ಮ ಈ ಸಂಸ್ಕೃತಿ ನಾಯಕನ ಉತ್ಪತ್ತಿ, ಹಂಚಿಕೆ ಮತ್ತು ಬಳಕೆಯನ್ನು ಕಿತ್ತುಕೊಂಡರೆ ಅವನು ಎಲ್ಲಿರುತ್ತಾನೆ? ಈ ಪ್ರಶ್ನೆಯಿಂದಲೆ ಜನಪದ ನಾಯಕನ ಅಸ್ತಿತ್ವದ ಪ್ರಶ್ನೆ ಉಂಟಾಗಿದೆ. ಇದು ಒಂದು ದೇಶದ ಸಾಂಸ್ಕೃತಿಕ ಅಸ್ತಿತ್ವದ ಪ್ರಶ್ನೆ ಮಾತ್ರವಲ್ಲ, ಆ ದೇಶದ ರಾಜಕೀಯ ಹಾಗೂ ಅಭಿವೃದ್ಧಿಯ ಪ್ರಶ್ನೆ ಕೂಡ ಆಗುತ್ತದೆ. ಈ ನಿಟ್ಟಿನಲ್ಲಿಯೇ ನಾವು ಇಂದು ಜನಪದ ನಾಯಕನನ್ನು ಗುರುತಿಸಹೊರಟಿದ್ದೇವೆ.

ಈ 'ಜನಪದ' ಎಂದರೆ ಯಾವುದು? 'ಜನಪದ' ಎಂಬುದು ಒಂದು ಸಂಸ್ಕೃತಿ ಸಮೂಹ. ಒಂದು ಭೌಗೋಳಿಕ ಪ್ರದೇಶದಲ್ಲಿ ಬಹಳ ಕಾಲದಿಂದ ಬದುಕುತ್ತಾ, ಆ ಪ್ರದೇಶದ ಆರ್ಥಿಕ ಸೌಲಭ್ಯಗಳಿಗೆ ಅನುಗುಣವಾದ ಸಾಮಾಜಿಕ ವ್ಯವಸ್ಥೆ ಮತ್ತು ಅದಕ್ಕೆ ಹೊಂದುವ ನಡವಳಿಕೆಗಳನ್ನು ಎಂದರೆ, ಸಂಸ್ಕೃತಿಯನ್ನು ರೂಪಿಸಿಕೊಂಡಿರುವ ಸಮಾಜ ಹಾಗಿದ್ದಲ್ಲಿ ಜನಪದ ನಾಯಕ ಎಂಬುವವನು ಯಾರು? ಈ ಸಂಸ್ಕೃತಿಯು ಹಾಳಾಗದಂತೆ ಹಾಗೂ ಅದು ಸಮಕಾಲೀನವಾಗಿ ಪ್ರಸ್ತುತವಾಗಿ ಉಳಿಯುವಂತೆ ನೋಡಿಕೊಳ್ಳುವವನೇ ಜನಪದ ನಾಯಕ. ಈ ನಾಯಕ ಒಟ್ಟು ಆ ಸಮಾಜವೇ ಆಗಿರಬಹುದು ಅಥವಾ ಒಟ್ಟಾಗಿ ಆ ಸಮಾಜವನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿಯಾಗಿರಬಹುದು. ಈತನನ್ನು ಅವಶ್ಯ (need) ನಾಯಕ ಎಂದು ಕರೆಯಬಹುದು. ಈತ

ಆಯ್ಕೆಯಾದ (elected) ನಾಯಕ ಅಲ್ಲ. ಆಯ್ಕೆಯಲ್ಲಿ ಒಡಕು ಇರುತ್ತದೆ. ಅವಶ್ಯಕತೆಯಲ್ಲಿ ಒಟ್ಟು ಸಮೂಹದ ಸ್ವ ಇಚ್ಛೆ ಇರುತ್ತದೆ. ಉದಾಹರಣೆಗೆ, ರಾಜಕೀಯ ಮುಖಂಡನೊಬ್ಬ ಎಷ್ಟೇ ದೊಡ್ಡವನಿದ್ದರೂ ಸಮಾಜವನ್ನು ಒಟ್ಟಾಗಿ ಉದ್ದೇಶಿಸುವಾಗ ಆ ಸಮಾಜದ ಮುಖಂಡನನ್ನು ಮುಂದಿಟ್ಟುಕೊಳ್ಳುತ್ತಾನೆ. ರಾಜಕೀಯ ನಾಯಕನ ಹತ್ತಿರ ಅಭಿವೃದ್ಧಿ ಸಿದ್ಧಾಂತಗಳಿದ್ದರೆ, ಸಮಾಜ ಮುಖಂಡನ ಹತ್ತಿರ ಸಾಮಾಜಿಕ ಭದ್ರತೆಯ ಹೊಣೆಗಾರಿಕೆ ಇರುತ್ತದೆ. ಇಲ್ಲಿ ಧರ್ಮ ಎಂಬುದು ಮೇಲೆದ್ದು ಬರುವುದಿಲ್ಲ ಸಮಾಜದ ಒಳಗೆ ಅದೊಂದು ಬದುಕುವ ವಿಧಾನ ಮಾತ್ರವಾಗಿರುತ್ತದೆ.

ಒಂದು ಸಮಾಜದ ಸುಸ್ಥಿರತೆ ಎಂಬುದು ಆರ್ಥಿಕ-ಸಾಮಾಜಿಕ ಭದ್ರತೆ. ಮತ, ಧರ್ಮ, ಪಂಥ ಎಂಬವು ಗುರುತುಗಳು ಮಾತ್ರ. ಈ ಗುರುತು ಅಥವಾ ಸಂಕೇತಗಳೆ ಪ್ರಧಾನವಾದರೆ ಕುದುರೆಗಿಂತ ಲದ್ದಿಯೆ ಬಿರುಸು ಎಂದಂತಾಗುತ್ತದೆ. ಕುದುರೆ ಓಡುತ್ತ ಹಿಂದೆ ಲದ್ದಿ ಬೀಳುತ್ತಿದ್ದರೆ ಸ್ವತಃ ಲದ್ದಿ ತಾನೇ ತುಂಬ ಸ್ಪೀಡ್ ಅಂದುಕೊಳ್ಳುತ್ತದಂತೆ - ಹಾಗೆ.

ಈಗಲೂ ಅಮೇರಿಕ, ಜಪಾನ್, ಫ್ರಾನ್ಸ್, ಸ್ವಿಟ್ಜರ್‌ಲೆಂಡ್, ಉತ್ತರ ಕೊರಿಯ ಇಂಥ ದೇಶಗಳು ತಮ್ಮ ಆರ್ಥಿಕ-ಸಾಮಾಜಿಕ ಭದ್ರತೆಯನ್ನೇ ಕೇಂದ್ರ ಚಿಂತನೆಯನ್ನಾಗಿ ಇಟ್ಟುಕೊಂಡಿವೆ. ಕಾರಣವಾಗಿ ಜಗತ್ತಿನ ನಾಯಕತ್ವ ಆ ಕಡೆಯಿಂದಲೇ ಪ್ರಾಯೋಜಿತವಾಗುತ್ತಿದೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು ಹಾಗೂ ಯಾವ ನೆಲೆಯಿಂದ ನಮ್ಮ ನಾಯಕತ್ವ ಎದ್ದು ನಿಲ್ಲಬೇಕು ಎಂಬುದನ್ನು ಚಿಂತಿಸಬೇಕಾಗಿದೆ.

ನಮ್ಮದು ಜಾತಿ ನಾಯಕತ್ವದ ದೇಶ. ಸ್ವಾತಂತ್ರ್ಯ ಹೋರಾಟದ ಸಂದರ್ಭವನ್ನು ಹೊರತುಪಡಿಸಿದರೆ ರಾಜಕೀಯವಾಗಿಯೂ ನಮ್ಮ ನಾಯಕತ್ವ ಜಾತಿ ಮೂಲದ್ದೆ ಆಗಿದೆ. ಆದರೆ ಜಾತಿ ನಿಜವಾದ ಧರ್ಮವೂ ಅಲ್ಲ, ಸಂಸ್ಕೃತಿಯೂ ಅಲ್ಲ. ಜಾತಿಗೆ ಆಗಮನ ದ್ವಾರವೂ ಇಲ್ಲ, ನಿರ್ಗಮನ ದಾರಿಯೂ ಇಲ್ಲ. ಇದೊಂದು ಪಕ್ಕಾ ನಂಬಿಕೆ ಆಗಬಹುದೇ ಹೊರತು ಸಂಸ್ಕೃತಿ ಆಗಲಾರದು. ಜನರ ಮಧ್ಯೆ ಗುಲಾಮಿತನ ಅಸ್ತಿತ್ವದಲ್ಲಿದ್ದರೆ ಮತ್ತು ಇದ್ದಾಗ ಈ ವ್ಯವಸ್ಥೆ ಅಸ್ತಿತ್ವದಲ್ಲಿ ಇರುತ್ತದೆ. ಜಾತಿ ಮತ್ತು ಪ್ರಭುಶಾಹಿಗಳು ಸೇರಿ ನಮ್ಮನ್ನು ಆಳಿದವು. ಈಗ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ. ಗಾಂಧಿ, ಲೋಹಿಯಾ, ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ್ ಅವರನ್ನು ಬಿಟ್ಟರೆ ನಮ್ಮಲ್ಲಿ ದೇಶಮಟ್ಟದ ಸಾಂಸ್ಕೃತಿಕ ನಾಯಕತ್ವ ಆಮೇಲೆ ಹುಟ್ಟಲೇ ಇಲ್ಲ. ನಮ್ಮ ಜಾತಿ ವ್ಯವಸ್ಥೆ ಈ ಚಿಂತಕರನ್ನು ಆಡಳಿತದ ಒಳಕ್ಕೆ ಬಿಟ್ಟುಕೊಳ್ಳಲೇ ಇಲ್ಲ. ಹಳೆಯ ವ್ಯವಸ್ಥೆ ಬದಲಾಗುವುದು ಮತೀಯವಾದಿಗಳಿಗೆ ಇಷ್ಟ ಇರಲಿಲ್ಲ ಆದರೂ ಜನತಾ ಪಕ್ಷ ಮತ್ತು ಭಾರತೀಯ ಜನತಾ ಪಕ್ಷ ಹುಟ್ಟುವವರೆಗೆ ನಾವು ನಮ್ಮ ದೇಶ ಆರ್ಥಿಕ ಸಾಮಾಜಿಕ ಭದ್ರತೆಯ ಜನಪದ ಆಗಿತ್ತು ಎನಿಸುತ್ತದೆ.

ಈಗ ಇಡೀ ದೇಶದ ವಿದ್ಯಮಾನಗಳನ್ನು ಗಮನಿಸುತ್ತಿದ್ದರೆ, ಆರ್ಥಿಕ ಸಾಮಾಜಿಕ ಭದ್ರತೆಯ ಭಾರತ ಉಳಿದಿಲ್ಲ ಎನಿಸುತ್ತದೆ. ಮುಂದೇನು ಎಂಬ ಆತಂಕ ಎದುರಾಗಿದೆ. ಈಗ ಜನ

1. ಬಹುಮತ (Majority)
2. ರಾಷ್ಟ್ರೀಯತೆ (Nationality)
3. ಜಾಗತೀಕರಣ (Globalisation)

ಎಂಬ ತ್ರಿಮೂರ್ತಿಗಳಿಗೆ ಹೆದರಿದ್ದಾರೆ. ಸೃಷ್ಟಿಕರ್ತರಾಗಬಹುದಾಗಿದ್ದ ಈ ಮೂರು ಯಾರಿಗೆ ನಾಮ ಹಾಕಬಹುದು ಎಂಬ ತಳಮಳದಲ್ಲಿದ್ದಾರೆ, ಯಾಕೆ?

1. ಬಹುಮತವೆಂಬುದು ಬಹುಮತೀಯರ ರಾಜಕೀಯ ಕೇಂದ್ರೀಕರಣವಾಗಿದೆ. ಇದರಲ್ಲಿ ಮತೀಯ ಹಾಗೂ ಮಠಮಾನ್ಯಗಳ ಶಕ್ತಿ ಸಂಚಯವೂ ಸೇರಿದೆ. ಇವು ತಮ್ಮ ಅಸ್ತಿತ್ವದ ಪುನರ್ ಪ್ರತಿಪಾದನೆಗಾಗಿ ಜಾತಿ-ಧರ್ಮದ ರಾಜಕಾರಣವನ್ನೇ ಸಂಸ್ಕೃತಿ ರಾಜಕಾರಣ ಎಂದು ಹೇಳುತ್ತಿವೆ. ನಿಜವಾದ 'ಸಂಸ್ಕೃತಿ ರಾಜಕೀಯ'ವೆಂದರೆ ಜನಪದ ನಾಯಕತ್ವದ ರೂಪೀಕರಣ ಎಂದರೆ ; ಭಾರತದ ಬಹುಪಂಗಡಗಳ ಒಳಗಿಂದ ನಾಯಕತ್ವವನ್ನು ಹೊರಡಿಸುವುದು.

ಬಹುಮತ ಯಾಕೆ ಪ್ರಶ್ನಿತವಾಗಿದೆ ಎಂದರೆ ಅದು ಭಾರತದಲ್ಲಿ ಜಾತಿ-ಮತ ಮತ್ತು ಬಹುಸಂಖ್ಯಾತರ ಸ್ವರೂಪದಲ್ಲಿದೆ. ಈ ಬಹುಮತ ಸಣ್ಣ ಸಣ್ಣ ಜನಪದ ಸಮೂಹಗಳನ್ನು ರಾಜಕೀಯ ಮುಖ್ಯವಾಹಿನಿಗೆ ತರುತ್ತಿಲ್ಲ. ಅವು ತಮಗೆ ಸಮಾನ ಭಾಗವಹಿಸುವಿಕೆ ಸಾಧ್ಯವಾಗಿಲ್ಲ ಎಂದು ಹೇಳುತ್ತಿವೆ. ಈವರೆಗೆ ತಮಗೆ ತಮ್ಮದೇ ನಾಯಕತ್ವ ಇಲ್ಲ ಎಂಬ ಮನೋಭಾವ ಉಂಟಾಗಿದೆ. ಈಗಿರುವ ರಾಜಕೀಯ ತಮ್ಮನ್ನೂ ಪೂರಾ ಒಳಕ್ಕೆ ಸೇರಿಸುವುದಿಲ್ಲ. ಅದು ಹಿಂದೆ, ಜಾತಿ ತಮ್ಮನ್ನು ಅಂತರದಲ್ಲಿ ಇಟ್ಟಂತೆ ರಾಜಕೀಯ ಅಂತರವನ್ನು ಉಳಿಸಿಕೊಂಡಿದೆ. ಇದಕ್ಕೆ ಪರಿಹಾರ ತಮ್ಮದೇ ಜನಪದದ ಒಳಗಿಂದ ಸಾಂಸ್ಕೃತಿಕ ಅಥವಾ ಜನಪದ ನಾಯಕತ್ವವನ್ನು ಹುಟ್ಟುಹಾಕುವುದು. ಪ್ರಭು ಸಂಸ್ಕೃತಿ ಆಚರಣೆಯಲ್ಲಿ ಇದ್ದಾಗ, ಅರಸು, ಕಲಚೂರ್ಯ...ಮುಂತಾದ ಚಿಕ್ಕ ಜನಪದಗಳು ಕೂಡಾ ರಾಜ್ಯಾಧಿಕಾರವನ್ನು ಹಿಡಿದಿದ್ದವು. ಆದರೆ ಈ ಪ್ರಜಾಪ್ರಭುತ್ವದಲ್ಲಿ ಅದು ಸಾಧ್ಯವಾಗದಿರುವುದು ಶೋಚನೀಯ. ಇದಕ್ಕೆ ಬಹುಮತ ರಾಜಕೀಯ ಕಾರಣವಾಗಿದೆ ಮತ್ತು ಈ ಬಹುಮತ ಜಾತಿಯ ಸ್ವರೂಪದಲ್ಲಿದೆ ಎಂದು ಅವರು ತಿಳಿದಿದ್ದಾರೆ. ಇತ್ತೀಚಿನ ದಿನಗಳಲ್ಲಿ ತಿಗಳ, ಬೆಸ್ತ, ಅಗಸ, ಬೇಡ ಜಂಗಮ ಈ ಮುಂತಾದ ಜಾತಿಗಳು ಮಠಗಳ ಸ್ಥಾಪನೆಗೆ ಹೊರಟಿರುವುದರ ಉದ್ದೇಶ ಭಾರತದಲ್ಲಿ ತಾವೂ ಕೂಡ ಸಾಂಸ್ಕೃತಿಕ ಯಜಮಾನಿಕೆಯನ್ನು ಉಳಿಸಿಕೊಳ್ಳಬೇಕು ಎಂಬುದೇ ಆಗಿದೆ. ದುರ್ದೈವವಶಾತ್ ಮಠ ತಮ್ಮ ಅಭಿವೃದ್ಧಿಯ ಕಂಟೆಂಟ್ ಹೊಂದಿಲ್ಲ ಎಂಬುದು ಈ ಸಮುದಾಯಗಳ ಗಮನಕ್ಕೆ ಬಂದಿಲ್ಲ. ಬ್ರಾಹ್ಮಣಿಕೆಗೆ ಹೊರತಾದ ಸಾಂಸ್ಕೃತಿಕ ಅಭಿವೃದ್ಧಿ ತಂತ್ರ ಮತ್ತು ಸಲಕರಣೆಗಳನ್ನು ಕಂಡುಕೊಳ್ಳದ ಮಾನಸಿಕ ದಾರಿದ್ರ್ಯವೇ ಇದಕ್ಕೆ ಕಾರಣ ಎನ್ನುವುದು ನನ್ನ ಅಭಿಪ್ರಾಯ.

2. ರಾಷ್ಟ್ರೀಯತೆ ಎನ್ನುವುದು ಬಹುಮತದ ತೀರ್ಮಾನ. ಇದೊಂದು ಆಡಳಿತಾತ್ಮಕ ಸಂಸ್ಕೃತಿಯ ಆದರ್ಶ. ಇನ್ನೊಂದು ಅರ್ಥದಲ್ಲಿ ಉದಾರವಾದಿ ಜನಪ್ರತಿನಿಧಿಗಳ ರಾಜ್ಯಭಾರ. ರಾಷ್ಟ್ರೀಯತೆ ಎನ್ನುವುದೇ ಒಂದು ಮೊತ್ತದ ಪರಿಕಲ್ಪನೆ. ಎಲ್ಲವೂ ಬೃಹತ್ ಉದ್ಯಮದ ರೀತಿಯಲ್ಲಿ ನಡೆಯುವ ಚಟುವಟಿಕೆಗಳು. ಸಣ್ಣ ಸಣ್ಣ ಜನ ಸಮೂಹಕ್ಕೆ ರಾಷ್ಟ್ರೀಯತೆ ಎನ್ನುವುದು ಎಟುಕಲಾರದ ಕಲ್ಪನೆ. ಹಳ್ಳಿ, ದಿಲ್ಲಿಯಲ್ಲಿ ಭಾಗವಹಿಸುವ ಅವಕಾಶ ಸುವರ್ಣಾವಕಾಶ ಎನಿಸಿಕೊಳ್ಳುತ್ತದೆಯೇ ಹೊರತು ತಮ್ಮ ಜಾತ್ರೆಯಂತೆ ಸಹಜ ಅಲ್ಲ. ನಿಜವಾದ ರಾಷ್ಟ್ರೀಯತೆ ಎಂಬುದು ಕಿರು ಸಮೂಹಗಳಲ್ಲಿ ಉಳಿದಿರುತ್ತದೆ. ರಾಷ್ಟ್ರೀಯತೆ ಬೃಹತ್ ಉದ್ಯಮದ ರೀತಿಯ ಚಟುವಟಿಕೆ ಆಗಿದ್ದು, ಕೆಳ ಹಾಗೂ ತಳನೆಲೆಯ ಕಸುಬುಗಳನ್ನು ಗುಜರಿಗೆ ತಳ್ಳಿಬಿಡುತ್ತದೆ. ಈ ಕಸುಬುದಾರರ ನೈಪುಣ್ಯ, ಉದ್ಯಮವಾಗುವ ಅವಕಾಶವನ್ನೇ ಪಡೆಯುವುದಿಲ್ಲ. ಕೊನೆಯ ಮನುಷ್ಯನಾಗಿ ಕಾಯುವುದೊಂದೇ ಅವನ ನಿರಂತರ ಕಾಯಕವಾಗುತ್ತದೆ. ಸಹಜವಾಗಿ ದೊಡ್ಡ ದೇಶದ ರಾಷ್ಟ್ರೀಯತೆಯಲ್ಲಿ ತಳಜನಪದಗಳು ಅವಕಾಶಗಳಿಂದ ದೂರ ಉಳಿದು ವಿಸಂಘಟಿತವಾಗುತ್ತಾ ಹೋಗುತ್ತವೆ. ಸಶಸ್ತ್ರ ಬಂಡಾಯ ಶುರುವಾಗುವುದು ಸಾಮಾನ್ಯವಾಗಿ ಇಂಥ ವರ್ಗಗಳಿಂದ.

ನಮ್ಮದು ಜಾತಿ ನಾಯಕತ್ವದ ದೇಶ. ಸ್ವಾತಂತ್ರ್ಯ ಹೋರಾಟದ ಸಂದರ್ಭವನ್ನು ಹೊರತುಪಡಿಸಿದರೆ ರಾಜಕೀಯವಾಗಿಯೂ ನಮ್ಮ ನಾಯಕತ್ವ ಜಾತಿ ಮೂಲದ್ದೆ ಆಗಿದೆ. ಆದರೆ ಜಾತಿ ನಿಜವಾದ ಧರ್ಮವೂ ಅಲ್ಲ, ಸಂಸ್ಕೃತಿಯೂ ಅಲ್ಲ. ಜಾತಿಗೆ ಆಗಮನ ದ್ವಾರವೂ ಇಲ್ಲ, ನಿರ್ಗಮನ ದಾರಿಯೂ ಇಲ್ಲ. ಇದೊಂದು ಪಕ್ಕಾ ನಂಬಿಕೆ ಆಗಬಹುದೇ ಹೊರತು ಸಂಸ್ಕೃತಿ ಆಗಲಾರದು. ಜನರ ಮಧ್ಯೆ ಗುಲಾಮಿತನ ಅಸ್ತಿತ್ವದಲ್ಲಿದ್ದರೆ ಮತ್ತು ಇದ್ದಾಗ ಈ ವ್ಯವಸ್ಥೆ ಅಸ್ತಿತ್ವದಲ್ಲಿ ಇರುತ್ತದೆ. ಜಾತಿ ಮತ್ತು ಪ್ರಭುಶಾಹಿಗಳು ಸೇರಿ ನಮ್ಮನ್ನು ಆಳಿದವು. ಈಗ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ. ಗಾಂಧಿ, ಲೋಹಿಯಾ, ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ್ ಅವರನ್ನು ಬಿಟ್ಟರೆ ನಮ್ಮಲ್ಲಿ ದೇಶಮಟ್ಟದ ಸಾಂಸ್ಕೃತಿಕ ನಾಯಕತ್ವ ಆಮೇಲೆ ಹುಟ್ಟಲೇ ಇಲ್ಲ. ನಮ್ಮ ಜಾತಿ ವ್ಯವಸ್ಥೆ ಈ ಚಿಂತಕರನ್ನು ಆಡಳಿತದ ಒಳಕ್ಕೆ ಬಿಟ್ಟುಕೊಳ್ಳಲೇ ಇಲ್ಲ. ಹಳೆಯ ವ್ಯವಸ್ಥೆ ಬದಲಾಗುವುದು ಮತೀಯವಾದಿಗಳಿಗೆ ಇಷ್ಟ ಇರಲಿಲ್ಲ ಆದರೂ ಜನತಾ ಪಕ್ಷ ಮತ್ತು ಭಾರತೀಯ ಜನತಾ ಪಕ್ಷ ಹುಟ್ಟುವವರೆಗೆ ನಾವು ನಮ್ಮ ದೇಶ ಆರ್ಥಿಕ ಸಾಮಾಜಿಕ ಭದ್ರತೆಯ ಜನಪದ ಆಗಿತ್ತು ಎನಿಸುತ್ತದೆ.

ನಿಜವಾದ ಆಸಕ್ತಿಯಿಂದ ಸಂಘಟಿಸಿದರೆ ರಾಷ್ಟ್ರೀಯತೆ ಒಂದು ವರ. ಇಲ್ಲದಿದ್ದಲ್ಲಿ ಸಂಯುಕ್ತ ರಷ್ಯಾಕ್ಕೆ ಅಥವಾ ಜಾತಿ ಆಧಾರಿತ ಭಾರತೀಯ ರಾಷ್ಟ್ರೀಯತೆಗೆ ಬಂದ ಮಿತಿ ಸ್ಥಿತಿ ಉಂಟಾಗುತ್ತದೆ. ಐವತ್ತೈದು ವರ್ಷಗಳ ನಂತರವೂ ಭಾರತದ ನಾಯಕತ್ವ ಎಷ್ಟು ಕೆಳವರ್ಗಗಳತ್ತ ಚಲಿಸಿದೆ, ಯೋಚಿಸಿ.

3. ಜಾಗತೀಕರಣ ಬ್ರಿಟಿಷ್ ವಸಾಹತು ಶಾಹಿ ಪರಿಕಲ್ಪನೆಯ ಮುಂದುವರಿದ ಬೃಹತ್ರೂಪ. ಬ್ರಿಟೀಷ್ ವಸಾಹತು ಭಾರತದ ಕುಶಲ ಕರ್ಮಿಗಳ ಕೈ ಬರಿದು ಮಾಡಿದ ಸಂಗತಿ ನಮಗೆಲ್ಲ ತಿಳಿದಿದೆ. ಅವರ ಕಸುಬೆ ಮೇಲು ವರ್ಗದವರ ಬೃಹತ್ ಉದ್ಯಮವಾಗಿ ಮುಂದುವರೆಯಿತು. ಒಡೆಯರಾಗಿದ್ದ ಕುಶಲ ಕರ್ಮಿಗಳು ಇಂಥ ಉದ್ಯಮದಲ್ಲಿ ಕೂಲಿಗಳಾಗಲು ಮಾತ್ರ ಸಾಧ್ಯವಾಯಿತು. ಈಗ ಅದು ತಾವು ಒಡೆಯರು ಅಂದುಕೊಂಡಿದ್ದ ರೈತರ ಮೇಲೆ ಎರಗಿ ಅವರ ಸಾವನ್ನು ಬಹಳ ಸುಲಭ ಮಾಡಿದೆ. ಯಾವೊತ್ತೂ ಈ ದೇಶದಲ್ಲಿ ಬಂಡವಾಳವನ್ನೇ ಕಾಣದ ದಲಿತರು ತಮ್ಮನ್ನು ಎಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಾಯುತ್ತಾ ಕೂರುವಂತಾಗಿದೆ. ಸರ್ಕಾರಿ ಉದ್ಯೋಗಗಳನ್ನು ಬಿಟ್ಟಲ್ಲಿ ಅವರು ಶತಮಾನಗಳಿಂದ ಅವರಿವರ ಮನೆಬಾಗಿಲು ಕಾದಂತೆ ಹಳೆ ವೃತ್ತಿಗೆ ಹಿಂತಿರುಗಬೇಕಾಗುತ್ತದೇನೋ.

ಬೇರೆಲ್ಲರಿಗಿಂತ ಭೂಮಿಯನ್ನು ಅವಲಂಬಿಸಿರುವವರು ಜಾಗತೀಕರಣಕ್ಕೆ ಬಹಳವಾಗಿ ಹೆದರಿಕೊಂಡಿದ್ದಾರೆ. ಅವರಲ್ಲಿ ಈಗ ಬಂಡವಾಳವೆ ಸಂಗ್ರಹವಾಗುತ್ತಿಲ್ಲ. ಹೀಗಾಗಿ ಅವರ ಸಾಂಪ್ರದಾಯಿಕ ಯಜಮಾನಿಕೆ ಕುಸಿದಿದೆ. ಏನೂ ಯೋಚನೆ ಇಲ್ಲದಂತೆ ಇರುವವರೆಂದರೆ ಕೂಲಿಯ ಜನ ಎಂದು ನನಗೆ ಅನಿಸುತ್ತದೆ. ನಾವು ಇರುವುದೆ ಹೀಗೆ ಎಂದು ಅವರು ಸುಮ್ಮನಿದ್ದಿರಬಹುದು. ಇದೆಲ್ಲದರ ಪರಿಣಾಮ ಮೇಲು ಮತ್ತು ಮಧ್ಯಮ ಜಾತಿ ಮತ್ತು ವರ್ಗದವರು ತಮ್ಮ ಮುದಿಸಿಂಹವನ್ನು ಮುಂದೆ ಮಾಡಿಕೊಂಡು ಮುನ್ನುಗ್ಗುತ್ತಿರುವುದು. ಮತ್ತೊಂದು ಕಡೆ ಆಳದಿಂದ ಮತ್ತು ನಿಧಾನವಾಗಿ ಕೆಳ ಮತ್ತು ತಳ ಜನವರ್ಗಗಳು ತಮ್ಮ ನಾಯಕತ್ವದ ಹೊಸ ಸಾಧ್ಯತೆಗಳನ್ನು ಹುಡುಕುತ್ತಿದ್ದಾರೆ. ಇವರ ಈ ನಾಯಕತ್ವದ ಹುಡುಕಾಟಕ್ಕೆ ಬೆಂಬಲವಾಗಿರುವುದು ಇವರಿಗಿರುವ ಸಮೃದ್ಧ ಜಾನಪದ ಸಂಪತ್ತು ಮತ್ತು ಇತಿಹಾಸ. ಇವರು ಕತ್ತೆಯನ್ನು ಕುದುರೆ ಎಂದು ತಿಳಿದು ಹತ್ತಬಾರದಷ್ಟೆ!

ಇಂಥ ಸನ್ನಿವೇಶದಲ್ಲಿ ಜನಪದ ನಾಯಕತ್ವದ ಬಗ್ಗೆ ಚಿಂತಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂಬುದು ನನ್ನ ಭಾವನೆ. ಮೂರು ಸ್ಥರದಲ್ಲಿ ಈ ನಾಯಕತ್ವವನ್ನು ಹುಡುಕಬಹುದೆನಿಸಿದೆ.



ಚಿತ್ರ : ಜಾನ್ ಸುಂದರ್

ಪ್ರಭು ಸಂಸ್ಕೃತಿ ಆಚರಣೆಯಲ್ಲಿ ಇದ್ದಾಗ, ಅರಸು, ಕಲಚೂರ್ಯ...ಮುಂತಾದ ಚಿಕ್ಕ ಜನಪದಗಳು ಕೂಡಾ ರಾಜ್ಯಾಧಿಕಾರವನ್ನು ಹಿಡಿದಿದ್ದವು. ಆದರೆ ಈ ಪ್ರಜಾಪ್ರಭುತ್ವದಲ್ಲಿ ಅದು ಸಾಧ್ಯವಾಗದಿರುವುದು ಶೋಚನೀಯ. ಇದಕ್ಕೆ ಬಹುಮತ ರಾಜಕೀಯ ಕಾರಣವಾಗಿದೆ ಮತ್ತು ಈ ಬಹುಮತ ಜಾತಿಯ ಸ್ವರೂಪದಲ್ಲಿದೆ ಎಂದು ಅವರು ತಿಳಿದಿದ್ದಾರೆ. ಇತ್ತೀಚಿನ ದಿನಗಳಲ್ಲಿ ತಿಗಳ, ಬೆಸ್ತ, ಅಗಸ, ಬೇಡ ಜಂಗಮ ಈ ಮುಂತಾದ ಜಾತಿಗಳು ಮಠಗಳ ಸ್ಥಾಪನೆಗೆ ಹೊರಟಿರುವುದರ ಉದ್ದೇಶ ಭಾರತದಲ್ಲಿ ತಾವೂ ಕೂಡ ಸಾಂಸ್ಕೃತಿಕ ಯಜಮಾನಿಕೆಯನ್ನು ಉಳಿಸಿಕೊಳ್ಳಬೇಕು ಎಂಬುದೇ ಆಗಿದೆ. ದುರ್ದೈವವಶಾತ್ ಮಠ ತಮ್ಮ ಅಭಿವೃದ್ಧಿಯ ಕಂಟೆಂಟ್ ಹೊಂದಿಲ್ಲ ಎಂಬುದು ಈ ಸಮುದಾಯಗಳ ಗಮನಕ್ಕೆ ಬಂದಿಲ್ಲ. ಬ್ರಾಹ್ಮಣಿಕೆಗೆ ಹೊರತಾದ ಸಾಂಸ್ಕೃತಿಕ ಅಭಿವೃದ್ಧಿ ತಂತ್ರ ಮತ್ತು ಸಲಕರಣೆಗಳನ್ನು ಕಂಡುಕೊಳ್ಳದ ಮಾನಸಿಕ ದಾರಿದ್ರ್ಯವೇ ಇದಕ್ಕೆ ಕಾರಣ ಎನ್ನುವುದು ನನ್ನ ಅಭಿಪ್ರಾಯ.

1. ಸಂಸ್ಕೃತಿ ಇತಿಹಾಸ ಬಲ್ಲ ಜಾತಿಯೊಳಗಿನ ನಾಯಕನನ್ನು ಆಯ್ದುಕೊಳ್ಳುವುದು

ಎಂದರೆ ಒಂದು ಜಾತಿಯಲ್ಲಿ ಹುಟ್ಟಿದ ಕಾರಣಕ್ಕೆ ಒಬ್ಬ ವ್ಯಕ್ತಿ ಅಪರಾಧಿ ಅಲ್ಲ. ಬೆಳೆಯುತ್ತ ಆತ ಭಾರತದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುತ್ತಾನಾದರೆ ಈ ದೇಶದ ಎಲ್ಲ ಜನರ ಬಗ್ಗೆ ಹೇಗೆ ಸ್ಪಂದಿಸಬೇಕು ಎಂದು ತಿಳಿಯುತ್ತಾನೆ. ರಾಜಕೀಯವನ್ನು ಸಂಸ್ಕೃತಿಯ ಒಂದು ಭಾಗವಾಗಿ ನೋಡುವ ಜನಪ್ರತಿನಿಧಿಗಳು ಹೆಚ್ಚಾದರೆ ಅಷ್ಟರಮಟ್ಟಿಗೆ ನಮ್ಮ ಸಾಮಾಜಿಕ ಅಪರಾಧಗಳು ಕಡಿಮೆಯಾಗುತ್ತವೆ. ಧರ್ಮದ ಕೋಣಗಳ ಗುದ್ದಾಟವನ್ನು ಒಂದು ಕಡೆಗೆ ಇರಿಸಿ; ಅವು ಧರ್ಮ ಮತ್ತು ರಾಜಕೀಯ ಕೇಂದ್ರೀಕರಣ ಪ್ರಾಪ್ತಿಗಾಗಿ ಹೋರಾಡುತ್ತಿವೆ; ಈ ಹೊತ್ತೂ ಒಂದೆ ಕೆರೆಯಲ್ಲಿ ದಲಿತನನ್ನು ನೀರು ಬಳಸಲು ಬಿಡುತ್ತಿಲ್ಲ ಎಂಬ ನೆನಪು ಮಾತ್ರ ಸಾಕು, ನಮ್ಮ ಸಾಂಸ್ಕೃತಿಕ ಬರ್ಬರತೆ ನಮ್ಮನ್ನು ತಲ್ಲಣಗೊಳಿಸುತ್ತದೆ. ನಾವು ಎಷ್ಟೆ ದೊಡ್ಡ ಯೋಜನೆಗಳನ್ನು ಹಾಕಿದರೂ ನಮ್ಮೊಳಗೆ ಕೂಡಿ ಬಾಳುವುದನ್ನು ಕಲಿಸದಿದ್ದರೆ ನಾವು; ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಕಳ್ಳತನ ಮಾಡುತ್ತಿದ್ದೇವೆ ಎಂದು ತಿಳಿಯಬೇಕು.

2. ಸ್ಥಳೀಯತೆಯಿಂದ ರಾಷ್ಟ್ರನಾಯಕನನ್ನು ಗುರುತಿಸುವುದು.

ಕೊನೆಯವನಿಗೆ ಅಧಿಕಾರ ಈ ಹೊತ್ತು ಸಾಧ್ಯವಾಗಿಲ್ಲ. ಶ್ರೀ ಜಗಜೀವನರಾಂ ಪ್ರಧಾನಿಯಾಗುವ ಸಂದರ್ಭಕ್ಕೇ ಜನತಾ ಪಕ್ಷ ವಿಸರ್ಜನೆಯಾಯಿತಲ್ಲ! ಸ್ಥಳೀಯತೆ ಎನ್ನುವುದು ಕೇವಲ ಭೂ ಪ್ರದೇಶ ಅಲ್ಲ; ಜ್ಞಾನ ಮತ್ತು ಸಂಪನ್ಮೂಲಗಳ ಸೋಪಜ್ಞತೆ, ಸ್ಥಳೀಯ ಪಾಳ್ಳೇಗಾರರು ಅಥವಾ ಪುಂಡುಪೋಕರಿಗಳನ್ನು ಗಮನದಲ್ಲಿಟ್ಟುಕೊಂಡು ಸೃಜನಭೂಮಿಯನ್ನು ನಿರಾಕರಿಸುವುದು ಅಥವಾ ಸಂಕುಚಿತವಾಗಿ ನೋಡುವುದು ಜಾತಿ ಶ್ರೇಷ್ಠ ಮತ್ತು ವರ್ಗ ಶ್ರೇಷ್ಠತೆಯಿಂದ ಬಂದ ಹುಂಬತನ. ಇಡೀ ದೇಶ ಪೊಟೆನ್‌ಷಿಯಲ್ ಆಗಬೇಕಾದರೆ ಸ್ಥಳೀಯತೆ ನೋಯದಂತೆ ನೋಡಿಕೊಳ್ಳಬೇಕು. ಸ್ಥಳೀಯತೆ ಎಂಬುದು ಈ ದೇಶದ ಭೂ ಭಾಗದಲ್ಲಿ ಅಲ್ಲದೆ ನಿರ್ಲಕ್ಷಿತ ಜಾತಿ, ಪಂಗಡ, ಫಿರ್ಕ, ಬಳಿಗಳ ಪಾರಂಪರಿಕ ಜ್ಞಾನವೂ ಆಗಿದೆ. ಒಂದು ಚಿಕ್ಕ ಸಮುದಾಯದ ಡಿ. ದೇವರಾಜ ಅರಸು, ಕರ್ನಾಟಕವನ್ನು ಮುಖ್ಯ ಮಂತ್ರಿಯಾಗಿ ಪ್ರತಿನಿಧಿಸಿದಾಗ ಕರ್ನಾಟಕ ಭಾರತದ ಭೂಪಟದಲ್ಲಿ ಹೇಗೆ ದಾಖಲಾಯಿತು ಎಂಬುದನ್ನು ನಾನು ಪ್ರತ್ಯೇಕ ತಿಳಿಸಬೇಕಾಗಿಲ್ಲ. ದಕ್ಷಿಣ ಭಾರತದವರು ಎಂದರೆ ಮದ್ರಾಸಿಗಳು ಎಂದು ತಿಳಿದಿದ್ದ ಉತ್ತರ ಭಾರತದವರಿಗೆ ಅರಸು ಹೊಸ ಪಾಠ ಕಲಿಸಿದರಲ್ಲ!

3. ಜನಪದ ನಾಯಕನ ಆವಿಷ್ಕಾರ

ಜಾನ್ ಕೆನಡಿಯನ್ನು, ಗ್ರೊರ್ಬಚೆವ್ ಅವರನ್ನು, ಗಡಾಫಿ ಅವರನ್ನು ಯಾರೂ ಜಾತಿ ಅಥವಾ ಒಂದು ಧರ್ಮದ ನಾಯಕ ಅನ್ನಲಿಲ್ಲ. ಭಾರತದಲ್ಲಿ ಮೂರು ತಿಂಗಳ ಪ್ರಧಾನಿಗಳನ್ನು ಬಿಟ್ಟರೆ ಆ ಸ್ಥಾನ ಮಡಿಯಾಗಿಯೆ ಉಳಿಯಿತಲ್ಲ! ಕಾರಣ ಕೇಳಿದರೆ, ಜಾತಿಯ ಹೊರಗೆ ಶ್ರೇಷ್ಠತೆ ನಿರ್ವಹಿಸಲ್ಪಟ್ಟಿಲ್ಲ. ಸ್ಥಳೀಯತೆ, ದಲಿತ ಮತ್ತು ಕೆಳ ತಳ ಪಂಗಡಗಳು ಕೇಂದ್ರ ಆಯ್ಕೆಗೆ ಮನ್ನಿಸಲ್ಪಟ್ಟಿಲ್ಲ. ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲೂ ನಮ್ಮಲ್ಲಿ ಜ್ಞಾನ, ಶ್ರೇಷ್ಠತೆ, ಸಂಪತ್ತು ಮತ್ತು ಸಂಬಂಧಾತ್ಮ ಕತೆಗಳು ಜಾತಿ ಶ್ರೇಷ್ಠತೆಯ ಮೇಲೆಯೇ ಪರಿಗಣಿಸಲ್ಪಡುತ್ತಿವೆ. ಈ ಭೂಮಿಯ ಜ್ಞಾನ ಮತ್ತು ಭೂಮಿ, ನಾಯಕ ಆಗದಿದ್ದಲ್ಲಿ ಜನಪದ ನಾಯಕ ಹುಟ್ಟುವುದು ಎಲ್ಲಿ? ●

ಮಠಾಧೀಶರ ಸಮಾವೇಶ-ಒಂದು ಚಿಂತನೆ

> ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ- 'ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ'-'ಲಿಂಗ ಪ್ರತಿಷ್ಠೆ ಮಾಡಿದವರಿಗೆ ನಾಮಕ ನರಕ' ಎಂದು ಮುಂತಾಗಿ ಒಂದೇ ಸಮ ಶರಣರೆಲ್ಲ ಹೇಳಿದ್ದರೂ ಅದನ್ನೆಲ್ಲ ಮರೆತು ವಿರಕ್ತ ಸ್ವಾಮೀಜಿಗಳು ನಡೆದಿದ್ದಾರೆ. ಬಾಯಲ್ಲಿ ವಚನ ಪಠನವಾದರೂ ಕ್ರಿಯೆಯಲ್ಲಿ ಪೌರೋಹಿತ್ಯದ ದರ್ಬಾರು. ತಮ್ಮ ಮಠಗಳಲೆಲ್ಲ ವಚನ ಪಠನ ನಡೆಸುವುದಕ್ಕಿಂತ, ಸಂಸ್ಕೃತ ಪಾಠಶಾಲೆಗಳನ್ನು ಆರಂಭಿಸುವುದೇ ಇವರಿಗೆ ತುರಾಯಿ. ಸರಳತೆ-ಸಜ್ಜನಿಕೆ-ಜಾತ್ಯಾತೀತ ಭಾವನೆಯನ್ನು ಇವರಲ್ಲಿ ದೀಪ ಹಚ್ಚಿ ಹುಡುಕಬೇಕು.
>
> ○ ವಿಶ್ವಾರಾಧ್ಯ ಸತ್ಯಂಪೇಟೆ

ಇತ್ತೀಚೆಗೆ ಕೂಡಲ ಸಂಗಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಡಿಯಲ್ಲಿ ಗುರು ಮತ್ತು ವಿರಕ್ತ ಪರಂಪರೆಯ ಹಲವಾರು ಮಠಾಧೀಶರು ಸಮಾವೇಶಗೊಂಡರು. ಇದೊಂದು ಐತಿಹಾಸಿಕ ಕಾರ್ಯಕ್ರಮ ಎಂದು ಈಗಾಗಲೇ ಬಹಳಷ್ಟು ಜನ ಅಭಿಪ್ರಾಯಪಟ್ಟಿದ್ದಾರೆ. ಕೆಲವು ಜನಗಳಂತೂ ಲಿಂಗಾಮತರಲ್ಲಿರುವ ಎಲ್ಲಾ ಒಳಪಂಗಡಗಳು ಅಳಿಸಿ ಹೋಗಿವೆ, ಎಂಬಷ್ಟು ಸಂಭ್ರಮದಿಂದ ಕುಣಿದಾಡಿದ್ದಾರೆ. ಇಷ್ಟು ವರ್ಷಗಳ ತರುವಾಯವಾದರೂ ಗುರು-ವಿರಕ್ತ ಪರಂಪರೆಯ ಸ್ವಾಮೀಜಿಗಳು ಕನಿಷ್ಠ ಪಕ್ಷ ಒಂದೇ ವೇದಿಕೆಯ ಮೇಲಾದರೂ ಸಮಾನವಾಗಿ ಕುಳಿತುಕೊಂಡಿದ್ದಾರಲ್ಲ ಎಂಬ ಸಮಾಧಾನ ಕೆಲವರಿಗೆ. ಹಲವು ಜನ ರಾಜಕಾರಣಿಗಳಂತೂ ಓಟು ಕೇಳಲು ಮತದಾರರ ಹತ್ತಿರ ಹೋಗುವ ನಮ್ಮ ಕೆಲಸ ಮತ್ತಷ್ಟು ಹಗುರವಾಯಿತು ಎಂದು ನಿರುಮ್ಮಳವಾಗಿದ್ದಾರೆ.

ಆದರೆ ವಚನ ಸಾಹಿತ್ಯದ ವಿದ್ಯಾರ್ಥಿಯಾದ ನನಗಂತೂ ಸ್ವಾಮೀಜಿಗಳ ಈ ರೌಲು ಕೂಟ ಅಥವಾ ಪ್ರಹಸನ ಕಂಡು ತಮಾಷೆ ಮತ್ತು ದಿಗಿಲು ಏಕಕಾಲದಲ್ಲಿ ಉಂಟಾಗುತ್ತಿದೆ. ತಮಾಷೆ ಏಕೆಂದರೆ: ಕ್ರಿ.ಶ., ಕ್ರಿ.ಪೂ. ಇಲ್ಲದಂದು ಅಂದರೆ ಭೂಮಿಯ ಮೇಲೆ ಮಾನವ ಜನ್ಮ ತಳೆಯುವುದಕ್ಕಿಂತಲೂ ಪೂರ್ವದಲ್ಲಿ ಸ್ವರ್ಗದಲ್ಲಿಯೇ ಶ್ರೀ ರೇಣುಕರು ವೀರಶೈವ ಧರ್ಮವನ್ನು ಪರಶಿವನಿಗೆ ಬೋಧಿಸುವ ಮೂಲಕ ಸ್ಥಾಪಿಸಿದರು ಎಂದು ಹೇಳಿಕೊಂಡ ತಿರುಗುವ ಸ್ವಾಮೀಜಿಗಳ ದಂಡೇ ಒಂದು ಕಡೆ ಇದೆ. ಮತ್ತು ಇವರುಗಳು ಎಂಥೆಂಥ ಅಧ್ವಾನದ ಸಂಗತಿಗಳನ್ನು ಯಾವ ಎಗ್ಗಿಲ್ಲದೆ ಹೇಳಿಕೊಂಡು ಬರುತ್ತಿದ್ದಾರೆಂದರೆ: "ವೀರಶೈವ ಧರ್ಮವನ್ನು ಸಂಸ್ಥಾಪಿಸಿದ ರೇಣುಕರು ಆಯೋನಿಜರಂತೆ ಅಂದರೆ ಕಲ್ಲಿನಿಂದ ಬುದುಗ್ಗನೆ ಎದ್ದು ಬಂದ ಇವರು ಲಿಂಗೋದ್ಭವರಂತೆ. ಹಳ್ಳಿಗಾಡಿನ ಭಾಷೆಯಲ್ಲಿ ಹೇಳಬಹುದಾದರೆ ಅವ್ವ-ಅಪ್ಪನ ದೈಹಿಕ ಸಂಪರ್ಕ ಇಲ್ಲದೆ, ಕಲ್ಲಲ್ಲೆ ಹುಟ್ಟಿ ಬಂದವರಂತೆ!

ಇಂಥ ಅವೈಜ್ಞಾನಿಕ ಹಾಗೂ ತೀರಾ ಬಾಲಿಷವಾದ ಮಾತುಗಳನ್ನು ಈ ಪೀಡಾ(ಠಾ)ಚಾರ್ಯರು ಇಂದಿಗೂ ಹೇಳುತ್ತ ನಡೆದಿದ್ದಾರೆ. ನಾವು-ನೀವೆಲ್ಲ ಇಂಥ ಅರ್ಥಹೀನ ಮಾತುಗಳನ್ನು ನಂಬಬೇಕಂತೆ. ಏಕೆಂದರೆ ನದಿ ಮೂಲ, ಋಷಿ ಮೂಲವನ್ನು ಕೇಳಬಾರದು ಅನ್ನುತ್ತಾರಲ್ಲ ಹಾಗೆ ಈ ಲಿಂಗೋದ್ಭವರ ಇತಿವೃತ್ತವನ್ನೆಲ್ಲ ಕೆದಕಬಾರದು. ಹಾಗಂತ "ರಂಭಾಪುರಿ ಬೆಳಗು" ಪತ್ರಿಕೆಯಲ್ಲಿ ರಂಭಾಪುರಿ ಜಗದ್ಗುರುಗಳು ಅಪ್ಪಣೆ ಬೇರೆ ಕೊಡಿಸಿದ್ದಾರೆ. ಈ ಮಹಾರಾಮರ ಹುಟ್ಟು ಹೇಗಾದರೂ ಇರಲಿ ಎಂದು ಅದನ್ನೊಂದು ಬದಿಗೆ ಇರಿಸಿ ನಾವು ಈ ಜಗದ್ಗುರುಗಳು ಮಾಡಿದ ಸಾಧನೆಗಳು ಯಾವುವು? ಇವರೆಲ್ಲ ಯಾವ ಕಾಲ ಘಟ್ಟದಲ್ಲಿ ಜೀವಿಸಿದ್ದರು? ಈ ಆಚಾರ್ಯರುಗಳು ಅಂದು ಮಾಡಿರಬಹುದಾದ ಘನಕಾರ್ಯ ಯಾವುವು? ಇವರು ಬರೆದ ಪುಸ್ತಕಗಳೇನಾದರೂ ಇವೆಯೆ? ಇದ್ದರೆ ಅವು ಯಾವ ಭಾಷೆಯಲ್ಲಿ ಇವೆ?-ಎಂದು ವಿವರವಾಗಿ ಕೇಳುತ್ತಿದ್ದರೆ ಸಮರ್ಪಕ ಉತ್ತರ ಗೊತ್ತಿಲ್ಲದ ಇಂದಿನ ಪಂಚಾಚಾರ್ಯ ಜಗದ್ಗುರುಗಳು ಥಟ್ಟನೆ ಎಗರಿ ಬೀಳುತ್ತಾರೆ.

ಈ ಪಂಚಾಚಾರ್ಯ ಜಗದ್ಗುರುಗಳು ಇದುವರೆಗೆ ವೀರಶೈವ ಧರ್ಮೀಯರಿಗೆ ಮಾಡಿದ ಒಂದೇ ಒಂದು ಉಪಕಾರವೆಂದರೆ ಅಡ್ಡ ಪಲ್ಲಕ್ಕಿಯಲ್ಲಿ ಮೆರೆದಿರುವುದು. ಇವರು ಪಲ್ಲಕ್ಕಿಯಲ್ಲಿ ಮೆರೆಯುತ್ತಿದ್ದರೆ 'ಧರ್ಮ' ತಂತಾನೇ ಉದ್ಧಾರವಾಗುತ್ತದಂತೆ. 'ಮಾನವ ಧರ್ಮಕ್ಕೆ ಜಯವಾಗಲಿ' ಎಂಬ ಘೋಷಣೆಯನ್ನು ಕೂಗಿಸುತ್ತ ಅದೇ ಮಾನವರ ಹೆಗಲ ಮೇಲೇರಿ ಮೆರೆವ ಇವ ಕ್ರೌರ್ಯಕ್ಕೆ ಹೇಗೆ ಪ್ರತಿಕ್ರಿಯಿಸಬೇಕೋ? ಈ ಮಹಾಶಯರುಗಳು ಬಂಗಾರದ ಕಿರೀಟ ಧರಿಸುವುದು, ವಜ್ರದ ಉಂಗುರ ತೊಡುವುದು, ಬೆಲೆ ಬಾಳುವ ಬಟ್ಟೆ ಉಟ್ಟುಕೊಳ್ಳುವುದು, ಮೃಷ್ಟಾನ ಭೋಜನವನ್ನು ಸವಿಯುವುದು, ಹತ್ತಾರು ಲಕ್ಷಗಳ ಲಗ್ಝರಿ ಕಾರುಗಳಲ್ಲಿ ಓಡಾಡುವುದು ತಮಗಾಗಿ ಅಲ್ಲವಂತೆ. ಇದೆಲ್ಲ ವೈಭವ ಯಾಕೆಂದರೆ? ನಮ್ಮನ್ನು ನೋಡುತ್ತ-ನೋಡುತ್ತ ವೀರಶೈವರೆಲ್ಲರೂ ಉದ್ಧಾರವಾಗಲಿ ಎಂಬ ಕಾರಣಕ್ಕಾಗಿಯಂತೆ!! ಅತ್ಯಂತ ಏಕಾಂತದಲ್ಲಿ ಮಾಡಬೇಕಾದ ಲಿಂಗಾನುಸಂಧಾನವನ್ನು ಬಟಾ-ಬಯಲಿಗಿಟ್ಟು ಜನರನ್ನು ಕಲೆ ಹಾಕುತ್ತಾರೆ. ಆ ಲಿಂಗಕ್ಕೆ ಬಿಲ್ವಾರ್ಚನೆ, ಹೂವಿನ ಅರ್ಚನೆ, ಕುಂಕುಮ ಗಂಧ, ಧೂಪಾರತಿ, ದೀಪಾರತಿಯನ್ನು ಬಂಗಾರದ ಪರಿಕರಗಳಿಂದ ಎತ್ತಿದ್ದೇ ಎತ್ತಿದ್ದು ಲಿಂಗಪೂಜೆ ಅದೊಂದು ಆತ್ಮನಿರೀಕ್ಷಣೆಯ ಕ್ರಿಯೆಯಾಗದೆ, ವ್ಯಾಪಾರದ ಸರಕಾಗಿದೆ. ಇಂಥ ಸ್ವಾಮೀಜಿಗಳನ್ನು ಕಂಡಾಗಲೆಲ್ಲ ನನಗೆ ಅದೇಕೋ ಬೀದಿಯ ಹಾವಾಡಿಗರು ನೆನಪಾಗುತ್ತಾರೆ.

ಇವರ ಹತ್ತಿರ ಹೋದ ಯಾವ ಭಕ್ತರಿಗಾದರೂ ಇವರು 'ಲಿಂಗ' ಅಂದರೆ ಏನು? 'ಜಂಗಮ' ಹಾಗೆಂದರೇನು? ಯಾವುದು ಕಾಯಕ'? 'ನಿಷ್ಕಾಮ ಭಕ್ತಿ'-ಅಂದರೇನು? ಪಂಚಾಚಾರ ಯಾವುವು? ಷಟಸ್ಥಲ ಅಂದರೆ ಅವು ಯಾವವು? 'ಪ್ರಸಾದ' - 'ದಾಸೋಹ'ಗಳ ಬಗ್ಗೆ ಎಂದಾದರೂ ಯಾವತ್ತಾದರೂ, ಯಾರಿಗಾದರೂ ಹೇಳಿದ ನೆನಪಿದೆಯೆ ಇವರಿಗೆ? ಲಿಂಗಾಯತ ಸಮುದಾಯದ ಒಟ್ಟು ಜನತೆ ಇಂದು ಹಲವಾರು ಕ್ಷೇತ್ರಗಳಲ್ಲಿ ಕೆಟ್ಟು ಕೆರ ಹಿಡಿದು ಹೊರಟಿದ್ದಾರೆ. ಲಿಂಗ ಅನುಸಂಧಾನದ ಮಾರ್ಗ ಹೇಳಿಕೊಡದೆ ಇರುವುದರಿಂದ ಇವರುಗಳೆಲ್ಲ "ಓಂ ಶಾಂತಿಯೋ"-ಸಹಜ ಮಾರ್ಗಕ್ಕೋ ಮತ್ತೆ ಯಾವ್ಯಾವುದರಲ್ಲೋ ಹರಿದು ಹೊರಟಿದ್ದಾರೆ. ಈ ಬಗ್ಗೆ ಇವರಿಗೆ ಕನಿಷ್ಠ ಎಚ್ಚರಿಕೆಯಾದರೂ ಇದೆಯೆ?

ಇವೆಲ್ಲವುಗಳ ಬದಲಾಗಿ ತಮ್ಮ ಪಾದಪೂಜೆಯನ್ನು! ಗದ್ದುಗೆ ಪೂಜೆಯನ್ನು ಎಷ್ಟು ವಿಜೃಂಭಣೆಯಿಂದ ಮಾಡಿಸಿಕೊಳ್ಳಬೇಕೆಂಬುದು ಇವರಿಗೆ ಚೆನ್ನಾಗಿ ಗೊತ್ತು. ತಮ್ಮ ಮೆ(ಲು)ರವಣಿಗೆಯನ್ನು ಎಲ್ಲಿಂದ-ಎಷ್ಟು ದೂರ-ಹೇಗೆ? ಮಾಡಿಸಿಕೊಳ್ಳಬೇಕೆಂಬ ಬಗ್ಗೆ ಇವರಿಗೆ ಚೆನ್ನಾಗಿ ಗೊತ್ತು. ತಮ್ಮ ಪಾದ ಭಕ್ತನ ಮನೆಯಲ್ಲಿ ಇಷ್ಟುರೆ ಇಷ್ಟು

ರೇಟು. ಅಂಗಡಿಯಲ್ಲಿಟ್ಟರೆ ಮತ್ತೊಂದಿಷ್ಟು. ಭಕ್ತನ ಮನೆಯಲ್ಲೇ ಮಲಗಿದ್ದರೆ ಇನ್ನೊಂದಿಷ್ಟು. ಎಂದು ರೇಟುಗಳನ್ನು ಫಿಕ್ಸ್ ಮಾಡಿಕೊಂಡಿದ್ದಾರೆ. ಇವರ (ಅ)ಮೃತ ಹಸ್ತ ತಲೆಯ ಮೇಲೆ ಇಟ್ಟರೆ ಮಗದೊಂದಿಷ್ಟು ಎಂದು ಹೇಳಿ ಲಿಂಗಾಯತರ ತಲೆಯನ್ನೆಲ್ಲ ನುಣ್ಣಗೆ ಬೋಳಿಸಿದ್ದಾರೆ. ನಿಜವಾದ ಅರ್ಥದಲ್ಲಿ ಹೇಳಬೇಕೆಂದರೆ ಪಂಚ ಪೀಠದಲ್ಲಿರುವ ಜಗದ್ಗುರುಗಳೆಲ್ಲ ಬಹುತೇಕರು ಉಂಡುಂಡು ಮಲಗಿದರು ಎಂದು ಹೇಳದೆ ವಿಧಿಯಿಲ್ಲ. ಇವರ ಅವಾಥವ್ಯವಾದ ಉ(ಮೆ)ರವಣಿಗೆ, ಆಡಂಬರದ ಪೂಜೆ, ಅವಿವೇಕದ ಬಾಲಿಷ ಮಾತುಗಳು, ಅರ್ಥಹೀನ ಆಚರಣೆಗಳಿಂದ ಯಾರಾದರೂ ಉದ್ಧಾರವಾಗಬಹುದೆ? ಯಾರೇ ಇವರ ಹತ್ತಿರ ಹೋದರೂ ಮೊದಲು ನಮಗೆ ತೋರಿಸುವುದು ತಮ್ಮ ಭಾತುಕೊಂಡ ಪಾದಗಳನ್ನು. ಅನಂತರ ಕಾಂಗ್ರೆಸ್ ಪಕ್ಷದ ನೇತಾರರಂತೆ ಬಲಗೈಯನ್ನು ಮೇಲೆತ್ತಿ ಆಶೀರ್ವದಿಸುವುದು. ಇದು ಬಿಟ್ಟು ಇವರು ಇದುವರೆಗೆ ಅದೇನನ್ನು ಮಾಡಿದ್ದಾರೋ? ನನಗಂತೂ ಅರ್ಥವಾಗುತ್ತಿಲ್ಲ.

ಪ್ರಜಾಪ್ರಭುತ್ವದ ಇಂದಿನ ದಿನಮಾನಗಳಲ್ಲಿ ಈ ವ್ಯವಸ್ಥೆ ಕೊಡಮಾಡಿದ ಸ್ಥಾನ-ಮಾನಗಳನ್ನು ಗೌರವಿಸುವುದು ನಮ್ಮೆಲ್ಲರ ಹೊಣೆ. ರಾಜ್ಯಪಾಲರು, ಮುಖ್ಯಮಂತ್ರಿಗಳು, ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಮುಂತಾದವರೆಲ್ಲರನ್ನು ಗೌರವಿಸುವುದು ನಮ್ಮ ಕರ್ತವ್ಯ. ಇವರಿಗೆ ಅದೆಲ್ಲ ನಗಣ್ಯ. ದೇಶದ ರಾಷ್ಟ್ರಪತಿಗಳೇ ಎದುರು ಬಂದರೂ ಖುರ್ಚಿಯನ್ನೂ ಬಿಟ್ಟುಕೊಡದ ಧೂರ್ತತನ. ಅವರೆಲ್ಲರಿಗಿಂತಲೂ ತಾವೇ ಒಂಚೂರು ಎತ್ತರದಲ್ಲಿ ಕುಳಿತುಕೊಳ್ಳಬೇಕೆಂಬ ಕೀಳು ಚಪಲ. ಸಮಾಜದಲ್ಲಿ ದೊಡ್ಡ ದೊಡ್ಡ ಸ್ಥಾನ-ಮಾನ ಪಡೆದಿದ್ದೇವೆ ಎಂದು ತಿಳಕೊಂಡವರು ದೊಡ್ಡಸ್ತಿಕೆಯನ್ನು ಪ್ರದರ್ಶಿಸಬೇಕೆ ಹೊರತು ತಮ್ಮ ಬ್ರಹ್ಮಾಂಡ ದಡ್ಡತನವನ್ನಲ್ಲ! ಎಂಬ ಸಂಗತಿ ಇವರಿಗೆ ಅದು ಹೇಗೆ ತಿಳಿಯುತ್ತಿಲ್ಲವೋ?

ಇಂಥ ಅಜ್ಞಾನದ! ಅವಾಸ್ತವದ ಹಾಗೂ ಹಲವಾರು ಹಳವಂಡಗಳ ಬದುಕನ್ನು ಇಷ್ಟ ಪಡುವ ಪಂಚಾಚಾರ್ಯರು ಬಸವಾದಿ ಶರಣರ ಹತ್ತಿರ ಬರುತ್ತಾರೆಂದರೆ ಯಾರಿಗಾದರೂ ಕ್ಷಣ ದಿಗಿಲಾಗುತ್ತದೆ. ಏಕೆಂದರೆ ಬಸವಾದಿ ಶಿವಶರಣರೆಲ್ಲ ಜನತೆಗೆ ಸಂಬಂಧಿಸಿದವರು. ಬಸವಣ್ಣನವರಂತೂ ಜಗತ್ತಿನ ಮೊಟ್ಟ ಮೊದಲ ಮಾನವತಾವಾದಿ. ಈತನೊಂದು ಪ್ರಶಾಂತವಾದ ಬೆಳಕಿನ ಪುಂಜ. ನಿಷ್ಕಲ್ಮಶವಾದ ಮಹಾ ಬೆಳಗು. ಇಂಥ ಬೆಳಕಿನೊಂದಿಗೆ ಕತ್ತಲೆಯ ಒಡನಾಟವೆ? ಒಂದು ತೀರ-ಮತ್ತೊಂದು ತೀರವನ್ನು ಅದು ಹೇಗೆ ಕೂಡಬಲ್ಲವು? ಒಂದು ಭೂಮಿ, ಮತ್ತೊಂದು ಆಕಾಶ ಇವು ಮತ್ತೊಂದನ್ನು ಅದು ಹೇಗೆ ಸೇರಬಲ್ಲವು? ಈ ಪ್ರಶ್ನೆ ಬರೀ ಲಾಜಿಕ್ ಮಾತ್ರವಾಗಿರದೆ ವಾಸ್ತವ ಪ್ರಶ್ನೆಯೂ ಹೌದು.

ಅಥವಾ ಇನ್ನೊಂದು ನಿಟ್ಟಿನಲ್ಲಿ ಯೋಚಿಸಿ ಹೇಳಬಹುದಾದರೆ ಈ ಕಗ್ಗತ್ತಲುಗಳಿಗೆ (ಪಂಚಾಚಾರ್ಯರಿಗೆ) ಇಂದಿನ ವೈಜ್ಞಾನಿಕ ದಿನಮಾನಗಳಲ್ಲಿ ಕವಡೆ ಕಿಮ್ಮತ್ತು ಸಿಗುತ್ತಿಲ್ಲ. ಎಲ್ಲಿ ತಮ್ಮ ಅಸ್ತಿತ್ವವೇ ನಾಶವಾಗಿ ಹೋಗುತ್ತದೋ ಎಂಬ ಬುಗಿಲಿನಿಂದ ತಾತ್ಕಾಲಿಕವಾಗಿ ಬಸವಾದಿ ಶರಣರನ್ನು ಒಪ್ಪಿಕೊಳ್ಳಲು ಮುಂದಾಗಿರುವರೆ?

ಇಂದಿನ ಬಹುತೇಕ ಮಠಗಳು ವಿಷಬೀಜ ಬಿತ್ತುವ ಭಯೋತ್ಪಾದನಾ ಕೇಂದ್ರಗಳು ಹಾಗೂ ಈ ದುರೀಣ ವ್ಯವಸ್ಥೆಯ ಒಳಗಿರುವವರೆಲ್ಲ 'ಬಿನ್‌ಲಾಡೆನ್'ಗಳು. ಲಿಂಗಾಯತ ಜನ ಸಮುದಾಯವನ್ನು ಹಳ್ಳಕ್ಕೆ ಹಚ್ಚಿ ಅವರಿಂದ ಈಗಾಗಲೇ ಪಡೆದ ದಕ್ಷಿಣೆಯ ಹಣದಲ್ಲಿಯೇ ಕುಬೇರರಾಗಿದ್ದಾರೆ.

ಬಸವಣ್ಣನವರನ್ನು ಹೇಗೋ ಕೆಲ ಕಾಲ ಒಪ್ಪಿಕೊಂಡು ಬಿಟ್ಟಂತೆ ನಂಬಿಸಿದರೆ ಇಡೀ ಲಿಂಗಾಯಿತರೆಲ್ಲ ತಮ್ಮ ಬುಟ್ಟಿಯಲ್ಲಿ ಬೀಳುತ್ತಾರೆ. ಅನಂತರ ಅವರನ್ನೆಲ್ಲ ತಲೆ ತಿಕ್ಕಿ ಹಳ್ಳ ಹಿಡಿಸಿದರಾಯ್ತು! ಎಂಬ ಹುನ್ನಾರವೇನಾದರೂ ಇದ್ದಿರಬಹುದೆ?

ಯಾವುದೇ ವ್ಯಕ್ತಿಯ ವಿಚಾರಗಳನ್ನು, ವ್ಯಕ್ತಿತ್ವವನ್ನು ಎದುರಾ-ಎದುರು ನಿಂತು ವಿರೋಧಿಸುವುದಕ್ಕೆ ಆಗುವುದಿಲ್ಲ ಎಂದಾಗ ಆ ವಿಚಾರ! ವ್ಯಕ್ತಿಯೊಂದಿಗೆ ಸ್ನೇಹ ಬೆಳಸಿಯಾದರೂ ಹಾಳು ಮಾಡಬೇಕೆಂಬ ಹುನ್ನಾರ ಕೆಲವರಿಗೆ ಇರುತ್ತದೆ. ಇಂಥ ಹುನ್ನಾರ ಪಂಚಾಚಾರ್ಯ ಜಗದ್ಗುರುಗಳಿಗೆ ಇಲ್ಲವೆಂದು ಹೇಳುವವರು ಯಾರು? ಬಸವಾದಿ ಶರಣರ ವಿಚಾರಗಳನ್ನೇನೂ ಇವರು ಎಷ್ಟು ಜನ್ಮ ಎತ್ತಿ ಬಂದರೂ ಹಾಳು ಮಾಡಲಿಕ್ಕೆ ಆಗುವುದಿಲ್ಲ ನಿಜ. ಆದರೆ ಅವುಗಳಲ್ಲಿ ಏನೇನೋ ಅಸಂಬದ್ಧ ವಿಚಾರಗಳನ್ನು ತುರುಕಿ ಜನತೆಯನ್ನೂ ಹಳ್ಳಕ್ಕೆ ದೂಡವುದಿಲ್ಲವೆಂದು ಯಾವ ಗ್ಯಾರಂಟಿ ಇದೆ? ಏಕೆಂದರೆ ಬಸವಾದಿ ಶರಣರ ವಿಚಾರಗಳಲ್ಲಿ ಇಂಥ ಪ್ರಗತಿ ವಿರೋಧಿ ಶಕ್ತಿಗಳು ಈಗಾಗಲೇ ಏನೇನೋ ಕಲೆಸಿ ರಾಡಿ ಎಬ್ಬಿಸಿದ್ದಾರೆ. ಲಿಂಗಾಯತರೆಂದು ಕರೆಯಿಸಿಕೊಳ್ಳುವ ಬಹುತೇಕ ಜನಕ್ಕೆ ಇನ್ನೂ ಬಸವಣ್ಣನವರೇ ಗೊತ್ತಿಲ್ಲ. ಇನ್ನು ಅವರ ಸಾಹಿತ್ಯ ಅಂದಿನ ಶರಣ ಸಮೂಹದ ಪರಿಚಯ ದೂರವೇ ಉಳಿಯಿತು. ಇಂಥವರಿಗೆಲ್ಲ ಶರಣರು ಹೇಳಿದ್ದು ಎಂದು ಏನೇನೋ ಗಳುಪುತ್ತ ನಡೆದು ಬಿಟ್ಟರೆ ಇದಕ್ಕೆಲ್ಲ ಯಾರು ಹೊಣೆ? ವೀರಶೈವ ಮಹಾಸಭೆಯ ಅಧ್ಯಕ್ಷರೆ? ಪದಾಧಿಕಾರಿಗಳೇ ಯಾರು?

ಇನ್ನು ವಿರಕ್ತ ಪೀಠದ ಸ್ವಾಮೀಜಿಗಳ ಕತೆಯೋ ಇನ್ನಷ್ಟು ರಂಜಕವಾಗಿದೆ. ಇವರುಗಳಲ್ಲಿ ಕೆಲವು ಜನ ಸ್ವಾಮೀಜಿಗಳನ್ನು ಹೊರತು ಪಡಿಸಿದರೆ ಬಹುತೇಕ ಸ್ವಾಮೀಜಿಗಳ ಹಣೆ ಬರಹವೇನೂ ಪಂಚಾಚಾರ್ಯರಿಗಿಂತ ಭಿನ್ನವಾಗಿಲ್ಲ. ನೀವೊಮ್ಮೆ ಸುಮ್ಮನೆ ವಿರಕ್ತ ಸ್ವಾಮೀಜಿಗಳ ಮಠಗಳನ್ನು ಇಣುಕಿ ನೋಡಿ. ಆ ಮಠದ ಆವರಣಗಳ ತುಂಬೆಲ್ಲ ಹಿಂದಿನ ತಲೆಮಾರಿನ ಸ್ವಾಮೀಜಿಗಳ ಗದ್ದುಗೆಗಳದ್ದೇ ದೊಡ್ಡ ದರ್ಬಾರಿರುತ್ತದೆ. ಆ ಕರ್ತೃ ಗದ್ದುಗೆಗಳ ಪೂಜೆ ಪುನಸ್ಕಾರಕ್ಕೆ ಇವರು ಕೊಡುವ ಕಾಳಜಿ ಮತ್ತಾವುದಕ್ಕೂ ನೀಡುವುದಿಲ್ಲ. ಆವಾಗಾವಾಗ ಆ ಗದ್ದುಗೆಗೆ ಹಾಲಿನ-ಜೇನಿನ ಅಭಿಷೇಕ ಸಾಂಗೋಪಾಂಗವಾಗಿ ಜರುಗುತ್ತವೆ. ಮಠಕ್ಕೆ ಬಂದ ಭಕ್ತರಿಗೆಲ್ಲ ಆ ಕಲ್ಲಿನ ಗದ್ದುಗೆಗೆ ತಲೆ ಹೊಡಕೊಳ್ಳುವ ಪರಿಪಾಠವೊಂದನ್ನು ಬಿಟ್ಟು ಇವರು ಕಲಿಸಿರುವುದಾದರೂ ಏನನ್ನು? ಸ್ಥಾವರವಾಗಿರುವ ಗದ್ದುಗೆಗೆ ಹಣೆ ಚಚ್ಚಿಕೊಂಡರೂ ಅಷ್ಟೇ, ಬಿಟ್ಟರೂ ಅಷ್ಟೇ. ಆದರೆ ಈ ಸತ್ಯವನ್ನು ಜನತೆಗೆ ಹೇಳಿಕೊಡದೆ ಅವರಿಂದ ಒಂದೇ ಸಮ ಸುಲಿದದ್ದೇ ಸುಲಿದದ್ದು. ತಮ್ಮ ಹಾಗೂ ತಮ್ಮ ಹಿರಿಯ ಸ್ವಾಮೀಜಿಗಳ ಫೋಟೋಗಳನ್ನು ಮಠದ ತುಂಬೆಲ್ಲ ನೇತು ಹಾಕಿಕೊಂಡಿರುವ ಇವರೆಲ್ಲ ಅಪ್ಪಿ-ತಪ್ಪಿಯೂ ಬಸವಾದಿ ಶರಣರ ಒಂದೇ ಒಂದು ಭಾವಚಿತ್ರ ಹಾಕಿಕೊಂಡಿರುವುದಿಲ್ಲ. ಕಷ್ಟ-ಕಾರ್ಪಣ್ಯ, ಜಡ್ಡು-ಜಾಪತ್ರೆಗಳಿಂದ ಕಂಗಾಲಾಗಿ ಬಂದಿರುವ ಜನತೆಗೆ ತಾಯಿತ ಕಟ್ಟುವುದು, ನೇಮ ಮಾಡಿಸುವುದು, ಬೂದಿ ಹಂಚುವುದನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ-'ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ'- 'ಲಿಂಗ ಪ್ರತಿಷ್ಠೆ ಮಾಡಿದವರಿಗೆ ನಾಮಕ ನರಕ' ಎಂದು ಮುಂತಾಗಿ ಒಂದೇ ಸಮ ಶರಣರೆಲ್ಲ ಹೇಳಿದ್ದರೂ ಅದನ್ನೆಲ್ಲ ಮರೆತು ವಿರಕ್ತ ಸ್ವಾಮೀಜಿಗಳು ನಡೆದಿದ್ದಾರೆ. ಬ್ರಾಹ್ಮಣ ಪುರೋಹಿತರಂತೆ ಇವರೂ ಬ್ರಾಹ್ಮಣ್ಯಕ್ಕೆ ಜೋತು ಬಿದ್ದಿರುವ ಸನಾತನವಾದಿಗಳೇ ಆಗಿದ್ದಾರೆ. ಬಾಯಲ್ಲಿ ವಚನ ಪಠನವಾದರೂ ಕ್ರಿಯೆಯಲ್ಲಿ ಪೌರೋಹಿತ್ಯದ ದರ್ಬಾರು. ತಮ್ಮ ಮಠಗಳಲೆಲ್ಲ ವಚನ ಪಠನ ನಡೆಸುವುದಕ್ಕಿಂತ, ಸಂಸ್ಕೃತ ಪಾಠಶಾಲೆಗಳನ್ನು ಆರಂಭಿಸುವುದೇ ಇವರಿಗೆ ತುರಾಯಿ. ಸರಳತೆ-ಸಜ್ಜನಿಕೆ-ಜಾತ್ಯಾತೀತ ಭಾವನೆಯನ್ನು ಇವರಲ್ಲಿ ದೀಪ ಹಚ್ಚಿ ಹುಡುಕಬೇಕು. ಮೂಲತಃ 'ಜಂಗಮ' ಎನ್ನುವುದು ಜಾತಿಯಲ್ಲ. ಅದೊಂದು ಔನ್ನತ್ಯ. ಈ ಎತ್ತರಕ್ಕೆ ಯಾರಾದರೂ ಮುಟ್ಟಬಹುದು ಎಂದು ಈ ವಿರಕ್ತಸ್ವಾಮಿಜಿಗಳಿಗೆ ಹೇಳಿ ನೋಡಿ ಇವರೂ ಕ್ಷಣ ತತ್ತರಿಸಿ ಹೋಗುತ್ತಾರೆ.

ಹೀಗೆ ಸಂಪೂರ್ಣ ಪ್ರಗತಿಗೆ ವಿರೋಧವಾಗಿರುವ, ಸತ್ಯವನ್ನು ಒಪ್ಪಿಕೊಳ್ಳುವ ಎದೆಗಾರಿಕೆ ಇಲ್ಲದ ಇಂಥ ಗುರು-ವಿರಕ್ತ ಪರಂಪರೆಯ 'ಜಡ್ಡು'ಗಳು ಒಂದುಗೂಡಿದರೂ ಅಷ್ಟೇ. ಬಿಟ್ಟರೂ ಅಷ್ಟೇ. ಈ ಸನಾತನಿಗಳಿಗೆ ಜಾತಿಯ ಹುತ್ತ ಕಟ್ಟುವುದು ಗೊತ್ತೇ ಹೊರತು ಬಸವಣ್ಣನವರ ವೈಶಾಲ್ಯ ಮನೋಭಾವವನ್ನಲ್ಲ. ಹಾಗಾಗಿ ಇಂದಿನ ಬಹುತೇಕ ಮಠಗಳು ವಿಷಬೀಜ ಬಿತ್ತುವ ಭಯೋತ್ಪಾದನಾ ಕೇಂದ್ರಗಳು ಹಾಗೂ ಈ ದುರೀಣ ವ್ಯವಸ್ಥೆಯ ಒಳಗಿರುವವರೆಲ್ಲ 'ಬಿನ್‌ಲಾಡೆನ್'ಗಳು. ಲಿಂಗಾಯತ ಜನ ಸಮುದಾಯವನ್ನು ಹಳ್ಳಕ್ಕೆ ಹಚ್ಚಿ ಅವರಿಂದ ಈಗಾಗಲೇ ಪಡೆದ ದಕ್ಷಿಣೆಯ ಹಣದಲ್ಲಿಯೇ ಕುಬೇರರಾಗಿದ್ದಾರೆ. ಹಾವು ತಿಂದವರ ನುಡಿಸಬಹುದು. ಗರ ಬಡಿದವರ ನುಡಿಸಬಹುದು, ಆದರೆ ಸಿರಿಗರ ಹೊಡೆದ ಈ ಲಾಡೆನ್‌ಗಳನ್ನು ಯಾರಾದರೂ ತಡವಿ ಉಳಿಯಬಹುದೆ?

ಆದ್ದರಿಂದ ಲಿಂಗಾಯತ (ಜಾತ್ಯಾತೀತ ಸಂಸ್ಥೆಯ ಸದಸ್ಯರು)ರೆಲ್ಲ ಒಂದೆಡೆ ಸೇರಿ ಉತ್ತಂಗಿ ಚೆನ್ನಪ್ಪನವರು ಬಹು ಕಾಲದ ಹಿಂದೆಯೇ ಹೇಳಿದ "ಪಂಚಾಚಾರ್ಯರು ಬಸವಣ್ಣನವರ ಬಹಿರಂಗ ದ್ರೋಹಿಗಳು. ವಿರಕ್ತರು ಅಂತರಂಗ ದ್ರೋಹಿಗಳು" ಎಂಬ ಮಾತನ್ನು ಸರಿಯಾಗಿ ನೆನಪಿಟ್ಟುಕೊಳ್ಳಬೇಕು. ವಚನ ಸಾಹಿತ್ಯವನ್ನೇ ತಾಯಿಯನ್ನಾಗಿ ಸ್ವೀಕರಿಸಿ, ನಮ್ಮ ಅರಿ(ಗುರು)ವನ್ನು ನಾವು ಕಂಡುಕೊಳ್ಳಬೇಕು. ಈ ಮೂಲಕ ಬಸವಾದಿ ಪ್ರಮಥರು ಸೃಜಿಸಿದ ಕಲ್ಯಾಣ ರಾಜ್ಯ ಕಟ್ಟಬೇಕು, ಅಲ್ಲವೆ? ●

ಐ.ಐ.ಟಿ.ಗಳಲ್ಲಿನ ಶೈಕ್ಷಣಿಕ ಭಯೋತ್ಪಾದನೆ

ಭಾರತದ ಪ್ರಸಿದ್ಧ ಬಿಳಿಯಾನೆಗಳಂತಿರುವ ಐ.ಐ.ಟಿ. ಶಿಕ್ಷಣ ಸಂಸ್ಥೆಗಳು 1973ರಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ತಮ್ಮ ಬಾಗಿಲು ತೆರೆದವು. ಅನಂತರದಲ್ಲಿ ಒಂದು ವರ್ಷದ ಪೂರ್ವ ತಯಾರಿಕಾ ವ್ಯಾಸಂಗದ ತಂತ್ರವನ್ನು ನಿಗದಪಡಿಸುತ್ತದೆ. ಅಂದರೆ ಈ ಹಂತದಲ್ಲೇ ಅನೇಕ ದಲಿತ ವಿದ್ಯಾರ್ಥಿಗಳು ಸೋಲನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವಂತಾಗುತ್ತದೆ. ಇದರ ಬಗ್ಗೆ ಹೀಗೊಂದು ವರದಿ.

ಪೂರ್ವ ತಯಾರಿ ವ್ಯಾಸಂಗವು ಸಶಕ್ತತೆಯನ್ನು ನೀಡುವ ಬದಲು ಶಕ್ತಿಹೀನತೆಯನ್ನು ಉಂಟುಮಾಡುತ್ತದೆ. ಇದು ಅವಕಾಶ ವಂಚಿತರನ್ನು ಉದ್ಧಾರಮಾಡುವ ಗಾಂಧಿಯ ಮಾದರಿಯ ಗ್ರಹೀತವಾಗಿದೆ. ಈ ಪೂರ್ವ ತಯಾರಿಕಾ ವ್ಯಾಸಂಗವು 11-12ರ ತರಗತಿಗಳ ಪಠ್ಯಕ್ರಮಗಳನ್ನೇ ಅಧಿಕವಾಗಿ ಹೊಂದಿರುತ್ತದೆ. (ಆರಂಭದಲ್ಲಿ ಇದು ಒಂದು ತಿಂಗಳ ಸಂಗತಿಯಾಗಿದ್ದು, ಈಗ ಅದು ಒಂದು ವರ್ಷಕ್ಕೆ ಚಾಚಿಕೊಂಡಿದೆ) ಈ ಐಐಟಿಗಳಲ್ಲಿ ಸಕಾರಾತ್ಮಕ ಕ್ರಿಯೆಯಾದ ಉದ್ಯೋಗಗಳಲ್ಲೂ ಕಡೆಗಣಿಸುವುದರಿಂದ, ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳಿಗೆ ದ್ವೇಷ ಕಾರುವ ಸವರ್ಣೀಯ ಹಿಂದೂ ಶಿಕ್ಷಕರೇ ಪೂರ್ವ ತಯಾರಿ ವ್ಯಾಸಂಗವನ್ನು ಬೋಧಿಸುತ್ತಾರೆ.

ಮೂಲ : ಸಿರಿಯಾವನ್ ಆನಂದ್ ಅನು : ಡೊಮಿನಿಕ್, ವಿಮಲಾಕ್ಷಿ

ಈ ಸಮಸ್ಯೆಯು ವಿದ್ಯಾರ್ಥಿಗಳನ್ನು ಮೆರಿಟಿನ ಆಧಾರದ ಮೇಲೆ ಮಾತ್ರ ಪ್ರವೇಶ ನೀಡುತ್ತವೆ.

ಕಾನೂನು, ಚರಿತ್ರೆ ಅಥವಾ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬನಿಗೆ/ಳಿಗೆ ಐ.ಐ.ಟಿ. ಮದ್ರಾಸ್, ಕೈಪಿಡಿ, 1999 ಅಧಿಕ ವರ್ಷವೊಂದರ ಪೂರ್ವತಯಾರಿ ವ್ಯಾಸಂಗವನ್ನು ಮುಗಿಸುವಂತೆ ಹೇಳುವುದನ್ನು ಊಹಿಸಿಕೊಳ್ಳಿ. ತದ ನಂತರದಲ್ಲಿ ಎರಡು ಅಥವಾ ನಾಲ್ಕು ವರ್ಷಗಳನ್ನು ಮತ್ತೆ ಶೈಕ್ಷಣಿಕವಾಗಿ ಕಲಿಯುವುದು ಎಷ್ಟು ಸರಿ? ಇದು ನಿಜವಾಗಿಯೂ ದಲಿತ ವಿದ್ಯಾರ್ಥಿ/ನಿಗೆ ಆಗುತ್ತಿದೆಯೆಂದರೆ ನಂಬುವಿರಾ, ನಾಗಪುರ ವಿಶ್ವವಿದ್ಯಾನಿಲಯ ಅಥವಾ ಉಸ್ಮಾನಿಯಾ ಅಥವಾ ಅಣ್ಣಾಮಲೈಗಳಲ್ಲಿ ಇದು ಆಗುತ್ತಿದೆಯೆಂದು ಯೋಚಿಸಿ. ಆದರೆ ಈ ಜಾಗಗಳಲ್ಲಿ ಅದು ನಡೆಯುವುದು ಅಸಾಧ್ಯವೇ ಸರಿ. ಇದು ಆಗುತ್ತಿರುವುದು ಭಾರತೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ ಮಾತ್ರ; ಅವುಗಳ ಬಿ.ಟೆಕ್ ವ್ಯಾಸಂಗಗಳಲ್ಲಿ. ಅನೇಕ ದಲಿತರು ಮತ್ತು ಆದಿವಾಸಿಗಳು ಈ ಐಐಟಿಗಳಲ್ಲಿ ಪ್ರವೇಶ ಪಡೆದಲ್ಲಿ ಅವರಿಗೆ ಮೊದಲು ದೊರೆಯುವ ಮಾರ್ಗದರ್ಶನವೆಂದರೆ ಪೂರ್ವ ತಯಾರಿ ವ್ಯಾಸಂಗವನ್ನು (ಪ್ರಿಪರೇಟರಿ ಕೋರ್ಸ್) ಮುಗಿಸಬೇಕೆನ್ನುವುದು. 1973ರವರೆಗೆ ಯಾವ ಐಐಟಿ ಸಂಸ್ಥೆಗಳೂ ಸಹ ಮೀಸಲಾತಿಯನ್ನು ಅನುಷ್ಠಾನಕ್ಕೆ ತಂದಿರಲಿಲ್ಲ. ಯಾವಾಗ ಈ ಸಂಸ್ಥೆಗಳು ಮೀಸಲಾತಿಯನ್ನು ನೀಡಲಾರಂಭಿಸಿದವೋ ಅಂದಿನಿಂದ ಅವು ಒಲ್ಲದ ಮನಸ್ಸಿನಿಂದಲೇ ಈ ಪೂರ್ವ ತಯಾರಿಕಾ ವ್ಯಾಸಂಗವಾದ ಅಂಕಕಡಿತ ನಿರ್ಬಂಧವನ್ನು ಜಾರಿಗೊಳಿಸಿದವು.

ಜಂಟಿ ಪ್ರವೇಶ ಪರೀಕ್ಷೆಗೆ ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳು ಬಣ್ಣದ ಪ್ರವೇಶ ನಮೂನೆಗಳನ್ನು ನೀಡಬೇಕಾಗಿತ್ತು, (2002ದ ಜೆ. 22 ಪರೀಕ್ಷೆಯಲ್ಲಿ ಬಣ್ಣ ನಸುಕೆಂಪಾಗಿತ್ತು, ಆಮೇಲೆ ಅವರಿಗೆ ಉತ್ತರ ಪತ್ರಿಕೆಗಳು ಸಹ ಬಣ್ಣದವೇ ಆಗಿದ್ದು, ಉಳಿದವರಿಗೆ ಮಾಮೂಲಿ ಉತ್ತರ ಪತ್ರಿಕೆಗಳನ್ನು ನೀಡಲಾಗುತ್ತಿತ್ತು. ದಲಿತರು ಮತ್ತು ಆದಿವಾಸಿಗಳು ಅವುಗಳ ಮೇಲೆ ತಮ್ಮ ಹೆಸರುಗಳನ್ನು ಬರೆಯಬೇಕಾಗಿತ್ತು. ಉಳಿದವರಿಗೆ ಹಾಗೇನೂ ಇರಲಿಲ್ಲ. ಬಣ್ಣವಿಲ್ಲದ ಉತ್ತರ ಪತ್ರಿಕೆಗಳ ನೋಂದಣಿ ಸಂಖ್ಯೆಗಳ ಆದಾರದ ಮೇಲೆ ಮೌಲ್ಯಮಾಪಕರ್‍ಯಾರೂ ವ್ಯಕ್ತಿಯನ್ನು

ಗುರುತಿಸದೆ ಮೌಲ್ಯಮಾಪನ ಮಾಡಬೇಕಾಗುತ್ತಿತ್ತು. ಈ ಪೂರ್ವ ತಯಾರಿ ವ್ಯಾಸಂಗವು ಸಶಕ್ತತೆಯನ್ನು ನೀಡುವ ಬದಲು ಶಕ್ತಿಹೀನತೆಯನ್ನು ಉಂಟುಮಾಡುತ್ತದೆ. ಇದು ಅವಕಾಶ ವಂಚಿತರನ್ನು ಉದ್ಧಾರಮಾಡುವ ಗಾಂಧಿಯ ಮಾದರಿಯ ಗ್ರಹೀತವಾಗಿದೆ. ಈ ಪೂರ್ವ ತಯಾರಿಕಾ ವ್ಯಾಸಂಗವು 11-12ರ ತರಗತಿಗಳ ಪಠ್ಯಕ್ರಮಗಳನ್ನೇ ಅಧಿಕವಾಗಿ ಹೊಂದಿರುತ್ತದೆ. (ಆರಂಭದಲ್ಲಿ ಇದು ಒಂದು ತಿಂಗಳ ಸಂಗತಿಯಾಗಿದ್ದು, ಈಗ ಅದು ಒಂದು ವರ್ಷಕ್ಕೆ ಚಾಚಿಕೊಂಡಿದೆ) ಈ ಐಐಟಿಗಳಲ್ಲಿ ಸಕಾರಾತ್ಮಕ ಕ್ರಿಯೆಯಾದ ಉದ್ಯೋಗಗಳಲ್ಲೂ ಕಡೆಗಣಿಸುವುದರಿಂದ, ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳಿಗೆ ದ್ವೇಷ ಕಾರುವ ಸವರ್ಣೀಯ ಹಿಂದೂ ಶಿಕ್ಷಕರೇ ಪೂರ್ವ ತಯಾರಿ ವ್ಯಾಸಂಗವನ್ನು ಬೋಧಿಸುತ್ತಾರೆ.

ಈ ಪೂರ್ವ ತಯಾರಿ ವ್ಯಾಸಂಗದಲ್ಲಿ ದಲಿತ/ಆದಿವಾಸಿ ವಿದ್ಯಾರ್ಥಿ/ ನಾಪಾಸದಲ್ಲಿ ಅಥವಾ ಫೈಲ್ ಮಾಡಿದ್ದಲ್ಲಿ, ಆ ಪ್ರವೇಶ ಸೀಟುರದ್ದಾಗುತ್ತದೆ. ಪರಿಶಿಷ್ಟ

ಜಾತಿ/ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆಕಾಯಿದೆಯನ್ವಯ (1989)ಮೊಕದ್ದಮ್ಮೆ ದಾಖಲಿಸಲು ಇದು ಅವಕಾಶವೀಯುತ್ತದೆ. ಈ ನಿಯಮ 3(1)ರ ಪ್ರಕಾರ ವ್ಯಕ್ತಿಯೊಬ್ಬ ಉದ್ದೇಶಪೂರ್ವಕವಾಗಿ ನಿಂದಿಸಿದರೆ ಅಥವಾ ನಿಂದನೆಯನ್ನು ಪ್ರಚೋದಿಸಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಆದರೆ ಇದನ್ನು ಸಾರ್ವಜನಿಕವಾಗಿ ಮಾಡುವವರು ಯಾರು? ಐ.ಐಟಿ.ಗಳು ಒಂದು ಸಾರ್ವಜನಿಕವಾಗಿದ್ದು, ಅಲ್ಲಿ ದಲಿತ ವಿದ್ಯಾರ್ಥಿ/ನಿಗೆ ಅವಮಾನ, ಮತ್ತು ಹಿಂಸೆಯಾಗಿದೆ. ಇದೂ ಸಹ ಸಂವಿಧಾನದ ಪರಿಚ್ಛೇದ 14ರ ಉಲ್ಲಂಘನೆಯಾಗಿದೆ. ಯಾಕೆಂದರೆ ಅದು ಎಲ್ಲಾ ಭಾರತೀಯ ನಾಗರೀಕತೆ ಸಮಾನತೆಯನ್ನು ಸಾರುತ್ತದೆ.

ಬ್ರಾಹ್ಮಣ-ಬನಿಯಾಗಳ ನಿಯಂತ್ರಣದಲ್ಲಿರುವ ಮಾಧ್ಯಮಗಳು ಐ.ಐ.ಟಿ.ಗಳನ್ನು ಅಟ್ಟಕ್ಕೇರಿಸಿ ಕೊಂಡಾಡುತ್ತವೆ. ಈ ಕ್ಯಾಂಪಸ್‌ಗಳಲ್ಲಿ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರಿಗೆ ಏನಾಗುತ್ತಿದೆಯೆಂಬುದನ್ನು ನಾಗರೀಕ ಸಮಾಜ ನೋಡಲು ಇಚ್ಛಿಸುವುದಿಲ್ಲ. ಚೆನ್ನೈನಲ್ಲಿ ಐಐಟಿ ಇತ್ತೀಚೆಗೆ ಆರಂಭವಾಗಿದ್ದು, ಅದು ಅಯ್ಯರ್ ಅಯ್ಯಂಗಾರ್ ಟೆಕ್ನಾಲಜಿ ಎಂದೇ ಸಂಕ್ಷಿಪ್ತಗೊಳ್ಳುತ್ತದೆ.

ಈ ಐಐಟಿಯ ಸಿಬ್ಬಂದಿಯ 427ರ ಪೈಕಿ ಇಬ್ಬರು ಮಾತ್ರ ದಲಿತರು ಇದನ್ನು ಅವರು ಮೀಸಲಾತಿ ನಿಯಮವನ್ನು ಅನುಸರಿಸಿಯೇ ಮಾಡಿದ್ದಾರೆ! ಈ ಸಿಬ್ಬಂದಿಯ ಪೈಕಿ ಒಬ್ಬ ಮುಸ್ಲಿಂ ಸಹ ಇಲ್ಲ. ಸುಮಾರು 20ರಷ್ಟು ಒ.ಬಿ.ಸಿ.ಗಳಾಗಿದ್ದಾರೆ. ಈ ಐಐಟಿಎಂ.ನ ಮಾಜಿ ನಿರ್ದೇಶಕ ಆರ್. ನಟರಾಜನ್ ತರ್ಕವೆಂದರೆ ಐಐಟಿ ಬೋಧಕ ವರ್ಗ, ರಕ್ಷಣೆ, ಬಾಹ್ಯಾಕಾಶ ಮತ್ತು ಅತ್ಯಧಿಕ ವೃತ್ತಿಪರತೆಯಿರುವ ವೈದ್ಯಕೀಯ ಕ್ಷೇತ್ರಗಳು ಮೀಸಲಾತಿಯನ್ನು ಅನುಸರಿಸಬೇಕಿಲ್ಲ. ನಾವದನ್ನು ವೈಜ್ಞಾನಿಕ ಅಧಿಕಾರಿಯ ಸಂದರ್ಭದಲ್ಲಿ ಮಾತ್ರ ಅನುಸರಿಸುತ್ತೇವೆ. ಈ ನೌಕರಿಗೆ ಕಡಿಮೆ ಮೂಲ ವೇತನ 2,200 ಇರುತ್ತದೆ "ಪದೇ ಪದೇ ಇವರು ನೀಡುವ ಸಬೂಬು ಎಂದರೆ 'ನಮಗೆ ಅರ್ಹ, ಮೆರಿಟ್ ಹೊಂದಿದ ದಲಿತ ಅಭ್ಯರ್ಥಿಗಳು ಸಿಗುವುದಿಲ್ಲ'-ಎನ್ನುವ ಕಾರಣವೂ ಇಲ್ಲಿ ಇರುವುದಿಲ್ಲ. ಬದಲಿಗೆ ಸಕಾರಾತ್ಮಕ ಕ್ರಿಯೆಯಿಂದಲೇ ಇವರು ವಿನಾಯಿತಿ ಬಯಸುತ್ತಾರೆ. ವಿದ್ಯಾರ್ಥಿಗಳನ್ನು ಒಳ ತೆಗೆದುಕೊಳ್ಳುವಾಗ ಮತ್ತೊಬ್ಬ ಮಾಜಿ ನಿರ್ದೇಶಕ ಹಾಗೂ ಆತನ ಉಪನಿರ್ದೇಶಕನಾದ ಸಿ.ಆರ್. ಮುದ್ದುಕೃಷ್ಣನ್ ಪ್ರಕಾರ 'ಮೀಸಲಾತಿಯ ಬಗ್ಗೆ ವೈಯಕ್ತಿಕ ನಿಲುವುಗಳೇನೆ ಇರಲಿ, ಅದನ್ನು ಅನುಸರಿಸುತ್ತಿದ್ದೇವೆ' ಎನ್ನುತ್ತಾರೆ.

ಈ ದೇಶದಲ್ಲಿ ಬೇರ್‍ಯಾವ ವಿಶ್ವವಿದ್ಯಾಲಯವೂ ಸಹ ಇಂಥ ಪೂರ್ವ ತಯಾರಿ-ವ್ಯಾಸಂಗವನ್ನು ಹೊಂದಿದೆಯೇ? ಇಲ್ಲವೆನ್ನುತ್ತಾನೆ ನಟರಾಜನ್. ಬೋಧಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವಾಗ, ಅದರ ಕೊನೆಯಲ್ಲಿ ಸ್ಪಷ್ಟವಾಗಿ ಮುದ್ರಿಸಿರುವುದೇನೆಂದರೆ, "ಎಲ್ಲಾ ಸಂಗತಿಗಳು ಸಮಾನವಾಗಿರುವುದರಿಂದ ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ ಪ್ರಾಧಾನ್ಯತೆ ನೀಡಲಾಗಿದೆ" ಆದರೆ ಎಲ್ಲಾ ಸಂಗತಿಗಳು ಅಸಮಾನವಾಗಿರುವುದರಿಂದ ಆ ಪ್ರಾಧಾನ್ಯತೆಯನ್ನು ಎಂದೂ ನೀಡಲಾಗಿಲ್ಲ. ಅಂದರೆ ಅದರ ಅನುಷ್ಠಾನ ಐಐಟಿಎಂ.ನಲ್ಲಿ 2/427. ಮುಂಬಯಿ ಐಐಟಿಯಲ್ಲಿ ಆಡಳಿತ ವ್ಯವಸ್ಥೆ ನೇರವಾಗಿದೆ ಮತ್ತು ಗೊಂದಲಕ್ಕೆಡೆಯಿಲ್ಲ. ದಿನಪತ್ರಿಕೆಯ ವರದಿಯ ಮೇರೆಗೆ ಪೊವಯ್-ಐಐಟಿಯ ಬೋಧಕ ಸಿಬ್ಬಂದಿಯಲ್ಲಿ ದಲಿತರ್‍ಯಾರು ಇಲ್ಲ. ಆದರೂ ಅಲ್ಲಿ 22.5% ಹುದ್ದೆಗಳು ದಲಿತರಿಗಾಗಿ ಮೀಸಲಾಗಿವೆ. ಅಲ್ಲಿನ ಸಿಬ್ಬಂದಿಗಳ ವಾದವೆಂದರೆ "ಮೀಸಲಾತಿಯನ್ನು ಅನುಸರಿಸಿದ್ದಲ್ಲಿ ಐಐಟಿಗಳ ಗುಣಮಟ್ಟ ಕಡಿಮೆಯಾಗುತ್ತದೆ" ಎನ್ನಲಾಗಿದೆ. ಇದನ್ನು ಬಹು ಹೆಮ್ಮೆಯಿಂದ ಹೇಳಿದ್ದಾನೆ ಅಲ್ಲಿನ ಸದಸ್ಯನೊಬ್ಬ" (ಇಂಡಿಯನ್ ಎಕ್ಸ್‌ಪ್ರೆಸ್, ಮುಂಬಯಿ, 12 ನವೆಂಬರ್ 2000)

> **ಐಐಟಿಗಳಲ್ಲಿ ಕಳೆದ 25 ವರ್ಷಗಳಿಂದ ಮೀಸಲಾತಿಯನ್ನು ಅನುಸರಿಸಿದ್ದಲ್ಲಿ, ಬೋಧಕ ವರ್ಗದಲ್ಲಿ ದಲಿತ ಮತ್ತು ಆದಿವಾಸಿಗಳು ಸಿಗುತ್ತಿರಲಿಲ್ಲವೇ? ತಾಂತ್ರಿಕವಾಗಿ ಇಲ್ಲಿರುವ ಸಂಗತಿಯೆಂದರೆ ದಲಿತ/ಆದಿವಾಸಿಗಳಿಗೆ ಪರೋಕ್ಷವಾಗಿ ತಿಳಿಸುವ ಸಂಗತಿಯೆಂದರೆ ಐಐಟಿಗಳು ಎಲೈಟ್ ಉನ್ನತ ಸ್ಥಾನದಲ್ಲಿದ್ದು, ವಾಸ್ತವದಲ್ಲಿ ದಲಿತ-ಆದಿವಾಸಿ ವಿದ್ಯಾರ್ಥಿಗಳು ಶಿಕ್ಷಣ ಮುಗಿಸುತ್ತಾರಾದರೂ ಈ ಸಂಸ್ಥೆಗಳಲ್ಲಿ ಅವರು ಬೋಧಕರಾಗಲು ಯೋಗ್ಯರಲ್ಲ. ಈ ಐಐಟಿಗಳು ಸಂವಿಧಾನಾತ್ಮಕ ಮೀಸಲಾತಿಯನ್ನು ಮತ್ತು ಸಮಾನತೆಯನ್ನು ಮನ್ನಿಸಿದರೂ ಕೆಲವು ಮುಖ್ಯ ಪ್ರಶ್ನೆಗಳು ಹಾಗೆಯೇ ಉಳಿದುಕೊಳ್ಳುತ್ತವೆ. ಐಐಟಿಗಳು ಸಾಮಾಜಿಕ ಸೂಕ್ಷ್ಮತೆಯಿಲ್ಲದ ಪಾಶ್ಚಿಮಾತ್ಯ ಬಂಡವಾಳಶಾಹಿ ನಿರ್ಮಿತ ಸಂವೇದನೆ ಇಲ್ಲದ ತಂತ್ರಜ್ಞಾನಗಳ ಮತ್ತು ಸ್ಥಳೀಯ ಕೊಳಕು ಜಾತಿ ವ್ಯವಸ್ಥೆಗಳ ವಿನಾಶಕಾರಿ ಸಂಯೋಜನೆಯಾಗಿದೆ.**

ಆದರೆ ಬ್ರಾಹ್ಮಣರ ಒಳತೆಗೆದುಕೊಳ್ಳುವಿಕೆಗೆ ಯಾವುದೇ ಮಿತಿ ಇರುವುದಿಲ್ಲ. ಮದ್ರಾಸ್ ಐಐಟಿಯಲ್ಲಿ ಕಳೆದ 20 ವರ್ಷಗಳಲ್ಲಿ ಎಲ್ಲಾ ನಿರ್ದೇಶಕರು ಬ್ರಾಹ್ಮಣರೇ ಆಗಿದ್ದಾರೆ; ಪಿ.ವಿ. ಇಂದಿರೇಶನ್, ಎಲ್.ಎಸ್. ಶ್ರೀನಾಥ್, ಎಸ್.ವಿ.ಸಿ. ಸ್ವಾಮಿ, ಆರ್. ನಟರಾಜನ್, ಎಂ.ಎಸ್. ಅನಂತ್. ಈ ಸಂಸ್ಥೆಯ ಅಧ್ಯಕ್ಷರೂ ಸಹ ಬ್ರಾಹ್ಮಣರೇ-ಯು.ಆರ್.ರಾವ್, ಎಂ.ಎಸ್. ಸ್ವಾಮಿನಾಥನ್, ಕಸ್ತೂರಿ ರಂಗನ್, ತಂತ್ರಜ್ಞಾನವೆನ್ನುವುದೇ ಬ್ರಾಹ್ಮಣೀಕೃತವಾಗಿದೆ. ಈ ಮದ್ರಾಸ್ ಐಐಟಿಯ ಉನ್ನತ ಅಧಿಕಾರಕ್ಕೆ ಪೈಪೋಟಿ ನಡೆಯುವುದು. ಕನ್ನಡ ಮತ್ತು ತಮಿಳು ಬ್ರಾಹ್ಮಣರ ನಡುವೆಯೇ ಇದು ಜಾತಿ ಸಂಘರ್ಷವೆಂದಾಗುತ್ತದೆ!

ಈ ಸಂಸ್ಥೆಗಳು ಅತಿಯಾದ ಸಬ್ಸಿಡಿಯಿಂದ ನಡೆಯುತ್ತಿವೆ. ಆರು ಐಐಟಿಗಳಿಗೆ ಕೇಂದ್ರದಿಂದ ಬರುವ ವಾರ್ಷಿಕ ಸಬ್ಸಿಡಿ ಮೊತ್ತ ರೂ. 499.18 ಕೋಟಿಯಾಗಿದೆ. (ಭಾರತ ಸರ್ಕಾರ, ಬಜೆಟ್ ಖರ್ಚು, 2000,125) ಮದ್ರಾಸ್ ಐಐಟಿಯು ಅದರಲ್ಲಿ ರೂ. 88.64 ಕೋಟಿ ವರ್ಷವೊಂದಕ್ಕೆ ಪಡೆಯುತ್ತದೆ. ಆದರೂ ಮೀಸಲಾತಿ ಅನುಸರಿಸುತ್ತಿಲ್ಲ. ಇದೇನು ಅಚ್ಚರಿಯ ಸಂಗತಿಯಲ್ಲ. ಏಕೆಂದರೆ 1973ರ ತನಕ ಯಾವುದೇ ಸರ್ಕಾರಿ ಐಐಟಿಗಳಲ್ಲೂ ದಲಿತ -ಆದಿವಾಸಿ ವಿದ್ಯಾರ್ಥಿಗಳಿಗೆ ಮೀಸಲಾತಿ ಆಧಾರದಲ್ಲಿ ಪ್ರವೇಶ ನೀಡದೆ ತಿರಸ್ಕರಿಸಲಾಗಿತ್ತು. ಆದರೆ 1972ರ ಚಾಂಡಿ ಸಮಿತಿಯ ಸೂಚನೆಯಂತೆ ಪ್ರವೇಶ ಪರೀಕ್ಷೆಯಲ್ಲಿ ನಿಗದಿಯಾದ ಎಲ್ಲಾ ದಲಿತ ಮತ್ತು ಆದಿವಾಸಿ ಮೀಸಲು ಸೀಟುಗಳನ್ನು ತೆಗೆದುಕೊಳ್ಳಲೇಬೇಕೆಂದು ಖಡ್ಡಾಯಗೊಳಿಸಿತು. ಆದರೆ ಫಲಿತಾಂಶಗಳು ಆಘಾತಕಾರಿಯಾಗಿತ್ತು. (ಮೀಸಲಾತಿಯ ಮೂಲಕ ಸಮಾನತೆ, ವಿನ್ನಿ ಕೃಪಾಲ್ ಮತ್ತು ಮೀನಾಕ್ಷಿ ಗುಪ್ತ, 1999). 1983ರಲ್ಲಿ ಪೂರ್ವ ತಯಾರಿ ವ್ಯಾಸಂಗವನ್ನು ನಿರ್ಧರಿಸಲಾಯಿತು. ಆ ಮೂಲಕ ಮತ್ತಷ್ಟು ತಡೆಯನ್ನು ದಲಿತ-ಆದಿವಾಸಿ ವಿದ್ಯಾರ್ಥಿಗಳಿಗೆ ಒಡ್ಡಲಾಯಿತು. ಹೀಗಿರುವಲ್ಲಿ ಇಂಥ ತಾರತಮ್ಯವಿರುವ ಸಂಸ್ಥೆಗಳಲ್ಲಿ ದಲಿತ-ಆದಿವಾಸಿ ವಿದ್ಯಾರ್ಥಿ ಪ್ರವೇಶಿಸುವುದಾದರೂ ಹೇಗೆಂಬುದು ಮತ್ತಷ್ಟು ವಿವರಣೆಯನ್ನು ಬಯಸುತ್ತದೆ.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಜಿ.ಇ.ಇ.ಯಲ್ಲಿ ಸಾಮಾನ್ಯ ವರ್ಗದಲ್ಲಿ 2/3ರಷ್ಟು ಅಂಕಗಳಿಸಿದ ಎಸ್.ಸಿ/ ಎಸ್.ಟಿ. ವಿದ್ಯಾರ್ಥಿಗಳನ್ನು ನೇರವಾಗಿ ಬಿ.ಟೆಕ್ ಮೊದಲ ವರ್ಷಕ್ಕೆ, ಮೀಸಲಾತಿಯನ್ವಯ ತೆಗೆದುಕೊಳ್ಳಬೇಕಿತ್ತು. ಯಾವ ವಿದ್ಯಾರ್ಥಿಗಳು ಈ ಜಿ.ಇ.ಇಯಲ್ಲಿ 2/3ಕ್ಕಿಂತ ಕಡಿಮೆ ಅಂಕ ಪಡೆಯುತ್ತಾರೋ ಅವರಿಗೆ ಪೂರ್ವ ತಯಾರಿ ವ್ಯಾಸಂಗಕ್ಕೆ ತೆಗೆದುಕೊಂಡು ತೀವ್ರವಾದ ಅಧ್ಯಯನದಲ್ಲಿ ತೊಡಗಿಸಬೇಕಾಗಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್‌ನಲ್ಲಿ ನಿಗದಿತ ಅಂಕಗಳನ್ನು ವರ್ಷದ ಕೊನೆಯಲ್ಲಿ ಪಡೆದಾಗ, ಅಂಥವರಿಗೆ ಮೊದಲ ವರ್ಷದ ಬಿ.ಟೆಕ್‌ಗೆ ಪ್ರವೇಶ ನೀಡಬೇಕಾಗಿತ್ತು. ಈ ಪ್ರಕ್ರಿಯೆಯಲ್ಲಿ ಫೇಲಾದವರು ಇತರ ಕಾಲೇಜುಗಳಿಗೆ ಸೇರಲು ಅವಕಾಶ ಕಲ್ಪಿಸಲಾಗುತ್ತಿತ್ತು. ಆದರೆ ಐಐಟಿಗಳಲ್ಲಿ ಇಂಥ ಯಾವುದೇ ರೀತಿಯ ಅನುಕೂಲತೆಗಳು ದಲಿತ-ಆದಿವಾಸಿ ವಿದ್ಯಾರ್ಥಿಗಳಿಗೆ ನೀಡಲಾಗಿಲ್ಲ. ಅಲ್ಲದೆ ಈ ವಿದ್ಯಾರ್ಥಿಗಳು ಸೆಮಿಸ್ಟರ್ ಪದ್ಧತಿಯಲ್ಲಿ ವಿನಾಯಿತಿ ಆಧಾರದಲ್ಲಿ ನಾಲ್ಕು ವರ್ಷಗಳ ವ್ಯಾಸಂಗವನ್ನು ಆರು ವರ್ಷಗಳಲ್ಲಿ ಮುಗಿಸಿ, ಪದವಿಯನ್ನು ಮಾಮೂಲಿ ಇತರರಂತೆ ಪಡೆಯಬಹುದಾಗಿದೆ. (ಮೀಸಲಾತಿಯ ಮೂಲಕ ಸಮಾನತೆ, 36)

ಈ ಸಂಶೋಧನೆಯನ್ನು ಐಐಟಿ-ಮುಂಬಯಿಯಲ್ಲಿ ಬೋಧಿಸಿದ ದಿನ್ನಿ ಮತ್ತು ಮೀನಾಕ್ಷಿಯವರು, 1989 ರಿಂದ 1992ರವರೆಗಿನ ಐಐಟಿ ವಿದ್ಯಾರ್ಥಿಗಳ ಅಂಕಿ-ಅಂಶಗಳನ್ನು

ಸಂಗ್ರಹಿಸಿ, ಮಾಡಲಾಗಿತ್ತು. ಈ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯಂತೆ ಸಾಮಾನ್ಯ ವರ್ಗದಲ್ಲಿ 5,868 ವಿದ್ಯಾರ್ಥಿಗಳಿದ್ದರೆ, ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಸಂಖ್ಯೆ 616 (49). ಶೇಕಡವಾರು ಕ್ರಮದಲ್ಲಿ 10.49 ದಲಿತ-ಆದಿವಾಸಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅಂದರೆ ಮೀಸಲಾತಿಯ ಅರ್ಧದಷ್ಟು ಮಾತ್ರ ಆಗಿದೆ.

'ಇಲ್ಲಿರುವ ತರ್ಕವೆಂದರೆ ಅಧಿಕ ಮಂದಿ ದಲಿತ-ಆದಿವಾಸಿ ವಿದ್ಯಾರ್ಥಿಗಳು, ಆ ಪೂರ್ವ-ತಯಾರಿ ವ್ಯಾಸಂಗದ ಮೌಲ್ಯಗಳನ್ನು ಜೀರ್ಣಿಸಿಕೊಂಡು ಬಿಡುತ್ತಾರೆ. ಆಗ ಸಿದ್ಧ ಮಾದರಿಯ ಉತ್ತರವೆಂದರೆ: "ನೋಡಿ, ಅವರು ಪ್ರತಿಭಟಿಸುತ್ತಿಲ್ಲ...ಸಮೀಕ್ಷೆಯೊಂದನ್ನು ಮಾಡಿ, ಅವರಿಗೆಲ್ಲಾ ಈ ಪೂರ್ವ ತಯಾರಿ ವ್ಯಾಸಂಗ ಇಲ್ಲವಾದಲ್ಲಿ ಅವರು ಮತ್ತಷ್ಟು ಪ್ರತ್ಯೇಕತೆಗೊಳಗಾಗುತ್ತಾರೆ". 17 ವರ್ಷ ವಯಸ್ಸಿನ ದಲಿತ ವಿದ್ಯಾರ್ಥಿಗಳಿಗೆ ಐಐಟಿಗಳ ಬಿ.ಟೆಕ್‌ಗೆ ಅವಕಾಶ ತೆರೆದಿರುವಾಗ, ಈ ಪೂರ್ವ ತಯಾರಿ ವ್ಯಾಸಂಗವನ್ನು ತಾರತಮ್ಯವೆಂದು ತಿಳಿದು ತಿರಸ್ಕರಿಸುವುದಿಲ್ಲ. ಅವರ್‍ಯಾರು ಅದರ ರಾಜಕೀಯದ ಒಳಾರ್ಥಗಳನ್ನು ಗಮನಿಸಲಾಗುವುದಿಲ್ಲ; ಹಾಗೂ ತಿಳಿದಲ್ಲಿ ಅಂತಹ ಅನ್ಯಾಯವನ್ನು ಎದುರಿಸುವುದಾದರೂ ಹೇಗೆ? ಮದ್ರಾಸ್‌ನ ಐಐಟಿ ಸಂಸ್ಥೆಗಳಲ್ಲಿ ಅನೇಕ ಘಟನೆಗಳಲ್ಲಿ ದಲಿತ-ಆದಿವಾಸಿ ವಿದ್ಯಾರ್ಥಿಗಳನ್ನು ಅಲ್ಲಿನ ಆಡಳಿತ ವ್ಯವಸ್ಥೆಯೇ ಬಲತ್ಕಾರವಾಗಿ ಹೊರದೂಡಿ, ಇತರೆ ಬಿ.ಎಸ್.ಸಿ., ಡಿಪ್ಲೊಮಾಗಳಿಗೆ ತೃಪ್ತರಾಗುವಂತೆ ಮಾಡಲಾಗಿದೆ. ಈ ಐಐಟಿಗಳಲ್ಲಿ ಶೈಕ್ಷಣಿಕ ಮೌಲ್ಯಮಾಪನ ಇಲ್ಲದಿರುವುದರಿಂದ ಸೆನೆಟ್ ಮತ್ತು ನಿರ್ದೇಶಕರ ಸರ್ವಾಧಿಕಾರಿ ನಿರ್ಧಾರಗಳನ್ನು ಯಾರೂ ಪ್ರಶ್ನಿಸಲಾಗದು ಇದು ಶೈಕ್ಷಣಿಕ ಮತ್ತು ಬೌದ್ಧಿಕ ಭಯೋತ್ಪಾದನೆಯಾಗಿದೆ. ಹೀಗೆಯೇ ಐಐಟಿಗಳಲ್ಲಿರುವ ಪೂರ್ವ ತಯಾರಿ ವ್ಯಾಸಂಗದಂತೆ, ನಮ್ಮ ದಲಿತ ಎಂ.ಎಲ್.ಎ. ಮತ್ತು ಎಂ.ಪಿ.ಗಳು ಪಾರ್ಲಿಮೆಂಟ್ ಪ್ರವೇಶಿಸುವ ಮೊದಲು ಅರ್ಹತಾ ವ್ಯಾಸಂಗವೆಂದಿದ್ದಲ್ಲಿ ತೆಗೆದುಕೊಳ್ಳುತ್ತಾರೆಯೇ?

ಇಲ್ಲೊಂದು ಮೂಲ ಸಂಗತಿಯನ್ನು ಮರೆಮಾಚಲಾಗಿದೆ. ಈ ಐಐಟಿಗಳಲ್ಲಿ ಕಳೆದ 25 ವರ್ಷಗಳಿಂದ ಮೀಸಲಾತಿಯನ್ನು ಅನುಸರಿಸಿದ್ದಲ್ಲಿ, ಬೋಧಕ ವರ್ಗದಲ್ಲಿ ದಲಿತ ಮತ್ತು ಆದಿವಾಸಿಗಳು ಸಿಗುತ್ತಿರಲಿಲ್ಲವೇ? ತಾಂತ್ರಿಕವಾಗಿ ಇಲ್ಲಿರುವ ಸಂಗತಿಯೆಂದರೆ ದಲಿತ/ಆದಿವಾಸಿಗಳಿಗೆ ಪರೋಕ್ಷವಾಗಿ ತಿಳಿಸುವ ಸಂಗತಿಯೆಂದರೆ ಐಐಟಿಗಳು ಎಲೈಟ್ ಉನ್ನತ ಸ್ಥಾನದಲ್ಲಿದ್ದು, ವಾಸ್ತವದಲ್ಲಿ ದಲಿತ-ಆದಿವಾಸಿ ವಿದ್ಯಾರ್ಥಿಗಳು ಶಿಕ್ಷಣ ಮುಗಿಸುತ್ತಾರಾದರೂ ಈ ಸಂಸ್ಥೆಗಳಲ್ಲಿ ಅವರು ಬೋಧಕರಾಗಲು ಯೋಗ್ಯರಲ್ಲ.

1999-2002ದ ಕೇಂದ್ರ ಬಜೆಟ್ ಪ್ರೌಢ ಉನ್ನತ ಶಿಕ್ಷಣಕ್ಕಾಗಿ ರೂ. 4,380ಕೋಟಿಗಳನ್ನು ಮೀಸಲಿಟ್ಟಿತು. (ಭಾರತ ಸರ್ಕಾರ 2000) ಇದರಲ್ಲಿ ರೂ. 499.18 ಕೋಟಿ ಆರು ಐಐಟಿ ಸಂಸ್ಥೆಗಳಿಗೆ ಹೋಯ್ತು. ಅಂದರೆ

ರಾಜ್ಯಾಂಗವು ತನ್ನ ರಾಜಕೀಯ ಇಚ್ಛಾಶಕ್ತಿಯ ಮೂಲಕ ಅಸಾಧ್ಯವೆಂದು ಕಂಡು ಬಂದರೂ, ಕೂಡಲೇ ಈ ಐಐಟಿಗಳು ಮೀಸಲಾತಿ ನಿಯಮಗಳನ್ನು ಬೋಧಕ ಸಿಬ್ಬಂದಿಯ ನೇಮಕ ಮತ್ತು ವಿದ್ಯಾರ್ಥಿಗಳನ್ನು ಒಳ ಬರುವಂತೆ ಮಾಡುವುದು ಮತ್ತು ತಾರತಮ್ಯದ ಮೌಲ್ಯಗಳನ್ನು ಬಿತ್ತುತ್ತಿರುವ ಪೂರ್ವ ತಯಾರಿ ವ್ಯಾಸಂಗವನ್ನು ನಿಷೇಧಿಸಬೇಕು. ಇಲ್ಲವಾದರೆ ಈ ಐಐಟಿಗಳು ಮತ್ತು ಐಐಎಂಗಳು ಅಗ್ರಹಾರಗಳಾಗಿಯೇ ಮುಂದುವರೆಯುತ್ತವೆ. ಹಾಗೇನಾದರೂ ಆದಲ್ಲಿ ಈ ಆರು ಐಐಟಿ ಸಂಸ್ಥೆಗಳಲ್ಲಿ ಪ್ರತಿ ವರ್ಷ 80 ಮಂದಿ ದಲಿತ ವಿದ್ಯಾರ್ಥಿಗಳು ಬಿ.ಟೆಕ್ ಮಾಡುವಂತಾಗುತ್ತದೆ. ಹಾಗೆಯೇ ಪ್ರತಿಯೊಂದು ಐಐಟಿಗಳಲ್ಲೂ 80 ಮಂದಿ ದಲಿತ/ಆದಿವಾಸಿ ಬೋಧಕವರ್ಗವನ್ನು ನೇಮಿಸಿಕೊಳ್ಳುವಂತೆಯೂ ಆಗುತ್ತದೆ.

11.4% ಈ ವಿಭಾಗಕ್ಕೆ (ಇದರಲ್ಲಿ ವಿದ್ಯಾರ್ಥಿ ಒಬ್ಬರಿಗೆ, ವರ್ಷಕ್ಕೆ ಇತರೆ ವೆಚ್ಚಗಳಾದ ಬೋಧನಾ ಶುಲ್ಕ, ಪರೀಕ್ಷೆ, ಹಾಸ್ಟೆಲ್ ಶುಲ್ಕ ಇತ್ಯಾದಿ-ರೂ. 15,000ಗಳಾಗುತ್ತದೆ). (ಕೈಪಿಡಿ ಐಐಟಿ ಮದ್ರಾಸ್ 1999). ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಿಗೆ ಹೋಲಿಸಿದ್ದಲ್ಲಿ ಇದು ಮಹತ್ವದ್ದಾಗುತ್ತದೆ. ಇಷ್ಟೆಲ್ಲಾ ಸಬ್ಸಿಡಿ ನೀಡಿಯೂ 'ಇಂಡಿಯಾ' ಏನನ್ನು ವಾಪಸ್ಸು ಗಳಿಸಿದಂತೆ ಕಾಣದು. 'ಈ ಕ್ಯಾಂಪಸ್ ಆಯ್ಕೆಗಳಿಂದ ಗಳಿಸುವ ಕಮ್ಮಿ ಮೊತ್ತವೆಂದರೂ ರೂ. 4.5ರಿಂದ ರೂ. 7.5 ಲಕ್ಷ ವಾರ್ಷಿಕವಾಗಿ ಇತರೆ ಭತ್ಯೆಗಳು ಅದರೊಡನೆ ಸೇರದು. (ಟೈಂಸ್ ದಿನಪತ್ರಿಕೆ, ಡೆಲ್ಲಿ 12, ನವೆಂಬರ್ 2000). ಇದೆಲ್ಲಾ ಯಾರಿಗೆ? ಟೋಯ್ ಪತ್ರಿಕೆ ಮುಂಭಾಗದಲ್ಲೇ ಅದು ಗೋಚರಿಸುತ್ತದೆ. "ಅಮೇರಿಕಾದವರಿಗೆ ಅದು ಬೇಕಾಗಿದೆ. ಹಾಗೆಯೇ ಕೊರಿಯಾ, ಜಪಾನ್, ಸಿಂಗಾಪುರ, ಜರ್ಮನಿ, ಕೆನಡಾ ಮತ್ತು ಫ್ರಾನ್ಸ್ ಜನರಿಗೆ ಬೇಕಾಗಿದೆ. ಹೂಡಿಕೆಯ ದೃಷ್ಟಿಯಿಂದಾದರೂ ಈ ಐಐಟಿಗಳು ದುಬಾರಿಯಾಗಿವೆ. ಅಂದರೆ ಈ ಐಐಟಿಗಳಿಗೇನಾದರೂ ಈ ದೇಶಕ್ಕಾಗಿ ಸಾಮಾಜಿಕ ಜವಾಬ್ದಾರಿ ಇದ್ದದ್ದಾದರೆ, ಕೂಡಲೇ ಅವುಗಳು ಸಮಗ್ರವಾಗಿ ತಿದ್ದುಪಡಿ ಹೊಂದಿ ಬದಲಾಗಬೇಕಾಗಿವೆ.

ಈ ಐಐಟಿಗಳು ಸಂವಿಧಾನಾತ್ಮಕ ಮೀಸಲಾತಿಯನ್ನು ಮತ್ತು ಸಮಾನತೆಯನ್ನು ಮನ್ನಿಸಿದರೂ ಕೆಲವು ಮುಖ್ಯ ಪ್ರಶ್ನೆಗಳು ಹಾಗೆಯೇ ಉಳಿದುಕೊಳ್ಳುತ್ತವೆ. ಐಐಟಿಗಳು ಸಾಮಾಜಿಕ ಸೂಕ್ಷ್ಮತೆಯಿಲ್ಲದ ಪಾಶ್ಚಿಮಾತ್ಯ ಬಂಡವಾಳಶಾಹಿ ನಿರ್ಮಿತ ಸಂವೇದನೆ ಇಲ್ಲದ ತಂತ್ರಜ್ಞಾನಗಳ ಮತ್ತು ಸ್ಥಳೀಯ ಕೊಳಕು ಜಾತಿ ವ್ಯವಸ್ಥೆಗಳ ವಿನಾಶಕಾರಿ ಸಂಯೋಜನೆಯಾಗಿದೆ.

ಹಾಗಿದ್ದರೆ, ಐಐಟಿಗಳಿಗೆ ನಾವೇನು ಮಾಡಬಹುದು? ಅವು ಸುಧಾರಣೆ ಮಾಡಿಕೊಳ್ಳುತ್ತದೆಯೇ? ತಮ್ಮ ಹಾದಿಗಳನ್ನು ಸರಿಪಡಿಸಿಕೊಂಡು, ತಮ್ಮ ಅಜೆಂಡಾಗಳನ್ನು ಬದಲಾಯಿಸಿಕೊಳ್ಳುತ್ತದೋ? ಐಐಟಿಗಳಲ್ಲಿ ಓದಿದವರು ತಾವು ಸಹಾಯಧನ ಪಡೆದದ್ದಕ್ಕೆ ದೇಶಕ್ಕಾಗಿ ಹೆಚ್ಚು ಜವಾಬ್ದಾರರಾಗಿರಬೇಕೆಂಬ ಒತ್ತಡ ಇದೆಯೇ? ಇದು ಸಾಧ್ಯವೇ? ಈ ತಂತ್ರಜ್ಞಾನದ ಆವರಣವು ಹೆಚ್ಚು ಲಿಂಗ ಸಮಾನತೆ ಮತ್ತು ದಲಿತ ಪ್ರಜ್ಞೆಯನ್ನು ಹೊಂದಲು ತೀವ್ರತರವಾದ ಮರು ಚಿಂತನೆಯನ್ನು ಬಯಸುವುದಿಲ್ಲವೇ? ಅದೊಂದು ದೂರದೃಷ್ಟಿಯಾಗಿದ್ದು, ಆರಂಭ ಶಾಲೆಯ ಪಠ್ಯಕ್ರಮ ಬದಲಾವಣೆಯಿಂದಲೇ ಆಗಬೇಕಾಗುತ್ತದೆ. ಅಲ್ಲಿ ಜಾತಿ ವಿರುದ್ಧ ವಿಚಾರಧಾರೆ/ವ್ಯಾಖ್ಯಾನದೊಂದಿಗೆ, ದುಡಿಮೆಗೆ ಗೌರವ ಮತ್ತು ಘನತೆ ದೊರೆಯುವಂತಾಗಬೇಕು.

ಆಧುನಿಕೋತ್ತರ ಬಂಡವಾಳಶಾಹಿ ಜಗತ್ತಿನಲ್ಲಿ ಐಐಟಿಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾದ ನುರಿತ ನೌಕರ ಆಯ್ಕೆಯ ತಾಣಗಳಾಗಿ ಪರಿಣಮಿಸಿರುವಾಗ ನಮ್ಮ ಹೊಣೆಗಾರಿಕೆ ಏನು? ತಕ್ಷಣಕ್ಕೆ ಅಸಾಧ್ಯ ಮತ್ತು ಪ್ರಾಕ್ಟಿಕಲ್ ಅಲ್ಲದ ಉತ್ತರವೆಂದರೆ, "ಅವುಗಳನ್ನು ಕೂಡಲೇ ಮುಚ್ಚುವುದು".

ಅಂದರೆ ರಾಜ್ಯಾಂಗವು ತನ್ನ ರಾಜಕೀಯ ಇಚ್ಛಾಶಕ್ತಿಯ ಮೂಲಕ ಅಸಾಧ್ಯವೆಂದು ಕಂಡು ಬಂದರೂ, ಕೂಡಲೇ ಈ ಐಐಟಿಗಳು ಮೀಸಲಾತಿ ನಿಯಮಗಳನ್ನು ಬೋಧಕ ಸಿಬ್ಬಂದಿಯ ನೇಮಕ ಮತ್ತು ವಿದ್ಯಾರ್ಥಿಗಳನ್ನು ಒಳ ಬರುವಂತೆ ಮಾಡುವುದು ಮತ್ತು ತಾರತಮ್ಯದ ಮೌಲ್ಯಗಳನ್ನು ಬಿತ್ತುತ್ತಿರುವ ಪೂರ್ವ ತಯಾರಿ ವ್ಯಾಸಂಗವನ್ನು ನಿಷೇಧಿಸಬೇಕು. ಇಲ್ಲವಾದರೆ ಈ ಐಐಟಿಗಳು ಮತ್ತು ಐಐಎಂಗಳು ಅಗ್ರಹಾರಗಳಾಗಿಯೇ ಮುಂದುವರೆಯುತ್ತವೆ. ಹಾಗೇನಾದರೂ ಆದಲ್ಲಿ ಈ ಆರು ಐಐಟಿ ಸಂಸ್ಥೆಗಳಲ್ಲಿ ಪ್ರತಿ ವರ್ಷ 80 ಮಂದಿ ದಲಿತ ವಿದ್ಯಾರ್ಥಿಗಳು ಬಿ.ಟೆಕ್ ಮಾಡುವಂತಾಗುತ್ತದೆ. ಹಾಗೆಯೇ ಪ್ರತಿಯೊಂದು ಐಐಟಿಗಳಲ್ಲೂ 80 ಮಂದಿ ದಲಿತ/ಆದಿವಾಸಿ ಬೋಧಕವರ್ಗವನ್ನು ನೇಮಿಸಿಕೊಳ್ಳುವಂತೆಯೂ ಆಗುತ್ತದೆ. ನಿಜವಾಗಿಯೂ, ನಾವು ಐಐಟಿಗಳು ಮುಚ್ಚಬೇಕೆಂದು ಒತ್ತಾಯಿಸಬೇಕಿಲ್ಲ. ಬದಲು ನಾವು-ದಲಿತ ಮುಂದಾಳುಗಳು, ರಾಜಕಾರಣಿಗಳು, ಎಂ.ಪಿ.ಗಳು, ಎಂ.ಎಲ್.ಎಗಳು ಬರಹಗಾರರು, ವಕೀಲರು, ಕಾರ್ಯಕರ್ತರು...ಸರ್ಕಾರ ಮತ್ತು ನ್ಯಾಯಾಲಯ (78% ಮಂದಿ ಬ್ರಾಹ್ಮಣ ನ್ಯಾಯವಾದಿಗಳೆಂದು ದಲಿತ ಕಾರ್ಯಕರ್ತ ಮಾರ್ಟಿನ್ ಮಕ್ವಾನ್, ನ್ಯೂಯಾರ್ಕ್ ಟೈಮ್ಸ್ 16 ನವೆಂಬರ್ 2000ರಂದು ಪ್ರಕಟಿಸಿದ್ದಾರೆ)ಗಳನ್ನು ಒತ್ತಾಯಿಸಿ, ಮೀಸಲಾತಿಯನ್ನು ಈ ಐಐಟಿಗಳು ಅನುಷ್ಠಾನಗೊಳಿಸುವಂತೆ ಮಾಡಬೇಕಷ್ಟೆ. ಹೀಗಾದಾಗ ಸಂವಿಧಾನವನ್ನು ಗೌರವಿಸಿದಂತಾಗುತ್ತದೆ. ಜಾತಿಯ ವಿರುದ್ಧ ದೊಡ್ಡ ಮಟ್ಟದ ಹೋರಾಟ ಮಾಡುವಾಗ ಐಐಟಿಗಳಲ್ಲಿ ಸಾಮಾಜಿಕ ನ್ಯಾಯ ಕೇಳುವುದು ನಗಣ್ಯವೆಂದು ತೋರಬಹುದು. ಆದರೂ ನಾವಿದನ್ನು ಮಾಡಲೇಬೇಕಾಗಿದೆ.

ಸೌಜನ್ಯ : ದಿ ದಲಿತ್

ಹೆಣ್ಣನ್ನು ದೇವತೆ ಎಂದು ಸ್ತುತಿಸುವ ದೇಶಕ್ಕೆ 89ನೇ ಸ್ಥಾನ !

ಮಹಿಳೆಯ ಆರ್ಥಿಕ ಮತ್ತು ಸಾಮಾಜಿಕ ಗತಿ-ಸ್ಥಿತಿಗಳನ್ನು ಕುರಿತು 'ಸೇವ್' ದಿ ಚಿಲ್ಡ್ರನ್ ಸಂಸ್ಥೆ 117 ದೇಶಗಳಲ್ಲಿ ಸಮೀಕ್ಷೆ ನಡೆಸಿ ಮಾತೆಯರ ದಿನದಂದು ಪ್ರಕಟಿಸಿದ ವರದಿಯಲ್ಲಿ ವಿವಿಧ ದೇಶಗಳಲ್ಲಿ ಮಹಿಳೆಯರ ಅಭಿವೃದ್ಧಿಗೆ ಕೈಗೊಂಡ ಕಾರ್ಯ ಯೋಜನೆಗಳನ್ನು ವಿಶ್ಲೇಷಣೆಗೆ ಗುರಿ ಪಡಿಸಿದೆ.

ಒಂದೆಡೆ ಮಗಳಾಗಿ, ತಾಯಿಯಾಗಿ, ಮಡದಿಯಾಗಿ, ಅಜ್ಜಿಯಾಗಿ ವಿವಿಧ ಸ್ಥಾನಗಳಲ್ಲಿ ಅವಳನ್ನು ಇಟ್ಟು ನೋಡಲಾಗುತ್ತಿದೆ. ಆದರೆ ಅವಳಿಗೆ ತಕ್ಕ ಗೌರವ ಸಿಕ್ಕುತ್ತಿದೆಯೇ ಎಂಬ ಸತ್ಯಾಂಶ ಶೋಧಿಸಲು ಹೊರಟಾಗ ಭಾರತಕ್ಕೆ ಧಕ್ಕುವುದು 89ನೇ ಸ್ಥಾನ.

○ ಕೆ.ಎಸ್. ಶ್ರೀನಿವಾಸರೆಡ್ಡಿ

ಇಡೀ ವಿಶ್ವದಲ್ಲಿ ತಾಯಿಯನ್ನು ಹೆಚ್ಚು ಗೌರವಿಸುವ ದೇಶ ಯಾವುದು? ಇಲ್ಲಿ ಗೌರವಿಸುವುದು ಎಂದರೆ 'ಅಮ್ಮ ಎಂದರೆ ಏನೋ ಹರುಷವು ನಮ್ಮ ಪಾಲಿಗೆ ಅವಳೇ ದೈವವು ಎಂದು ಹಾಡುವುದಾಗಲಿ, ಫೋಟೋ ಇಟ್ಟು ಪೂಜಿಸುವುದಾಗಲಿ ಅಲ್ಲ. ಒಬ್ಬ ಯುವತಿ ಗರ್ಭವತಿಯಾದರೆ ಪೌಷ್ಠಿಕ ಆಹಾರ ಒದಗಿಸುವುದು, ಪ್ರಸವದ ಆತಂಕಗಳನ್ನು ನಿವಾರಿಸುವುದು, ಎಲ್ಲರೂ ತಿಂದು ತೇಗಿದ ಮೇಲೆ ಉಳಿದ ಕೊರೆಯನ್ನು ಆಕೆಗೆ ಉಣಿಸದೆ, ಎಲ್ಲರಂತೆ ಆಕೆಗೂ ಸಮಾನವಾದ ಪಾಲು ನೀಡುವುದು, ಕುಟುಂಬದ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವಾಗ ಆಕೆಯ ಅಭಿಪ್ರಾಯವನ್ನು ಪರಿಗಣಿಸುವುದು-ಆಕೆ ಕಾಯಿಲೆ ಬಿದ್ದಾಗ ಆರೋಗ್ಯ ಸೌಲಭ್ಯ ಒದಗಿಸುವುದು, ರಾಜಕೀಯ ರಂಗದಲ್ಲಿ ಸ್ಥಾನ, ಹೆಣ್ಣಿನ ಸಂವೇದನೆ ಮತ್ತು ಜ್ಞಾನವನ್ನು ಗೌರವಿಸುವುದು-ಇದು ಆಕೆಗೆ ನೀಡುವ ನಿಜವಾದ ಗೌರವ.

ಹೆಣ್ಣಿಗೆ ನಿಜವಾದ ಗೌರವ ನೀಡುವ ದೇಶ ಯಾವುದು? ಹೆಣ್ಣನ್ನು ದೇವತೆ, ಶಕ್ತಿ ಸ್ವರೂಪಿ ಎಂದೆಲ್ಲಾ ಹಾಡಿ ಹೊಗಳುವ ಭಾರತವೇ? ಮುಕ್ತ ಸಮಾಜದ ಹರಿಕಾರನಂತಿರುವ ಅಮೇರಿಕವೇ? ಅಲ್ಲವೇ ಅಲ್ಲ. ಈ ದೇಶಗಳು ಮಹಿಳೆಯನ್ನು ಆದರಿಸುವ ದೇಶಗಳ ಸಾಲಿನಲ್ಲಿ ಮೊದಲಿನ 10 ದೇಶಗಳ ಸಾಲಿನಲ್ಲೂ ಕೂಡ ಇಲ್ಲ.

ಹಲವು ದೇಶಗಳಿಂದ ಪ್ರಗತಿ ಪಥದಲ್ಲಿ ದಾಪುಗಾಲು ಹಾಕುತ್ತಿರುವ ನಾರ್ವೆ, ಸ್ವೀಡನ್, ಡೆನ್ಮಾರ್ಕ್ (ಸ್ಕಾಂಡಿನೇವಿಯನ್ ದೇಶಗಳು) ದೇಶಗಳಲ್ಲಿ ಸ್ತ್ರೀ ಸಂಕುಲವನ್ನು ಗೌರವಿಸುವ ದೇಶಗಳ ಪೈಕಿ ಮುಂಚೂಣಿಯಲ್ಲಿವೆ.

ಮಹಿಳೆಯ ಆರ್ಥಿಕ ಮತ್ತು ಸಾಮಾಜಿಕ ಗತಿ-ಸ್ಥಿತಿಗಳನ್ನು ಕುರಿತು 'ಸೇವ್' ದಿ ಚಿಲ್ಡ್ರನ್ ಸಂಸ್ಥೆ 117 ದೇಶಗಳಲ್ಲಿ ಸಮೀಕ್ಷೆ ನಡೆಸಿ ಮಾತೆಯರ ದಿನದಂದು ಪ್ರಕಟಿಸಿದ ವರದಿಯಲ್ಲಿ ವಿವಿಧ ದೇಶಗಳಲ್ಲಿ ಮಹಿಳೆಯರ ಅಭಿವೃದ್ಧಿಗೆ ಕೈಗೊಂಡ ಕಾರ್ಯ ಯೋಜನೆಗಳನ್ನು ವಿಶ್ಲೇಷಣೆಗೆ ಗುರಿ ಪಡಿಸಿದೆ. ಹಾಗೂ ಮಹಿಳೆಯರಿಗೆ ದಕ್ಕಿರುವ ಸ್ಥಾನಮಾನಕ್ಕನುಗುಣವಾಗಿ ಆಯಾ ದೇಶಗಳಿಗೆ ಶ್ರೇಣಿಗಳನ್ನು ನೀಡಿದೆ.

ಒಂದೆಡೆ ಮಗಳಾಗಿ, ತಾಯಿಯಾಗಿ, ಮಡದಿಯಾಗಿ, ಅಜ್ಜಿಯಾಗಿ ವಿವಿಧ ಸ್ಥಾನಗಳಲ್ಲಿ ಅವಳನ್ನು ಇಟ್ಟು ನೋಡಲಾಗುತ್ತಿದೆ. ಆದರೆ ಅವಳಿಗೆ ತಕ್ಕ ಗೌರವ ಸಿಕ್ಕುತ್ತಿದೆಯೇ ಎಂಬ ಸತ್ಯಾಂಶ ಶೋಧಿಸಲು ಹೊರಟಾಗ ಭಾರತಕ್ಕೆ ಧಕ್ಕುವುದು 89ನೇ ಸ್ಥಾನ.

ಆದರೆ ಇದಕ್ಕೆ ಕಾರಣ ಹುಡುಕಿದಾಗ ಉತ್ತರ ಸಿಗುವುದು ಒಂದಲ್ಲ ಹಲವಾರು, ಶತಮಾನಗಳಿಂದ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆ ಇಲ್ಲಿ ಧಮನಕ್ಕೊಳಗಾಗಿದ್ದಾಳೆ. ಇಲ್ಲಿ ಎಲ್ಲಾ ವ್ಯವಸ್ಥೆಗಳು ಪುರುಷಾನುಕೂಲವಾಗಿವೆ. ಆಧುನಿಕ ತಂತ್ರಜ್ಞಾನ ಬಿಡುಗಡೆಗಿಂತ ಬಂಧನವಾಗಿದೆ. ಶೋಷಣೆ ಎಂಬುದು ಆಧುನೀಕರಣವಾಗಿದೆ. ಪುರುಷನ ಅಹಂ ಸೂಕ್ಷ್ಮವಾಗಿ ವಿಜ್ರಂಭಿಸುತ್ತಾ ಅಟ್ಟಹಾಸ ಮಾಡುತ್ತಿದೆ. ವಿಭಿನ್ನ ನೆಲೆಗಳನ್ನು ಪಡೆದುಕೊಂಡು ತನ್ನ ರೂಪಗಳನ್ನು ಕಾಲಕ್ಕನುಗುಣವಾಗಿ ಬದಲಿಸುತ್ತಾ ಮುಂದೆ ನಡೆದಿವೆ.

'ಸೇವ್ ದಿ ಚಿಲ್ಡ್ರನ್' ಸಂಸ್ಥೆ ಸ್ತ್ರೀಯರ ಮಾನ್ಯತೆಯನ್ನು ಅಳೆದದ್ದು ಹೇಗೆ?

ಶಿಕ್ಷಣ, ಗರ್ಭಿಣಿಗೆ ಒದಗಿಸುವ ಆಹಾರ, ಚಿಕಿತ್ಸೆಯ ಲಭ್ಯತೆ, ಮಕ್ಕಳ ಮರಣ ಪ್ರಮಾಣ ನಿಯಂತ್ರಣ, ಗರ್ಭ ನಿರೋಧಕ ಸಾಧನೆಗಳ ಲಭ್ಯತೆ, ತಾಯಿ ಮಕ್ಕಳ ಆರೋಗ್ಯ, ರಾಜಕೀಯದಲ್ಲಿ ಮೀಸಲಾತಿ ಕುರಿತು ವಿವಿಧ ದೇಶಗಳಲ್ಲಿ ಲಭ್ಯವಿರುವ ಅನುಕೂಲತೆಗಳನ್ನು ಗಣನೆಗೆ ತೆಗೆದುಕೊಂಡಿತು.

ಈ ವಿಚಾರದಲ್ಲಿ ನಾರ್ವೆ, ಸ್ವೀಡನ್, ಡೆನ್ಮಾರ್ಕ್‌ಗಳು ಅಗ್ರಸ್ಥಾನವನ್ನು ಪಡೆದಿವೆ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ ದೇಶಗಳು ಅಂತಿಮ ಅಂಚಿನಲ್ಲಿ ಉಳಿದುಕೊಂಡಿವೆ. ಅಂಗೋಲಾ, ಇಥಿಯೋಪಿಯಾ, ಯೆಮನ್ ದೇಶಗಳು ನಮಗಿಂತ ಕೊನೆಯ ಸ್ಥಾನದಲ್ಲಿದೆ. ಹಿರಿಯಣ್ಣ ಎನಿಸಿರುವ ಅಮೇರಿಕಾ 11ನೇ ಸ್ಥಾನಪಡೆದಿದೆ. ಚೈನಾ 38, ಬಾಂಗ್ಲಾದೇಶ 95, ಪಾಕಿಸ್ಥಾನ 99, ನೇಪಾಳ 100 ಸ್ಥಾನದಲ್ಲಿವೆ.

ಭಾರತದಲ್ಲಿ ಶೇ. 88ರಷ್ಟು ಮಹಿಳೆಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಈ ವಿಷಯದಲ್ಲಿ ಭಾರತ ಪ್ರಪಂಚದಲ್ಲೇ ಮೊದಲ ಸ್ಥಾನ ಪಡೆದುಕೊಂಡಿದೆ. ರಕ್ತ ಹೀನತೆಯಿಂದ ನರಳುವ ತಾಯಿಯ ಜತೆಗೆ ಮಗುವು ಸಹ ಇದೇ ಸಮಸ್ಯೆಯಲ್ಲಿ ನರಳುವುದು. ಭಾರತಕ್ಕೆ ಸಮನಾದ ತಲಾ ಆದಾಯ ಹೊಂದಿರುವ ರಾಷ್ಟ್ರಗಳಲ್ಲಿನ ಮಹಿಳೆಯರು ರಕ್ತಹೀನತೆ ಸಮಸ್ಯೆ ಎದುರಿಸುತ್ತಿಲ್ಲ. ಇದಕ್ಕೆ ಕಾರಣ ತಲಾ ಆದಾಯಕ್ಕೆ ತಾಯಿಯ ಆರೈಕೆಗೆ ಸಂಬಂಧವಿಲ್ಲದೆ ನೋಡಿಕೊಳ್ಳುತ್ತಿರುವುದು ಇದಕ್ಕೆ ಕಾರಣ ಎಂದು ವರದಿ ಹೇಳುತ್ತದೆ.

34,140 ಡಾಲರ್ ತಲಾ ಆದಾಯ ಹೊಂದಿರುವ ಅಮೆರಿಕಾ, 24,277 ಡಾಲರ್ ತಲಾ ಆದಾಯ ಹೊಂದಿರುವ ಸ್ವೀಡನ್‌ಗಿಂತ ಹಿಂದೆ ಉಳಿದಿದೆ. ತಲಾ ಆದಾಯ ಎಷ್ಟಿದ್ದರೇನು ತಾಯಿಯನ್ನು ಆದರಿಸುವ ಸಂಸ್ಕೃತಿಬೇಕು.

ಚಿಲಿಯಂತ ಸಣ್ಣ ರಾಷ್ಟ್ರ ಮಹಿಳೆಗೆ ಪ್ರಸವದ ಕುರಿತು ಶಿಕ್ಷಣ ನೀಡುವಲ್ಲಿ ಶೇ. 100ರಷ್ಟು ಸಾಧಿಸಿದೆ. ಆದರೆ ಭಾರತದಲ್ಲಿ ಪ್ರಸವದ ವೇಳೆಯಲ್ಲಾದರೂ ಈ ಕುರಿತು ಶಿಕ್ಷಣ ಪಡೆದಿರುವ ಸಿಬ್ಬಂದಿ ಸಿಗುವುದು ಅಪರೂಪ ಎಂದು ಹೇಳುತ್ತದೆ ಎಂದರೆ ನಮ್ಮ ಆರೋಗ್ಯ ಶಿಕ್ಷಣ ಯಾವ ಮಟ್ಟದಲ್ಲಿದೆ ಎಂಬುದು ತಿಳಿಯುತ್ತದೆ.

ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಪ್ರತಿ ಲಕ್ಷ ಹೆರಿಗೆಯಲ್ಲಿ ಮೂವರು ಮಹಿಳೆಯರು ಮರಣ ಹೊಂದಿದರೆ, ಭಾರತದಲ್ಲಿ 450 ಮಂದಿ ಸಾವನ್ನಪ್ಪುತ್ತಾರೆ. ಸ್ಕ್ಯಾಂಡಿನೇವಿಯನ್ ದೇಶದ ಸಂಸತ್ತಿನಲ್ಲಿ ಮಹಿಳೆಯರಿಗೆ 45ರಷ್ಟು, ಅಮೆರಿಕಾದಲ್ಲಿ ಶೇ. 14ರಷ್ಟು ಮೀಸಲಾತಿ ನೀಡಿವೆ. ಆದರೆ ಭಾರತದಲ್ಲಿ ಶೇ. 9ರಷ್ಟು ಮಾತ್ರ ಮೀಸಲು ನೀಡಲಾಗಿದೆ. ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತರಲು ಕೇಂದ್ರ ಎನ್‌ಡಿಎ ಸರ್ಕಾರ ಹಲವು ವರ್ಷಗಳಿಂದ ಹೆಣಗುತ್ತಿವೆ. ಒಮ್ಮತ ಮೂಡಿಸುವಲ್ಲಿ ಇನ್ನೂ ಯಶಸ್ವಿಯಾಗಿಲ್ಲ. ●

ಸೌಜನ್ಯ : ಕನ್ನಡಪ್ರಭ

ಅಂಬೇಡ್ಕರ್ ವಾದವೊಂದೇ ಸಾಲದು

○ ಡಾ|| ಎಲ್. ಹನುಮಂತಯ್ಯ
ಶಾಸಕರು ಮತ್ತು ದಲಿತ ಚಿಂತಕರು

ಪುರೋಹಿತಶಾಹಿಗಳ ಧಾರ್ಮಿಕ ಕಂದಾಚಾರಗಳು ಮತ್ತು ಪಟ್ಟಭದ್ರರ ಸಾಮಾಜಿಕ-ಆರ್ಥಿಕ ಅಸಮಾನತೆಗಳ ಸಂಕೋಲೆಗಳಿಗೆ ಸಿಕ್ಕು, ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿ ನಲುಗುತ್ತಿದ್ದ ದಲಿತರು, ಅಂಬೇಡ್ಕರ್‌ರವರ ಹೋರಾಟ-ತ್ಯಾಗ ಮತ್ತು ಸಂವಿಧಾನಬದ್ಧ ಹಕ್ಕು-ಅವಕಾಶಗಳಿಂದಾಗಿ ಒಂದಿಷ್ಟು ಸ್ಥಾನ-ಮಾನಗಳನ್ನು ಪಡೆಯುವಂತಾಗಿದ್ದರೂ, ಇದರಿಂದ ಇಡೀ ದಲಿತ ಸಮುದಾಯದ ಪ್ರಗತಿಯಾಗಲೀ, ಬಾಬಾ ಸಾಹೇಬರ ಕನಸು ಹಾಗೂ ಸಂವಿಧಾನದ ಆಶಯವಾಗಲೀ ಈಡೇರಿದಂತಾಗಿಲ್ಲದಿರುವುದು ಇತಿಹಾಸದ ಅಣಕವೇ ಸರಿ.

ಒಂದು ಕಡೆ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ದಲಿತರ ಬಗ್ಗೆ ಬರೀ ಭರವಸೆಗಳನ್ನು ನೀಡುತ್ತಾ, ಸಿಗುತ್ತಿದ್ದ ಅಷ್ಟಿಷ್ಟು ಅವಕಾಶಗಳೂ ಕೈಗೆಟುಕದಂತೆ ನೋಡಿಕೊಳ್ಳುತ್ತಾ, ತಮ್ಮ ಕುತಂತ್ರದಿಂದ ದಲಿತರ ಒಗ್ಗಟ್ಟಿಗೂ ಕಲ್ಲು ಹಾಕುತ್ತಿದ್ದರೆ, ಮತ್ತೊಂದು ಕಡೆ ಕೇವಲ ಕ್ಷುಲ್ಲಕ ಕಾರಣದಿಂದ ಬಲಿಷ್ಠರ ಕೈಗೊಂಬೆಗಳಾಗಿರುವ ದಲಿತ ಸಮುದಾಯದಲ್ಲೇ ಪರಸ್ಪರ ನಂಬಿಕೆ, ಒಗ್ಗಟ್ಟು ಮತ್ತು ಪ್ರಗತಿಯ ಆಶಯಗಳಿಗೆ ಧಕ್ಕೆಯಾಗುವ ಪ್ರಸಂಗಗಳು ಹೆಚ್ಚುತ್ತಿರುವುದು ವಿಷಾದನೀಯ.

ಈ ಎಲ್ಲಾ ಒತ್ತಡಗಳ ಮಧ್ಯೆಯು ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಹೊಸ ಆಲೋಚನೆಗಳತ್ತ ಕೊಂಡೊಯ್ದು ಸಂಕಷ್ಟದಲ್ಲಿರುವ ಈ ವರ್ಗಗಳನ್ನು ಉತ್ತಮ ಬದುಕು, ಚಿಂತನೆ, ಸಂಘಟನೆ ಹಾಗೂ ಅಭಿವೃದ್ಧಿಯತ್ತ ಯೋಚಿಸುವಂತೆ ಮಾಡುವ ಉದ್ದೇಶ ಹೊತ್ತಿರುವ "ಸಂವಾದ"ವು ಸಮಾಜದ ಮುಖ್ಯವಾಹಿನಿಯಲ್ಲಿರುವ ಚಿಂತಕರಿಗೆ ಕೆಲವು ಪ್ರಶ್ನೆಗಳನ್ನು ಕೇಳಿತು. ಕೆಲವು ಸಂಚಿಕೆಗಳಲ್ಲಿ ಈ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ಪ್ರಕಟಿಸುವ ಮೂಲಕ ಅರ್ಥಪೂರ್ಣ ಚರ್ಚೆಗೆ ಸಂವಾದ ವೇದಿಕೆಯಾಗಲಿದೆ. ಓದುಗರೂ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

1) ಅಂಬೇಡ್ಕರ್ ವಾದದ ಪ್ರಸ್ತುತತೆ ಬಗ್ಗೆ ನಿಮ್ಮ ಅಭಿಪ್ರಾಯವೇನು ಹಾಗೂ ಅಂಬೇಡ್ಕರ್ ವಾದದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯವೆ?

2) ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೇಕೆ? ದಲಿತರ ರಾಜಕೀಯ ಗೊತ್ತುಗುರಿ ಹೇಗಿರಬೇಕು? ಬಿಎಸ್‌ಪಿ ದಲಿತರ ಹಿತ ಕಾಯಬಲ್ಲುದೆ?

3) ಧಾರ್ಮಿಕವಾಗಿ ದಲಿತರ ಆಯ್ಕೆ ಏನು? ದಲಿತರು ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವೆ? ಅಥವಾ ಮತಾಂತರ ದಲಿತರ ಸಮಸ್ಯೆಗೆ ಪರಿಹಾರವೇ?

4) ಮೀಸಲಾತಿಯಿಂದ ದಲಿತರಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುತ್ತಿದೆಯೆ? ದಲಿತರ ಪ್ರಗತಿಗೆ ಮೀಸಲಾತಿಯೇ ಪರ್ಯಾಯವೇ? (18%ನೊಳಗೇ ಸಿಕ್ಕಿಕೊಂಡು 82% ಅವಕಾಶಗಳಿಂದ ವಂಚಿತರಾಗುತ್ತಿಲ್ಲವೇ?)

5) ಜಾಗತೀಕರಣದಿಂದ ದಲಿತರ ಬದುಕು ಬದಲಾದೀತೆ? ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ತಮ್ಮ ಗೌರವಯುತ ಪಾಲು ಪಡೆಯಲು ಏನು ಮಾಡಬೇಕು?

1. ಅಂಬೇಡ್ಕರ್‌ವಾದದಿಂದ ದಲಿತ ಸಮಾಜದ ವಿಮೋಚನೆಗೆ ಮಹತ್ತರವಾದ ಕಾಣಿಕೆ ಸಂದಿದೆ. ಅರ್ಧ ಶತಮಾನದಿಂದ ಅಂಬೇಡ್ಕರ್ ಚಿಂತನೆಗಳಿಂದ ಪ್ರೇರಿತರಾದ ದಲಿತ ಸಮುದಾಯವೇ ದಲಿತರ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸುವಂತೆ ಮಾಡಿದೆ. ಪ್ರಾಪಂಚಿಕ ಬದಲಾವಣೆಗಳನ್ನು ಗಮನಿಸಿದವರಿಗೆ ಎಲ್ಲ ಚಿಂತನೆಗಳು ಕಾಲಕಾಲಕ್ಕೆ ಬದಲಾವಣೆ ಬಯಸುತ್ತವೆ ಎಂಬುದನ್ನು ತಿಳಿಸಿಕೊಟ್ಟಿವೆ. ಪ್ರಪಂಚದಲ್ಲಿ ಕ್ರಾಂತಿಯುಂಟು ಮಾಡಿದ ಮಾರ್ಕ್ಸ್‌ವಾದ ಕಂಡಿರುವ ಏರಿಳಿತಗಳನ್ನು ನೋಡಿದರೆ ಅಂಬೇಡ್ಕರ್‌ವಾದವೂ ಬದಲಾವಣೆ ಬಯಸುತ್ತದೆಂಬುದು ನಿರ್ವಿವಾದ. ಆದರೆ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ ಜೀವಂತವಾಗಿರುವವರೆಗೂ ಅಂಬೇಡ್ಕರ್ ಚಿಂತನೆಗಳ ಸಾರ ದಲಿತನಾಡಿಯಲ್ಲಿ ಬಿಸಿಯಾಗಿರಲೇಬೇಕು. ಇದಕ್ಕೆ ಪೂರಕವಾದ ಅಂಶಗಳನ್ನು ವಿವಿಧ ವಿಚಾರಧಾರೆಯಿಂದ ಪಡೆಯಬೇಕು.

ಅಂಬೇಡ್ಕರ್‌ವಾದವೊಂದೇ ದಲಿತರ ವಿಮೋಚನೆ ಮಾಡಬಲ್ಲದು ಎಂದು ಹೇಳುವ ಧೈರ್ಯ ಇಂದಿಗೆ ಸಾಲದಾಗಿದೆ. ಅಂಬೇಡ್ಕರ್ ಚಿಂತಿಸಿದ ಅನೇಕ ಅಂಶಗಳನ್ನು ಅವರು ಸಂವಿಧಾನದಲ್ಲಿ ತರಲಾಗಲಿಲ್ಲ. ಸಂವಿಧಾನ ಪರಿಮಿತಿಯೊಳಗೆ ಬಂದಿರುವ ವಿಷಯಗಳನ್ನು ಪೂರ್ಣವಾಗಿ ಜಾರಿಗೆ ತರುವಲ್ಲಿ ವ್ಯವಸ್ಥೆ ಸೋತುಹೋಗಿದೆ. ಸಾವಿರಾರು ವರ್ಷಗಳ ಜಾತಿ ವ್ಯವಸ್ಥೆ ನಡೆಸಿದ ಶೋಷಣೆಯನ್ನು ಒಂದು ನೂರು ವರ್ಷಗಳಲ್ಲಿ ತೀರಿಸಲಾದೀತೆ? ಅದಕ್ಕಾಗಿಯೇ ಅಂಬೇಡ್ಕರ್ ಸಂವಿಧಾನದ ಆಶಯಗಳನ್ನು ಜಾರಿಗೊಳಿಸಲು ಅಧಿಕಾರಸ್ಥರು ತುಂಬು ಮನಸ್ಸಿನಿಂದ ಪ್ರಯತ್ನಿಸಬೇಕೆಂದು ಪದೇ ಪದೇ ಹೇಳುತ್ತಿದ್ದರು. ಆದ್ದರಿಂದ ಅಂಬೇಡ್ಕರ್‌ವಾದವೇ ಬಹುಮುಖಿ ಸಮಾಜದ ಸಿದ್ಧಸೂತ್ರವಾಗಲಾರದು. ಇಂದಿನ ಜಾಗತೀಕರಣದ ಹಿನ್ನೆಲೆಯಲ್ಲಿ ಅಂಬೇಡ್ಕರ್‌ವಾದದ ವಿಶ್ಲೇಷಣೆ ನಡೆಸಬೇಕಾದ್ದು ನಮ್ಮ ಕರ್ತವ್ಯವಾಗಿದೆ.

2) ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೆಂಬುದು ನಿಜ. ಇದಕ್ಕೆ ವಿಶಾಲ ತಳಹದಿಯ ರಾಜಕೀಯ, ಸಾಮಾಜಿಕ ಚಿಂತನೆ ಬೇಕಾಗುತ್ತದೆ. ಕೇವಲ ಭಾವನಾತ್ಮಕವಾಗಿ ಒಂದುಗೂಡಿದ ದಲಿತ ಸಮೂಹ ಉದಾತ್ತವಾದ ಆದರ್ಶಗಳನ್ನು ಇಟ್ಟುಕೊಂಡು ಕಾರ್ಯಕ್ರಮ ರೂಪಿಸಬೇಕು. ಇದಕ್ಕಿರುವ ಮೊದಲ ಅಡ್ಡಿಯೆಂದರೆ ಅನಕ್ಷರಸ್ಥ ಸಮೂಹ. ಎರಡನೆಯ ಕಾರಣವೆಂದರೆ ಸಾಂಸ್ಕೃತಿಕವಾಗಿ ಒಂದುಗೂಡಲಾಗದ ಸಂಕಟ ಸ್ಥಿತಿ. ಮೂರನೆಯದಾಗಿ ಸಾಂಸ್ಕೃತಿಕವಾಗಿ ಯೋಚಿಸುತ್ತಲೇ ಆರ್ಥಿಕ-ಸಾಮಾಜಿಕ ಕಾರ್ಯಕ್ರಮ ರೂಪಿಸಲಾಗದೆ ತೊಳಲಾಟದಲ್ಲಿರುವುದು. ಇದಕ್ಕಿಂತಲೂ ಶೂದ್ರ ಸಮೂಹವೆಂಬ ಪರಿಕಲ್ಪನೆಯೇ ನಮ್ಮ ಸಾಮಾಜಿಕ ಚಳವಳಿಯ ಭಾಗವಾಗಿಲ್ಲದಿರುವುದು.

ದಲಿತರ ರಾಜಕಾರಣದ ಆತ್ಮ ಜಾತಿ ಮೂಲವಾದ ಜಾತಿ ವಿವೇಚನಾ ಹೋರಾಟವಾಗಬೇಕು. ಇದರ ದೇಹ ಸಮಸ್ತ ದೇಶದ ವಿಮುಕ್ತಿಯ ಕಡೆಗಿರಬೇಕು. ಮಾಂಸಖಂಡಗಳು ಎಲ್ಲ ಜಾತಿ, ಧರ್ಮಗಳನ್ನೂ ಮೀರಿದ ಪ್ರಜ್ಞಾವಂತಿಕೆಯಾಗಿರಬೇಕು. ಇಲ್ಲವಾದರೆ ನಾವು ಒಂದು ಕೊಂಡವನ್ನು ನಿರ್ಮಿಸಿ ನಾವೇ ಬೀಳಬಹುದಾದ ಅಪಾಯಕ್ಕೆ ಸಿಲುಕುತ್ತೇವೆ. ಬಿಎಸ್‌ಪಿ ದಲಿತರ ಹಿತ ಕಾಯಬಲ್ಲುದೆ ಎಂಬ ಪ್ರಶ್ನೆಯ ಉತ್ತರಕ್ಕೆ ಅನೇಕ ಆಯಾಮಗಳಿವೆ. ದಲಿತ ನಾಯಕತ್ವದಿಂದ ಹುಟ್ಟಿ, ಅವರಿಂದಲೇ ಅಧಿಕಾರ ಪಡೆದು

(24ನೇ ಪುಟಕ್ಕೆ)

ಅಂಬೇಡ್ಕರ್ ವಾದ ಚಿಮ್ಮು ಹಲಗೆ ಯಾಗಿರಬೇಕು

○ ಅಗ್ರಹಾರ ಕೃಷ್ಣಮೂರ್ತಿ
ಸಾಹಿತಿ ಮತ್ತು ಚಿಂತಕರು

ಅಂಬೇಡ್ಕರ್‌ವಾದವಷ್ಟೆ ವಿಮೋಚನೆಗೆ ದಾರಿಯೆಂಬುದನ್ನು ಈ ಹೊತ್ತು ನಾನು ಒಪ್ಪಲಾರೆ. ಈ ಹೊತ್ತಿನ ದಲಿತನೊಬ್ಬನಿಗೆ ಅದೊಂದು ಚಿಮ್ಮು ಹಲಗೆಯಾಗಬೇಕು. ಈ ಚಿಮ್ಮು ಹಲಗೆಯನ್ನು ಅತ್ಯಂತ ಸಮರ್ಥವಾಗಿ, ದಿಟ್ಟವಾಗಿ, ನಾಜೂಕಿನಿಂದ ಬಳಸುವುದನ್ನು ಕಲಿತು ನಂತರ ಈಜಿನ ವಿವಿಧ ವರಸೆಗಳನ್ನು ತೋರಬೇಕು. ಅದರಲ್ಲಿ ಬುದ್ಧ, ಗಾಂಧಿ, ಲೋಹಿಯಾರ ವರಸೆಗಳನ್ನು ಮರೆಯುವಂತೆಯೇ ಇಲ್ಲ.

1. ಅಂಬೇಡ್ಕರ್ ವಾದವು ಭಾರತದ ಸಂದರ್ಭದಲ್ಲಿ ಯಾವತ್ತೂ ಪ್ರಸ್ತುತವಾಗಿರುವಂಥದು. ಭಾರತದ ಪಟ್ಟಭದ್ರ ರಾಜಕಾರಣ ಅಂಬೇಡ್ಕರ್‌ವಾದವನ್ನು ತನ್ನ ಓಟಿನ ಬ್ಯಾಂಕನ್ನಾಗಿಸಿಕೊಂಡು ವಿಕೃತಗೊಳಿಸಿದೆ. ಭಾರತದ ಎಡ-ಬಲ-ಮಧ್ಯಮ ನೀತಿ ಸಿದ್ಧಾಂತ ಹೇಳುವ ಎಲ್ಲ ರಾಜಕೀಯ ಪಕ್ಷಗಳೂ ಈ ಕೃತ್ಯದಲ್ಲಿ ತೊಡಗಿರುವುದು ಒಂದು ದೊಡ್ಡ ದುರಂತವಾಗಿದೆ. ಅಂಬೇಡ್ಕರ್ ವಾದಕ್ಕೆ ಯಾವುದೇ ಮಿತಿ ಇಲ್ಲದಂಥ ವಿಶಾಲ ಅರ್ಥವಿದ್ದು ಅದನ್ನು ಕೇವಲ ದಲಿತರ ವಿಮೋಚನೆಗಷ್ಟೆ ಅಲ್ಲದೆ ಒಟ್ಟು ಸಮಾಜದ ಅತ್ಯಂತ ನ್ಯಾಯಯುತವಾದ ಹಾಗೂ ಆರೋಗ್ಯಪೂರ್ಣವಾದ ಬೆಳವಣಿಗೆಗೆ ಪುಷ್ಟಿದಾಯಕವಾದವನ್ನಾಗಿ ಬಳಸಿಕೊಳ್ಳುವ ಅವಕಾಶವಿದೆ. ಅದು ಬಹಳ ಮುಖ್ಯವಾಗಿ ಆರ್ಥಿಕ ಬದಲಾವಣೆಯ ಜೊತೆ ಜೊತೆಗೇ ಸಾಮಾಜಿಕ ಬದಲಾವಣೆಯ ಅಸ್ತ್ರವಾಗಬೇಕು. ಹೀಗೆ ಸಮಗ್ರ ಸಮಾಜದ ಬೆಳವಣಿಗೆಗೆ ಈ ವಾದವನ್ನು ಬಳಸುವವರು ದಲಿತರೇ ಆಗಿರಬೇಕೆಂದು ಹೇಳಿದರೆ ಅದು ಕೆಲವರು ಹೇಳುವ ಹಾಗೆ 'ದಲಿತರ ರಾಜ್ಯ' ಬಂದುಬಿಡುತ್ತದೆ ಎಂಬ ದಿಗಿಲಿನಂತೆ ಭಾಸವಾಗುತ್ತದೆ! ಹಾಗೆ ದಿಗಿಲುಗೊಳ್ಳುವವರನ್ನು ತೆಕ್ಕೆಗೆ ತೆಗೆದುಕೊಂಡು ರಕ್ಷಿಸುವ, ಸುಭದ್ರತೆ ಒದಗಿಸುವ ಅಸ್ತ್ರವನ್ನಾಗಿ ಮಾರ್ಪಡಿಸುವುದು ದಲಿತ ಚಿಂತಕರ, ದಲಿತ ರಾಜಕೀಯ ನಾಯಕರ ಮುಖ್ಯ ಗುರಿಯಾಗಬೇಕು.

ಅಂಬೇಡ್ಕರ್‌ವಾದವಷ್ಟೆ ವಿಮೋಚನೆಗೆ ದಾರಿಯೆಂಬುದನ್ನು ಈ ಹೊತ್ತು ನಾನು ಒಪ್ಪಲಾರೆ. ಈ ಹೊತ್ತಿನ ದಲಿತನೊಬ್ಬನಿಗೆ ಅದೊಂದು ಚಿಮ್ಮು ಹಲಗೆಯಾಗಬೇಕು. ಈ ಚಿಮ್ಮು ಹಲಗೆಯನ್ನು ಅತ್ಯಂತ ಸಮರ್ಥವಾಗಿ, ದಿಟ್ಟವಾಗಿ, ನಾಜೂಕಿನಿಂದ ಬಳಸುವುದನ್ನು ಕಲಿತು ನಂತರ ಈಜಿನ ವಿವಿಧ ವರಸೆಗಳನ್ನು ತೋರಬೇಕು. ಅದರಲ್ಲಿ ಬುದ್ಧ, ಗಾಂಧಿ, ಲೋಹಿಯಾರ ವರಸೆಗಳನ್ನು ಮರೆಯುವಂತೆಯೇ ಇಲ್ಲ.

2. ಒಂದೇ ಸಮುದಾಯವಾಗಿ ಯಾವ ಸಮುದಾಯ ಯೋಚಿಸುತ್ತಿದೆ ಹೇಳಿ? ಒಂದೇ ಸಮುದಾಯವಾಗಿ ಯೋಚಿಸುವ ಸಮುದಾಯ ಏನನ್ನು ಯೋಚಿಸುತ್ತಿದೆ ಎಂಬುದು ಗುಟ್ಟಾಗಿ ಉಳಿದಿಲ್ಲ ಅಲ್ಲವೇ? ಈ ಪ್ರತಿ ಪ್ರಶ್ನೆಗಳು ಒಗಟಾಗಿ ಕಾಣುತ್ತಿಲ್ಲ ಎಂದು ಭಾವಿಸುತ್ತೇನೆ. 'ವೈವಿಧ್ಯತೆ' ಎನ್ನುವ ಶಬ್ದ ಬಳಸಿದರೆ ಕ್ಲೀಷೆ ಅನ್ನಿಸಬಹುದು.

ದಲಿತ ರಾಜಕಾರಣದ ಗೊತ್ತುಗುರಿ ಮೊದಲ ಪ್ರಶ್ನೆಯ ಉತ್ತರದಲ್ಲಿದೆಯೆಂದು ಸೂಚಿಸಬಹುದು.

ಬಿಎಸ್‌ಪಿ ಖಂಡಿತ ದಲಿತರ ಹಿತ ಕಾಪಾಡಬಲ್ಲದು. ಯಾವಾಗ ಗೊತ್ತೆ? ಅದು ಕಾನ್ಸಿರಾಂ ಕಂಕುಳಿನಿಂದ ಕೆಳಗಿಳಿದು ಅಂಗಳದಲ್ಲಿ ಓಡಾಡುತ್ತ ಭಾರತದ ಎಲ್ಲ ದಿಕ್ಕುಗಳ ಕಡೆಗೆ ಸ್ವತಂತ್ರವಾಗಿ ಓಡಾಡುತ್ತಾ ಬೇರೆ ಬೇರೆ ಭಾಗದ ಸ್ಥಳೀಯ ಬಿಎಸ್‌ಪಿ ಕೂಸುಗಳನ್ನು ಬಲಗೊಳಿಸಬೇಕು. ಇಲ್ಲವಾದರೆ ಅದು ಉತ್ತರ ಪ್ರದೇಶದ ಕಾನ್ಸಿರಾಂರ ಕಿರುಕುಳ ಕೂಸಾಗಿ ಆತುರ ಮತ್ತು ಆಸೆ ಬುರುಕ ವ್ಯಕ್ತಿತ್ವವನ್ನು ಪಡೆದುಬಿಡುತ್ತದೆ. ಈಗಾಗಲೇ ಅಂಥ ವ್ಯಕ್ತಿತ್ವವನ್ನು ಪಡೆದೇ ಬಿಟ್ಟಿದೆ ಎಂದರೆ ತಪ್ಪೇನೂ ಆಗಲಾರದೆನಿಸುತ್ತದೆ.

3. 'ಅಸ್ಪೃಶ್ಯ ಅನುಭವ'ವಿಲ್ಲದ ಯಾವ ವ್ಯಕ್ತಿ ಇದರ ಬಗ್ಗೆ ಮಾತಾಡಿದರೂ ಢೋಂಗಿಯಾಗಿ ಕಾಣುತ್ತದೆ. ಮತಾಂತರದ ಬಗ್ಗೆ ನಾನು ಏಕಾಂತವಾಗಿ ಕುಳಿತು ತುಂಬಾ ಹೊತ್ತು ಯೋಚಿಸಿದರೆ, ನನಗೆ ತೀವ್ರವಾಗಿ ಕಾಡುವ ಯಾವ ಸಮಸ್ಯೆ, ಯಾವ ಅನ್ಯಾಯ, ನಾನು ಮತಾಂತರವಾಗಬೇಕೆಂಬ ಯೋಚನೆಯನ್ನು ಹುಟ್ಟಿಸುತ್ತದೆ? ಇದು ಅನೇಕ ಸಂದರ್ಭಗಳಲ್ಲಿ ತೀರಾ ತೀರಾ ವೈಯಕ್ತಿಕ ನೆಲೆಯಲ್ಲಿ ಸಂಭವಿಸುವ ಅಥವಾ ತೆರೆದುಕೊಳ್ಳುವ ಅಂತಿಮ ಮಾರ್ಗ ಎಂದು ನನಗೆ ಗೋಚರಿಸುತ್ತದೆ.

ಇಂಥದ್ದೊಂದು ಮಾರ್ಗವನ್ನು ಕಂಡುಕೊಳ್ಳುವಾಗ ಅನುಭವಿಸುವ ನೋವು, ಸಂಕಟ, ದುಃಖ, ಸಾಂಸ್ಕೃತಿಕ-ಸಾಮಾಜಿಕ ಬಿಡುಗಡೆಯನ್ನು ಕಲ್ಪಿಸಿಕೊಳ್ಳುವುದೂ ನನ್ನಂಥವನಿಗೆ ಸಾಧ್ಯವಿಲ್ಲವೆನಿಸುತ್ತದೆ. ಎಲ್ಲ ರೀತಿಯ ರಕ್ಷಣೆಯ ಅಗತ್ಯ ಮತ್ತು ಹಂಬಲವೇ ಮತಾಂತರವೆಂಬ ಮಾಯಾಂಗನೆ ತೋರುವ ಮಾಂತ್ರಿಕತೆ ಅಥವಾ ಮಾಟ. ಅಂಥ ಮಾಟಗಾತಿ ಒಲಿದರೆ ಆತ್ಮಸಂಗಾತಿಯೂ ಆಗಬಹುದು, ಮುನಿದರೆ ನರಕವನ್ನೂ ಸೃಷ್ಟಿಸಬಹುದು. ಅಂಥದ್ದರಲ್ಲಿ ಸಾಮೂಹಿಕ ಮತಾಂತರದ ಬಗ್ಗೆ ಯೋಚಿಸಿದರೆ ಸಾಕು ನಮ್ಮ ಸಮಾಜದಲ್ಲಿನ ಕ್ರೌರ್ಯ ಕಣ್ಣಿಗೆ ರಾಚುತ್ತದೆ. ಮತಾಂತರ ಅಂಥ ಭದ್ರವಾದ ರಕ್ಷಣೆಯನ್ನು ಒದಗಿಸುತ್ತದೆ ಎಂಬ ಖಾತ್ರಿ ಸಿಕ್ಕರೆ ಅಂಥ 'ಮುಕ್ತಿ' ಮತ್ತೊಂದಿಲ್ಲ.

4. ಮೀಸಲಾತಿ ಎಲ್ಲ ಕಾಲಕ್ಕೂ ಕೇವಲ ಎಸ್‌ಸಿ ಮತ್ತು ಎಸ್‌ಟಿ ವರ್ಗಗಳಿಗೆ ಮಾತ್ರ ಇರಬೇಕು ಎಂಬುದು ನನ್ನ ಅಭಿಪ್ರಾಯ. ಈ ಹೊತ್ತು ಮೀಸಲಾತಿ ತಳೆಯುತ್ತಿರುವ ಹೊಸ ಹೊಸ ಅವತಾರಗಳೇ ಅದಕ್ಕೆ ಕಾರಣ. ಬಹುಶಃ ಆಧುನಿಕ ಭಾರತದಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಮತ್ತು ಕೇಂದ್ರದಲ್ಲೂ ಈ ಪ್ರಕ್ರಿಯೆ ಉಂಟುಮಾಡಿರುವ ಗೊಂದಲ ಮೀಸಲಾತಿಯೆಂಬ ಪವಿತ್ರ ಪರಿಕಲ್ಪನೆಯನ್ನೇ ನಾಶಗೊಳಿಸುತ್ತದೆ. ಹಾಗಿದ್ದರೆ ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಸಣ್ಣಪುಟ್ಟ ಜಾತಿಗಳ, ಓಬಿಸಿಗಳ ಗತಿಯೇನಾಗಬೇಕೆಂಬ ಪ್ರಶ್ನೆ ಉಳಿದೇಬಿಡುತ್ತದೆ. ಅವನ್ನೆಲ್ಲ ಬೇರೆ ಬೇರೆ ರೀತಿಯಲ್ಲಿ ಬಗೆಹರಿಸುವಾಗ ನಮ್ಮ ರಾಜಕೀಯ ಪಕ್ಷಗಳು ಮತ್ತು ನಾಯಕರು ಈವರೆಗೆ ತೋರಿರುವುದು ಕೇವಲ ಸ್ವಾರ್ಥ ರಾಜಕಾರಣ ಮಾತ್ರ ಎಂಬುದು ನಿಚ್ಚಳವಾಗಿ ಕಾಣುತ್ತಿದೆ. ಹಾಗಾಗಿಯೇ ಇಂದು ಮುಂದುವರೆದ ಜಾತಿಗಳವರಿಗೂ ಮೀಸಲಾತಿಯ ಅಗತ್ಯತೆಯನ್ನು ಕುರಿತು ರಾಜಕೀಯ ಪಕ್ಷಗಳು ಲಾಲಸೆಯಿಂದ ಚಿಂತಿಸುತ್ತಿರುವುದು.

ಅಂಬೇಡ್ಕರ್ ವಾದವನ್ನು ದಲಿತ ಧುರೀಣರು ಸಮರ್ಥ ಅಸ್ತ್ರವನ್ನಾಗಿ ಬಳಸಿದರೆ, ಸಮಾಜದ ಎಲ್ಲ ವರ್ಗಗಳ ಏಳಿಗೆಗೆ ಬಹುಸಂಖ್ಯಾತ ದಲಿತರೇ ಮಾರ್ಗದರ್ಶಕರಾದರೆ ಅದು ಗಾಂಧೀಜಿಯವರ ಆತ್ಮಕ್ಕೆ ಸಂತೋಷ ನೀಡುವುದಕ್ಕಿಂತಲೂ ಹೆಚ್ಚು ಡಾ|| ಬಾಬಾ ಸಾಹೇಬರ ಆತ್ಮಕ್ಕೆ ಸಂತೋಷವನ್ನು ಉಂಟುಮಾಡಬಲ್ಲದು.

5. ಈ ವಿಚಾರದಲ್ಲಿ ನನ್ನ ಮನಸ್ಸು ನೈತಿಕ ನಿಲುವಿನ ಕಡೆಗೇ ಹೆಚ್ಚು ವಾಲುತ್ತದೆ. ದಲಿತರು ಋಜುಮಾರ್ಗವನ್ನೇ ಕಠಿಣ ವ್ರತದಂತೆ ಅನುಸರಿಸಬೇಕೆಂದು ಹೇಳಿದರೆ ಆದರ್ಶದ ಮಾತುಗಳಂತೆ ಕೇಳಿಸುತ್ತದೆ. ನಮ್ಮ ದಲಿತೇತರ ಸಮಾಜದಲ್ಲಿನ ವ್ಯಕ್ತಿಗಳ ಬೂಟಾಟಿಕೆ, ನಯವಂಚನೆ, ಸ್ವಾರ್ಥ, ಲಂಚಗುಳಿತನ, ಇವುಗಳನ್ನು ಕಂಡು ದಲಿತರು ವಿಷಾದದಿಂದ ನಗುವುದನ್ನು ಕಲಿತರೆ ಮತ್ತು ಬುದ್ಧ ತೋರಿದ ಸರಳ ಬದುಕಿನ, ಕರುಣೆ ಪ್ರೀತಿಯನ್ನು ಹಂಚಿಕೊಳ್ಳುವುದನ್ನು ಕಲಿತರೆ ಮುಖ್ಯವಾಹಿನಿಯಲ್ಲಿ ಗೌರವಯುತ ಪಾಲು ಪಡೆಯಬಹುದು. ಇದು ದಲಿತ ಚೇತನಗಳಿಗೆ ಅತ್ಯಂತ ಸುಲಭದ ಕೆಲಸ ಯಾಕೆಂದರೆ ಅವರಿಗೆ ಈ ಗುಣಗಳು ಒಲಿಯುವಷ್ಟು ಸುಲಭವಾಗಿ ಇತರರಿಗೆ ಒಲಿಯಲಾರವು.

ಇನ್ನು ಜಾಗತೀಕರಣ ದಲಿತರಿಗೇ ಪ್ರತ್ಯೇಕವಾಗಿ ಪರಿಣಾಮವುಂಟುಮಾಡುತ್ತದೆ ಎಂದು ನಾನು ತಿಳಿದಿಲ್ಲ. ಅದರ ಹೊಡೆತ ಎಲ್ಲರಿಗೂ ಒಂದೇ ಬಗೆಯದಾಗಿರುತ್ತದೆ ಎಂಬುದು ನನ್ನ ನಂಬಿಕೆ. ಇದು ತಪ್ಪಿರಬಹುದು. ಇದರ ಆರ್ಥಿಕ ಸಾಧಕ ಬಾಧಕಗಳನ್ನು ಅರ್ಥಶಾಸ್ತ್ರಜ್ಞರು ನಮಗೆ ತಿಳಿಸಬಲ್ಲರು.

ಅಂಬೇಡ್ಕರ್ ವಾದವೊಂದೇ ಸಾಲದು

(22ನೇ ಪುಟದಿಂದ)

ಅವರ ಹಿತಕಾಯದಿದ್ದರೆ ಎಷ್ಟು ದಿನ ಅಧಿಕಾರದಲ್ಲಿ ಉಳಿಯಲಾದೀತು. ಬಹುಶಃ ಈ ಪ್ರಶ್ನೆ ಉದ್ಭವಿಸುವುದು ಅದು ಮಾಡಿಕೊಳ್ಳುತ್ತಿರುವ ಕೂಡಿಕೆಯಿಂದ ಅನ್ನಿಸುತ್ತಿದೆ. ಈ ಅಪವಿತ್ರ ಕೂಡಿಕೆ ದಲಿತರ ಹಿತವನ್ನು ಕಾಪಾಡಬಲ್ಲುದೆ ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ರಾಜಕಾರಣಕ್ಕೆ ಉನ್ನತ ಆದರ್ಶಗಳಿರಬೇಕೆಂದು ಹೇಳುವುದು ಸರ್ವಥಾ ಸತ್ಯವಾದದ್ದೆ. ಆದರೆ ಭಾರತದ ಸಧ್ಯದ ರಾಜಕೀಯ ದೊಂಬರಾಟದಲ್ಲಿ ಈ ಆಟ ಎಷ್ಟು ದಿನಗಳು? ಇದರ ನಡುವೆಯೂ ದಲಿತರು ಶತ್ರುವಿನ ಜೊತೆ ಸರಸವಾಡುವುದು ಒಳ್ಳೆಯ ಸೂಚನೆಯಲ್ಲ! ಪರಿಸ್ಥಿತಿ ಹಾಗೆ ಮಾಡಿಸಿದ್ದರೆ ನಮ್ಮ ಹಿತಾಸಕ್ತಿಗಳಿಗೆ, ಆಶಯಗಳಿಗೆ ಧಕ್ಕೆಯಾಗದಂತೆ ಕಾಪಾಡಬೇಕಾದ್ದು ನಾಯಕರ ಕರ್ತವ್ಯ. ಈಗಿನ ಹೊಂದಾಣಿಕೆಯನ್ನು ದೇಶಪೂರ್ತಿ ವಿಸ್ತರಿಸಿದರೆ ಅವಸಾನಕ್ಕೆ ನಾಂದಿಯಾದೀತು! ಹುನ್ನಾರವನ್ನರಿಯದೆ ಚಕ್ರವ್ಯೂಹವೊಕ್ಕ ಅಭಿಮನ್ಯುವಿನಂತಾಗಬಾರದು. ಅಧಿಕಾರ ಎಲ್ಲ ರೀತಿಯ ರಾಜಿಗಳನ್ನು ಮಾಡಿಸಿಬಿಡಬಹುದು. ಅಂತಹ ಅಧಿಕಾರಕ್ಕಿಂತಲೂ ನಾಳಿನ ಭಾರತವನ್ನು ಉಳಿಸಿಕೊಳ್ಳಬೇಕಾದ್ದು ಜರೂರಿನ ಸಂಗತಿ.

3) ಧಾರ್ಮಿಕವಾಗಿ ದಲಿತರು ಬೇರೆಲ್ಲರಿಗಿಂತಲೂ ಉನ್ನತ ಸ್ಥಾನದಲ್ಲಿದ್ದಾರೆ. ಹಿಂದೂ ಧರ್ಮ ಅವರನ್ನು ತಮ್ಮೊಳಗೆ ಸೇರಿಸಿಕೊಂಡು ಅವರಿಗೆ ಅಪವಿತ್ರವೆಂಬ ಮುಡಿಯುಡಿಸಿ, ಮಂಡೆಬೋಳು ಮಾಡಿ ಅವಮಾನಗೈಯ್ಯುತ್ತಿದೆ. ಇಂತಹ ಹಿಂದೂ ಧರ್ಮದ ನಿರಾಕರಣೆಯಲ್ಲಿಯೇ ದಲಿತ ಧರ್ಮವಿದೆ. ಇದು ಹಿಂದೂ ಧರ್ಮದ ಅಧೀನ ಧರ್ಮವಲ್ಲ. ಇದು ಮೂಲಭಾರತೀಯರ ಆದಿಧರ್ಮ. ಕಂಡದ್ದನ್ನು ಪೂಜಿಸುವ ಕಾಣದ್ದನ್ನು ಕನವರಿಸುವ ಆದರೆ ಆಸೆ ಪಡಿದಿರುವ ಈ ದಲಿತಧರ್ಮ ಪ್ರಪಂಚದ ಎಲ್ಲ ಧರ್ಮಗಳ ಆಚರಣೆಗಿಂತಲೂ ಪ್ರಾಯೋಗಿಕವಾದದ್ದು. ಪರಿಪೂರ್ಣತೆಯ ಹತ್ತಿರವಿರುವಂಥಾದ್ದು.

ಈ ದಲಿತ ಧರ್ಮ ಹಿಂದೂ ಕಂದಾಚಾರಗಳನ್ನು ಧಿಕ್ಕರಿಸಿದೆ. ಕಾಡಿನ ಮೂಲದಿಂದ ಹುಟ್ಟಿದ ಶಿವನ ಸಮೀಪವಿದೆ. ಆದರೆ ಪಾವಿತ್ರ್ಯಲಿಂಗದ ಶಿವನಿಂದ ದೂರವಿದೆ. ಇಂಥದೊಂದು ಜನಪದ ಧರ್ಮವನ್ನು ಬುದ್ಧ ಧರ್ಮದ ಜೊತ ಸಮೀಕರಣಗೊಳಿಸುವ ಮೂಲಕವೇ ಆದರ್ಶ ಧಾರ್ಮಿಕ ಜೀವನ ನಡೆಸಿದ ದಲಿತ ಸಂತರು ಇದ್ದಾರೆ.

ಹಿಂದೂಗಳ ಅನೈತಿಕ ಬಲಾತ್ಕಾರಗಳಿಂದ ಬದುಕುಳಿಯಲು ದಲಿತರು ಮತಾಂತರಗೊಂಡಿದ್ದಾರೆ. ಮತಾಂತರ ಬೇಡವೆಂದು ಬೊಬ್ಬೆ ಇಡುವವರು ಅಸ್ಪೃಶ್ಯತೆ ವಿರುದ್ಧ ಹೋರಾಟ ಸಾರಬೇಕು. ಜಾತಿ ವ್ಯವಸ್ಥೆಯ ಕೊಳಕಿನ ವಿರುದ್ಧ ಕತ್ತಿ ತ್ರಿಶೂಲಗಳನ್ನು ಬೀಸಬೇಕು. ಇದರ ಸೊಲ್ಲೆತ್ತದೆ ಹಿಂದೂ ಧರ್ಮದ ಆದರ್ಶಗಳ ಬಗ್ಗೆ ಮಾತನಾಡುವುದು ಸೋಗಲಾಡಿತನ. ಈ ಸೋಗಲಾಡಿತನದಿಂದ ಸುಧಾರಣೆ ಸಾಧ್ಯವಿಲ್ಲ. ಮತಾಂತರಗೊಂಡ ಬುದ್ಧ ಬಸವಣ್ಣನವರು ಹೊಸ ಧರ್ಮಗಳನ್ನು ಕಟ್ಟಿದರು. ಆದರೆ ಇವರು ಅಸ್ಪೃಶ್ಯತೆಯ ಶಾಪದಿಂದ ಮುಕ್ತರಾಗಲು ನೆರವಾದರು. ಸಾಂಸ್ಥಿಕಗೊಂಡ ಈ ಧರ್ಮಗಳಿಗೆ ಮತಾಂತರಗೊಂಡರೆ ನಾವು ಮುಕ್ತರಾಗಬಹುದೆ' ಎಂಬ ಪ್ರಶ್ನೆಗೆ ಉತ್ತರ ಸಿಗುವುದು ಕಷ್ಟ. ಅದಕ್ಕಾಗಿಯೇ ಮತಾಂತರದಿಂದ ಮಾನವರಾಗುತ್ತೇವೆಂಬುದು ಇಂದಿಗೂ ಚರ್ಚೆಗೆ ವಸ್ತು. ಆರ್ಥಿಕ-ಸಾಮಾಜಿಕ ಉನ್ನತಿಯಿಲ್ಲದೆ ಮತಾಂತರ ಅಥವಾ ಧರ್ಮಾಂತರ ಹೆಸರನ್ನು ಮಾತ್ರ ಬದಲಾಯಿಸಬಲ್ಲುದು. ಹಳೆಯಮತದ ಕೊಳೆತೊಳೆಯದೆ ಆತ್ಮ ಬದಲಾದೀತು ಹೇಗೆ? ಉಳಿದ ಹೃದಯಗಳ ಅರಳಿಸೀತು ಹೇಗೆ?

> **ಅಂಬೇಡ್ಕರ್‌ವಾದವೇ ಬಹುಮುಖಿ ಸಮಾಜದ ಸಿದ್ಧ ಸೂತ್ರವಾಗಲಾರದು. ಇಂದಿನ ಜಾಗತೀಕರಣದ ಹಿನ್ನೆಲೆಯಲ್ಲಿ ಅಂಬೇಡ್ಕರ್‌ವಾದದ ವಿಶ್ಲೇಷಣೆ ನಡೆಸಬೇಕಾದ್ದು ನಮ್ಮ ಕರ್ತವ್ಯವಾಗಿದೆ.**

4) ಮೀಸಲಾತಿಯಿಂದ ದಲಿತರ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುತ್ತದೆ ಎಂಬುದು ಸರಿಯಲ್ಲ. ಕಾರಣ ಸ್ಪರ್ಧೆಗೆ ಇಳಿಯುವ ಮನಸ್ಸನ್ನು ಸೃಷ್ಟಿಸದೆ ಕಡಿಮೆಯಾಗುವುದು ಹೇಗೋ ಐವತ್ತು ವರ್ಷಗಳಲ್ಲಿ ದಲಿತರು ಸಾರ್ವಜನಿಕ ಬದುಕಿನ ಭಾಗವಾಗಲು ಮೀಸಲಾತಿ ಕಾರಣವಾಯಿತು. ಈ ಮೀಸಲಾತಿಯನ್ನು ಬಳಸಿಕೊಂಡವರು ಸ್ಪರ್ಧೆಗೆ ಇಳಿಯಬಲ್ಲರು. ಸ್ಪರ್ಧಿಸುವಂತೆ ಮಾಡುವುದು ಸಮಾಜದ ಜವಾಬ್ದಾರಿಯಾಗಬೇಕು. ಶೇ. 82ರಲ್ಲಿರುವ ಅವಕಾಶಗಳನ್ನು ಜಾತಿ ಬೆಂಬಲವಿಲ್ಲದೆ ಯಾರಾದರೂ ಪಡೆಯಬಹುದೆಂಬ ಸಮಾನ ವೃತ್ತಿ ಕಲ್ಪನೆ ನಮ್ಮ ಮುಂದಿದೆಯೆ?

ದಲಿತರಲ್ಲಿರುವ ಬಹು ಸಂಖ್ಯಾತರು ಹಳ್ಳಿಯೆಂಬ ಕೂಪದಲ್ಲಿ ಬೇಯುತ್ತಿರುವಾಗ ಬೇರೆಯವರೊಡನೆ ಸ್ಪರ್ಧೆ ಸಾಧ್ಯವೆ? ಹೋಗಲಿ ನಮ್ಮ ಗ್ರಾಮೀಣ ಮಕ್ಕಳು ತಮ್ಮದೇ ಜಾತಿಯ ನಗರವಾಸಿಗಳ ಮಕ್ಕಳ ಜೊತೆ ಸ್ಪರ್ಧೆ ಮಾಡಬಲ್ಲುವೆ? ಈ ದ್ವಂದ್ವವನ್ನು ಗಮನಿಸಿದರೆ ಸ್ಪರ್ಧೆಯಿರುವುದು ದಲಿತ ಮತ್ತು ದಲಿತೇತರ ಅಲ್ಲ. ಅವಕಾಶವಿಹೀನ ಮತ್ತು ಅವಕಾಶಪಡೆದ ಗುಂಪುಗಳ ನಡುವೆ ಇದೆ.

ಈ ದೃಷ್ಟಿಯಿಂದ ಪರಿಶೀಲಿಸಿದರೆ, ಶೇ. 18, ಶೇ. 28 ಈ ಗುಂಪುಗಳ ಒಳಗಿನ ಬೇರೆ ಬೇರೆ ಹಂತಗಳನ್ನು ಗುರುತಿಸಿ ಸ್ಪರ್ಧೆಗಳಿಸಬೇಕು. ಆಗ ದಲಿತರೂ ಮುಖ್ಯವಾಹಿನಿಗೆ ಬರಬಲ್ಲರು. ಶೇ. 82ರ ಪಾಲುದಾರರಾಗಬಲ್ಲರು. ದಲಿತರ ಪ್ರಗತಿಗೆ ಮೀಸಲಾತಿ ಸಣ್ಣ ಪರ್ಯಾಯ ಮಾತ್ರ. ಕೇವಲ ಐವತ್ತು ವರ್ಷಗಳಲ್ಲಿ ಅಪ್ರಸ್ತುತವಾಗುತ್ತಿರುವ ಮೀಸಲಾತಿ ಯಾವುದೇ ಸಮುದಾಯದ ಪರ್ಯಾಯ ಮಾರ್ಗ ಅಲ್ಲ. ದಲಿತರ ಪ್ರಗತಿಗೆ ವೃತ್ತಿ ಬದಲಾವಣೆ, ತಾಂತ್ರಿಕ ಕೌಶಲ್ಯ ಮತ್ತು ಭೂಮಿ ಜೊತೆಗಿನ ಸಂಬಂಧಗಳನ್ನು ಪರಾಮರ್ಶೆ ಮಾಡಬೇಕು. ಅವಕಾಶವನ್ನು ವ್ಯಾಪಕವಾಗಿ ನೀಡಬೇಕು. ಸ್ಪರ್ಧಾತ್ಮಕ ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ವಿವಿಧ ಕ್ಷೇತ್ರಗಳಲ್ಲಿ ದಲಿತರು ಅರಳಬಹುದು. ಪ್ರಗತಿಯ ಹೆಜ್ಜೆಗಳನ್ನಿಡಬಹುದು.

5) ಜಾಗತೀಕರಣದಿಂದ ದಲಿತರ ಬದುಕಿನ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ಗ್ರಾಮೀಣ ದಲಿತ ಸಮೂಹ ನಗರ ಕೇಂದ್ರಿತ ಸ್ಲಂವಾಸಿಗಳಾಗುತ್ತಾರೆ. ಸಾಂಪ್ರದಾಯಿಕ ವ್ಯವಸ್ಥೆಯಿಂದ ಅಸಾಂಪ್ರದಾಯಿಕ ಜೀವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಇದು ಸಂಕ್ರಮಣ ಕಾಲವೇ ಸರಿ. ಜಾಗತೀಕರಣ ನಮ್ಮ ಬಹುಕಾಲದ ಬವಣೆಗಳ ರೂಪಾಂತರವಾಗಿದೆ. ನಮ್ಮ ನಂಬಿಕೆಗಿದ್ದ ಬೇರುಗಳನ್ನು ಅಲುಗಾಡಿಸುತ್ತಿದೆ. ಇಡೀ ಸಮಾಜವೇ ಜಾಗತೀಕರಣದ ಬಿರುಗಾಳಿಯಲ್ಲಿ, ತರಗೆಲೆಯಂತೆ ಹಾರಾಡುವಾಗ, ಮೊದಲೇ ಹಾರಾಡುತ್ತಿದ್ದ ದಲಿತರು ಚೆಲ್ಲಾಪಿಲ್ಲಿಯಾಗುತ್ತಾರೆ. ಜಾಗತೀಕರಣದ ಜೊತೆಗೆ ಬರುತ್ತಿರುವ ಖಾಸಗೀಕರಣ ದಲಿತರ ಮೊದಲ ಶತ್ರು. ಖಾಸಗೀಕರಣವನ್ನು ತಡೆದು ಜಾಗತೀಕರಣ ಬರುವುದಾದರೆ ದಲಿತರ ಪಾಲಿಗೆ ಒಳ್ಳೆಯದೇ ಆಗುತ್ತದೆ. ಅನೇಕ ಅವಕಾಶಗಳು ತೆರೆದುಕೊಳ್ಳುತ್ತವೆ. ಹೊಸ ಲೋಕವೊಂದರ ಪಾಲುದಾರರಾಗಿ ದಲಿತರು ಬೆರೆತುಹೋಗಬಹುದು.

ಈ ನಾಡಿನ ಸಂಪತ್ತಿನಲ್ಲಿ ದಲಿತರ ಪಾಲಿದೆ ಎಂಬುದನ್ನು ನಾವು ಮೊದಲಿಗೆ ತಿಳಿಹೇಳಬೇಕಾಗಿದೆ. ಈ ಪಾಲು ಕೇವಲ ಮೀಸಲಾತಿ ಉದ್ಯೋಗಗಳಲ್ಲಿ ಮಾತ್ರವೆಂದು ತಿಳಿಯಬಾರದು. ಅಧಿಕಾರದಲ್ಲಿ ಪಾಲಿದ್ದಂತೆ ಆಸ್ತಿ, ಅಂತಸ್ತುಗಳಲ್ಲಿಯೂ ಪಾಲು ಮಾಡಲು ಹೊಸ ಯೋಜನೆಗಳನ್ನು ರೂಡಿಸಬೇಕು. ನಾಡಿನ ಅಂತಃ ಶಕ್ತಿಯನ್ನು ಹೆಚ್ಚು ಮಾಡುವ ವ್ಯಾಪಾರ, ಕೈಗಾರಿಕೆ, ಬಂಡವಾಳ ಈ ಕ್ಷೇತ್ರಗಳಲ್ಲಿ ದಲಿತ ಬಂಡವಾಳವನ್ನು ಸೃಷ್ಟಿ ಮಾಡಬೇಕು. ಇದನ್ನು ಸರ್ಕಾರ ಶಾಸನಬದ್ಧವಾಗಿಸಬೇಕು. ಸಹಜ ಸಂಪತ್ತಿನಲ್ಲಿ ಇಂದಿಗೂ ದಲಿತರ ಪಾಲಿಲ್ಲದಿರುವುದೇ ಈ ಕೊರತೆಗೆ ಕಾರಣವಾಗಿದೆ.

ಖಾಸಗಿ ಕ್ಷೇತ್ರದ ಮೀಸಲಾತಿ ಕೂಡ ಇಂದಿನ ಅಗತ್ಯ. ದೇಶವನ್ನು ಖಾಸಗೀಕರಣಗೊಳಿಸಿ, ನೀವು ಸ್ಪರ್ಧಿಸಿ ಪಡೆದುಕೊಳ್ಳಿ ಎಂದು ಹೇಳಲು ಕಾಲವಿನ್ನೂ ಪಕ್ವವಾಗಿಲ್ಲ. ಆದರೆ ಬಿರುಗಾಳಿಯನ್ನು ತಡೆಯುವುದೂ ಸಾಧ್ಯವಿಲ್ಲ. ಪರ್ಯಾಯ ಮಾಧ್ಯಮ ಮಾರ್ಗವೆಂದರೆ ಖಾಸಗಿ ಒಡೆತನದಲ್ಲಿ ಸರ್ಕಾರದ ನಿಯಂತ್ರಣವಿರಬೇಕು. ಅದು ದಲಿತ ಸಮುದಾಯಕ್ಕೆ ಆದ್ಯತೆ ನೀಡುವುದಾಗಬೇಕು. ಇದು ಭಾರತದ ವಿಶೇಷವೇನಲ್ಲ. ಪ್ರಪಂಚದ ಅನೇಕ ದೇಶಗಳಲ್ಲಿದೆ. ಅತಿಮುಂದುವರಿದ ಅಮೇರಿಕ ಕೂಡ ಈ ದಾರಿಯ ಚಿಂತನೆಯಲ್ಲಿದೆ. ಆದ್ದರಿಂದ ದಲಿತರ ರಕ್ಷಣೆಯಲ್ಲಿ ಸರ್ಕಾರದ ಪಾಲುದಾರಿಕೆ ಹೆಚ್ಚಬೇಕು. ಖಾಸಗಿಯವರ ಬಂಡವಾಳದಲ್ಲಿ, ಭೂಮಿಯಲ್ಲಿ ನಮ್ಮ ಶ್ರಮದ ಬೆವರಿದೆ ಎಂಬುದನ್ನು ತಿಳಿಸಬೇಕು. ಆಗ ಸಾಮಾಜಿಕವಾಗಿ ಗೌರವಯುತ ಪಾಲು ಪಡೆಯುವುದು ಸಾಧ್ಯವಾದೀತು. ಇದು ದೇಶದ ಸಮಗ್ರ ಪ್ರಗತಿಯ ದಾರಿ ಕೂಡ ಆದೀತು! ●

ವ್ಯಕ್ತಿ ಪೂಜೆಯಿಂದ ಸಿದ್ಧಾಂತದ ಕ್ರಿಯೆಗೆ

○ ಮೋಹನ ನಾಗಮ್ಮನವರ
ಸಾಹಿತಿ ಮತ್ತು ಚಿಂತಕರು



1. ಡಾ. ಅಂಬೇಡ್ಕರ್‌ವಾದದ ಪ್ರಸ್ತುತತೆ ಎಂದು ಹಿಂದೆ ಮುಂದೆ ನೋಡುವಂತೆಯೇ ಇಲ್ಲ. ಅದು ಭವಿಷ್ಯ ಭಾರತದ ಪ್ರಮುಖ ಸಾಮಾಜಿಕ ಸಿದ್ಧಾಂತ. ಡಾ|| ಅಂಬೇಡ್ಕರ್ ಚಿಂತನೆ ಇನ್ನಷ್ಟು ಚಾಲನೆ ದೊರೆಯಲಿದೆ. ಆ ಚಿಂತನೆಯಿಂದಲೇ ದಲಿತರ ವಿಮೋಚನೆ ಸಾಧ್ಯ. ಆ ಬಗ್ಗೆ ಎರಡು ಮಾತಿಲ್ಲ. ಆದರೆ ಡಾ. ಅಂಬೇಡ್ಕರ್ ವಾದವೆಂದುಕೊಂಡು ಅವರ ಬೃಹತ್ ಪ್ರತಿಮೆ, ಬೃಹತ್ ಸಂಪುಟಗಳ ಮಾದರಿಯಲ್ಲಿ ಮುನ್ನಡೆಯುವುದರಿಂದ ಹೆಚ್ಚು ಪ್ರಯೋಜನವಿಲ್ಲ. ಡಾ|| ಅಂಬೇಡ್ಕರ್‌ರವರನ್ನು ವ್ಯಕ್ತಿಪೂಜೆಯ ಮಜಲಿನಿಂದ ಸಿದ್ಧಾಂತ ಸಾರುವ ಕ್ರಿಯೆಯೆಡೆಗೆ ಕಾರ್ಯ ಸಾಧಿಸಬೇಕಾಗಿದೆ.

2. ವೈಯಕ್ತಿಕ ಲಾಭಗಳಿಗಾಗಿ ಅಥವಾ ಸೀಮಿತ ಸಮುದಾಯವೊಂದಕ್ಕೆ ಅವಕಾಶದಕ್ಕದೇ ಹೋಗುತ್ತಿದೆ ಎಂಬ ಆತಂಕ ಕಾಡುವಾಗೆಲ್ಲ ದಲಿತರೊಳಗಡೆಯೇ ಭಿನ್ನ ಧ್ವನಿಗಳು ಮೂಡಿವೆ ಹೊಸ ಪ್ರಜ್ಞೆ ಮೈಗೂಡಿಸಿಕೊಂಡು ಮೇಲೇಳುತ್ತಿರುವ ರಭಸದಲ್ಲಿ ಕಲರವ ಮೂಡುವುದು ಸಹಜವೇ ಆಗಿದೆ. ಈ ಜಾಗೃತಿ ಮೃತ ಮಾದರಿಯ ಶಿಸ್ತಲ್ಲ. ಈ ಸಮುದಾಯದೊಳಗಿನ ಫಲ ಹಂಚಿಕೊಳ್ಳುವ ಪೈಪೋಟಿಯೇ ಅದರ ಜೀವಂತಿಕೆಯ ಲಕ್ಷಣ. ಏನೇ ತಕರಾರುಗಳಿದ್ದರೂ ಯುದ್ಧ ಕಾಲದಲ್ಲಿ ಮಾತ್ರ ಎಲ್ಲರೊಂದೇ ಎಂಬ ಸಂಗತಿ ಅನೇಕ ಸಂದರ್ಭಗಳಲ್ಲಿ ಕಂಡಿದೆ.

ದಲಿತರಾದಿಯಾಗಿ, ಇದುವರೆಗೂ ಸ್ವಬಲದಿಂದ ರಾಜಕೀಯ ಭಾಗೀದಾರಿಕೆ ಪಡೆಯದ ಎಲ್ಲ ಸಮುದಾಯಗಳೂ ಪರಮಾಧಿಕಾರ ಹೊಂದುವುದೇ ರಾಜಕೀಯ ಗೊತ್ತುಗುರಿಯಾಗಬೇಕು. ಎಲ್ಲಿ ಕ್ಷೇತ್ರಗಳ ಪದನೋನ್ನತ ಶ್ರೇಣೀಗೇರುವ ಮೂಲಕವೇ ಸಾಮುದಾಯಿಕ ಯಶಸ್ಸಿನ ನಡಿಗೆಗೆ ಶೀಘ್ರಗತಿ ತಂದುಕೊಳ್ಳಬೇಕಿದೆ. ಇದುವರೆಗಿನ ರಾಜಕೀಯ ನಡೆಯಲ್ಲಿ ಬಿ.ಎಸ್.ಪಿ. ದಲಿತರ ಹಿತಕಾಯುವ ಲಕ್ಷಣಗಳನ್ನು ತೋರಿದೆ. ವ್ಯಕ್ತಿ ಕೇಂದ್ರಿತ ರಾಜಕಾರಣವೇ ಅದರ ಶೈಲಿ ಎಂದಾದರೆ, ಶತಾಯ ಗತಾಯ ಅಧಿಕಾರ ಹೊಂದುವುದೇ ಅಂತಿಮ ಎಂಬುದು ಅದರ ನಿಲುವಾದರೆ ದಲಿತರ ಹಿತರಕ್ಷಣೆ ಅದರ ಪ್ರಥಮ ಪ್ರಾಧಾನ್ಯತೆಯಾಗುವುದಿಲ್ಲ. ರಾಜಕೀಯ ಚೌಕಾಶಿಯಲ್ಲಿ ನೆರವಿಗೆ ಬರುವವರ ಹಿತರಕ್ಷಣೆಯೇ ಅದಕ್ಕೆ ಮುಖ್ಯವಾಗಿ ಬಿಡುತ್ತದೆ.

3. ಈಗಿನ ಸನ್ನಿವೇಶದಲ್ಲಿ ಮತಾಂತರ ಪರಿಹಾರವೂ ಅಲ್ಲ. ಅದೇ ಪ್ರಥಮ ಸಮಸ್ಯೆಯೂ ಅಲ್ಲ. ಅಥವಾ ಮತಾಂತರವೇ ಮತ್ತಷ್ಟು ಸಮಸ್ಯೆ ಸಂಕೀರ್ಣವಾಗುವುದಕ್ಕೆ ಕಾರಣವಾಗಬಲ್ಲುದು. ಡಾ. ಬಾಬಾ ಸಾಹೇಬರ ಕಾಲಘಟ್ಟ ಮತ್ತು ವರ್ತಮಾನದ ಸಂದರ್ಭಕ್ಕೆ ಅಂತರ ಬಹಳವಿದೆ. ಸಾಮಾಜಿಕವಾಗಿ ರಾಜಕೀಯವಾಗಿ ಸಾಧಿಸಬೇಕಿರುವ ಇವತ್ತಿನ ನಡಿಗೆಯಲ್ಲಿ ಧರ್ಮ ಕೊನೆಯ ಆದ್ಯತೆಯಾಗಬೇಕು. ಗೌರವ ದೊರೆಯುವ ಸ್ಥಿತಿ ತಲುಪಿದಾಗ ಗೌರವ ತಾನೇ ಹಿಂಬಾಲಿಸುತ್ತದೆ. 'ಹಿಂದೂ' ಮತ್ತು ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಏನೇ ಹುಯಿಲಿದ್ದರೂ ವರ್ತಮಾನದಲ್ಲಿ ಅದರ ಬಲ ಕುಂದಿದೆ. ನಿಷದ ತೀಕ್ಷ್ಣತೆ ಮೊದಲಿನಂತಿಲ್ಲ. ಅಪರಿಮಿತ ಬಲದಿಂದಾಗಿ ಒಂದು ವಲಯವನ್ನು ಉಸಿರುಗಟ್ಟಿಸಿದ್ದ 'ಹಿಂದೂ' ಫ್ಯಾಕ್ಟರ್ ಈಗ ಅಳಿದುಳಿದ ಬಲ ಉಳಿಸಿಕೊಳ್ಳಲು ಹೆಣಗುತ್ತಿದೆ. ಭಾರತೀಯ ಪರಿಸರದಲ್ಲಿನ ಯಾವುದೇ ಧರ್ಮ ದಲಿತನನ್ನು ತೆಕ್ಕೆಗೆಳೆದುಕೊಂಡರೂ ಅಪರೋಕ್ಷ 'ಪ್ರತ್ಯೇಕ ಕಾಲನಿ' ಸೃಷ್ಟಿಸಿಬಿಡುತ್ತದೆ. ವರ್ತಮಾನದ ದಲಿತನ ಧರ್ಮದ ಆಯ್ಕೆಯೆಂದರೆ ಚಪ್ಪಲಿಕೊಂಡಂತೆ ಚಪ್ಪಲಿಯ ಅಗತ್ಯವಿದೆ ನಿಜ. ಆದರೆ ಚಪ್ಪಲಿಯೇ ಸರ್ವಸ್ವ ಅಲ್ಲ.

> **ಎಲ್ಲೋ ಒಂದಷ್ಟು ಜನ ಮಿಡ್ಲ್ ಕ್ಲಾಸಿನ ಶ್ರೇಣಿಯಿಂದ ಮೇಲೇರಿ ಕೆಲವಷ್ಟು ಜನ ಮಿಡ್ಲ್ ಕ್ಲಾಸ್ ಹಂತ ತಲುಪಿ, ಬಹಳಷ್ಟು ಜನ ದಲಿತರು ಇನ್ನೂ ನಿಕೃಷ್ಟ ಸ್ಥಿತಿಯಲ್ಲೇ ಇರುವ ವರ್ತಮಾನದಲ್ಲಿ ಜಾಗತೀಕರಣ ದಲಿತರ ಪ್ರಥಮ ಶತ್ರು. ಉಳಿದೆಲ್ಲರಿಗಿಂತ ದಲಿತರು. 'ಸರಕಾರ' ಎನ್ನುವ ಸಂಗತಿಯನ್ನವಲಂಬಿಸಿದ್ದಾರೆ. ಜಾಗತೀಕರಣದೆದುರಿನ ಸರಕಾರವೆಂದರೆ ಬೀಜ ತೆಗೆದ ಹೋರಿಯಂತೆ. ಮೊದಲ ಪಂಕ್ತಿಯಲ್ಲಿ ಉಂಡು ಕೈತೊಳೆದವರು ಇಂದಿನ ಪಂಕ್ತಿಯಲ್ಲಿ ಸ್ಥಾನ ಗಿಟ್ಟಿಸಿದ Established ದಲಿತರ ಪಾಲಿಗೆ ಆಕರ್ಷಕವೆನ್ನಿಸಬಹುದು. ಆದರೆ, ಇನ್ನೂ ಹಲವಾರು ಪಂಕ್ತಿಗಳಿಗಾಗಿ ಖಾಲಿ ತಟ್ಟೆ ಹಸಿದ ಹೊಟ್ಟೆಯೊಂದಿಗೆ ಕಾಯ್ದು ನಿಂತವರ ಪಾಲಿಗೆ ಜಾಗತೀಕರಣ ಖಂಡಿತಾ ಉರುಳಾಗುತ್ತದೆ.**

4. ಮೀಸಲಾತಿಯಿಂದಾಗಿ ದಲಿತರೊಳಗೆಯೇ ಸ್ಪರ್ಧೆ ಏರ್ಪಟ್ಟಿದ್ದು ಮೊದಲ ಹಂತ. ಇನ್ನುಳಿದವರೊಂದಿಗೆ ಸ್ಪರ್ಧೆಗಿಳಿದಿರುವ ಈಗಿನ ಹಂತ ಎರಡನೆಯದು. ಇತ್ತೀಚಿನ ದಿನಗಳಲ್ಲಿ ಎಲ್ಲ ಪರೀಕ್ಷೆಗಳಲ್ಲಿ ದಲಿತರು ಪಡೆಯುತ್ತಿರುವ ಅಂಕಗಳಲ್ಲಿನ ಹೆಚ್ಚಳ ದಲಿತರಲ್ಲಿ ಬೆಳೆದಿರುವ ಸ್ಪರ್ಧಾತ್ಮಕ ಮನೋಭಾವಕ್ಕೆ ಸಾಕ್ಷಿ. ಯಾವುದೇ ಸಮುದಾಯವಾದರೂ ಅದರಲ್ಲಿ ಪ್ರತಿಭಾವಂತರು ಇರುವಂತೆ ದಡ್ಡರೂ ಇರುತ್ತಾರೆ. ಪರಿಶ್ರಮಿಗಳಿರುವಂತೆ ಆಲಸಿಗಳೂ ಇರುತ್ತಾರೆ. ದಲಿತರಲ್ಲಿಯೂ ಎರಡೂ ಬಗೆಯ ವ್ಯಕ್ತಿತ್ವಗಳಿವೆ. ಮೀಸಲಾತಿ ಅನಿವಾರ್ಯ ನಿಜ. ಆದರೆ, ಎಲ್ಲರಲ್ಲಿ ಮೀಸಲಾತಿ ಮೀರಿ ಸ್ಥಾನ ಹೊಂದುವ ಮೀಸಲು ಕ್ಷೇತ್ರಗಳಾಚೆ ಕೈ ಚಾಚಿ ಅಧಿಕಾರ ಹೊಂದುವ ಮನೋಸಂಕಲ್ಪ ಮಾತ್ರ ಕಡ್ಡಾಯವಾಗಬೇಕು.

5. ಎಲ್ಲೋ ಒಂದಷ್ಟು ಜನ ಮಿಡ್ಲ್ ಕ್ಲಾಸಿನ ಶ್ರೇಣಿಯಿಂದ ಮೇಲೇರಿ ಕೆಲವಷ್ಟು ಜನ ಮಿಡ್ಲ್ ಕ್ಲಾಸ್ ಹಂತ ತಲುಪಿ, ಬಹಳಷ್ಟು ಜನ ದಲಿತರು ಇನ್ನೂ ನಿಕೃಷ್ಟ ಸ್ಥಿತಿಯಲ್ಲೇ ಇರುವ ವರ್ತಮಾನದಲ್ಲಿ ಜಾಗತೀಕರಣ ದಲಿತರ ಪ್ರಥಮ ಶತ್ರು. ಉಳಿದೆಲ್ಲರಿಗಿಂತ ದಲಿತರು. 'ಸರಕಾರ' ಎನ್ನುವ ಸಂಗತಿಯನ್ನವಲಂಬಿಸಿದ್ದಾರೆ. ಜಾಗತೀಕರಣದೆದುರಿನ ಸರಕಾರವೆಂದರೆ ಬೀಜ ತೆಗೆದ ಹೋರಿಯಂತೆ. ಮೊದಲ ಪಂಕ್ತಿಯಲ್ಲಿ ಉಂಡು ಕೈತೊಳೆದವರು ಇಂದಿನ ಪಂಕ್ತಿಯಲ್ಲಿ ಸ್ಥಾನ ಗಿಟ್ಟಿಸಿದ Established ದಲಿತರ ಪಾಲಿಗೆ. ಆರ್ಥಿಕವಾಗಿ ಸುಸ್ಥಿತಿ ತಲುಪಿರುವ ದಲಿತರಿಗೆ ಜಾಗತೀಕರಣ ಆಕರ್ಷಕವೆನ್ನಿಸಬಹುದು. ಆದರೆ, ಇನ್ನೂ ಹಲವಾರು ಪಂಕ್ತಿಗಳಿಗಾಗಿ ಖಾಲಿ ತಟ್ಟೆ ಹಸಿದ ಹೊಟ್ಟೆಯೊಂದಿಗೆ ಕಾಯ್ದು ನಿಂತವರ ಪಾಲಿಗೆ ಜಾಗತೀಕರಣ ಖಂಡಿತಾ ಉರುಳಾಗುತ್ತದೆ. ಜಾಗತೀಕರಣದ ಕಲ್ಪನೆಯಲ್ಲಿ ಕಾರ್ಯಾಚರಣೆಗಿಳಿಯುವ ಖಾಸಗಿ ಕ್ಷೇತ್ರದಲ್ಲಿನ ಮನೋಧರ್ಮದ ಮೇಲೆ ಈ ಮಾತು ನಿರ್ದೇಶಿತವಾಗಿದೆ.

ಒಂದು ಕಾಲಕ್ಕೆ ತೀರಾ ಅನಿವಾರ್ಯವಾಗಿದ್ದ ಆಕ್ರೋಶವನ್ನು ಕಡಿಮೆಮಾಡಿಕೊಂಡು ಸಾಮಾಜಿಕ ಸಂಯಮವೊಂದನ್ನು ರೂಢಿಸಿಕೊಂಡು ತೋಡಿಕೊಂಡ ಕಂದರಗಳನ್ನು ನಾವೇ ತುಂಬಿಕೊಳ್ಳುವ ಮೂಲಕ ದಲಿತರು ಮುಖ್ಯವಾಹಿನಿಯನ್ನು ಬೆರೆಯಲು ಸಾಧ್ಯ. ಬಾಬಾ ಸಾಹೇಬರೂ ಸೇರಿದಂತೆ ಹಲವು ಮಹನೀಯರು ಪಟ್ಟ ಶ್ರಮದಿಂದಾಗಿ ದಕ್ಕಿದ ಗೆಲುವಿನಿಂದ ಬೀಗದೇ, ಕೊಂಚವಾದರೂ ಗೆಲವು ಪಡೆದಿರುವ ಈ ಗಳಿಗೆಯಲ್ಲಿ ಮತ್ತುಳಿದವರ ಬಗೆಗೆ ಅಲ್ಲಿನ ನಿಜ ಅಥವ ಬಡವರ ಬಗೆಗೆ ಮೂಡಿಸಿಕೊಳ್ಳುವ ಸ್ನೇಹಪರತೆಯೇ ಆ ದಿಕ್ಕಿನಲ್ಲಿ ನಮ್ಮನ್ನು ನಡೆಸಬಲ್ಲದು. ●

ಝೆನ್ : ತೋರು ಬೆರಳು

ಝೆನ್ ಬಗ್ಗೆ ಹೊರಜಗತ್ತಿಗೆ ವಿವರವಾದ ಪರಿಚಯ ಮಾಡಿಕೊಟ್ಟವನು ಡಾ|| ಡಿ.ಟಿ. ಸುಜುಕಿ ಎಂಬ ಜಾಪಾನಿನ ಅಸಾಧಾರಣ ವಿದ್ವಾಂಸ. 1927ರಿಂದ ಪ್ರಾರಂಭಿಸಿ ಆತ ಝೆನ್ ಬಗ್ಗೆ ಅನೇಕ ಬೃಹತ್ ಗ್ರಂಥ'ಗಳನ್ನು ಪ್ರಕಟಿಸಿದ್ದಾನೆ. ಅದರಿಂದ ಈಚೆ ಇಂಗ್ಲೀಷ್‌ನಲ್ಲಿ ಮತ್ತು ಇತರ ಪಾಶ್ಚಾತ್ಯ ಭಾಷೆಗಳಲ್ಲಿ ಝೆನ್‌ನ ಕುರಿತು ಅನೇಕ ಗ್ರಂಥಗಳೂ ಲೇಖನಗಳೂ ಪ್ರಕಟಗೊಂಡಿವೆ. ಪಾಶ್ಚಾತ್ಯ ದೇಶಗಳಲ್ಲಿನ ಹಲವಾರು ಮೇಧಾವಿಗಳು ಝೆನ್‌ನ ಮೂಲಕ ಪೌರ್ವಾತ್ಯ ಸಂಸ್ಕೃತಿಯ ಹೊಸ ನೋಟವನ್ನೇ ಕಂಡುಕೊಂಡಿದ್ದಾರೆ; ಪೌರ್ವಾತ್ಯರು ರೂಢಿಸಿಕೊಂಡ ವಿಶಿಷ್ಟ ಪ್ರವೃತ್ತಿಯನ್ನು ಅರಿತು ಮೆಚ್ಚಿಕೊಂಡಿದ್ದಾರೆ. ಕೆಲವು ಕಡೆಗಳಲ್ಲಿ ಝೆನ್, ಪೌರ್ವಾತ್ಯರಿಂದ ಆಮದು ಮಾಡಿಕೊಂಡ ಹೊಸ ಅಮಲು ಎನ್ನುವಂತೆ ಹುಚ್ಚು ಲಹರಿಯಾಗಿ ಹಬ್ಬಿಕೊಂಡಿದ್ದೂ ಉಂಟು.

ಬೌದ್ಧ ಧರ್ಮದ ಹಲವು ಶಾಖೆಗಳು ಇಂಡಿಯಾದಿಂದ ಕ್ರಮೇಣ ಚೀನಾ ಜಾಪಾನುಗಳಿಗೆ ವಲಸೆ ಹೋಗಿ ನಿಂತವು ಮತ್ತು ಅಲ್ಲಿ ಪುನಃ ಶಾಖೆ-ಉಪಶಾಖೆಗಳಾಗಿ ವಿಂಗಡನೆಗೊಂಡು ಹಬ್ಬಿಕೊಂಡವು; ಅಂಥ ಶಾಖೆಗಳಲ್ಲಿ ಪ್ರಮುಖವಾದ್ದು ಮತ್ತು ಹೆಚ್ಚು ಸ್ಥಿರವಾಗಿ ಬಾಳಿಕೊಂಡು ಬಂದದ್ದು 'ಝೆನ್' ಎಂಬ ಬೌದ್ಧ ಪಂಥ. ಜಪಾನ್‌ನಲ್ಲಿ ಅದು ಇವತ್ತಿಗೂ ಒಂದು ಪ್ರಮುಖ ಧರ್ಮವಾಗಿ ನೆಲೆಗೊಂಡಿದೆ.

'ಝೆನ್' ಎನ್ನುವುದಕ್ಕೆ ಮೂಲ, ಸಂಸ್ಕೃತದ ಧ್ಯಾನ ಎನ್ನುವ ಪದ. ಅದು ಪಾಲಿಯಲ್ಲಿ 'ಝಾನ' ಆಗಿ ಅನಂತರ ಚೀನೀ ಭಾಷೆಯಲ್ಲಿ 'ಚಾನ್' 'ಚನ್ನಾ' ಎಂಬ ರೂಪ ಪಡೆದುಕೊಂಡಿತು. ಅದೇ ಪುನಃ, ಜಪಾನಿ ಭಾಷೆಯಲ್ಲಿ 'ಜೆನ್ನಾ' 'ಜೆಂಜೋ' ಎಂದಾಗಿ, ಹ್ರಸ್ವಕ್ಕೆ 'ಝೆನ್' ಎಂದು ಪರಿವರ್ತಿತಗೊಂಡಿತು.

ಬುದ್ಧನ ಕಾಲ ಸುಮಾರಾಗಿ ಕ್ರಿ.ಪೂ. 650 ರಿಂದ 480. ಬುದ್ಧ ತೀರಿಕೊಂಡ ಮೇಲೆ, ಸು. ಕ್ರಿ.ಪೂ. 483ರಲ್ಲಿ ಆತನ ಜೊತೆಯಲ್ಲೇ ಬಾಳಿ ಕೆಲಸ ಮಾಡಿಕೊಂಡಿದ್ದ ಸುಮಾರು ಐನೂರು ಭಿಕ್ಷುಗಳು, ಸುಮಾರು ಆರು ತಿಂಗಳ ಕಾಲ 'ಸಂಗೀತಿ' (ಸಮಿತಿ) ಕೂಡಿಕೊಂಡು ಬುದ್ಧನ ಉಪದೇಶ-ಪ್ರವಚನಗಳನ್ನು ಎರಡು ಭಾಗಗಳಲ್ಲಿ ಸಂಗ್ರಹಿಸಿ ಲಿಖಿತಗೊಳಿಸಿದರು. ಬುದ್ಧನ ಆಪ್ತಶಿಷ್ಯನಾಗಿದ್ದ ಆನಂದನೆಂಬ ಭಿಕ್ಷು ಆತನ 'ಧರ್ಮೋಪದೇಶ' (ಸೂತ್ರ)ಗಳನ್ನು ಸ್ಮರಿಸಿ ನಿರೂಪಿಸಿಕೊಟ್ಟ; ಉಪಾಲಿಯೆನ್ನುವಾತ ಬುದ್ಧ ಹೇಳಿದ 'ಆಚಾರ' (ವಿನಯ)ಗಳನ್ನು ನಿರೂಪಿಸಿಕೊಟ್ಟ. ಇವೇ ಎರಡು ಮುಖ್ಯ 'ಪಿಟಕ' (ಬುಟ್ಟಿ)ಗಳೆನಿಸಿಕೊಂಡವು. 1. ಸುತ್ತಪಿಟಕ ಅಥವಾ ಧಮ್ಮಪಿಟಕ. 2. ವಿನಯಪಿಟಕ, ಹಿರಿಯ ಭಿಕ್ಷುಗಳು ಕೂಡಿ ಸಿದ್ಧಗೊಳಿಸಿದ ಈ ಸಂಗ್ರಹಕ್ಕೆ 'ಥೇರಾವಾದ' (ಹಿರಿಯರ ಹೇಳಿಕೆ) ಎಂಬ ಹೆಸರು ಬಂದಿತು.

ಬೌದ್ಧ ಧರ್ಮ ಮತ್ತು ಬೌದ್ಧ ಪ್ರಜ್ಞೆಯ ಜತೆಗೆ ಸಮ್ಮಿಳಿತಗೊಂಡು, ಬಹುಕಾಲದಿಂದ ಬಾಳಿಕೊಂಡು ಬಂದಿರುವ ಬೌದ್ಧ ಪಂಥಗಳಲ್ಲಿ ಝೆನ್ ಕೂಡ ಒಂದು. ಜಾಪಾನ್‌ನಂತಹ ರಾಷ್ಟ್ರಗಳಲ್ಲಿ ಇಂದಿಗೂ ಒಂದು ಪ್ರಮುಖ ಧರ್ಮವಾಗೇ ನೆಲೆಗೊಂಡಿರುವ ಈ ಪಂಥದ ನಂಬಿಕೆ ಮತ್ತು ಆಚರಣೆಯ ಜತೆಗೆ ಹೊರ ಜಗತ್ತಿನ ವಾಸ್ತವ ಬದುಕಿಗೆ ಮಾದರಿಯಾಗುವ ಅನೇಕ ಸಂವಾದ, ಒಗಟು, ಮುಂಡಿಗೆ ಕಥೆ ಮತ್ತು ಪ್ರಸಂಗಗಳನ್ನು ನಾಡಿನ ಪ್ರಸಿದ್ಧ ರಂಗತಜ್ಞರೂ, ಸಾಹಿತಿಗಳೂ ಆದ ಕೆ.ವಿ. ಸುಬ್ಬಣ್ಣನವರು ಸಂಗ್ರಹಿಸಿ ಪ್ರಕಟಿಸಿದ್ದಾರೆ.
'ಝೆನ್'ನ ಈ ಒಗಟು, ಮುಂಡಿಗೆ, ಕಥೆ, ಪ್ರಸಂಗಗಳನ್ನು 'ಸಂವಾದ'ದ ಮುಂದಿನ ಸಂಚಿಕೆಯಲ್ಲಿ ನೀಡುತ್ತೇವೆ.

○ ಕೆ.ವಿ. ಸುಬ್ಬಣ್ಣ

ಮತ್ತೆ, ಸು. ಕ್ರಿ.ಪೂ. 383ರಲ್ಲಿ ಎರಡನೆಯ 'ಭಿಕ್ಷುಸಂಗೀತಿ' ಕೂಡಿಕೊಂಡಿತು. ಅದರಲ್ಲಿ, ಮೂಲ ಧರ್ಮದೊಳಕ್ಕೆ ಕ್ರಮೇಣ ಹೇಗೋ ತೂರಿಕೊಂಡು ಬಂದ ಅನಧಿಕೃತ ಅಂಶಗಳನ್ನೂ ರೂಢಿ ಆಚರಣೆಗಳನ್ನೂ ನಿಷೇಧಿಸಲಾಯ್ತು ಮತ್ತು ಬೌದ್ಧಧರ್ಮದ ತಾತ್ವಿಕ ಸೂತ್ರಗಳನ್ನು ಖಚಿತಗೊಳಿಸಲಾಯ್ತು. ಸು. ಕ್ರಿ.ಪೂ. 240ರಲ್ಲಿ ಮೂರನೆಯ 'ಭಿಕ್ಷು ಸಂಗೀತಿ' ನಡೆಯಿತು. ಅದರಲ್ಲಿ ಮೊದಲಿನ ಎರಡು 'ಪಿಟಕ'ಗಳ ಜತೆಗೆ 'ಅಭಿದಮ್ಮ ಪಿಟಕ'ವೆಂಬ ಇನ್ನೊಂದು ಭಾಗವನ್ನು ಕೂಡಿಸಿ 'ತ್ರಿಪಿಟಕ'ಗಳನ್ನು ಸಿದ್ಧಗೊಳಿಸಲಾಯ್ತು ಮತ್ತು ಈ 'ತ್ರಿಪಿಟಕ'ಗಳೇ ಮೂಲ ಬೌದ್ಧಧರ್ಮದ ಆಸ್ತಿವಾರವೆಂದು ಘೋಷಿಸಲಾಯ್ತು.

ಹೀಗೆ ಈ ಪರಂಪರೆಯಲ್ಲಿ ಬೆಳೆದುಕೊಂಡ ಬೌದ್ಧಧರ್ಮ, 'ಥೇರಾವಾದ' ಎಂಬ ಹೆಸರಿನಿಂದಲೇ ಪ್ರಸಿದ್ಧಗೊಂಡಿತು. ಮುಂದೆ ಇದನ್ನೇ 'ಹೀನಯಾನ'ವೆಂದೂ ಕರೆದರು.

ಇದಕ್ಕೆ ಪ್ರತಿಯಾಗಿ ಬೆಳೆದ ಬೌದ್ಧ ಧರ್ಮದ ಇನ್ನೊಂದು ಪಂಥ-'ಮಹಾಯಾನ'.

ಸುಮಾರು ಕ್ರಿ.ಪೂ. 383ರಲ್ಲಿ ಎರಡನೇ 'ಭಿಕ್ಷುಸಂಗೀತಿ' ಕೂಡಿದ ಸಮಯದಲ್ಲೇ ಭಿನ್ನಮತದ ಸುಮಾರು ಹತ್ತು ಸಾವಿರ ಮಂದಿ ಭಿಕ್ಷುಗಳು ಪ್ರತ್ಯೇಕವಾಗಿ ಕೂಡಿಕೊಂಡು 'ಥೇರಾವಾದ'ಕ್ಕೆ ತಮ್ಮ ವಿರೋಧವನ್ನು ಸೂಚಿಸಿದ್ದರಂತೆ; ಮತ್ತು 'ಮಹಾಸಾಂಘಿಕರು' ಎಂಬ ಹೆಸರಲ್ಲಿ ತಮ್ಮ ಪ್ರತ್ಯೇಕ ಪಂಥ'ವನ್ನು ಘೋಷಿಸಿಕೊಂಡಿದ್ದರಂತೆ. ಹೀಗೆ, ಇಂಡಿಯಾದ ಉತ್ತರ ಭಾಗದಲ್ಲಿ ಮುಖ್ಯವಾಗಿ, 'ಥೇರಾವಾದ'ಕ್ಕೆ ವಿರುದ್ಧವಾದ ಶಾಖೆಯೊಂದು ರೂಪುಗೊಳ್ಳತೊಡಗಿತ್ತು. ಸುಮಾರು ಕ್ರಿ.ಶ. 70ರ ಸಮಯಕ್ಕೆ ಈ ಪಂಥ' ಕಾಶ್ಮೀರದಲ್ಲಿ '4ನೇ ಸಂಗೀತಿ'ಯೆಂದು ಹೆಸರಾದ ಸಭೆಯನ್ನು ನಡೆಸಿತು. ಪ್ರಾಯಶಃ ಅಲ್ಲೇ ಬೌದ್ಧ ಧರ್ಮದ ಈ ಪ್ರಮುಖ ಪ್ರತ್ಯೇಕ ಶಾಖೆ ಖಚಿತವಾಗಿ ಸ್ಥಾಪನೆಗೊಂಡದ್ದು. ಮುಂದೆ ಬಂದ ಅಶ್ವಘೋಷ (ಸು. ಕ್ರಿ.ಶ. 100) ಈ ಪಂಥದ ಪ್ರಮುಖ ಸಿದ್ಧಾಂತಕಾರನೆನಿಸಿಕೊಂಡ. ಆತನೇ ಈ ಪಂಥ'ಕ್ಕೆ 'ಮಹಾಯಾನ'ವೆಂಬ ಹೆಸರು ಕೊಟ್ಟವನು ಎನ್ನುತ್ತಾರೆ. 'ಮಹಾಯಾನ'ವೆಂಬ ಶಾಖೆ ರೂಢಿಗೊಂಡ ಮೇಲೆ ಅದಕ್ಕೆ ಪ್ರತಿಯಾಗಿದ್ದ 'ಥೇರಾವಾದ' ಪಂಥಕ್ಕೆ 'ಹೀನಯಾನ'ವೆಂಬ ಹೆಸರು ಹತ್ತಿರಬೇಕು. 'ಮಹಾಯಾನ'ದವರು ತಮ್ಮನ್ನು 'ಮಹಾ ಸಾಂಘಿಕ'ರೆಂದು ಕರೆದುಕೊಂಡ ಹಾಗೆ. 'ಹೀನಯಾನ'ದವರಿಗೆ 'ಸ್ಥವಿರವಾದಿ'ಗಳು ಎಂಬ ಹೆಸರೂ ರೂಢಿಯಲ್ಲಿ ಬಂದಿತು.

ಬಹಳ ಸ್ಥೂಲವಾಗಿ ಹೇಳುವುದಾದರೆ-'ಥೇರವಾದ' ಅಥವಾ 'ಹೀನಯಾನ' ಪಂಥವು ಸಂಪ್ರದಾಯಕ್ಕೆ ಹೆಚ್ಚು ಅವಧಾರಣೆ ಕೊಟ್ಟಿತೆಂದೂ 'ಮಹಾಯಾನ'ವು ಸ್ವತಂತ್ರ ಸೃಜನಾತ್ಮಕತೆಗೆ ಕೊಂಚ ಹೆಚ್ಚು ಒತ್ತು ಕೊಟ್ಟಿತು ಎಂದೂ ಹೇಳಬಹುದು. ಬೌದ್ಧಧರ್ಮ ಗ್ರಂಥ'ಗಳು ಆರಂಭದಿಂದಲೂ ಪಾಲಿಭಾಷೆಯಲ್ಲೇ ರಚಿತಗೊಳ್ಳುತ್ತ ಬಂದಿದ್ದವು. ಮಹಾಯಾನಪಂಥ ಉದಯವಾದ ಮೇಲೆ ಅವರು ಹೆಚ್ಚಾಗಿ ಸಂಸ್ಕೃತ ಭಾಷೆಯನ್ನು ಬಳಸತೊಡಗಿದರು. 'ಮಹಾಯಾನ'ದಲ್ಲಿ ಕೂಡ ಕ್ರಮೇಣ ಹಲವು ಶಾಖೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಮುಖ್ಯವಾದ ಎರಡು-ಮಾಧ್ಯಮಿಕ ಪಂಥ' ಮತ್ತು ಯೋಗಾಚಾರ ಪಂಥ. ಸು. ಕ್ರಿ.ಶ. 100-200ರಲ್ಲಿದ್ದ ನಾಗಾರ್ಜುನ ಎನ್ನುವಾತನಿಂದ 'ಮಾಧ್ಯಮಿಕ ಪಂಥ'

(ಅಥವಾ ಶೂನ್ಯವಾದ)ವೂ ಸು. ಕ್ರಿ.ಶ. 400-500ರಲ್ಲಿದ್ದ ಅಸಂಗ ಎಂಬುವನಿಂದ 'ಯೋಗಾಚಾರ ಪಂಥ' (ಅಥವಾ ವಿಜ್ಞಾನವಾದ/ಚಿತ್ ವಾದ)ವೂ ಖಚಿತರೂಪ ಪಡೆದುಕೊಂಡವು. ತಾತ್ತ್ವಿಕವಾಗಿ, ಮಾಧ್ಯಮಿಕ ಪಂಥ ಹೆಚ್ಚು 'ತರ್ಕನಿಷ್ಠ'ವಾದುದೆಂದೂ ಯೋಗಾಚಾರ ಪಂಥ ಹೆಚ್ಚು 'ಆದರ್ಶನಿಷ್ಠ'ವಾದುದೆಂದೂ ಹೇಳುತ್ತಾರೆ.

ಬೌದ್ಧ ಧರ್ಮದ ಹಲವು ಶಾಖೆಗಳು ಇಂಡಿಯಾದಿಂದ ಕ್ರಮೇಣ ಚೀನಾ ಜಾಪಾನುಗಳಿಗೆ ವಲಸೆ ಹೋಗಿ ನಿಂತವು ಮತ್ತು ಅಲ್ಲಿ ಪುನಃ ಶಾಖೆ-ಉಪಶಾಖೆಗಳಾಗಿ ವಿಂಗಡನೆಗೊಂಡು ಹಬ್ಬಿಕೊಂಡವು; ಅಂಥ ಶಾಖೆಗಳಲ್ಲಿ ಪ್ರಮುಖವಾದ್ದು ಮತ್ತು ಹೆಚ್ಚು ಸ್ಥಿರವಾಗಿ ಬಾಳಿಕೊಂಡು ಬಂದದ್ದು 'ಝೆನ್' ಎಂಬ ಬೌದ್ಧ ಪಂಥ. ಜಪಾನ್‌ನಲ್ಲಿ ಅದು ಇವತ್ತಿಗೂ ಒಂದು ಪ್ರಮುಖ ಧರ್ಮವಾಗಿ ನೆಲೆಗೊಂಡಿದೆ.

ಮುಂದೆ ಕ್ರಮೇಣ ಭಾರತದಲ್ಲಿ ಬೌದ್ಧಧರ್ಮ ನಶಿಸತೊಡಗಿತು; ಬದಲು, ಏಷ್ಯಾದ ಇತರ ಅನೇಕ ರಾಷ್ಟ್ರಗಳಲ್ಲಿ ಹೋಗಿ ನೆಲೆ ಪಡೆದುಕೊಂಡಿತು. ಹೀಗೆ ಬೌದ್ಧಧರ್ಮ ಭಾರತದಿಂದ ಹೊರಕ್ಕೆ ಹೋಗಿ ಏಷ್ಯಾದ ಹಲವಾರು ರಾಷ್ಟ್ರಗಳಲ್ಲಿ ನೆಲೆ ಪಡೆದುಕೊಂಡಿತು ಎನ್ನುವುದನ್ನು ಗಮನಿಸುವಾಗ ಮುಖ್ಯವಾಗಿ ಎದ್ದುಕಾಣುವ ಅಂಶ ಇದು; ಹೀನಯಾನ ಪಂಥ'ವು ಸಿಲೋನ್ (ಶ್ರೀಲಂಕಾ), ಬರ್ಮಾ, ಸಯಾಮ್, ಕಾಂಬೋಡಿಯಾ ಮುಂತಾಗಿ ಏಷ್ಯಾದ ದಕ್ಷಿಣ ಭಾಗದಲ್ಲೂ ಮಹಾಯಾನ ಪಂಥವು ನೇಪಾಳ, ಟಿಬೆಟ್, ಚೀನಾ, ಜಪಾನ್ ಮುಂತಾಗಿ ಉತ್ತರ ಭಾಗದಲ್ಲೂ-ಹಂಚಿಕೊಂಡ ಹಾಗೆ-ಹಬ್ಬಿಕೊಂಡಿತು.

ಕ್ರಿ.ಪೂ. 2ನೇ ಶತಮಾನದ ಹೊತ್ತಿಗೇ ಬೌದ್ಧಧರ್ಮ ಚೀನಾವನ್ನು ಪ್ರವೇಶಿಸಿತ್ತು ಎನ್ನುತ್ತಾರೆ. ಕ್ರಿಸ್ತನ ಕಾಲಕ್ಕಂತೂ ಅಲ್ಲಿ ಈ ಧರ್ಮ ಪ್ರಚುರಗೊಂಡಿತ್ತು ಎಂಬುದು ನಿಶ್ಚಿತ. ಹಾಗೇ, ಕ್ರಿ.ಶ. 6ನೇ ಶತಮಾನದ ಹೊತ್ತಿಗೆ ಬೌದ್ಧಧರ್ಮ ಜಪಾನ್ ದೇಶವನ್ನು ಪ್ರವೇಶಿಸಿತ್ತು. ಕ್ರಿ.ಶ. 401ರಲ್ಲಿ ಕುಮಾರಜೀವ ಎಂಬಾತ ಚೀನಾಕ್ಕೆ ಹೋಗಿ ಅಲ್ಲಿ 'ಮಹಾಯಾನ'ದ 'ಮಾಧ್ಯಮಿಕ ಪಂಥ'ವನ್ನು ಪ್ರವೇಶಗೊಳಿಸಿದ ಮತ್ತು ಕ್ರಿ.ಶ. 500ರ ಅನಂತರ, ಪರಮಾರ್ಥ ಎಂಬಾತ ಅಲ್ಲಿಗೆ ಹೋಗಿ 'ಮಹಾಯಾನ'ದ 'ಯೋಗಾಚಾರ ಪಂಥ'ವನ್ನು ಪ್ರಚುರಗೊಳಿಸಿದ. ಕ್ರಿ.ಶ. 520ರಲ್ಲಿ ಚೀನಾಕ್ಕೆ ಹೋದ ಬೋಧಿಧರ್ಮ ಎಂಬಾತ ಅಲ್ಲಿ ಪ್ರಚಲಿತಗೊಳಿಸಿದ 'ಚಾನ್' ಎಂಬ ಧರ್ಮಪಂಥ ಮುಂದೆ ಜಪಾನಿಯರಿಗೂ ಪರಿಚಿತವಾಯ್ತು. 11ನೇ ಶತಮಾನದಲ್ಲಿ, 'ಝೆನ್' ಎಂಬ ಹೆಸರಿನಿಂದ ಅದು ಜಪಾನಿನಲ್ಲಿ ಸ್ಥಿರವಾಗಿ ನೆಲೆಗೊಂಡಿತು.

'ಹೀನಯಾನ'ವನ್ನೊಳಗೊಂಡು ಬೌದ್ಧಧರ್ಮದ ಎಲ್ಲ ಪಂಥಗಳೂ ಚೀನಾಕ್ಕೆ ವಲಸೆ ಹೋಗಿದ್ದವು. ಆದರೆ ಅಲ್ಲಿ ಬಹುಕಾಲ ಬಾಳಿ ಉಳಿದದ್ದು 'ಮಹಾಯಾನ' ಪಂಥ; ಅವರದ್ದೇ ಶಾಖೆಗಳು ಹಾಗೂ ಆ ದೇಶದಲ್ಲಿ ಹೊಸತಾಗಿ ರೂಪುಗೊಂಡ ಅನೇಕಾನೇಕ ಉಪಶಾಖೆಗಳು.

ಬೌದ್ಧಧರ್ಮದ ಬೋಧಕನಾಗಿ ಕ್ರಿ.ಶ. 520ರಲ್ಲಿ ಚೀನಾಕ್ಕೆ ಹೋದ ಬೋಧಿ ಧರ್ಮ ಎಂಬ ಹೆಸರಿನ ಭಿಕ್ಷು ಅಸಾಧಾರಣ ಮೇಧಾವಿಯಾಗಿದ್ದನಂತೆ. ಆತನ ಬೋಧನೆ ತೀರಾ ಹೊಸ ರೀತಿಯಲ್ಲೂ ವಿಲಕ್ಷಣವೂ ಆಗಿದ್ದು ಜನರನ್ನು ಬೆರಗುಗೊಳಿಸಿ ಆಕರ್ಷಿಸಿತಂತೆ. ಹೀಗೆ ಬೌದ್ಧಧರ್ಮಕ್ಕೆ ಹೊಸ ರೀತಿಯ ಪ್ರಚಾಲನೆ ಕೊಟ್ಟ ಈತನೇ 'ಚಾನ್' (ಝೆನ್)ನ ಪ್ರವರ್ತಕ ಎಂದು ಭಾವಿಸುತ್ತಾರೆ.

ಬೌದ್ಧಧರ್ಮ ಚೀನಾಕ್ಕೆ ಪ್ರವೇಶಿಸುವ ಮೊದಲು ಅಲ್ಲಿ ಪ್ರಾಚೀನವಾದ ಕನ್‌ಫ್ಯುಷಿಯನ್ ಧರ್ಮವಿತ್ತು; ಅನಂತರ ಬಂದು ಜನರನ್ನಾಕರ್ಷಿಸಿದ್ದ ಟಾಓ ಎಂಬ ತತ್ತ್ವಪಂಥವಿತ್ತು. (ಸ್ಥೂಲವಾಗಿ ಹೇಳುವುದಾದರೆ-ಕನ್‌ಫ್ಯುಷಿಯನ್ ಧರ್ಮವು ಸಾಂಪ್ರದಾಯಿಕವಾದ ನೀತಿ-ನಿಯಮಗಳಿಗೆ ಕಟ್ಟು-ಕಟ್ಟಳೆಗಳಿಗೆ ಬದ್ಧವಾಗಿ ಜೀವಿಸುವುದನ್ನು ಪ್ರತಿಪಾದಿಸುವಂಥದು; ಟಾಓ ಪಂಥವು ತರ್ಕಾತೀತವಾದ ಪ್ರಾಕೃತಿಕ ಪ್ರವಾಹವನ್ನುವಂಥ ಸಹಜವಾದ ಬದುಕನ್ನು ಒತ್ತಿ ಹೇಳುವಂಥದು). ಬೌದ್ಧಧರ್ಮ ಚೀನಾದಲ್ಲಿ ಕಾಲಿರಿಸಿದಾಗಿನಿಂದ ಅದು ಅಲ್ಲಿನ ಕನ್‌ಫ್ಯುಷಿಯನ್ ಮತ್ತು ಟಾಓ ಧರ್ಮಗಳ ಜೊತೆ ಒಡನಾಡಿಯಾಗಿ-ಅದರ ಅಂಶಗಳನ್ನು ಸಂಮೇಳಗೊಳಿಸಿಕೊಳ್ಳುತ್ತ, ಅದರ ಜತೆ ಸಂಘರ್ಷಿಸಿ ಹೊಸ ಅಂಶಗಳನ್ನು ಸೃಜಿಸಿಕೊಳ್ಳುತ್ತ ಬೆಳೆದುಕೊಳ್ಳತೊಡಗಿತು. ಬೋಧಿ ಧರ್ಮನ ಧರ್ಮೋಪದೇಶವಂತೂ ಇಂಥ ಒಡನಾಟ ಕೊಡುಗೆಗಳಿಂದ ಸಮೃದ್ಧಗೊಂಡು ಅತ್ಯಂತ ವಿಶಿಷ್ಟವಾದ 'ಚಾನ್' ಎನಿಸಿಕೊಂಡಿತು. 'ಚಾನ್' ಎಂಬುದು 'ಟಾಓ' ಧರ್ಮದ ಪರಿಷ್ಕೃತರೂಪವೇ ಎನ್ನುವಷ್ಟು ಮಟ್ಟಿಗೆ ಅದು ಸ್ಥಳೀಯ ರುಚಿಯನ್ನು ಮೈಗೂಡಿಸಿಕೊಂಡಿತು. ಚೀನಾದಲ್ಲಿ ಬೌದ್ಧಧರ್ಮದ ಶಾಖೆಗಳು ಕಾಲಕಾಲಕ್ಕೆ ರಾಜವಂಶದ ಖಯಾಲಿಗೆ ಅನುಗುಣವಾಗಿ ಏರಿಳಿತಕ್ಕೊಳಗಾಗುತ್ತಿದ್ದರೂ ದೀರ್ಘಕಾಲ ಸಾಕಷ್ಟು ಪ್ರಭಾವಿಯಾಗಿಯೇ ಬಾಳಿಕೊಂಡಿದ್ದವು. 'ಚಾನ್' ಕೂಡ ಅಲ್ಲಿ ಬಹುಕಾಲ ರಾಜಾಶ್ರಯ ಪಡೆದು ಜನಪ್ರಿಯವೂ ಆಗಿ ಮೆರೆಯಿತು; ಹಲವಾರು ಉಪಶಾಖೆಗಳಾಗಿ ಒಡೆದು ಹಬ್ಬಿಕೊಂಡಿತು. ಕ್ರಿ.ಶ. 1279ರಲ್ಲಿ ಸುಂಗ್ ರಾಜವಂಶ ಖಿಲಗೊಂಡಾಗ ಮಾತ್ರ, 'ಚಾನ್' ಧರ್ಮಪಂಥವೂ ನಶಿಸತೊಡಗಿತು. ಮುಂದೆ ಚಾನ್ ಗಟ್ಟಿಯಾಗಿ ನೆಲೆಗೊಂಡದ್ದು ಜಪಾನ್‌ನಲ್ಲೇ. (12ನೇ ಶತಮಾನದ ಅನಂತರ ಚೀನಾದಲ್ಲಿ 'ಅಮಿತಾಬ ಪಂಥ'ವೆಂಬ ಬೌದ್ಧಶಾಖೆ ಹೆಚ್ಚು ಪ್ರಚಾರಗೊಂಡಿತು. ಆ ಶಾಖೆ ಕೂಡ ಅನಂತರ, ಜಪಾನನ್ನು ಪ್ರವೇಶಿಸಿ ಅಲ್ಲಿ ನೆಲೆ ಕಂಡುಕೊಂಡಿತು).

11ನೇ ಶತಮಾನದಲ್ಲಿ 'ಚಾನ್' ಜಪಾನನ್ನು ಪ್ರವೇಶಿಸಿದಾಗ ಅದು ಪುನಃ, ಆ ದೇಶದಲ್ಲಿದ್ದ ಶಿಂಟೋ ಧರ್ಮಕ್ಕೆ ಮುಖಾಮುಖಿಯಾಗಿ, ಮೇಳೈಸಿಕೊಳ್ಳುತ್ತ, ಘರ್ಷಿಸಿಕೊಳ್ಳುತ್ತ, ಅತಿ ವಿಶಿಷ್ಟವಾದ 'ಝೆನ್'ನ ಹುಟ್ಟಿಗೆ ಕಾರಣವಾಯಿತು.

ಝೆನ್, ಆ ಕಾಲದಿಂದ ಈಗಿನ ಆಧುನಿಕ ಯುಗದ ತನಕವೂ ಜಪಾನಿನ ಒಂದು ಅತ್ಯಂತ ಪ್ರಮುಖ ಧರ್ಮವಾಗಿ ಬೆಳೆದುಬಂದಿದೆ. ಇಲ್ಲೂ ಪುನಃ, ಇದರ ಅನೇಕಾನೇಕ ಉಪಶಾಖೆಗಳು ಮಠಗಳು ಹುಟ್ಟಿ ಹಬ್ಬಿಕೊಂಡಿವೆ. ಜಪಾನಿನ ವಿಶಿಷ್ಟವಾದ 'ಸಮುರಾಯ್' (ವೀರಕ್ಷತ್ರಿಯ ಕುಲ) ಸಂಸ್ಕೃತಿ ಹಾಗೂ ಅದು ರೂಪಿಸಿಕೊಂಡ 'ಬುಶಿಡೊ' (ನೀತಿ ಸಂಹಿತೆ) ಝೆನ್‌ನಿಂದಲೇ ಜನ್ಮಗೊಂಡಂಥವು. ಅಷ್ಟು ಮಾತ್ರವಲ್ಲ. ಸಮಗ್ರ ಜಪಾನಿನ ಜನಸಾಮಾನ್ಯರ ನಿತ್ಯ ನಡಾವಳಿಗಳಲ್ಲಿ (ಚಾಹಬ್ಬ, ಜುಜುತ್ಸು ಅಥವಾ ಜುಡೊ ಮಲ್ಲವಿದ್ಯೆ, ತೋಟಗಾರಿಕೆ ಇತ್ಯಾದಿ) ಹಾಗೂ ಅಲ್ಲಿನ ಕಾವ್ಯಕಲೆ ಸಂಸ್ಕೃತಿಗಳಲ್ಲಿ (ಜಪಾನಿ ಚಿತ್ರಕಲೆ, ನೋ ರಂಗಭೂಮಿ, ಹಾಯ್‌ಕು ಕವಿತೆ, ಇಕೆಬಾನ ಪುಷ್ಪಕಲೆ, ಇತ್ಯಾದಿ) ಝೆನ್ ಇವತ್ತಿಗೂ ಜೀವಂತವಾಗಿ ಉಸಿರಾಡುತ್ತಿದೆ. ಜಪಾನೀ ಜೀವನದ ಯಾವುದೇ 'ಸ್ವಕೀಯ ವಿಶಿಷ್ಟ' ಅಂಶವನ್ನು ಎತ್ತಿಕೊಂಡರೂ ಅದರಲ್ಲಿ ಝೆನ್ ಜೀರ್ಣಗೊಂಡಿರುತ್ತದೆ. ಚೀನಾದಲ್ಲಿ 12ನೇ ಶತಮಾನದಿಂದ ಈಚೆ, ಚಾನ್ ಪಂಥ ನಶಿಸಿದ್ದರೂ ಆ ರಾಷ್ಟ್ರದ ಸಮಗ್ರ ಜೀವನದಲ್ಲಿ ಕೂಡ ಇವತ್ತಿಗೂ ಈ ಪಂಥದ ಅಂತರ್ಗತ ಪ್ರಭಾವಗಳನ್ನು ಕಾಣಬಹುದು ಎನ್ನುತ್ತಾರೆ.

ಆಧುನಿಕ ಜಪಾನಿನ ಸುಮಾರು ಹತ್ತೂವರೆ ಕೋಟಿ ಜನಸಂಖ್ಯೆಯಲ್ಲಿ ಸುಮಾರಾಗಿ ನಾಲ್ಕೂವರೆ ಕೋಟಿಗಿಂತ ಹೆಚ್ಚು ಬೌದ್ಧರಿದ್ದಾರೆ ಹಾಗೂ ಅವರಲ್ಲಿ ಹತ್ತಿರ ಹತ್ತಿರ ಒಂದು ಕೋಟಿ ಝೆನ್ ಅನುಯಾಯಿಗಳಿದ್ದಾರೆ ಎನ್ನುವುದನ್ನು ಗಮನಿಸಬಹುದು.

ಮಹಾಯಾನ ಬೌದ್ಧರಲ್ಲಿ ಎರಡು ಪ್ರಮುಖ ಶಾಖೆಗಳನ್ನು ಗುರುತಿಸುತ್ತಾರೆ; ಒಂದು, 'ಅನ್ಯ ಪ್ರಯತ್ನ'ದಿಂದ ಸಿದ್ಧಿ ಪಡೆದುಕೊಳ್ಳುವುದು (ತಾರಿಕಿ); ಇನ್ನೊಂದು, 'ಸ್ವಪ್ರಯತ್ನ'ದಿಂದ ಸಿದ್ಧಿ ಪಡೆದುಕೊಳ್ಳುವುದು (ಜಿರಿಕಿ). ಝೆನ್ ಸ್ವಪ್ರಯತ್ನದ 'ಜಿರಿಕಿ' ಬೌದ್ಧ ಶಾಖೆಗೆ ಸೇರಿಕೊಳ್ಳುತ್ತದೆ.

ಸಂಪ್ರದಾಯದ ಪ್ರಕಾರ - ಝೆನ್ ಹುಟ್ಟಿಕೊಂಡದ್ದು ಬುದ್ಧನಿಂದಲೇ. ಬುದ್ಧನು ಜ್ಞಾನೋದಯವಾದ ಮೇಲೆ ಒಮ್ಮೆ, ಗಯೆಯಲ್ಲಿ ಬೋಧಿವೃಕ್ಷದ ಕೆಳಗೆ ಕೂತಿದ್ದಾಗ, ಆತನಿಗೆ ಶಿಷ್ಯರು 'ಕುಮ್ಪೂಳ' ಪುಷ್ಪವನ್ನು ತಂದು ಅರ್ಪಿಸಿದರು. ಆತ, ಅದನ್ನು ಒಮ್ಮೆ ಕೈಯಲ್ಲಿ ಮುಟ್ಟಿದ. ಅಷ್ಟೇ. ಅದನ್ನು ಕಂಡು ಎದುರಿದ್ದ ಶಿಷ್ಯರಲ್ಲಿ ಒಬ್ಬನಾದ ಮಹಾಕಶ್ಯಪ ಮೆಲುವಾಗಿ ನಕ್ಕ. ಆ ಕ್ಷಣದಲ್ಲಿ ಬುದ್ಧ ದೇವ ಮಹಾಕಶ್ಯಪನಿಗೆ ಹೀಗೆ ಹೇಳಿದ :

'ಧರ್ಮದ ಮೂಲಧರ್ಮ ಉಂಟಲ್ಲ, ಅವಕ್ಕೆ ಧರ್ಮವೇ ಇಲ್ಲ;

ಧರ್ಮ ಶೂನ್ಯತೆ ಕೂಡ ಧರ್ಮವೇ. ಸುಳ್ಳಲ್ಲ.

ಧರ್ಮಶೂನ್ಯತೆಯೆಂಬ ಧರ್ಮ ಪ್ರಕರಣಗೊಂಡು ನಡೆದಿದೆ ನೋಡು

ಈಗ ಕೇಳುತ್ತೇನೆ-ಧರ್ಮವೆನ್ನುವುದೊಂದು ವಸ್ತುವಿತ್ತೆ ಯಾವತ್ತು ಎಂದಾದರೂ?'

ಈ ಘಟನೆ, ಬುದ್ಧ ಹೇಳಿದ, ಈ ಒಡಪು-ಇದೇ ಝೆನ್‌ನ ಮೂಲ ಎಂದು ಸಂಪ್ರದಾಯ ಭಾವಿಸುತ್ತದೆ. ಆದ್ದರಿಂದ ಮಹಾಕಶ್ಯಪವೇ ಝೆನ್‌ನ ಮೊದಲ ಗುರು ಎಂದು ತಿಳಿಯುತ್ತಾರೆ. ಅವನಿಂದ ಮುಂದೆ ನೇರವಾಗಿ ಗುರುವಿನಿಂದ ಗುರುನಿಗೆ ಮೌಖಿಕವಾಗಿ ಈ ಜ್ಞಾನ ಪ್ರವಹಿಸುತ್ತ ಬಂತು ಎನ್ನುತ್ತಾರೆ. ಮಹಾಕಶ್ಯಪನ ಅನಂತರ ಬಂದ ಎರಡನೆಯ ಗುರು ಆನಂದ. ಹೀಗೆ ಈ ಪರಂಪರೆ ಭಾರತದಲ್ಲಿ ಇಪ್ಪತ್ತೇಳು ಗುರುಗಳ ಮೂಲಕವಾಗಿ ಪ್ರವಹಿಸಿ ಬಂತು. ಇಪ್ಪತ್ತೆಂಟನೆಯವನೇ ಬೋಧಿ ಧರ್ಮ.

ಬೋಧಿಧರ್ಮ ಚೀನಾಕ್ಕೆ ಬಂದದ್ದು ಕಥೆಯಾಗಿ ಉಳಿದಿದೆ. ಚೀನಾ ಪ್ರವೇಶಿಸಿದಾಗ ಅವನನ್ನು ಅಲ್ಲಿನ ಚಕ್ರವರ್ತಿ ಉ ಎಂಬಾತನ ಬಳಿಗೆ ಕರೆದೊಯ್ದರು. ಚಕ್ರವರ್ತಿ ಗುರುವಿಗೆ ಭಕ್ತಿಯಿಂದ ನಮಿಸಿ ತಾನು ಮಾಡಿದ ಹಲವಾರು ಧರ್ಮ ಕಾರ್ಯಗಳನ್ನು ನಿವೇದಿಸಿದ. ಕೇಳಿಕೊಂಡ ಬೋಧಿಧರ್ಮ, 'ಇವೆಲ್ಲವೂ ನಿಷ್ಫಲ' ಎಂದುಬಿಟ್ಟ. ಬೆರಗಾದ ಚಕ್ರವರ್ತಿ, 'ಹಾಗಾದರೆ, ಪವಿತ್ರವಾದ ಸತ್ಯ ಯಾವುದು?' ಎಂದು ಪ್ರಶ್ನೆ ಮಾಡಿದ. 'ಮಹಾಶೂನ್ಯದಲ್ಲಿ ಪವಿತ್ರವೆಂಬುದೂ ಇಲ್ಲ, ಸತ್ಯವೆಂಬುದೂ ಇಲ್ಲ' ಎಂದ ಬೋಧಿಧರ್ಮ. ಕೊನೆಗೆ ಚಕ್ರವರ್ತಿ ಅಸಹನೆಯಿಂದ. 'ಹಾಗಾದರೆ, ನನ್ನೆದುರು ನಿಂತಿರುವ ನೀವು ಯಾರು, ಹೇಳುತ್ತೀರಾ?' ಎಂದು ಕೇಳಲು, 'ಅದು ನನಗೆ ತಿಳಿಯದು' ಎಂದ ಬೋಧಿಧರ್ಮ.

ಅದಾದ ಮೇಲೆ ಬೋಧಿಧರ್ಮ ಗುಹೆಯೊಂದರಲ್ಲಿ ಒಂಬತ್ತು ವರ್ಷಗಳ ದೀರ್ಘಕಾಲ ಧ್ಯಾನಸ್ಥನಾಗಿದ್ದ ಎನ್ನುತ್ತಾರೆ. ಇದೇ ಸಮಯದಲ್ಲಿ ಶಾನ್‌ಕ್ವಾಂಗ್ ಎನ್ನುವಾತ ಆತನ ಧರ್ಮಬೋಧೆ ಪಡೆಯಲಿಕ್ಕಾಗಿ ಬಹುದಿನಗಳ ಕಾಲ ಗುಹೆಯ ಹೊರಗೆ ಹಿಮ-ಚಳಿಗಳ ಆಹತವನ್ನೂ ತಾಳಿಕೊಂಡು ನಿಂತಿದ್ದ. ಅಂತಿಮವಾಗಿ ಆತ ತನ್ನ ಎಡತೋಳನ್ನೇ ಕತ್ತರಿಸಿ ಗುರುವಿಗೆ ಅರ್ಪಿಸಿಕೊಂಡ ಮೇಲೆ ಅವನಿಗೆ ಗುರುವಿನ ಭೇಟಿಯಾಯಿತು. ಗುರುವನ್ನು ಭೇಟಿ ಮಾಡಿದಾಗ ಆತ, 'ಗುರುವೇ, ನನ್ನ ಮನಸ್ಸನ್ನು ಶಾಂತಗೊಳಿಸಿಕೊಡು' ಎಂದು ಬೇಡಿದ. ಆಗ ಬೋಧಿಧರ್ಮ, 'ಎಲ್ಲಿ, ಆ ನಿನ್ನ ಮನಸ್ಸನ್ನು ಎತ್ತಿ ನನ್ನ ಕೈಯಲ್ಲಿ ಕೊಡು' ಎಂದನಂತೆ. 'ಹಾಗೆ, ಅದನ್ನು ಎತ್ತಿಕೊಡಲು ಬರುವುದಿಲ್ಲ ಗುರುವೇ' ಎಂದು ಶಾನ್‌ಕ್ವಾಂಗ್ ಉತ್ತರಿಸಿದಾಗ, 'ಸರಿ, ಹಾಗಾದರೆ ನಾನು ನಿನ್ನ ಮನಸ್ಸನ್ನು ಶಾಂತಗೊಳಿಸಿದ್ದೇನೆ' ಎಂದನಂತೆ ಬೋಧಿಧರ್ಮ. ಮುಂದೆ ಶಾನ್‌ಕ್ವಾಂಗ್, ಚೀನಾದಲ್ಲಿ ಈ ಪಂಥದ ಎರಡನೆಯ ಗುರು ಎನ್ನಿಸಿಕೊಂಡ.

ಬೋಧಿಧರ್ಮ ತೀರಿಕೊಂಡ ಕೆಲವೇ ದಿನಗಳಲ್ಲಿ, ಯಾರೋ ಬಂದು ವರದಿ ಮಾಡಿದರು-ಆತ ಪರ್ವತಗಳನ್ನೇರಿ ಭಾರತಾಭಿಮುಖವಾಗಿ ನಡೆಯುತ್ತಿದ್ದುದನ್ನು ಸಾಕ್ಷಾತ್ ಕಂಡೆ. ಬರಿಗಾಲುಗಳಲ್ಲಿ ನಡೆಯುತ್ತಿದ್ದ, ಕೈಯಲ್ಲಿ ಒಂದು ಪಾದರಕ್ಷೆ ಹಿಡಿದುಕೊಂಡಿದ್ದ-ಎಂದು. ಆಮೇಲೆ ಆತನ ಸಮಾಧಿಯನ್ನು ಅಗೆದು ನೋಡಿದರಂತೆ. ಸಮಾಧಿಯಲ್ಲಿ

ಏನೂ ಇರಲಿಲ್ಲ. ಒಂದು ಪಾದರಕ್ಷೆ ಮಾತ್ರ ಅಲ್ಲಿ ಉಳಿದುಕೊಂಡಿತ್ತು.

ಚೀನಾದಲ್ಲಿ ಬೋಧಿಧರ್ಮನಿಂದ ಮೊದಲಾದ ಗುರುಪರಂಪರೆ ಆರನೆಯ ಗುರುವಿನ ತನಕ ಮುಂದುವರೆಯಿತು. ಆರನೆಯ ಗುರು, ಇನ್ನು ಮುಂದೆ ಈ ಗುರುಪರಂಪರೆ ಅಗತ್ಯವಿಲ್ಲ ಎಂದು ಅದನ್ನು ರದ್ದುಗೊಳಿಸಿದ.

ಕ್ರಿ.ಶ. 1004ರಲ್ಲಿ ಚೀನೀ ಗುರು ಡೊಜೆನ್ ಎನ್ನುವಾತ ಬೋಧಿಧರ್ಮನ ಜೀವನ ವೃತ್ತಾಂತವನ್ನು ಲಿಖಿತಗೊಳಿಸಿದ್ದಾನೆ. ಅದರಲ್ಲಿ ಬರುವ ಒಂದು ಸಂಗತಿ ಇದು;

ಬೋಧಿಧರ್ಮ ಚೀನಾದಲ್ಲಿ ಒಂಬತ್ತು ವರ್ಷ ಕಳೆದು, ನಿರ್ಗಮಿಸಬೇಕೆಂದಿದ್ದಾಗ ಅವನ ಶಿಷ್ಯರೆಲ್ಲರೂ ಬಂದು ಕೂಡಿಕೊಂಡರು; ತಂತಮ್ಮ ಜ್ಞಾನವನ್ನು ನಿವೇದಿಸಿಕೊಂಡರು.

ಡೊಫುಕು ಎನ್ನುವಾತ ಹೇಳಿದ-'ಸತ್ಯವೆನ್ನುವುದು ಆಸ್ತಿ-ನಾಸ್ತಿಗಳ ಗ್ರಹಿಕೆಯ ಕ್ರಮಕ್ಕೆ ಅತೀತವಾದದ್ದು ಎಂದು ನನ್ನ ಭಾವನೆ'.

ಅದಕ್ಕೆ ಬೋಧಿಧರ್ಮ ಹೇಳಿದ-'ಅಪ್ಪಾ, ನೀನು ನನ್ನ ಚರ್ಮವನ್ನು ಗಳಿಸಿಕೊಂಡಿದ್ದೀಯೆ'.

ಆಮೇಲೆ ಸೋಜಿ ಎಂಬ ಭಿಕ್ಷುಣಿ ಹೇಳಿದಳು-'ಆನಂದ ಬುದ್ಧಲೋಕವನ್ನು ಕಂಡ ಎನ್ನುತ್ತಾರೆ; ಆತ ಒಮ್ಮೆ ಕಂಡ, ಆದರೆ ಅನಂತಕಾಲ ಕಂಡ ಎನ್ನುತ್ತಾರೆ. ಹಾಗಿರುತ್ತದೆ ಸತ್ಯ'.

ಬೋಧಿಧರ್ಮ ಹೇಳಿದ-'ನೀನು ನನ್ನ ಮಾಂಸವನ್ನು ಪಡೆದುಕೊಂಡಿದ್ದೀಯೆ'.

ಡೊಯ್‌ಕು ಎಂಬಾತ ನಿವೇದಿಸಿಕೊಂಡ-'ಗಾಳಿ ಬೆಳಕು ದ್ರವ ಘನ ಮುಂತಾದ ವಸ್ತುಗಳೆಲ್ಲವೂ ಶೂನ್ಯವೇ, ಅವಸ್ತುವಾದ ಶೂನ್ಯವೇ ಸತ್ಯ.'

ಅದಕ್ಕೆ ಬೋಧಿಧರ್ಮ ಹೇಳಿದ-'ನಿನಗೆ ನನ್ನ ಆಸ್ತಿ ಸಿಕ್ಕಿದೆ'

ಅಂತಿಮವಾಗಿ ಎಕಾ ಎಂಬಾತ ಗುರುವಿಗೆ ಸಾಷ್ಟಾಂಗ ನಮಸ್ಕರಿಸಿ ಮೌನ ತಾಳಿದ. ಆಗ ಬೋಧಿಧರ್ಮ ಹೇಳಿದ-'ನೀನು ನನ್ನ ಅಸ್ತಿಸಾರವನ್ನು ಪಡೆದುಕೊಂಡಿದ್ದೀಯೆ.

ಝೆನ್ ಅನಿರ್ವಾಚ್ಯ.

ಒಮ್ಮೆ, ಒಬ್ಬ ಕನ್‌ಫ್ಯುಶಿಯನ್ ಕವಿ. ಗುರು ಹ್ಯೂಯೆನ್‌ತ್ಸ್ಯಾಂಗ್‌ನ ಹತ್ತಿರ, ಝೆನ್‌ನ ರಹಸ್ಯವೇನು ಎಂದು ಪ್ರಶ್ನಿಸಿದನಂತೆ. ಅದಕ್ಕೆ ಹುಯ್‌ತಾಂಗ್, 'ಅಪ್ಪಾ, ನನ್ನಲ್ಲಿ ಮುಚ್ಚಿಡುವಂಥದು ಏನೂ ಇಲ್ಲ' ಎಂದನಂತೆ. ಆಮೇಲೆ ಸಂಜೆ ಅವರಿಬ್ಬರೂ ಕೂಡಿ ತಿರುಗಾಟಕ್ಕೆ ಹೋಗಿದ್ದಾಗ, ಪಕ್ಕದ ಪೊದೆಯಿಂದ ಆಗಷ್ಟೇ ಅರಳಿದ ಹೂವಿನ ಪರಿಮಳ ಸುಳಿದು ಬಂದಿತು. ಗುರು ಹೇಳಿದ-'ನನ್ನಲ್ಲಿ ಮುಚ್ಚಿಡುವುದೂ ಏನೂ ಇಲ್ಲ. ಕಂಡೆಯಾ?'

ಝೆನ್ ಬಚ್ಚಿಡುವಂಥದಲ್ಲ. ಝೆನ್ ಮುಚ್ಚಿಡುವಂಥದಲ್ಲ.

ಧರ್ಮ ಎನ್ನುವುದಕ್ಕೆ 'ಧಾರಕ' ಎಂಬ ವಿಶಾಲ ಅರ್ಥ ಕೊಟ್ಟುಕೊಂಡಾಗ ಮಾತ್ರವೇ 'ಝೆನ್' ಒಂದು 'ಧರ್ಮ' ಎನ್ನಲು ಸಾಧ್ಯ. ಇತರ ಸಾಂಪ್ರದಾಯಿಕ ಧರ್ಮಗಳಂತೆ ಝೆನ್, ತರ್ಕಶುದ್ಧವಾದ ಸುಸಂಬದ್ಧವಾದ ಬೌದ್ಧಿಕ ತತ್ವಸಿದ್ಧಾಂತವಲ್ಲ; ಶಾಸ್ತ್ರ ಶಾಸನಗಳ, ವಿಧಿ-ನಿಷೇದ-ನೀತಿಗಳ ನಿಷ್ಕೃಷ್ಟ ಪ್ರಾಕಾರದಲ್ಲಿ ಬದ್ಧವಾದದ್ದಲ್ಲ. ಝೆನ್ ಬಗ್ಗೆ ವಿವರಣೆ ಕೊಡುವುದು ಅಸಾಧ್ಯ.

ಪೊಚಾಂಗ್ ಎಂಬ ಗುರು, 'ಹಸಿವಾದಾಗ ತಿನ್ನು, ಆಯಾಸವಾದಾಗ ಮಲಗಿಕೋ, ಅದೇ ಝೆನ್' ಎನ್ನುತ್ತಾನೆ. ಮತ್ತೊಬ್ಬ ಗುರು ಲಿನ್‌ಚಿ ಹೀಗಂದಿದ್ದಾನೆ-'ನಿಜವಾಗಿಯೂ ಧಾರ್ಮಿಕನಾಗಿರುವಾತನಿಗೆ, ಪ್ರಾಪಂಚಿಕ ಅಸ್ತಿತ್ವದ ವಿವಿಧ ಸನ್ನಿವೇಶಗಳಲ್ಲಿ ಹೇಗೆ ಬೇಕೊ ಹಾಗೆ ಸುಲಲಿತವಾಗಿ ತೊಡಗಿಕೊಂಡು ನಡೆಯುವುದಲ್ಲದೆ ಬೇರೆ ವಿಶೇಷ ಕರ್ತವ್ಯವೆಂಬುದಿಲ್ಲ. ಬೆಳಗಾದಾಗ ಆತ ಸದ್ದಿಲ್ಲದೆ ನಿದ್ರೆಯಿಂದ ಮೇಲಕ್ಕೇಳುತ್ತಾನೆ, ಬಟ್ಟೆ ತೊಟ್ಟುಕೊಳ್ಳುತ್ತಾನೆ, ಕೆಲಸಕ್ಕೆ ನಡೆಯುತ್ತಾನೆ, ನಡೆಯಬೇಕೆನ್ನಿಸಿದಾಗ ನಡೆಯುತ್ತಾನೆ, ಕೂರಬೇಕೆನ್ನಿಸಿದಾಗ ಕೂರುತ್ತಾನೆ. ಅವನಿಗೆ ಬುದ್ಧತ್ವದ ಆಕಾಂಕ್ಷೆಯಿಲ್ಲ, ಅದರ ಕಿಂಚಿತ್ ಯೋಚನೆ ಕೂಡ ಅವನಲ್ಲಿ ಸುಳಿಯದು. ಬುದ್ಧತ್ವ ಪಡೆದುಕೊಳ್ಳುತ್ತೇನೆಂದು ಹಟದಿಂದ ಹೆಣಗುವಂಥವನಿಗೆ. ಅವನ ಆ ಬುದ್ಧನೇ ಹುಟ್ಟು ಸಾವುಗಳ ಕೊನೆಯಿಲ್ಲದ ಯಾತ್ರೆಗೆ ಮೂಲ ಕಾರಣನಾಗುತ್ತಾನೆ'.

ಝೆನ್, ಜೀವಿಸು ಎನ್ನುತ್ತದೆ; ಹೇಗೆ ಜೀವಿಸಬೇಕು ಎಂದು ವಿಧಿ-ನಿಷೇಧ ಹೇಳುವುದಿಲ್ಲ. 'ಇದು ಬದುಕಿನ ಅರಿವು' ಎಂದು ಮಥಿತವನ್ನು ಕೈಗೆತ್ತಿಕೊಡುವುದಿಲ್ಲ. ಬದುಕನ್ನು ಅರಿ ಎನ್ನುತ್ತದೆ.

ಪೂರ್ವಗ್ರಹವಿಲ್ಲದೆ ಬದುಕಿಗೆ ಒಡ್ಡಿಕೊಳ್ಳುವುದೇ ಝೆನ್. ಅದು ಆಸ್ತಿಕವೂ ಅಲ್ಲ, ನಾಸ್ತಿಕವೂ ಅಲ್ಲ. ಅದು ಲಕ್ಷಣಾತೀತ-ಬದುಕಿನ ಹಾಗೇ.

ಐಹಿಕವಾದ ಬದುಕಿನಲ್ಲಿದ್ದುಕೊಂಡೇ ಯಾವುದೇ ಸಾಮಾನ್ಯ ವೃತ್ತಿಯಲ್ಲಿ ತೊಡಗಿಕೊಂಡು ದೈಹಿಕ ಕಾಯಕವನ್ನು ನೆರವೇರಿಸಿಕೊಳ್ಳುತ್ತಲೇ ಕ್ಷಣಿಕ-ಅನಂತ ಆಸ್ತಿ-ನಾಸ್ತಿ, ಸುಖ-ದುಃಖ ಮುಂತಾದ ಬದುಕಿನ ಎಲ್ಲ ದ್ವಂದ್ವಗಳಲ್ಲಿ ಮುಳುಗಿಕೊಂಡೇ ಅದೇ ಹೊತ್ತಿನಲ್ಲಿ, ಅದರಿಂದ ಆಚೆ ಲಂಘಿಸಿ ಅವೆಲ್ಲವನ್ನೂ ಕಂಡುಕೊಳ್ಳುತ್ತ, ಯಾವುದನ್ನೂ ನಿರಾಕರಿಸದೆ ಎಲ್ಲವನ್ನೂ ಒಳಗೊಳ್ಳುತ್ತ ಅರಿವುಗೊಳಿಸಿಕೊಳ್ಳುತ್ತ ಬದುಕುವ ಕೌಶಲವೇ ಝೆನ್.

(ಉಪನಿಷತ್ತಿನಿಂದ ವೇದಾಂತದ ತನಕದ ವಿವಿಧ ಹಿಂದೂ ಧರ್ಮಶಾಖೆಗಳಲ್ಲಿ, ಇತರ ಭಾರತೀಯ ಧರ್ಮಗಳಲ್ಲಿ, ಮಾತ್ರವಲ್ಲ, ವಿಶ್ವದ ಅನೇಕ ಧರ್ಮಗಳಲ್ಲಿ ಕೂಡ ಝೆನ್‌ನನ್ನು ಹೋಲುವ ಚಿಂತನೆಯ ಎಳೆಗಳು ಕಾಣಸಿಗುತ್ತವೆ ಎಂಬುದನ್ನೂ ಇಲ್ಲಿ ಗಮನಿಸಬೇಕು).

ಝೆನ್ ಗುರುಗಳಿಗೆ ಭಾರೀ ಮಹತ್ವ ಕೊಟ್ಟಿದೆ. ಹಿಂದಣ ಝೆನ್ ಚಿತ್ರಕಾರರು ರಚಿಸಿರುವ ಚಿತ್ರಗಳಲ್ಲಿ, ಈ ತನಕ ಉಳಿದು ಬಂದಿರುವ ಕಥಾ ಪ್ರಸಂಗಗಳಲ್ಲಿ ವ್ಯಕ್ತವಾಗುವ ಹಾಗೆ ಝೆನ್ ಗುರುಗಳು ವಿಲಕ್ಷಣವೆನ್ನಿಸಿ ಭಾಸವಾಗುತ್ತಾರೆ. ಅವರ ನಿಲುವಿನಲ್ಲಿ, ಭಂಗಿಯಲ್ಲಿ, ಮುಖಭಾವದಲ್ಲಿ, ಕಣ್ಣು-ತುಟಿ-ಕೆನ್ನೆ-ಗಲ್ಲಗಳಲ್ಲಿ ನಮಗೆ ಕಾಣುವುದು-ಅಪಾರ ಕರುಣೆ ಮತ್ತು ನಿಷ್ಠುರ ಹಿಂಸೆಗಳ ವಿಚಿತ್ರ ಸಮ್ಮೇಳನ ಅಥವಾ ಸಂಘರ್ಷ; ಭಯ ಭಕ್ತಿಗಳನ್ನು ಹುಟ್ಟಿಸುತ್ತಿದೆ ಎನ್ನಿಸುತ್ತಾ, ಜತೆಜತೆಗೇ ಹಾಸ್ಯಾಸ್ಪದವಾಗಿದೆಯಲ್ಲ ಎಂದೂ ಭಾಸವಾಗುವಂಥ ವಿಲಕ್ಷಣ ಗಾಂಭೀರ್ಯ. (ಅಂಥ ಗುರುಪರಂಪರೆ ವಿರಳವಾಗಿಯಾದರೂ ಇವತ್ತಿಗೂ ಅಲ್ಲಿ ಉಳಿದು ಬಂದಿದೆ ಎನ್ನುತ್ತಾರೆ).

ಗುರುಗಳಿಗೆ ಅಂಥದೊಂದು ಮಹತ್ವ ಕೊಟ್ಟಿದ್ದರೂ ಝೆನ್ ಸಾಧನೆ ಅಂತಿಮವಾಗಿ ಸ್ವಪ್ರಯತ್ನದಿಂದ ಮಾತ್ರವೇ ಸಾಧ್ಯ ಎನ್ನುತ್ತಾರೆ. ಗುರು ಕೂಡ. ಝೆನ್ ಸಾಧನದಲ್ಲಿ ನೇರ ನೆರವಾಗುವುದಿಲ್ಲ. ಸಾಧಕ, ತನ್ನನ್ನು ಕವಿದುಕೊಂಡಿರುವ ಉಪಾಧಿಗಳಿಂದ ಬಿಡುಗಡೆ ಮಾಡಿಕೊಳ್ಳಲಿಕ್ಕೆ ಮಾತ್ರ ಗುರುವಿನ ನೆರವು ಪಡೆದುಕೊಳ್ಳುತ್ತಾನೆ.

ತುಂಬ ಸ್ಥೂಲವಾಗಿ ಹೇಳುವುದಾದರೆ, ಝೆನ್ ಸಾಧನೆಯೆಂದರೆ 'ಸತೋರಿ'ಯ ಸಾಧನೆ. ವ್ಯಕ್ತಿಯಲ್ಲಿ ಸ್ವ-ಪ್ರಜ್ಞೆ ತಟ್ಟನೆ ಸಮಗ್ರವಾಗಿ ಅಭಿವ್ಯಕ್ತಗೊಳ್ಳುವುದು (ಜ್ಞಾನೋದಯ)-'ಸತೋರಿ', ಇದು ಸತತ ಸಾಧನೆಯಿಂದ ಕ್ರಮೇಣ ಹಂತಹಂತವಾಗಿ ಕ್ರಮಿಸಿಗಳಿಸಿಕೊಳ್ಳುವುದಲ್ಲ; ತಾನಾಗಿ ತಟ್ಟನೆ ಮಿಂಚಿ ಬಿಡುವಂಥದು.

ಬದುಕು ಅಥವಾ ಬದುಕಿನ ಸತ್ಯ, ಸೀಮಿತವಾದ ನಮ್ಮ ಮನಸ್ಸಿನ ಗ್ರಹಿಕೆಗೂ ಬುದ್ಧಿಯ ತರ್ಕ-ಚಿಂತನೆಗಳಿಗೂ ಸಿಕ್ಕಿಕೊಳ್ಳುವಂಥದಲ್ಲ. ಸಾಧಕನಾದವನು ಮೊದಲು, ತನ್ನ ಬುದ್ಧಿ-ಮನಸ್ಸು ತರ್ಕ-ಚಿಂತನೆಗಳ ಜಾಲದಿಂದ ಸಿಡಿದು ಹೊರಬರಬೇಕು; ಕವಿದುಕೊಂಡಿರುವ ಕಲ್ಪಿತ ಆವರಣ ತಟ್ಟನೆ ಸ್ಫೋಟಗೊಂಡು ನಗ್ನಪ್ರಜ್ಞೆಯಲ್ಲಿ ಬದುಕಿನ ಸತ್ಯಕ್ಕೆ ಮುಖಾಮುಖಿಯಾಗಿ ನಿಲ್ಲುವಂತಾಗಬೇಕು. ಇದಕ್ಕೆ ಗುರು ನೆರವಾಗುತ್ತಾನೆ.

ಗುರು, ಸಾಧಕನಿಗೆ ಒಂದು 'ಒಗಟು'ಒಡ್ಡಬಹುದು. ಇದನ್ನು 'ಕೋ ಅನ್' (ಚೀನೀ ಭಾಷೆಯಲ್ಲಿ 'ಕುಂಗ್-ಅನ್') ಎನ್ನುತ್ತಾರೆ. ಸಾಧಕ ಗುರುವಿನ ಎದುರು ಬಂದು ಸಾಷ್ಟಾಂಗ ನಮಸ್ಕರಿಸಿ ಕೂರುತ್ತಾನೆ. ಗುರು-ಸಾಧಕರಲ್ಲಿ ಸಂಭಾಷಣೆ ನಡೆಯುತ್ತದೆ. ಆಗ ಗುರು, ಒಂದು ಕೋ ಅನ್‌ನ್ನು ಮುಂದಿಡುತ್ತಾನೆ. ಈ ಕೋಅನ್, ಯಾವುದೇ ಪ್ರಶ್ನೆಗೆ ಅಸಂಬದ್ಧವಾದ ಉತ್ತರದ ರೂಪದಲ್ಲಿರಬಹುದು.

ಉದಾ :

ಸಾಧಕ - ಬುದ್ಧ ಎನ್ನುವುದೇನು?

ಗುರು - ಬೆಕ್ಕು ಕಂಬವನ್ನು ಹತ್ತುತ್ತಿದೆ.

ಅಥವಾ - ಅದು ಗುರುವೇ ಕೇಳುವ ಅಸಂಬದ್ಧ ವೆನ್ನಿಸುವಂಥ ಒಂದು ಪ್ರಶ್ನೆಯಾಗಿರಬಹುದು.

ಉದಾ :

ಒಂದೇ ಕೈ ಚಪ್ಪಾಳೆಯ ಸದ್ದು ಹೇಗಿರುತ್ತದೆ?

ಅದಾದ ಮೇಲೆ ಸಾಧಕ, ಈ ಒಗಟಿನ ಬಗ್ಗೆ ಚಿಂತಿಸಲು ತೊಡಗುತ್ತಾನೆ. ಚಿಂತನೆ ದೀರ್ಘಕಾಲ ನಡೆಯಬಹುದು. ಹಾಗೇ ಚಿಂತಿಸಿ ಚಿಂತಿಸಿ ತನ್ನ ಬುದ್ಧಿ-ಮನಸ್ಸು-ತರ್ಕಗಳೆಲ್ಲವೂ ಸೋತು, ಯಾವುದೋ ಕ್ಷಣದಲ್ಲಿ ಸಾಧಕನಿಗೆ ಸತ್ಯ ಮಿಂಚಬಹುದು, ಅದಾದ ಮೇಲೆ ಆತ ಗುರುವಿನ ಬಳಿ ಹೋಗಿ ಅದನ್ನು ನಿವೇದಿಸಿಕೊಳ್ಳುತ್ತಾನೆ.

ಇದಲ್ಲದೆ ಗುರು, ಸಾಧಕನಿಗೆ ಇನ್ನೊಂದು ಬಗೆಯ 'ಮುಂಡಿಗೆ' ಒಡ್ಡಬಹುದು, ಅದಕ್ಕೆ 'ಮೊಂಡೋ' (ಚೀನೀ ಭಾಷೆಯಲ್ಲಿ ವೆನ್‌ಟ) ಎನ್ನುತ್ತಾರೆ. ಆ 'ಮುಂಡಿಗೆ'ಗೆ ಸಾಧಕ ಆ ಕ್ಷಣದಲ್ಲಿ ಅಲ್ಲೇ ಉತ್ತರಿಸಬೇಕು.

ಉದಾ :

ಗುರು, ಕೈಯಲ್ಲಿರುವ ಕೋಲು ತೋರಿಸಿಕೊಳ್ಳುತ್ತಾನೆ. 'ಇದು ಕೋಲು ಎಂದರೆ ಆಸ್ತಿ ಎಂದ ಹಾಗೆ; ಅಲ್ಲ ಅಂದರೆ ನಾಸ್ತಿ ಎಂದ ಹಾಗೆ; ಆಸ್ತಿ ನಾಸ್ತಿಗಳನ್ನದೆ ಹೇಳಿ, ಇದೇನು ತಟ್ಟನೆ ಹೇಳಿ. 'ಆ ಕ್ಷಣದಲ್ಲೇ ಉತ್ತರಿಸಬೇಕಾದ ತುರ್ತಿನಲ್ಲಿ ಸಾಧಕ, ಸೋತು ಸತ್ಯವನ್ನು ಎಡವಬಹುದು.

ಇನ್ನೊಂದು ತಂತ್ರ 'ಇನ್ನೆನ್' ಎನ್ನುವುದು. ಅದರಲ್ಲಿ ಗುರು ತಟ್ಟನೆ ಸಾಧಕನ ಕೆನ್ನೆಗೆ ಫಟೀರೆಂದು ಏಟುಕೊಡಬಹುದು. ಅಥವಾ ಅಂಥ ಯಾವುದೊಂದು ಕ್ರಿಯೆಯ ಮೂಲಕ ಸಾಧನಕ ಜ್ಞಾನೋದಯವಾಗಲಿಕ್ಕೆ ಅವಕಾಶ ಮಾಡಿಕೊಡಬಹುದು.

ಝೆನ್‌ಗೆ ಯಾವುದೇ ತತ್ವ-ಸಿದ್ಧಾಂತಗಳಿಲ್ಲದ ಕಾರಣ, ಆಧಾರ ಗ್ರಂಥಗಳೆಂಬುದಿಲ್ಲ. ಝೆನ್‌ನ ಪರಂಪರೆಯೆಂದರೆ ಆಗಾಗ ದಾಖಲಾಗುತ್ತಾ ಬಂದಿರುವ ಒಗಟು-ಮುಂಡಿಗೆ-ಸಂವಾದ-ಪ್ರಸಂಗಗಳು ಮಾತ್ರವೇ. ●



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :

'ಸಂವಾದ' ಮಾಸ ಪತ್ರಿಕೆ

ಸ್ಫೂರ್ತಿಧಾಮ, ಅಂಜನಾನಗರ

ವಿಶ್ವನೀಡಂ ಅಂಚೆ, ಬೆಂಗಳೂರು - 560 091

ದೂರವಾಣಿ : 3287943 / 3281667

ರಾಷ್ಟ್ರೀಯ ಮನಸ್ಸಾಕ್ಷಿಯ ತುಮುಲಗಳು

ಸಾಂಸ್ಕೃತಿಕ ಚಟುವಟಿಕೆಗಳನ್ನು ಸ್ಯೂಡೋ ರಾಷ್ಟ್ರೀಯ ವಾದಿಗಳು ತಪ್ಪಾಗಿ ಅರ್ಥೈಸುತ್ತಿದ್ದು ಹಿಂದುತ್ವದ ಆಧಾರದ ಮೇಲೆ ಭಾರತವನ್ನು ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂತೆ ಮಾಡಿದೆ. ಹಿಂದುತ್ವವು ಭಾರತದ 'ಪ್ರಜಾಪ್ರಭುತ್ವ'ದಲ್ಲಿ ಅಥವಾ ಅಸ್ತಿತ್ವದಲ್ಲಿರುವ ತ್ರಿವರ್ಣ ಧ್ವಜದ ಜೊತೆಯಲ್ಲಿ ಯಾವ ಸಂಬಂಧವೂ ಇಲ್ಲವಾದರೂ ಅದು 'ಹಿಂದೂ ರಾಷ್ಟ್ರ'ವನ್ನು ಮರು ಸ್ಥಾಪಿಸುವ ದುರಾಲೋಚನೆಯಲ್ಲಿ ಎಲ್ಲವನ್ನೂ ಅನರ್ಥಗೊಳಿಸುವ ಎಲ್ಲ ಸಾಧ್ಯತೆಗಳಿವೆ. ಹಾಗಾಗಿ ಇದು ಸಂಘ ಪರಿವಾರದವರಿಗೆ ಬಹುಮುಖ್ಯ ಬದಲಾವಣೆ

ಮೂಲ : ಆನಂದ್ ತೇಲ್‌ತುಂಬ್ಡೆ   ಅನು : ಗೋವಿಂದರಾಜು

ವಿತ್ತೂಮ್ಮೆ, 25ರ ಜನವರಿ 2000ರಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ರಾಷ್ಟ್ರಕ್ಕೆ ನೀಡಿದ ಸಾಂಪ್ರದಾಯಿಕ ಭಾಷಣ, ರಾಷ್ಟ್ರೀಯ ಮನಸ್ಸಾಕ್ಷಿ ಮತ್ತು ಎನ್.ಡಿ.ಎ. ಸರ್ಕಾರದ ಕ್ರಮಗಳ ನಡುವಿನ ಬಿರುಕನ್ನು ತೆರೆದಿಟ್ಟಿದೆ. ಅವರು 1998ರಲ್ಲಿ ಪ್ರಾರಂಭಿಸಿದ ತಮ್ಮ ಮೊದಲ ರಾಷ್ಟ್ರಪತಿ, ಭಾಷಣದಿಂದಲೂ ಎನ್.ಡಿ.ಎ. ಸರ್ಕಾರದ ಕೆಲಸಗಳಿಗೆ ಸಮ್ಮತಿ ಸೂಚಿಸುತ್ತಾ ಬಂದಿರುವುದು ಎಲ್ಲರಿಗೂ ತಿಳಿದಿದೆ. ಅವರು ತಮ್ಮ ಸಾಮಾಜಿಕ ಬೌದ್ಧಿಕ ಮತ್ತು ರಾಜಕೀಯ ಹಿನ್ನಲೆಯನ್ನು ನೀಡಿದ್ದು, ವಸಾಹತುಶಾಹಿ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳ ಸಂದರ್ಭದಲ್ಲಿ ಒಂದಿಷ್ಟು ಒಳ್ಳೆಯದನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದು ದೇಶವು ಆಧುನಿಕತೆಯೆಡೆಗೆ ಚಲಿಸುವುದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿರುವ ಈ ಸರ್ಕಾರಕ್ಕೆ, ರಾಷ್ಟ್ರಪತಿಯಾಗಲು ಅರ್ಹ ಅನುಭವ ಹೊಂದಿದ್ದಾರೆ. ಅವರು ಹೊಂದಿರುವ ಸುದೀರ್ಘ ರಾಜ ತಾಂತ್ರಿಕ ಅನುಭವ ಮತ್ತು ಸಂವಿಧಾನ ಅವರಿಗೆ ನೀಡಿರುವ ಪರಿಧಿ, ಇದು ನಾರಾಯಣನ್‌ರಂತಹ ಉದಾರ-ಪ್ರಜಾಪ್ರಭುತ್ವವಾದ ದಲಿತ ಹಾಗೆ ಮುಂದುವರೆಯುವುದು ಕಷ್ಟಕರವಾದುದು. ರಾಷ್ಟ್ರಪತಿ ಸಂವಿಧಾನದಲ್ಲಿ ವಿಧಿಸಿರುವಂತೆ, ರಾಷ್ಟ್ರದ ಒಳಿತನ್ನು ಪ್ರಜೆಯನ್ನು ಕಾಪಾಡುವವನು, ಅರಿವಿನ ಸಾರವಿದ್ದಂತೆ, ಅಭಿಪ್ರಾಯವನ್ನು ನೀಡುವವನು. ಆದರೆ ಅಂತಿಮವಾಗಿ ಕ್ಯಾಬಿನೆಟ್ ನಿರ್ಧಾರಗಳನ್ನು ಸಮ್ಮತಿಸುವವನು. ಅವರು ಅಸಮ್ಮತಿಯನ್ನು ಸೂಚಿಸಿದರೆ ಏನಾಗುತ್ತದೆ ಎಂಬ ಪ್ರಶ್ನೆ ಇಂದಿಗೂ ಅನುಮಾನವಾಗಿಯೇ ಉಳಿದಿದೆ. ಸಂವಿಧಾನ ಹೇಳುವಂತೆ ರಾಷ್ಟ್ರಪತಿಯವರ ಭಾಷಣವು ನೀತಿಯನ್ನು ಸೂಚಿಸುವುದು ಆದರೆ ಅದು, ಇಂದಿನ ದಿನಗಳಲ್ಲಿ, ನಮ್ಮ ಮುಂದಿರುವ ನೈತಿಕತೆಯ ಸಂದರ್ಭದಲ್ಲಿ ಪ್ರಾಯೋಗಿಕ ರಾಜಕೀಯ ಪರಿಣಾಮವಲ್ಲ.

ಈ ಬಿರುಕುಗಳು ವಿಷಯವನ್ನು ಪ್ರಸ್ತಾಪಿಸಿದ ಮಾರನೆಯ ದಿನವೇ ನಾಯಕರುಗಳ ಅನೇಕರ ಮುಖಗಳಲ್ಲಿ ಅಸಮ್ಮತಿ ಮತ್ತು ಬೇಸರಗಳ ರೂಪದಲ್ಲಿ ಪ್ರತಿಬಿಂಬಿಸುತ್ತವೆ. ಪ್ರತಿಕ್ರಿಯೆಗಳು ರಾಜಕೀಯ ಸ್ವೀಕಾರಗಳ ಶ್ರೇಷ್ಟತೆಯನ್ನು ಹೆಚ್ಚಿಸುವಂತೆ ಮತ್ತು ಜಾಗತೀಕರಣವು ತನ್ನದೇ ಆದ ಒಂದು ಪ್ರತ್ಯೇಕ ಗುಂಪಿಗೆ, ಎಲ್ಲವನ್ನೂ ವ್ಯತಿರಿಕ್ತಗೊಳಿಸಿ, ಮೀಸಲಿರಿಸುವುದರಿಂದ ಅದು ನೀಡುವ ಫಲಗಳಿಗೆ ಸಂತೋಷಪಡುವ ಜನರಿಗೆ ಹರಡುವಂತೆ ಮಾಡುವುದೆಂದು ತೋರುತ್ತದೆ. ಇಂತಹ ಪ್ರತಿಕ್ರಿಯೆಗಳು ಕಛೇರಿಗಳ ಆವರಣದಲ್ಲಿ, ಸಭೆಗಳು ನಡೆಯುವ ಕೊಠಡಿಗಳಲ್ಲಿ, ಕ್ಲಬ್ ಮತ್ತು ಈ ಬುಡಕಟ್ಟು ಜನರು ಗುತ್ತಿಗೆ ಹಿಡಿಯುವ ಎಲ್ಲ ಸ್ಥಳಗಳಲ್ಲೂ ಪ್ರತಿಧ್ವನಿಸುತ್ತವೆ. ಇದನ್ನು ಸಂಪಾದಕೀಯದಲ್ಲಿ ಸುಂದರ ಅಕ್ಷರಗಳಿಂದ ಅಥವಾ ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಸಂಪಾದಕರಿಗೆ ಬರೆಯುವ ಪತ್ರಗಳಿಂದ ಬಚ್ಚಿಡಲಾಗುವುದಿಲ್ಲ. ರಾಷ್ಟ್ರಪತಿಯವರ ತಿಳುವಳಿಕೆಯುಳ್ಳ ಅಭಿಪ್ರಾಯಗಳನ್ನು ಈ ಹಿಂದೆ ನಾಲ್ಕು ಬಾರಿ ಕೇಳಿದ್ದ ಇಂತಹ ಜನರು, ಈ ಅಭಿಪ್ರಾಯಗಳಿಗೆ ಒಗ್ಗಿಕೊಂಡಿದ್ದಾರೆಂದು ಯಾರು ಬೇಕಾದರೂ ಹೇಳಬಹುದು. ಆದರೆ, ಆಶ್ಚರ್ಯದ ವಿಷಯವೆಂದರೆ, ಈ ವರ್ಷದ ಭಾಷಣಕ್ಕೆ ವ್ಯಕ್ತವಾದ ಪ್ರತಿಕ್ರಿಯೆಗಳು ಒರಟು ಮತ್ತು ಉಗ್ರವಾಗಿದ್ದವು.

ಹಾಗಾದರೆ ಈ ಭಾಷಣದಲ್ಲಿ ಅಂತಹ ಅನಿಯಮಿತವಾದದ್ದೇನಿತ್ತು? ನಾರಾಯಣನ್‌ರವರು ಸಾಮಾನ್ಯವಾಗಿ ಮಾತನಾಡುವಾಗ ನಿರೀಕ್ಷಿಸಿದ ಎಲ್ಲ ಸಾಮಾನ್ಯ ವಿಷಯಗಳನ್ನು ಕುರಿತು ಮಾತನಾಡಿದರು. ಅವರು "ಭಾರತದ ಶ್ರೇಷ್ಠ ಪ್ರಜಾಪ್ರಭುತ್ವ"ವನ್ನು ಕುರಿತು ಮತ್ತು ಅದರ ದೇವಾಲಯ-ಸಂಸತ್ತಿನ ಮೇಲೆ ಡಿಸೆಂಬರ್ 13ರಂದು ನಡೆದ ಉಗ್ರವಾದಿಗಳ ಆಕ್ರಮಣವನ್ನು ಕುರಿತು ಮಾತನಾಡಿದರು. ಹಾಗೆಯೇ ತಮ್ಮ ಮಾತುಗಳಿಗೆ ಭಾರತ ಮತ್ತು ಅದರ ಶ್ರೇಷ್ಠ ತತ್ವಜ್ಞಾನ ಮತ್ತು ಸಂಸ್ಕೃತಿ, ಮಹಾತ್ಮಗಾಂಧಿ, ವಿವೇಕಾನಂದರಿಂದ ಉಲ್ಲೇಖಗಳನ್ನು ಬಳಸಿಕೊಂಡಿದ್ದರು. ಸಮಾಜದಲ್ಲಿ ನೆಲೆಸಿರುವ ಸ್ತ್ರೀ ಶೋಷಣೆ, ಅಸಮಾನತೆ, ಜಾತಿ-ವ್ಯವಸ್ಥೆ ಹಾಗೂ ಪ.ಜಾತಿ/ಪ.ಪಂಗಡಗಳ ವಿರುದ್ಧ ನಡೆಸುತ್ತಿರುವ ಶೋಷಣೆಯನ್ನು ಕುರಿತು ಕೂಡ ಮಾತನಾಡಿದರು. ಈ ಮಾತುಗಳನ್ನು ನಮ್ಮ ನೆಚ್ಚಿನ 'ಪ್ರಧಾನ ಮಂತ್ರಿಗಳ' ಕವನದಿಂದಲೇ ಒಂದು ಸಾಲನ್ನು ಆರಿಸಿಕೊಂಡು ಹೇಳಿದ್ದು ಉಲ್ಲೇಖಾರ್ಹ. ಒಬ್ಬ ರಾಷ್ಟ್ರಪತಿಯಿಂದ ಮತ್ತಿನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಹಾಗಾದರೆ ಅಮೆರಿಕದ ವ್ಯವಸ್ಥೆ ಮತ್ತು ಗಂಭೀರತೆಯನ್ನು ಭಾರತಕ್ಕೆ ತರುವ ಕನಸು ಕಾಣುತ್ತಿರುವ ವರ್ಗಕ್ಕೆ ಕೆರಳುವಂತೆ ಮಾಡುವ ಯಾವ ಅನಿಯಮಿತ ಸಂಗತಿಗಳು ಈ ಭಾಷಣದಲ್ಲಿದ್ದವು?

ಹೌದು, ಈ ಭಾಷಣವು, ಪ್ರಜಾಪ್ರಭುತ್ವವು ತಾನು ತುಳಿಯಲು ಆರಿಸಿಕೊಂಡ ದಾರಿಯಿಂದ ಕವಲನ್ನು ಪಡೆದ, ಕೆಲವು ಅಂಶಗಳನ್ನೊಳಗೊಂಡಿತ್ತು. ಇದನ್ನು ಕೂಡ ಪೂರ್ವ ನಿರ್ದೇಶನವಿಲ್ಲದ ಒಂದು ಘಟನೆಯನ್ನು ನಮೂದಿಸಿದ್ದಾರೆಂದು ನೋಡಬಹುದು. ಹೇಗಿದ್ದರೂ, ಇತ್ತೀಚೆಗೆ ಬೆಳೆಯುತ್ತಿರುವ ವಿಶೇಷ ಸನ್ನಿವೇಶಗಳ ಸಂದರ್ಭವನ್ನು ನೆನಪು ಮಾಡಿಕೊಡುವ ಈ ನಿರುಪದ್ರವಿ ರಾಷ್ಟ್ರಪತಿಯವರು ತಮ್ಮ ಮಾತಿನಲ್ಲಿ ವ್ಯಂಗ್ಯದ ಎಳೆಯನ್ನು ಹೊಂದಿದ್ದಾರೆ. ಭಾರತವನ್ನು ಸ್ವಾತಂತ್ರ್ಯ, ಸ್ವತಂತ್ರ ಪ್ರಜಾಪ್ರಭುತ್ವ, ಜಾತ್ಯಾತೀತ ಮತ್ತು ನಾವು ನಮಗೇ ನೀಡುವ ಸಂವಿಧಾನದ ಪ್ರಾಥಮಿಕ ಅಗತ್ಯಗಳನ್ನು, ಆ ದೇಶದ ಧ್ಯೇಯೋದ್ದೇಶಗಳನ್ನು, ಜಾಗತೀಕರಣದ ಹಿನ್ನಲೆಯಲ್ಲಿ ನೆನಪು ಮಾಡಿಕೊಂಡಾಗ ಕ್ಷೇಮವೆಂಬುದು ನಮ್ಮ ಆಶಾಕಿರಣದ ದಾರಿಗೆ ವ್ಯಂಗ್ಯಾತ್ಮಕ ವೈರಿಯಾಗಿ ನಿಲ್ಲುತ್ತದೆ. ಜಾಗತೀಕರಣದ ಹಲ್ಲೆಯ ರೂಪ ಮತ್ತು ಪರಿವಿಡಿಗಳೆರಡಲ್ಲಿಯೂ, ಪ್ರಜಾಪ್ರಭುತ್ವದ ಒಳಿತನ್ನು ನಿರ್ಲಕ್ಷಿಸಿ ತೊಡೆದುಹಾಕಿದೆ.

ವಸಾಹತುಶಾಹಿ ಸಂಸ್ಥೆಗಳಾದ IMF, World Bank ಮತ್ತು WTOಗಳು ಜಾಗತೀಕರಣವನ್ನು ಹೇರುವುದರ ಮೂಲಕ, ಜನರ ಒಳಿತಿಗಾಗಿ, ವೈಯಕ್ತಿಕವಾಗಿ ನಿರ್ಧಾರಗಳನ್ನು ಕೈಗೊಳ್ಳುವ ಅವಕಾಶವನ್ನೇ ನಿರ್ಮೂಲನೆ ಮಾಡಿವೆ. ಹಿಂದಿನ ದಶಕದ ಜಾಗತೀಕರಣದ ಸಂದರ್ಭದಲ್ಲಿ ದೇಶ ಅನುಭವಿಸಿದ ಯಾತನೆಯನ್ನು, ರಾಷ್ಟ್ರಪತಿಯವರು ಕಂಡಿದ್ದಾರೆ. 1991ರಲ್ಲಿ ಅಧಿಕಾರಕ್ಕೆ ಬಂದ ಅಲ್ಪಸಂಖ್ಯಾತರ ಸರ್ಕಾರವು ಈ ನೀತಿಗಳನ್ನು ತರುವ ಸಂದರ್ಭದಲ್ಲಿ ದೇಶದ "ಪ್ರಜಾಪ್ರಭುತ್ವ"ದ ಹಕ್ಕುಗಳನ್ನು ಒಳಸಂಚುಗಳ ಮೂಲಕ ಇಲ್ಲವಾಗಿಸಿದೆ.

ಜಾಗತೀಕರಣದಿಂದ ಉಂಟಾಗಿರುವ ರೈತರ ಆತ್ಮಹತ್ಯೆ, ಬರಗಾಲದ ಸಾವು, ಆರೋಗ್ಯಪೂರ್ಣ ಆಹಾರ ಕೊರತೆಯಿಂದುಂಟಾದ ಕಾಯಿಲೆಗಳು ಮತ್ತು ಉದ್ಯೋಗ ಕಳೆದುಕೊಳ್ಳುವುದರ ಮೂಲಕ ಉಂಟಾಗುವ ಬಡತನಗಳಂತಹ ಜ್ವಲಂತ ಸಮಸ್ಯೆಗಳಿಗೆ ರಾಷ್ಟ್ರಪತಿಯವರು ಸ್ಪಂದಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ

ಅವರು ಅಧಿಕಾರವನ್ನು ಚಲಾಯಿಸುವ ವರ್ಗದವರು ರೂಢಿಸಿಕೊಂಡಿರುವ ಈ ಬದಲಾವಣೆಯ ಬೆಳವಣಿಗೆಯ ಅಪಾಯಗಳನ್ನು ನಮ್ಮ ಮುಂದಿರಿಸಿದ್ದಾರೆ.

'ಹಿಂದುತ್ವ'ದ ಧ್ವಜ : ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಾರನೆಯ ದಿನದಿಂದಲೇ ಜಾರಿಗೆ ಬರುವಂತೆ ಧ್ವಜ ಸಂಕೇತಕ್ಕೆ ತಿದ್ದುಪಡಿ ತಂದರೂ ಕೂಡ ಅದರ ಕುರಿತು ರಾಷ್ಟ್ರಪತಿಯವರು ಯಾವುದೇ ಮಾತನ್ನು ಆಡದೇ ಇರುವುದು. ಹಾಗಾಗಿ ಜನರು ತಮಗೆ ಇಷ್ಟಬಂದಂತೆ ಆದರೆ ಗೌರವಪೂರ್ವಕವಾಗಿ, ಧ್ವಜವನ್ನು ಉಪಯೋಗಿಸಲು ಸ್ವತಂತ್ರವಾಯಿತು. ಇದು ನಿಜವಾಗಿಯೂ ಸಕಾರಾತ್ಮಕ ಬೆಳವಣಿಗೆ. ಆದರೆ ಪ್ರಸಕ್ತ ಸಂದರ್ಭದಲ್ಲಿ ಎಲ್ಲ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಸ್ಯೂಡೋ ರಾಷ್ಟ್ರೀಯ ವಾದಿಗಳು ತಪ್ಪಾಗಿ ಅರ್ಥೈಸುತ್ತಿದ್ದು ಹಿಂದುತ್ವದ ಆಧಾರದ ಮೇಲೆ ಭಾರತವನ್ನು ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂತೆ ಮಾಡಿದೆ. ಹಿಂದುತ್ವವು ಭಾರತದ 'ಪ್ರಜಾಪ್ರಭುತ್ವ'ದಲ್ಲಿ ಅಥವಾ ಅಸ್ತಿತ್ವದಲ್ಲಿರುವ ತ್ರಿವರ್ಣ ಧ್ವಜದ ಜೊತೆಯಲ್ಲಿ ಯಾವ ಸಂಬಂಧವೂ ಇಲ್ಲವಾದರೂ ಅದು 'ಹಿಂದೂ ರಾಷ್ಟ್ರ'ವನ್ನು ಮರು ಸ್ಥಾಪಿಸುವ ದುರಾಲೋಚನೆಯಲ್ಲಿ ಎಲ್ಲವನ್ನೂ ಅನರ್ಥಗೊಳಿಸುವ ಎಲ್ಲ ಸಾಧ್ಯತೆಗಳಿವೆ. ಹಾಗಾಗಿ ಇದು ಸಂಘ ಪರಿವಾರದವರಿಗೆ ಬಹುಮುಖ್ಯ ಬದಲಾವಣೆ ಬಹುಶಃ ಇದೇ ಕಾರಣಕ್ಕೆ ರಾಷ್ಟ್ರಪತಿಯವರು ಇದರ ಕುರಿತು ಮಾತನಾಡಲು ಏನನ್ನೂ ಆಯ್ಕೆ ಮಾಡಿಕೊಂಡಿಲ್ಲವೆನ್ನಿಸುತ್ತದೆ. ಈ ನಿರ್ಲಕ್ಷತೆ ಅಥವಾ ಮೌನವೇ ಜನರೊಂದಿಗೆ ಸಂವಹನ ಪ್ರಕ್ರಿಯೆ ನಡೆಸುತ್ತದೆ.

ರಾಷ್ಟ್ರಪತಿಯವರ ಭಾಷಣದಲ್ಲಿ, ಸಂಸತ್ತಿನ ಮೇಲೆ ಆಕ್ರಮಣ ನಡೆದಾಗಿನ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ ಸಾಹಸ ತೋರಿದುದನ್ನು ಉಲ್ಲೇಖ ಮಾಡುತ್ತಾ ರಾಷ್ಟ್ರಪತಿಯವರು ದೇಶದ ಸಾಮಾನ್ಯ ಜನರು ಕೂಡ ಭದ್ರತಾ ಸಿಬ್ಬಂದಿಯಷ್ಟೆ ದೇಶದ ಬೆನ್ನೆಲುಬು ಎಂಬುದನ್ನು ವಿವರಿಸಿದರು. ಹಾಗೆಯೇ ಅವರನ್ನು ಕೂಡ ಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಿದರು.

ರಾಷ್ಟ್ರಪತಿಯವರು ಇಂತಹ ಅನೇಕ ಅಂಶಗಳು, ವಿಶೇಷ ಅಧಿಕಾರಗಳನ್ನು ಪಡೆದಿರುವ, ಇಲ್ಲಿನ ಜನರಿಗೆ ಕೋಪವನ್ನು ಸೃಷ್ಟಿಸಿದೆ. ಜಾಗತೀಕರಣದ ಸೌಲಭ್ಯಗಳನ್ನು ಪಡೆದುಕೊಂಡು, 'ಹಿಂದುತ್ವ'ದ ಹೆಸರಿನಲ್ಲಿ ಬೆಳೆಯುತ್ತಿದ್ದು, ಎಲ್ಲವನ್ನು ಅವರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಹಾಗಾದರೆ ಅವರೇಕೆ ಅಷ್ಟು ಕ್ರೂರವಾಗಿ ಪ್ರತಿಕ್ರಯಿಸಿದರು.

ಅವರ ಈ ವರ್ತನೆಗೆ ಪ್ರಮುಖ ಕಾರಣವೆಂದರೆ ರಾಷ್ಟ್ರಪತಿಯವರು ಭೋಪಾಲ್ ಪ್ರಕಟಣೆಯನ್ನು ಕುರಿತು ಹೇಳಿದ್ದು, ಈ ಭೋಪಾಲ್ ಹೇಳಿಕೆಯು, ಮಧ್ಯಪ್ರದೇಶ ಸರ್ಕಾರವು ಆಯೋಜಿಸಿದ್ದ ಎರಡು ದಿನಗಳ ಚರ್ಚೆಯಲ್ಲಿ, ದಲಿತ ವಿರೋಧಿ ಮತ್ತು ದಲಿತ ಪರ, 200 ಜನ ಭಾಗವಹಿಸಿದ್ದು, ಚರ್ಚೆಯ ಅರ್ಥವನ್ನು ಪ್ರತಿನಿಧಿಸುತ್ತದೆ. ನಾರಾಯಣನ್ ಹೇಳುವ ಹಾಗೆ 'ಈ ಚರ್ಚೆಯು ಪ್ರಸಕ್ತ ಖಾಸಗೀಕರಣದ ಸಂದರ್ಭದಲ್ಲಿ, ವಂಚಿತ



'ಭಾರತವನ್ನು ಸ್ವಾತಂತ್ರ್ಯ, ಸ್ವತಂತ್ರ ಪ್ರಜಾಪ್ರಭುತ್ವ, ಜಾತ್ಯಾತೀತ ಮತ್ತು ನಾವು ನಮಗೇ ನೀಡುವ ಸಂವಿಧಾನದ ಪ್ರಾಥಮಿಕ ಅಗತ್ಯಗಳನ್ನು, ಆ ದೇಶದ ಧ್ಯೇಯೋದ್ದೇಶಗಳನ್ನು, ಜಾಗತೀಕರಣದ ಹಿನ್ನಲೆಯಲ್ಲಿ ನೆನಪು ಮಾಡಿಕೊಂಡಾಗ ಕ್ಷೇಮವೆಂಬುದು ನಮ್ಮ ಆಶಾಕಿರಣದ ದಾರಿಗೆ ವ್ಯಂಗ್ಯಾತ್ಮಕ ವೈರಿಯಾಗಿ ನಿಲ್ಲುತ್ತದೆ. ಜಾಗತೀಕರಣದ ಹಲ್ಲೆಯ ರೂಪ ಮತ್ತು ಪರಿವಿಡಿಗಳೆರಡಲ್ಲಿಯೂ, ಪ್ರಜಾಪ್ರಭುತ್ವದ ಒಳಿತನ್ನು ನಿರ್ಲಕ್ಷಿಸಿ ತೊಡೆದುಹಾಕಿದೆ.

ಸಮುದಾಯಗಳಿಗೆ, ಕೇವಲ ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಲ್ಲದೆ ಖಾಸಗೀ ಹಾಗೂ ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಕೂಡ ಮೀಸಲಾತಿ ನೀಡಬೇಕು'ಎಂಬುದು.

ಭೋಪಾಲ್‌ನ ವಿರೋಧಿಗಳು : ಪ್ರತಿ ಸಮಯದಲ್ಲೂ, ಇಲ್ಲಿಯವರೆಗೂ ಮೀಸಲಾತಿಯನ್ನು ಕುರಿತ ಇವರ ವಾದದಲ್ಲಿ ಯಾವುದೇ ಹೊಸತನವಿಲ್ಲ. ಈ ವಾದವನ್ನು ಮಂಡಿಸುವ ಈ ಜಾತಿ ಆಧಾರಿತ ಸಮಾಜದಲ್ಲಿ ದಲಿತರ ಜೀವನದ ಮೂಲಭೂತ ಅವಶ್ಯಕತೆಗಳನ್ನು ಲಕ್ಷಿಸಿದ ಜನರ, ಪೂರ್ವ ಕಲ್ಪಿತವಾದದೊಂದಿಗೆ ದಲಿತರ ಮೀಸಲಾತಿಯನ್ನು ವಿರೋಧಿಸುವ ಮೂಲಕ ಈ ಅನಿವಾರ್ಯ ಅವಶ್ಯಕತೆಗಳಿಂದ ವಂಚಿತರಾಗುವಂತೆ ಮಾಡುತ್ತಾರೆ. ಹಾಗಾಗಿ ಬಲಿಪಶುಗಳಾಗಿರುವ ಇಲ್ಲಿನ ದಲಿತರಿಗೆ ಸಲ್ಲುವ ಅವಕಾಶಗಳಿಗೆ ಯಾವುದೇ ಪೂರ್ವಗ್ರಹವಿಲ್ಲದೆ ಮಾಡುವುದು ಎಲ್ಲರ ಮೂಲಭೂತ ಮತ್ತು ಪ್ರಾಥಮಿಕ ಕರ್ತವ್ಯವಾಗಿದೆ. ಇಲ್ಲವಾದಲ್ಲಿ ಈ ಅಲಕ್ಷಿತ ಸಮುದಾಯ ಮುಂದೊಂದು ದಿನ ಇಡೀ ಪ್ರಜಾಪ್ರಭುತ್ವದ ಸ್ವರೂಪವನ್ನೇ ಸ್ಫೋಟಿಸುತ್ತದೆ. ಈ ಪ್ರಕ್ರಿಯೆಯು ಅರ್ಹತೆಯನ್ನು ಪರಿಗಣಿಸುವ ಕ್ರಿಯೆಯನ್ನು ಹೊಂದಿದೆ. ಎಲ್ಲ ಸವಲತ್ತುಗಳನ್ನು ಪಡೆದುಕೊಂಡವರು, ಮೀಸಲಾತಿಯನ್ನು ಪಡೆಯಲು ವಾಸ್ತವವಾಗಿ ದಲಿತರು ಅನರ್ಹರು ಮತ್ತು ಎಲ್ಲ ಸವಲತ್ತುಗಳೂ ಸವರ್ಣೀಯರ (ಹಿಂದೂ) ಏಕಸ್ವಾಮ್ಯವಾದುವುಗಳು ಎಂದು ನಿರಂತರವಾಗಿ ವಾದಿಸುತ್ತಾ ಬಂದಿದ್ದಾರೆ. ಈ ದೇಶದ ಇತಿಹಾಸವನ್ನು ಅವಲೋಕಿಸಿದರೆ ಇತಿಹಾಸದುದ್ದಕ್ಕೂ ಈ ದೇಶ ಸ್ವಘೋಷಿತ ಸಮುದಾಯವೊಂದರಿಂದ ಆಳಲ್ಪಟ್ಟಿದೆ. ಏಕೆ, ಭಾರತದ ಇತಿಹಾಸವು ಸೋಲು ಮತ್ತು ಅವಮಾನಗಳ ಇತಿಹಾಸವಾಗಿದೆ? ಭಾರತವು ಏಕೆ ಈಗಲೂ ರಾಷ್ಟ್ರೀಯ ಮಂಡಳಿಯಲ್ಲಿ ಕೆಳಸ್ತರವನ್ನು ಹೊಂದಿದೆ. ಹಾಗಾಗಿಯೇ, ಅರ್ಹತೆ ಎನ್ನುವುದು ಒಂದು ನೆವ ಮಾತ್ರವಾಗಿದೆ; ದಲಿತರು ತಮ್ಮ ಸವಲತ್ತುಗಳನ್ನು ಪಡೆಯಲು ತಪ್ಪು ಪರಿಕಲ್ಪನೆಗಳನ್ನು ಅಪ್ರಮಾಣಿಕ ರಾಜಕೀಯ ಆಟದ ಮೂಲಕ ಅವರನ್ನು ತಪ್ಪಿಸುವ ಕುಯುಕ್ತಿ ಇದಾಗಿದೆ.

ಮತ್ತೊಂದು ವಾದವು ಮತ್ತಷ್ಟು ಮಹತ್ವದ ಸತ್ಯಗಳನ್ನು ನಮ್ಮ ಮುಂದಿಡುತ್ತಿದೆ. ಅಭಿವೃದ್ಧಿ ಚಟುವಟಿಕೆಗಳ ಕಾರ್ಯಕ್ರಮದಲ್ಲಿ ಲಾಭವು ಯಾರಿಗೆ ಸಿಗಬೇಕೋ ಅವರಿಗೆ ಸಿಗದೆ ಮೇಲ್ವರ್ಗದ ಜನರಿಗೇ ತಲುಪುತ್ತಿದೆ ಎಂಬುದು ಭೋಪಾಲ್ ಪ್ರಕಟಣೆಯಲ್ಲಿ ಇದ್ದ ಬಹುತೇಕ ಅಂಶಗಳೂ, ಎಲ್ಲ ಕ್ಷೇತ್ರಗಳಲ್ಲಿಯೂ, ಯಾವುದೇ ರಿಯಾಯಿತಿ ಇಲ್ಲದೆ, ಮೀಸಲಾತಿಯನ್ನು ನೀಡಬೇಕು ಮತ್ತು ಕೆಲವು ಹಂತಗಳಲ್ಲಿ ತಪ್ಪು ಎಸಗಿದವರ ವಿರುದ್ಧ ಕ್ರಮ ಜರುಗಿಸುವುದನ್ನು ಹೊರತು ಪಡಿಸಿದರೆ ಮತ್ತೆಲ್ಲವೂ ಮೊದಲಿನ ಹಾಗೆಯೇ ಇತ್ತು ಹಾಗೆಯೇ, ಈ ರಚನೆಯಲ್ಲಿ ನೌಕರಿಯಲ್ಲಿ ಮೀಸಲಾತಿಯಲ್ಲಿ ತಪ್ಪೆಸಗಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವುದನ್ನು ಹೊರತು ಪಡಿಸಿ ಉಳಿದದ್ದೆಲ್ಲ ಸುವಿಸ್ತಾರವಾಗಿದೆ.

ಮೀಸಲಾತಿಯನ್ನು ಜಾರಿಗೊಳಿಸಲು ವಿಫಲವಾದ ಪ್ರಮುಖ ಕಾರಣವೆಂದರೆ ಈ ರಚನೆಯು ಮೀಸಲಾತಿಯ ವಿಷಯದಲ್ಲಿ ತಪ್ಪೆಸಗಿದವರ ವಿರುದ್ಧ ಕ್ರಮ ಜರುಗಿಸುವ ಯಾವುದೇ ಮುನ್ನೆಚ್ಚರಿಕೆಗಳನ್ನು ನೀಡದೇ ಇರುವುದು. ಹಾಗಾಗಿ ಹಿಂದೂಗಳು ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ತೀರ್ಪುಗಳನ್ನು, ಕೇವಲ ಒಂದು ಬಾರಿಯಲ್ಲದೆ, ನಿರಂತರವಾಗಿ ನಿರ್ಲಕ್ಷಿಸುತ್ತಲೇ ಇರುತ್ತಾರೆ. ಕೃಷಿ ಕ್ಷೇತ್ರದಲ್ಲಿ ಜಾಗತೀಕರಣವು ಮಹತ್ವದ ಪಾತ್ರ ವಹಿಸುತ್ತಿರುವ ಸಂದರ್ಭದಲ್ಲಿ ದಲಿತರಿಗೆ ಭೂಮಿ ವಿತರಿಸುವ ಪ್ರಕ್ರಿಯೆಗೆ ಪರ್ಯಾಯವಾಗಿ ಆಧುನಿಕ ವ್ಯವಸಾಯ ಪದ್ಧತಿಯು ಜೊತೆಗೆ ಸಹಕಾರ ಕೃಷಿ ಪದ್ಧತಿಯನ್ನು ತಿಳಿಸುವುದು ಸೂಕ್ತವೆನಿಸುತ್ತದೆ.

(34ನೇ ಪುಟಕ್ಕೆ)

ದಲಿತರ ಆರ್ಥಿಕ ಅಜೆಂಡಾ :

ಭೋಪಾಲ್ ಸಮಾವೇಶದ ಘೋಷಣೆಗಳು

2002ರ ಜನವರಿ 12-13 ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಭಾರತದ ದಲಿತರ ಭವಿಷ್ಯ ಕುರಿತಂತೆ ಚಾರಿತ್ರಿಕ ಸಮಾವೇಶವೊಂದು ನಡೆಯಿತು. ಮಧ್ಯಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯಸಿಂಗ್ ಅವರ ಆಶಯದಂತೆ ಆಯೋಜಿಸಲಾಗಿದ್ದ ಈ ಸಮಾವೇಶದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ದಲಿತ ಚಿಂತಕರು ಭಾಗವಹಿಸಿದ್ದರು. ಸ್ವಾತಂತ್ರ್ಯಾನಂತರದಲ್ಲಿ, ದಲಿತರ ಭವಿಷ್ಯ ಕುರಿತಂತೆ ನಡೆದ ಪ್ರಪ್ರಥಮ ಸಮಾವೇಶ ಇದಾಗಿದ್ದು, ಇಡೀ ದೇಶಕ್ಕೆ ಮಾದರಿಯಾಗುವಂತ 'ದಲಿತರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ'ಗಳನ್ನು ಜಾರಿಗೆ ತರಲು ನಿರ್ಧರಿಸಲಾಯಿತು. ಮಧ್ಯಪ್ರದೇಶ ಸರ್ಕಾರ ಈಗಾಗಲೇ ಕಟ್ಟುನಿಟ್ಟಾಗಿ ಜಾರಿಗೊಳಿಸಿರುವ ಈ ಕಾರ್ಯಕ್ರಮಗಳನ್ನು 'ಸಂವಾದ' ಓದುಗರಿಗಾಗಿ ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ.

ನಾವು-ಬುದ್ಧಿಜೀವಿಗಳು ಮತ್ತು ಕಾರ್ಯಕರ್ತರು, 250 ಮಿಲಿಯನ್ ಜನರ ಕ್ಷೇಮಾಭಿವೃದ್ಧಿ ಮತ್ತು ನ್ಯಾಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಚರ್ಚಿಸಲು 2002ರ ಜನವರಿ 12-13ರಂದು ಭೂಪಾಲ್ ಸಮ್ಮೇಳನದಲ್ಲಿ ಸೇರಿದ್ದೆವು.

ತೆಗೆದುಕೊಂಡ ನಿರ್ಧಾರಗಳೆಂದರೆ :

ಸಾಮಾಜಿಕ ಪ್ರಜಾಪ್ರಭುತ್ವದ ಆದರ್ಶವಾದ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಅವರ ಭವಿಷ್ಯವಾಣಿಯಾದ "ಒಂದು ಪ್ರಜಾಸತ್ತಾತ್ಮಕ ಸರ್ಕಾರವು ಪ್ರಜಾಸತ್ತಾತ್ಮಕ ಸಮಾಜವನ್ನು ಪ್ರತಿಪಾದಿಸುತ್ತದೆ. ಪ್ರಜಾಪ್ರಭುತ್ವದ ವಿಧಿಬದ್ಧ ಚೌಕಟ್ಟು ವೌಲ್ಯ ಉಳ್ಳದ್ದೇನೂ ಅಲ್ಲ. ಅಲ್ಲದೆ ಸಾಮಾಜಿಕ ಪ್ರಜಾಪ್ರಭುತ್ವವಿಲ್ಲವೆಂದಾದಲ್ಲಿ ಅದೊಂದು ವ್ಯಂಗ್ಯವೇ ಸರಿ" ಈ ಘೋಷಣೆಯಲ್ಲಿ ನಮಗೆ ನಂಬಿಕೆ ಇದೆ.

ನಾಗರೀಕ ಸಮಾಜದ ಆದರ್ಶಗಳಾದ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತ್ವಗಳನ್ನು ಭಾರತೀಯ ಸಂವಿಧಾನದಲ್ಲಿ, ನಿರ್ದಿಷ್ಟವಾಗಿ ಅದರ ಪೀಠಿಕಾಭಾಗದಲ್ಲಿ ಘೋಷಿಸಿದಂತೆ ಯಥಾವತ್ತಾಗಿ ಒಪ್ಪುವುದು.

ನಮ್ಮ ರಾಷ್ಟ್ರವು ಒಪ್ಪಿಕೊಂಡ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ನಿಯಮಾವಳಿಗಳನ್ನು ಹಾಗೂ ವಿಶ್ವಸಂಸ್ಥೆಯ ಇತರ ಅನೇಕ ಸನ್ನದುಗಳನ್ನು ಮನ್ನಣೆ ಮಾಡುವುದಲ್ಲದೆ ಅವುಗಳಿಗೆ ಬದ್ಧರಾಗಿರುವುದು.

ಅರಣ್ಯ ಮತ್ತು ಅರಣ್ಯದ ಉತ್ಪತ್ತಿ ಮೇಲೆ ಆದಿವಾಸಿಗಳ ಕಾನೂನು ಬದ್ಧ ಮತ್ತು ಚಾರಿತ್ರಿಕ ಹಕ್ಕುಗಳನ್ನು ಸಹ ಗುರುತಿಸುವುದು.

- ದೇಶದ ಸಂಪದ್ಭರಿತ ಜೈವಿಕ ವೈವಿಧ್ಯತೆ ಮತ್ತು ಸ್ವಾಭಾವಿಕ ಸಂಪನ್ಮೂಲ ಹಾಗೂ ಸಂಸ್ಕೃತಿ ಮತ್ತು ನಾಗರಿಕತೆಯನ್ನು ರಕ್ಷಿಸುವಲ್ಲಿ ಮತ್ತು ಕಾಪಾಡುವಲ್ಲಿ ಆದಿವಾಸಿ ಸಮುದಾಯಗಳ ಮಹತ್ತ್ವವನ್ನು ಅದರಲ್ಲೂ ವಿಶೇಷವಾಗಿ ಆದಿವಾಸಿ ಮಹಿಳೆಯರ ಪಾತ್ರವನ್ನು ಮಾನ್ಯಮಾಡುವುದು.
- ಎಸ್‌ಸಿ ಮತ್ತು ಎಸ್‌ಟಿಗಳಿಗೆ ತೀರ್ಮಾನ ತೆಗೆದುಕೊಳ್ಳುವ ಎಲ್ಲ ಸಂಸ್ಥೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುವ ಅವಶ್ಯಕತೆಯನ್ನು ಒಪ್ಪುತ್ತದೆ.
- ತನ್ನ ಜನರ ಬಿಡುಗಡೆಗಾಗಿ ಮತ್ತು ಅವರಿಗಾಗಿ ಚಾರಿತ್ರಿಕ ಹಕ್ಕುಗಳನ್ನು ಪಡೆಯಲು ಬಾಬಾ ಸಾಹೇಬರು ನಡೆಸಿದ ಸಂಘರ್ಷಗಳನ್ನು ಪುನಃ ನೆನಪುಮಾಡಿಕೊಳ್ಳುವುದು.
- ಸ್ವಾತಂತ್ರ್ಯಾನಂತರದ 54 ವರ್ಷಗಳಲ್ಲೂ, ದಲಿತ ಸಮುದಾಯಕ್ಕೆ ಮೂಲಭೂತ ಮಾನವ ಹಕ್ಕುಗಳನ್ನು ನಿರಾಕರಿಸಲಾದ ಮತ್ತು ಬೇಧಭಾವ ಮತ್ತು ಬಹಿಷ್ಕಾರದಂತಹ ಅತ್ಯಂತ ಕ್ರೂರ ಮತ್ತು ಶೋಷಣಾತ್ಮಕ ರೂಪಗಳನ್ನು ಕೊನೆಗೊಳಿಸಬೇಕಾದ ಅಂಶದ ಕಡೆ ಗಮನವಿಡುವುದು.
- ಭಾರತದ ಅತೀ ತುಳಿತಕ್ಕೊಳಪಟ್ಟವರ ಸಮಗ್ರ ಅಭಿವೃದ್ಧಿಗಾಗಿ ಇಡೀ ಸಮಾಜವು ಒಂದು ಕ್ರಿಯಾಯೋಜನೆಯನ್ನು ಅಂದರೆ ವಿಶೇಷವಾಗಿ ರಾಜಕೀಯ ನಾಯಕತ್ವ, ಅಧಿಕಾರಿಗಳು ಮತ್ತು ತಳಮಟ್ಟದ ಕಾರ್ಯಕರ್ತರ ನಡುವೆ ಸಹಕಾರದ ಹೊಂದಾಣಿಕೆಯ ಅಗತ್ಯವನ್ನು ಒಪ್ಪತಕ್ಕದ್ದು.
- ಇವತ್ತಿನ ತುರ್ತು ಸಂದರ್ಭದಲ್ಲಿ ಆಗುತ್ತಿರುವ ಹೆಚ್ಚಿನ ರಾಜಕೀಯ ಧ್ರುವೀಕರಣಗಳು ದಲಿತಪರವಾದ ನೀತಿಯನ್ನು ಅನುಸರಿಸಲು ಹಿಂತೆಗೆಯುತ್ತಿರುವಾಗ ನಮ್ಮ ಇಡೀ ಹೋರಾಟವನ್ನು ಮುಂದಕ್ಕೆ ಕೊಂಡೊಯ್ಯುವ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಳ್ಳತಕ್ಕದ್ದು.
- ಸ್ವಾತಂತ್ರ್ಯ ಸಂದರ್ಭದಲ್ಲಿ ಒತ್ತಾಯದ ಮೇರೆಗೆ ಒಪ್ಪಿಕೊಂಡಂತಹ ದಲಿತ ಪ್ರಗತಿಯ ಬಗೆಗಿನ ಸಾಮಾಜಿಕ ಬದ್ಧತೆಯು ಮುರಿದು ಬಿದ್ದಿರುವುದನ್ನು ಗುರುತಿಸತಕ್ಕದ್ದು.
- ದಲಿತರಿಗಾಗಿ ಸಾಮಾಜಿಕ ನ್ಯಾಯವನ್ನು ಒದಗಿಸಲು ಕಟ್ಟಿದ ಗಣರಾಜ್ಯದ ಪಿತಾಮಹರ ನೀತಿಗಳನ್ನು ಎಲ್ಲ ಹಂತಗಳಲ್ಲಿ ಮರು ರೂಪಿಸುವುದಕ್ಕೆ ಬೇಕಾದ ಬದ್ಧತೆಯನ್ನು ಪಡೆಯಲು ಪ್ರಜಾಸತ್ತಾತ್ಮಕ ವ್ಯಾಖ್ಯಾನದ ಅಗತ್ಯವನ್ನು ನಂಬುವುದು.
- ದೇಶದಲ್ಲಿರುವ ರಾಷ್ಟ್ರೀಯ ಮನಸ್ಸು ಹಾಗೂ ಸಾರ್ವಜನಿಕ ವಿಚಾರಧಾರೆಯು ಕಠಿಣ ಶ್ರೇಣೀಕೃತ ಮತ್ತು ತಾರತಮ್ಯದ ಜಾತಿ ವ್ಯವಸ್ಥೆಯನ್ನು ವಿವೇಚನೆಯಿಲ್ಲದೆ ಒಪ್ಪಿರುವುದರಿಂದ ಅದು ಜಾತಿಯ ಕಾರಣಕ್ಕಾಗುವ ವೈಮನಸ್ಸು ಮತ್ತು ಕ್ರೂರ ಹಿಂಸೆಯನ್ನು ತಿರಸ್ಕರಿಸುತ್ತದೆ ಎಂಬುದನ್ನು ನಂಬುವುದು.
- ಪ್ರಜಾಸತ್ತಾತ್ಮಕ ಮತ್ತು ಸಂವಿಧಾನಾತ್ಮಕ ಮಾನದಂಡಗಳಿಂದ ಆಗುವ ಆಂದೋಲನಕ್ಕೆ ಒತ್ತು ನೀಡಿದ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೇಳಿಕೆಯ ಪ್ರಸ್ತುತತೆಯನ್ನು ಇಂದು ಗೌರವಿಸುವುದು.
- ಅಂಬೇಡ್ಕರೋತ್ತರ ದಲಿತ ಬೌದ್ಧಿಕತೆಯು ಅವರ ವಿಮೋಚನಾ ಚಳುವಳಿಯನ್ನು ಮುನ್ನಡೆಸುವುದರಲ್ಲಿ ಸೋತಿರುವುದಲ್ಲದೆ ದೇಶದ ಬೌದ್ಧಿಕ ಬದುಕಿನಲ್ಲಿ ಪಾತ್ರವಹಿಸದಿರುವುದನ್ನು ಬಗ್ಗೆ ವಿಷಾದವಿದೆ.
- ದೇಶದ ಒಳಗೆ ಮತ್ತು ಹೊರಗೆ ದಲಿತಪರವಿರುವ ಹಾಗೂ ಇತರೇ ವಿಮೋಚನ ಮತ್ತು ಮಾನವ ಹಕ್ಕುಗಳ ಚಳುವಳಿಗಳ ನಡುವೆ ಬೆಂಬಲವನ್ನು ಸೂಚಿಸುವ ಅಗತ್ಯವಿದೆಯೆಂಬುದನ್ನು ಗುರುತಿಸುವುದು.

- ✦ ಹಿಂದೂ ಜಾತಿವಾದಿ ಸಮಾಜ ಹಾಗೂ ಅದರ ಬೇರುಗಳಾಗಿರುವ ಸರ್ಕಾರ, ಮಾಧ್ಯಮ, ಸ್ವಯಂ ಸೇವಾ ವಿಭಾಗ, ಇತ್ಯಾದಿಗಳಾಗಿದ್ದು, ಅವುಗಳ ತಾರತಮ್ಯ ಮತ್ತು ದಮನಕಾರಿ ವ್ಯವಸ್ಥೆಯ ವಿರುದ್ಧ ನಡೆಯುವ ಯಾವುದೇ ತೀವ್ರವಾದ ಚಳುವಳಿಗೆ ಅಡೆತಡೆಗಳನ್ನೊಡ್ಡುತ್ತದೆಯೆಂಬುದನ್ನು ಪ್ರಜ್ಞಾಪೂರ್ವಕವಾಗಿ ಅರಿಯುವುದು.
- ✦ ಮಹಿಳೆಯರು, ವಿಶೇಷವಾಗಿ ದಲಿತ ಮಹಿಳೆಯರು ನಮ್ಮ ಸಮಾಜದಲ್ಲಿ ಎಲ್ಲರಿಗಿಂತಲೂ ಅಧಿಕವಾಗಿ ತುಳಿತಕ್ಕೊಳಪಟ್ಟಿರುವುದನ್ನು ಪ್ರತಿನಿಧಿಸುತ್ತಾರಲ್ಲದೆ, ಅವರು ಬಹುರೂಪಿ ತಾರತಮ್ಯಗಳಾದ ಜಾತಿ, ಧಾರ್ಮಿಕ ಮತ್ತು ಪುರುಷ ಪ್ರಾಧಾನ್ಯ ಐಡಿಯಾಲಜಿ ಮತ್ತು ರೂಢಿಗಳಿಂದಾಗಿ ಹಿಂಸೆ ಅನುಭವಿಸುವುದನ್ನು ಗುರುತಿಸುವುದು.
- ✦ ಜಗತ್ತಿನಾದ್ಯಂತ ಬರುತ್ತಿರುವ ಅನುಕೂಲಕರ ಬದಲಾವಣೆಗಳಾದ ಒಳಗೊಳ್ಳುವಿಕೆ, ಸಮಾನ ಅವಕಾಶ, ವೈವಿಧ್ಯತೆ, ಪ್ರಜಾಸತ್ತಾತ್ಮಕತೆ ಮತ್ತು ನಾಗರೀಕ ಸಮಾಜ ಹಾಗೂ ತಾರತಮ್ಯ ಸಿದ್ಧ ಮಾದರಿ, ಹಣೆಪಟ್ಟಿ ಹಚ್ಚುವಿಕೆ, ಬಹಿಷ್ಕಾರ ಮತ್ತು ಜಾತಿ ಸಮಾಜದ ವಿರುದ್ಧ ಆಗುತ್ತಿರುವ ಹೋರಾಟಗಳನ್ನು ಸ್ವಾಗತಿಸುವುದು.
- ✦ ಜಾಗತಿಕ ನಿಯಮವಾಗಿರುವ ಪ್ರಗತಿ, ಸಮಾನತೆ, ನ್ಯಾಯ, ಶಾಂತಿ ಮತ್ತು ಸಾಮಾಜಿಕ ಐಕ್ಯತೆಗೆ ಈ ದೇಶ ಹೊರತಾಗಿರುವುದಿಲ್ಲವೆಂದು ಭಾವಿಸುತ್ತೇವೆ. ಅಲ್ಲದೆ
- ✦ ನಾವೆಲ್ಲಾ ಸಮಾನ ಮನಸ್ಕರಾಗಿ, ಒಕ್ಕೊರಲಿನಿಂದ ದಲಿತರ ಮೂಲಭೂತ ಹಕ್ಕುಗಳಿಗಾಗಿ ನಮ್ಮ ಬದ್ಧತೆಯನ್ನು ಪೋಷಿಸುತ್ತಾ, ಈ ಕೆಳಗಿನ ಸಂಗತಿಗಳಾದ ಅಸ್ಪೃಶ್ಯತೆ ಮತ್ತು ಶೋಷಣೆಯಿಂದ ಸಮುದಾಯದ ವಿಮೋಚನೆ ಆಗದ ಹೊರತು ನಮ್ಮ ಕ್ರಿಯಾಶೀಲತೆ ಮತ್ತು ರಾಜ್ಯಾಂಗದಿಂದಾಗುವ ಯಾವುದೇ ಚಟುವಟಿಕೆಗಳು ನಿಷ್ಪ್ರಯೋಜಕವೆಂದು ಮನಗಾಣುವುದು.

ಆದ್ದರಿಂದ ನಮ್ಮ ಬೇಡಿಕೆಗಳೆಂದರೆ :

21ನೇ ಶತಮಾನಕ್ಕಾಗಿ 21 ಅಂಶಗಳ ಕಾರ್ಯಯೋಜನೆ :

ಸಮಾಜೋ-ಆರ್ಥಿಕ ಬೆಳವಣಿಗೆಗಾಗಿ

1. ಪ್ರತಿಯೊಂದು ದಲಿತ ಕುಟುಂಬಕ್ಕೂ ಸಾಕಷ್ಟು ಬೇಸಾಯ ಭೂಮಿ ದೊರೆಯುವಂತೆ ಮಾಡತಕ್ಕದ್ದು.

ಒಂದು ಗೊತ್ತುಪಡಿಸಿದ ಸಮಯದಲ್ಲಿ ಅಧಿಕ ಭೂಮಿ, ಸರ್ಕಾರಿ ರೆವಿನ್ಯೂ ಭೂಮಿ ಮತ್ತು ದೇವಸ್ಥಾನ ಜಮೀನನ್ನು ಹಂಚಲು ಸರ್ಕಾರ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯಬಿದ್ದಲ್ಲಿ ಸರ್ಕಾರವೇ ಬೇಸಾಯ ಯೋಗ್ಯಭೂಮಿಯನ್ನು ಖರೀದಿಸಿ, ದಲಿತರಿಗೆ ಹಂಚಬೇಕು.

2. ಗ್ರಾಮೀಣ ಮತ್ತು ನಗರದಲ್ಲಿರುವ ಸಾರ್ವಜನಿಕ ಭೂ ಸಂಪನ್ಮೂಲಗಳಲ್ಲಿ ಸಮಾನ ಹಂಚಿಕೆ ಮತ್ತು ಒಡೆತನ ದಲಿತರಿಗೆ ಸಿಗುವಂತಾಗಲೂ ಬೇಕಾದ ಕಾನೂನು ಮತ್ತು ಅನುಷ್ಠಾನವನ್ನು ಸರ್ಕಾರ ಮಾಡತಕ್ಕದ್ದು.

3. ದಲಿತ ಕೃಷಿ ಕಾರ್ಮಿಕರ ನಿಗದಿತ ದಿನಗೂಲಿ, ದಿನಗೂಲಿಯಲ್ಲಿ ಹೆಣ್ಣು-ಗಂಡಿಗೆ ಸಮಾನ ವೇತನ, ಉದ್ಯೋಗ ಭದ್ರತೆ, ಉತ್ತಮ ಕೆಲಸದ ವಾತಾವರಣ ಮತ್ತು ಕಲ್ಯಾಣ ಯೋಜನೆಗಳಿಗೆ ದಲಿತರ ಹಕ್ಕಿದೆಯೆಂಬುದನ್ನು ಕಾನೂನಿನ್ವಯ ಅನುಷ್ಠಾನಗೊಳಿಸಿ, ಅವುಗಳಿಗೆ ವಿರುದ್ಧವಾಗಿ ನಡೆಯುವವರನ್ನು ಶಿಕ್ಷೆಗೊಳಪಡಿಸತಕ್ಕದ್ದು.

4. ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಉಸ್ತುವಾರಿ ಸಮಿತಿಗಳನ್ನು ರಚಿಸಿ, ಅವು ನಿಗದಿತ ಸಮಯದಲ್ಲಿ ದಲಿತೇತರರು ಆಕ್ರಮಿಸಿಕೊಂಡಿರುವ ನಿಮ್ನ ವರ್ಗಗಳ ಭೂಮಿಯನ್ನು ಗುರುತಿಸಿ, ಅವುಗಳ ಕಾನೂನು ಬಾಹಿರ ಬಳಕೆಗಾಗಿ ದಲಿತೇತರರು ನೀಡಬೇಕಾದ ಪರಿಹಾರ ಮೊತ್ತವನ್ನು ಮತ್ತು ಭೂಮಿಯನ್ನು ಹತ್ತಿರದ ಸಂಬಂಧಿಕರಿಗೆ ದೊರಕುವಂತೆ ಮಾಡುವುದು, ನ್ಯಾಯಾಲಯಗಳಲ್ಲಿ ಈ ಮೊಕದ್ದಮ್ಮೆಗಳು ಶೀಘ್ರವಾಗಿ ಇತ್ಯರ್ಥಗೊಂಡು ಅಕ್ರಮ ಹೊಂದಿರುವವರ ವಿರುದ್ಧ ಕ್ರಮ ಜರುಗಿಸುವಂತೆ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕದ್ದು.

5. ಹಾಗೆಯೇ ಆದಿವಾಸಿ ಜನರಿಂದ ಬೇರ್ಪಟ್ಟ ಭೂಮಿ, ಅವರಿಗೆ ದೊರೆಯುವಂತೆ ಮಾಡಿ, ಅರಣ್ಯ ಮತ್ತು ಅರಣ್ಯ ಉತ್ಪತ್ತಿಯ ಮೇಲಿನ ಅವರ ಹಕ್ಕುಗಳನ್ನು ಸ್ಥಾಪಿಸಲು ಅನುವು ಮಾಡಿ, ಅವರಿಗೆ ಪರಿಹಾರ ಮತ್ತು ಪುನರ್ವಸತಿ ಕ್ರಮಗಳು ಮತ್ತು ಅವರು ಭೂಮಿ ಮತ್ತು ಅರಣ್ಯದ ಸದ್ಬಳಕೆಯಾಗಲು ಬೇಕಿರುವ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು ಹಾಗೂ ಅಣೆಕಟ್ಟು ಮತ್ತಿತರ ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತಗೊಂಡವರಿಗೆ, ಅಂತಹ ಯೋಜನೆಗಳಿಗೆ ಅವರನ್ನು ಬಾಧ್ಯಸ್ತರನ್ನಾಗಿಸುವುದು.

6. ಎಸ್.ಸಿ. ಮತ್ತು ಎಸ್.ಟಿಗಳಿಗೆ ಬಂಡವಾಳದಲ್ಲಿ ಸಮಾನ ಭಾಗ ದೊರೆಯಲು ಅದನ್ನು ಪ್ರಜಾಸತ್ತಾತ್ಮೀಕರಿಸುವುದು. ಅವರು ಮಾರುಕಟ್ಟೆಯಲ್ಲಿ ಸಮಾನವಾಗಿ ಬಂಡವಾಳ ಹೂಡಲು ಬೇಕಾದ ಸಂಪನ್ಮೂಲಗಳನ್ನು ಒದಗಿಸಲು ಬಜೆಟ್‌ನಲ್ಲಿ ಅನುಕೂಲ ಕಲ್ಪಿಸುವುದು, ಹಾಗೂ ಅಂತಹ ಉದ್ಯಮಗಳಿಗಾಗಿ ಅಗತ್ಯವಿರುವ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ನೀಡುವುದು.

7. ಜೀತ ವಿಮುಕ್ತಿ ಕಾನೂನನ್ನು (1976) ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಂಡು ಬಾಲ ಕಾರ್ಮಿಕ ಪದ್ಧತಿಯನ್ನು ತೊಡೆದು, ಎಲ್ಲಾ ದಲಿತರಿಗೆ ಸ್ವಾತಂತ್ರ್ಯದ ಘನತೆಯಿರುವಂತೆ ಮಾಡುವುದು ಮತ್ತು ಅದಕ್ಕಾಗಿ ಅಗತ್ಯವಿರುವ ಕಾನೂನು ತಿದ್ದುಪಡಿ ತರತಕ್ಕದ್ದು.

8. ಭಾರತ ಸಂವಿಧಾನದ ಪರಿಚ್ಛೇದ 21ನ್ನು ತಿದ್ದುಪಡಿ ಮಾಡುವುದು : ಮೂಲಭೂತ ಹಕ್ಕುಗಳಲ್ಲಿ ಎಲ್ಲಾ ನಾಗರೀಕರಿಗಾಗಿ ಈ ಕೆಳಗಿನ ಹಕ್ಕುಗಳಾದ, ಜೀವನ ಮಟ್ಟ ಸುಧಾರಣೆಗಾಗಿ ಹೆಣ್ಣು-ಗಂಡು ಬೇಧವಿಲ್ಲದೆ, ಅಗತ್ಯವಾಗಿರುವ ಆರೋಗ್ಯ, ಆಹಾರ, ಸ್ವಚ್ಛ ಕುಡಿಯುವ ನೀರು, ಬಟ್ಟೆ, ಆಶ್ರಯ, ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಅನುಕೂಲ, ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ಸೇವೆಗಳು ವಿಶೇಷವಾಗಿ ಎಸ್.ಸಿ. ಮತ್ತು ಎಸ್.ಟಿ.ಗಳಿಗೆ ಈ ಕೆಳಗಿನ ಎರಡು ಆಧಾರಗಳಲ್ಲಿ ಅಂದರೆ ಆರ್ಥಿಕ ದುಃಸ್ಥಿತಿ ಮತ್ತು ಧಾರ್ಮಿಕ ಬೇಧವಿಲ್ಲದೆ ದೊರೆಯುವಂತಾಗಬೇಕು, ಹಾಗೆಯೇ ಜೀವನ ನಿರ್ವಹಣಾ ದಿನಗೂಲಿ ಹಕ್ಕು ಮತ್ತು ಐದು ಎಕರೆ ಬೇಸಾಯ ಭೂಮಿ ಹೊಂದಲು ಅಥವಾ ಗಳಿಕಾ ಉದ್ಯೋಗದ ಹಕ್ಕನ್ನು ಹೊಂದುವಂತಾಗಬೇಕು.

9. ದಲಿತರೆಲ್ಲರಿಗಾಗಿ ಕೂಡಲೇ ಖಡ್ಡಾಯ, ಶುಲ್ಕ ಮುಕ್ತ ಮತ್ತು ಗುಣಮಟ್ಟದ ಶಿಕ್ಷಣ ದೊರೆಕುವಂತೆ ನೋಡಿಕೊಳ್ಳುವುದು, ಅದಕ್ಕಾಗಿ ಸಂಖ್ಯೆ ಮತ್ತು ಅನಕ್ಷರತೆಯನ್ನು ಗಮನಿಸಿ ಬೇಕಾದ ಹಣವನ್ನು ಒದಗಿಸುವುದು, ಬಾಲಕಾರ್ಮಿಕರಿಂದ ದೊರೆಯುತ್ತಿದ್ದ ಮೊತ್ತದಷ್ಟೆ ಪರಿಹಾರ ಆಯಾ ಕುಟುಂಬಗಳಿಗೆ ದೊರಕುವಂತೆ ಮಾಡಿ, ವಿದ್ಯಾರ್ಥಿ ವೇತನದ ಸಂಖ್ಯೆ ಮತ್ತು ಮೊತ್ತವನ್ನು ಹೆಚ್ಚಿಸಿ, ಎಸ್.ಸಿ./ಎಸ್.ಟಿ. ಶಾಲೆಗಳಲ್ಲಿ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಮಾರುಕಟ್ಟೆಯ ಅಗತ್ಯಕ್ಕಾಗಿ ಬೇಕಾದ ಉದ್ಯೋಗ ಮತ್ತು ತಾಂತ್ರಿಕ ಶಿಕ್ಷಣವನ್ನು ದೊರಕಿಸತಕ್ಕದ್ದು.

10. ಸಾರ್ವಜನಿಕ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಥಮಿಕ ಹಂತದಿಂದ ತಾಂತ್ರಿಕ ಮತ್ತು ವೃತ್ತಿಪರ ಹಂತದವರೆಗೂ ಅನ್ವಯಿಸುವಂತೆ ಮೀಸಲಾತಿ ನಿಯಮವನ್ನು ಜಾರಿಯಾಗಿಸುವುದು. ಆರ್ಥಿಕವಾಗಿ ಹಿಂದುಳಿದಿರುವ ಎಸ್.ಸಿ./ಎಸ್.ಟಿ. ವಿದ್ಯಾರ್ಥಿ/ನಿಯರಿಗೆ ಶ್ರೇಷ್ಠ ಮಟ್ಟದ ಶಿಕ್ಷಣ ರಾಜ್ಯಾಂಗದ ಖರ್ಚಿನಲ್ಲೇ ದೊರೆಯತಕ್ಕದ್ದು. ಅಲ್ಲದೆ ಎಲ್ಲಾ ಇಂಗ್ಲೀಷ್ ಮಾಧ್ಯಮ ಶಾಲೆಗಳು ಪ್ರವೇಶದಲ್ಲಿ ವೈವಿಧ್ಯತೆಯನ್ನು ಅನುಸರಿಸತಕ್ಕದ್ದು.

11. ಮಹಿಳೆಯರಲ್ಲಿ ಎಸ್.ಸಿ. ಮತ್ತು ಎಸ್.ಟಿ. ಮಹಿಳೆಯರದ್ದೊಂದು ವಿಶಿಷ್ಟ ವರ್ಗವೆಂದು ಪರಿಗಣಿಸಿ, ಜಗಣತಿಯಲ್ಲಿ, ಕ್ರಿಯಾವರದಿಗಳಲ್ಲಿ ಮತ್ತು ಪ್ರಗತಿ ವರದಿಗಳಲ್ಲಿ ಅವರ ನಿಖರವಾದ ಸಂಖ್ಯೆಯನ್ನು ಗುರುತಿಸಿ, ಅದರ ಮೇರೆಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ತಾತ್ವಿಕ ಯೋಜನೆಯೊಂದನ್ನು ರೂಪಿಸಿ, ಅವರು ಪ್ರಧಾನವಾಹಿನಿಯಲ್ಲಿ ಪಾಲ್ಗೊಳ್ಳಲು ಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳು, ಮಾರುಕಟ್ಟೆ ಉದ್ಯಮಗಳು ಹಣ ಒದಗಿಸುವಿಕೆ, ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಸೌಕರ್ಯಗಳಲ್ಲಿ ಮೀಸಲಾತಿ ಅವಕಾಶಗಳನ್ನು ಕಲ್ಪಿಸುವುದು ಹಾಗೂ ಎಸ್.ಸಿ./ಎಸ್.ಟಿ., ಮಹಿಳೆಯರಿಗಾಗಿ ಇರುವ ರಾಷ್ಟ್ರ ಮತ್ತು ರಾಜ್ಯ ಸಮಿತಿಗಳು ಅವರ ವಾರ್ಷಿಕ ಬೆಳವಣಿಗೆಯ ಮಟ್ಟವನ್ನು ಅಧ್ಯಯನಕ್ಕೊಳಪಡಿಸಿ, ವರದಿಯನ್ನು ಪ್ರತಿವರ್ಷವೂ ಹೊರತರುವಂತೆ ಮಾಡುವುದು.

12. ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆಗಟ್ಟುವಿಕೆ ಕಾನೂನು ನಿಯಮ 1989 ಮತ್ತು 1995, ವಿಶೇಷವಾಗಿ ದಲಿತ ಮಹಿಳೆಯ ವಿರುದ್ಧ ದೌರ್ಜನ್ಯ ತಡೆ ಕಾನೂನನ್ನು ಪರಿಣಾಮಕಾರಿಯಾಗಿ, ಅವುಗಳ ಲಿಖಿತ ಮತ್ತು ಅರ್ಥದ

(34ನೇ ಪುಟಕ್ಕೆ)

ರಾಷ್ಟ್ರೀಯ ಮನಸ್ಸಾಕ್ಷಿಯ ತುಮುಲಗಳು

(31ನೇ ಪುಟದಿಂದ)

ಜಾಗತೀಕರಣವು ಬಹುರಾಷ್ಟ್ರೀಯ ಕಂಪನಿಗಳ ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಿಂದ ಇಲ್ಲಿನ ಸ್ಥಳೀಯ ಕೃಷಿ ಅಪಾಯಕ್ಕೆ ಸಿಲುಕುತ್ತದೆ ಮತ್ತು ಕೃಷಿಯಿಂದ ವಂಚಿತವಾದ ಭೂಮಿಯನ್ನು ಆಕ್ರಮಿಸಿಕೊಳ್ಳುವುದರ ಮೂಲಕ ಸಮ್ಮಿಳಿತ ಕೃಷಿಯನ್ನು ಪ್ರಾರಂಭಿಸುತ್ತೆ. ಇಲ್ಲಿನ ಪಾರಂಪರಿಕ ಕೃಷಿ ಪದ್ಧತಿಯನ್ನು ನಂಬಿಕೊಂಡಿರುವ ಸಣ್ಣ ಭೂಮಾಲೀಕರು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಲಾಗದೆ ಕುಂದುತ್ತವೆ ಮತ್ತು ಅನಿವಾರ್ಯವಾಗಿ ಇಂತಹ ಬೆಳವಣಿಗೆಯಲ್ಲಿ ಬಲಿಪಶುಗಳಾಗುತ್ತಾರೆ. ಹಾಗಾಗಿ ಸರ್ಕಾರವು ದಲಿತರಿಗೆ ಕೇವಲ ವೈಯಕ್ತಿಕವಾಗಿ ನೀಡದೆ ಸಂಪೂರ್ಣವಾಗಿ ದಲಿತ ಸಹಕಾರ ಸಂಘಗಳಿಗೆ ಹೆಚ್ಚು ಹಣ ಮತ್ತು ಭೂಮಿ, ತಂತ್ರಜ್ಞಾನ ಮತ್ತು ಇತರ ಕಚ್ಚಾವಸ್ತುಗಳನ್ನು ಒದಗಿಸುವುದು ಸೂಕ್ತ. ಈ ವ್ಯವಸ್ಥೆಯು ಹಳ್ಳಿಗಳಲ್ಲಿ ದಲಿತರನ್ನು ಬೆಳೆಸುವುದಷ್ಟೇ ಅಲ್ಲದೆ ಜಾತಿ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಹಾಗೆಯೇ ದಲಿತರು ಜಮೀನ್ದಾರೀ ವ್ಯವಸ್ಥೆಯಿಂದ ಹೊರಬಂದು ಪ್ರಗತಿಯೆಡೆಗೆ ಸಾಗಲು ಕಾರಣವಾಗುತ್ತದೆ.

ಭೋಪಾಲ್ ಪ್ರಕಟಣೆಯು ಉದ್ಯೋಗ ಮತ್ತು ಎಲ್ಲ ಹಂತಗಳಲ್ಲಿ ಮತ್ತು ಎಲ್ಲ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಸೂಚಿಸಿರುವುದು ಸಮಂಜಸವಾಗಿದೆ. ಪ್ರಸಕ್ತ ಸಂದರ್ಭದ ವ್ಯವಸ್ಥೆಯಲ್ಲಿ, ಅರ್ಹತೆಯ ನೆವದ ಮೂಲಕ, ಮೀಸಲಾತಿಯನ್ನು ನಿರ್ಲಕ್ಷಿಸುವುದು ಅಸಂಬದ್ಧವಾದ ವಿಚಾರ. ಈ ಅಸಂಬದ್ಧವಾದ ವ್ಯವಸ್ಥೆಯನ್ನು ಅಂಬೇಡ್ಕರ್‌ರ ದಿನಗಳಿಂದ ಇಲ್ಲಿನವರೆಗೆ ಮುಂದುವರೆಸಿಕೊಂಡು ಬರಲಾಗಿದೆ. (ಸ್ವತಃ ಅಂಬೇಡ್ಕರರ ಕಾನೂನು ಮಂತ್ರಿಮಂಡಲದಲ್ಲಿನ ಅನೇಕ ಉದ್ಯೋಗಗಳನ್ನು ಮೀಸಲಾತಿಯ ವ್ಯಾಪ್ತಿಯಿಂದ ದೂರವಿಡಲಾಗಿತ್ತು) ಏಕೆಂದರೆ ಈ ವಿಷಯಕ್ಕೆ ಸಂಬಂಧಿಸಿದ ಮೂಲ ತತ್ವವನ್ನೇ ಸ್ಪಷ್ಟಗೊಳಿಸಲಾಗಿಲ್ಲ. ಹಾಗಾಗಿ ಇದು ಇಂದಿಗೂ ಸ್ಪಷ್ಟತೆಯನ್ನು ಬಯಸುತ್ತದೆ.

ಈ ಮೀಸಲಾತಿಯ ಹಿಂದಿರುವ ಮೂಲ ಉದ್ದೇಶವೆಂದರೆ ಅಶಕ್ತತೆಯನ್ನು ಅನುವಂಶೀಯವಾಗಿ ಪಡೆದುಕೊಂಡಿರುವ ಬಹುಸಂಖ್ಯಾತ ಸಮುದಾಯವನ್ನು ಜಾತಿಯ ಪೂರ್ವಗ್ರಹವಿಲ್ಲದೆ ನೋಡುವುದು ಒಂದು ಕಡೆಯಾದರೆ, ದೇಶದ ಸಂಪತ್ತಿನಲ್ಲಿ ಜನಸಂಖ್ಯೆಯ ಆಧಾರದ ಮೇಲೆ, ಎಲ್ಲ ಕ್ಷೇತ್ರಗಳಲ್ಲಿ ತಮಗೆ ಸಲ್ಲಬೇಕಾದ ಸವಲತ್ತನ್ನು, ಕನಿಷ್ಠ ಶೇಕಡಾವಾರು ದಲಿತರ ಅನುವಂಶೀಯ ಹಕ್ಕು ಎನ್ನುವುದು ಎರಡನೆಯದು. ಪ್ರಸಕ್ತ ಮೀಸಲಾತಿಯ ವ್ಯವಸ್ಥೆಯಲ್ಲಿ ಉನ್ನತ ವರ್ಗದವರು ದುರ್ಬಲ ದಲಿತರಿಗೆ ದಾರಿತಪ್ಪಿಸುವ ಮೂಲಕ ಅವರನ್ನು ಮೀಸಲಾತಿಯಿಂದ ವಂಚಿತರಾಗುವಂತೆ ಮಾಡುತ್ತಿದ್ದಾರೆ. ಆ ಮೂಲಕ ಅವರಿಗೆ ಸಲ್ಲಬೇಕಾದ ಸವಲತ್ತುಗಳನ್ನು ತಾವೇ ಪಡೆಯುತ್ತಿದ್ದಾರೆ. ಈ ಕಲ್ಪನೆ ಕೇವಲ ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರದೆ ಎಲ್ಲ-ಸಣ್ಣ ಹಾಗೂ ದೊಡ್ಡ ಕ್ಷೇತ್ರಗಳಲ್ಲಿಯೂ ಚಾಲ್ತಿಯಲ್ಲಿದೆ. ಈ ಕಲ್ಪನೆಯನ್ನು ಹೋಗಲಾಡಿಸದೇ ಇದ್ದಲ್ಲಿ ದಲಿತರ ಹಕ್ಕಾಗಿರುವ ಮೀಸಲಾತಿಯನ್ನು ಮೇಲ್ವರ್ಗದವರು ದುರುಪಯೋಗ ಪಡಿಸಿಕೊಂಡು ದಲಿತರನ್ನು ದಲಿತರಾಗಿಯೇ ಉಳಿಯುವಂತೆ ಮಾಡುತ್ತಾರೆ ಮತ್ತು ಆ ಮೂಲಕ ತಮ್ಮ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಲೇ ಸಾಗುತ್ತಾರೆ. ಭೋಪಾಲ್ ಪ್ರಕಟಣೆಯು ಇಷ್ಟನ್ನು ಸ್ಪಷ್ಟಪಡಿಸಿರುವುದು ಸಂತೋಷದಾಯಕ.

ಜಾಗತೀಕರಣವು ಬಹುರಾಷ್ಟ್ರೀಯ ಕಂಪನಿಗಳ ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಿಂದ ಇಲ್ಲಿನ ಸ್ಥಳೀಯ ಕೃಷಿ ಅಪಾಯಕ್ಕೆ ಸಿಲುಕುತ್ತದೆ ಮತ್ತು ಕೃಷಿಯಿಂದ ವಂಚಿತವಾದ ಭೂಮಿಯನ್ನು ಆಕ್ರಮಿಸಿಕೊಳ್ಳುವುದರ ಮೂಲಕ ಸಮ್ಮಿಳಿತ ಕೃಷಿಯನ್ನು ಪ್ರಾರಂಭಿಸುತ್ತೆ. ಇಲ್ಲಿನ ಪಾರಂಪರಿಕ ಕೃಷಿ ಪದ್ಧತಿಯನ್ನು ನಂಬಿಕೊಂಡಿರುವ ಸಣ್ಣ ಭೂಮಾಲೀಕರು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಲಾಗದೆ ಕುಂದುತ್ತವೆ ಮತ್ತು ಅನಿವಾರ್ಯವಾಗಿ ಇತಂಹ ಬೆಳವಣಿಗೆಯಲ್ಲಿ ಬಲಿಪಶುಗಳಾಗುತ್ತಾರೆ.

ಮೀಸಲಾತಿಯನ್ನು ವಿಸ್ತರಿಸಲು ಮತ್ತೊಮ್ಮೆ ಈ ರೀತಿಯ ತಾಂತ್ರಿಕ-ಆರ್ಥಿಕ ವಿವರಣೆಗಳನ್ನು ಅನ್ವಯಿಸಿದರೆ ದಲಿತರ ಏಳ್ಗೆಗೆ ಮತ್ತಷ್ಟು ಮಾರಕವಾಗುತ್ತದೆ. ಅಮೆರಿಕ, ಮಾದರಿಯ ವ್ಯವಸ್ಥೆಯನ್ನು ಸೂಚಿಸಿದ್ದರೂ ಕೂಡ, ಅದನ್ನು ಸರ್ಕಾರಿ ಕಾನೂನಿನಿಂದ ಸಾಮಾನ್ಯ ರೀತಿಗೆ ಮಾರ್ಪಾಡು ಮಾಡುವುದರಿಂದ, ದಲಿತರ ಏಳ್ಗೆಗೆ ಅಷ್ಟೇ ಅಪಾಯಕಾರಿಯಾಗುತ್ತದೆ.

ಅದು ಅಮೇರಿಕದಲ್ಲಿ ಹುಟ್ಟಿರುವುದರಿಂದ ಅನೇಕ ಕಾರ್ಯಕ್ರಮಗಳನ್ನು ದೃಢವಾಗಿ ಸ್ವ ಇಚ್ಛೆಯಿಂದ ಸ್ಪಷ್ಟಪಡಿಸಿರುವಂಥವುಗಳು; ಸಾರ್ವಜನಿಕ ಕ್ಷೇತ್ರದಲ್ಲಿ ಚುನಾಯಿತ ಸದಸ್ಯರು ಅಥವಾ ಕಾರ್ಯಕಾರಿ ಮಂಡಳಿಗಳು ಕಾರ್ಯಕ್ರಮಗಳನ್ನು ಶಾಸನಗೊಳಿಸುತ್ತಾರೆ; ಹಾಗೆಯೇ ಖಾಸಗೀ ಕ್ಷೇತ್ರದಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಸ್ವ ಇಚ್ಛೆಯಿಂದ ರೂಪಿಸಲಾಗುತ್ತದೆ. ತಮಗಿಷ್ಟವಿಲ್ಲದ ಕಾರ್ಯಗಳನ್ನೂ ಮಾಡುವುದು ಅಪರೂಪ. ಒಂದು ವೇಳೆ ಮಾಡುವಂತಿದ್ದರೆ ನ್ಯಾಯಾಲಯದಿಂದ ಅಂತಿಮ ತೀರ್ಪಿನ ನಂತರ ಕಾರ್ಯಗತಗೊಳಿಸಲಾಗುತ್ತದೆ.

ನಿಶ್ಚಿತ ಕಾರ್ಯದ ರೂಪ ಮತ್ತು ಪಾಲಿನ ನಡುವಿನ ವ್ಯತ್ಯಾಸ ಅವುಗಳ ನಡುವಿನ ಉದ್ದೇಶದಲ್ಲಿದೆ. ಮೊದಲನೆಯದು ವರ್ಣ, ಬೇಧ, ಜಾತಿ, ಲಿಂಗ ಬೇಧಗಳನ್ನು ಪಾಲಿಸುವುದಿಲ್ಲ ಆದರೆ ಎರಡನೆಯದು ಪ್ರತಿನಿಧಿ ತತ್ವದ ಆಧಾರದ ಮೇಲೆ ನಿಂತಿದೆ.

ಅಮೇರಿಕದಲ್ಲಿರುವ ವ್ಯವಸ್ಥೆಯು ಕಾರ್ಯಕಾರಿ ಮಂಡಳಿಯು ಹೊರಡಿಸಿರುವ ಪ್ರಕ್ರಿಯೆಯಾಗಿದ್ದು ಭಾರತದ ವ್ಯವಸ್ಥೆಯು ಸಂವಿಧಾನದಲ್ಲಿ ಸೂಚಿಸಿರುವ ಹಾಗಿದೆ. ಭಾರತದ ವ್ಯವಸ್ಥೆಯು ಅಮೇರಿಕದ ವ್ಯವಸ್ಥೆಗಿಂತಲೂ ಸಂಕೀರ್ಣವಾದುದು. ಭಾರತದ ಕಾರ್ಯಕಾರಿ ಮಂಡಳಿ ಕೂಡ ಪ್ರಸಕ್ತ ವ್ಯವಸ್ಥೆಯನ್ನು ನಿರ್ಲಕ್ಷಿಸಿದರೆ ಭವಿಷ್ಯವನ್ನು ಕುರಿತು ಕನಸು ಕಾಣಬಹುದು. ದಲಿತರು ಯಾವುದೇ ಖಾಸಗೀ ಒಡೆಯನಿಂದ ಸಹಾಯ ಬೇಡುವ ಹಾಗಿರುವುದಿಲ್ಲ. ನಾವು ಮಾಡಬೇಕಾದ ಅಂಶವೆಂದರೆ ನಾವು ನಿರ್ದಿಷ್ಟ ಮತ್ತು ಸರಿಯಾದ ಪ್ರಮಾಣದಲ್ಲಿ ಪಾಲನ್ನು ಕೇಳಬೇಕು ಮತ್ತು ಪಾಲನ್ನು ವ್ಯವಸ್ಥೆಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರಬೇಕು. ಈ ವ್ಯವಸ್ಥೆಯು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

ಈ ತತ್ವವು ಭೋಪಾಲ್ ಪ್ರಕಟಣೆ ಹೊಂದಿರುವ ಮೀಸಲಾತಿಯನ್ನೇ ವಿಸ್ತರಿಸುತ್ತದೆ. ಇದು ದಲಿತರು ಬೆಳೆಯುವ ಸಾಂಘಿಕ ಸ್ವರೂಪವನ್ನು ಸೃಷ್ಟಿಸುತ್ತದೆ. ಇಲ್ಲಿ ಖಾಸಗಿ, ಸರ್ಕಾರಿ, ಸಾರ್ವಜನಿಕವೆಂಬ ಭೇದವಿರುವುದಿಲ್ಲ. ಒಂದು ವೇಳೆ ಜಾಗತೀಕರಣದ ಸಂದರ್ಭದಲ್ಲಿ ಅಂಗಡಿ ತೆರೆಯಬೇಕಾದರೆ. ಮೊದಲು ಭಾರತದ ಈ ವಾಸ್ತವತೆಯನ್ನು ಅರಿತುಕೊಳ್ಳಲಿ. ಹಾಗೆಯೇ ಅವರ ಅರ್ಹತೆಯ ಆಳದಲ್ಲಿ ಒಂದು ರೀತಿಯ ಮೀಸಲಾತಿಯಿದೆಯೆಂಬುದನ್ನು ಕೂಡ ಮರೆಯದಿರಲಿ.

1965ರಲ್ಲಿ ಏಷ್ಯನ್ ಎಕ್ಸ್ಲೂಷನ್ ಆಕ್ಟ್ (Asian Exclusion Act)ಗೆ ಅಂತ್ಯ ನೀಡಿದ ಸಿವಿಲ್ ರೈಟ್ಸ್‌ಆಕ್ಟ್‌ನ ಮೀಸಲಾತಿಯಿಂದ ಸವಲತ್ತುಗಳನ್ನು ಪಡೆದವರು ಭಾರತೀಯರಲ್ಲವೇ? ಇದಕ್ಕೂ ಮುಂಚೆ, ಅಮೇರಿಕಗೆ ಹೋಗುವ ಮೊದಲು ಭಾರತೀಯನು ಒಬ್ಬ ದೊಡ್ಡ ವಿಜ್ಞಾನಿ ಅಥವಾ ಕಲಾಕಾರನಾಗಿರಬೇಕಿತ್ತು; ಮತ್ತು ನಂತರ ವರ್ಣಬೇಧ ನೀತಿಯನ್ನು ಅನುಸರಿಸಬೇಕಾಗಿತ್ತು. ಹಾಗೆಯೇ ಜಾತೀಕರಣದ ಸಂದರ್ಭದಲ್ಲಿ ದಲಿತರು ಅಭಿವೃದ್ಧಿಯನ್ನು ಪಡೆಯಲು ಮೀಸಲಾತಿಯನ್ನು ಎಲ್ಲೆಡೆ ತರುವುದು ಅವಶ್ಯಕ.

ರಾಜ್ಯ ಮತ್ತು ಜಾಗತೀಕರಣ : ಈ ವಿಷಯವನ್ನು ಚರ್ಚಿಸಲು ದೇಶದ ಎಲ್ಲಾ ಮೂಲೆಗಳಿಂದ ದಲಿತ ಬುದ್ಧಿಜೀವಿಗಳನ್ನು ಒಗ್ಗೂಡಿಸುವ ಮಧ್ಯಪ್ರದೇಶ ಸರ್ಕಾರದ ಪ್ರಯತ್ನವನ್ನೂ ಪ್ರಶಂಸಿಸಿದರೆ ಇದು ದಲಿತರು ರಾಜ್ಯವನ್ನು ಆಶ್ರಯಿಸಲು ಕಾರಣವಾದ ದಲಿತರ ಸಹಿಸಲಸಾಧ್ಯವಾದ ನೋವುಗಳನ್ನು ತೆರೆದಿಡುತ್ತದೆ. ಇದು ರಾಜ್ಯವನ್ನು ತಪ್ಪಾಗಿ ಗ್ರಹಿಸುವಂತೆ ಮಾಡುತ್ತದೆ. ರಾಜ್ಯದ ಸಹಕಾರವನ್ನು

ಒಪ್ಪಿಕೊಳ್ಳುವುದು ಅವಶ್ಯಕ ಮತ್ತು ಸಮಯೋಚಿತವಾಗಿರಬಹುದು ಅಥವಾ ಆಳುವ ವರ್ಗದ ನಡುವಿನ ಭಿನ್ನಾಭಿಪ್ರಾಯಗಳ ಲಾಭ ಪಡೆಯಬಹುದು. ಆದರೆ ದಲಿತ ಸಂಘರ್ಷಗಳನ್ನು ರಾಜ್ಯದ ಮೂಲಕ ಮಧ್ಯಸ್ಥಿಕೆ ವಹಿಸಲಾಗುವುದಿಲ್ಲ. ಕಾರಣ, ಮೂಲಭೂತವಾಗಿ ಈ ಹೋರಾಟಗಳು ರಾಜ್ಯದ ವಿರುದ್ಧವಾಗಿಯೇ ಇರುತ್ತದೆ. ರಾಜ್ಯವು ಈ ಪ್ರಕಟಣೆಯಲ್ಲಿ ಜಾಗತೀಕರಣಕ್ಕೆ ವಿರುದ್ಧವಾಗಿ ಒಂದು ಪದ ಕೂಡ ಇಲ್ಲವೆಂಬುದನ್ನು ಈಗಾಗಲೇ ಮನವರಿಕೆ ಮಾಡಿಕೊಂಡಿದೆ. ಇದು ದಲಿತ ಬುದ್ಧಿಜೀವಿಗಳು ಈಗಾಗಲೇ ಸರ್ಕಾರದಿಂದ ಜಾಗತೀಕರಣವನ್ನು ತಡೆಯಲಾಗುವುದಿಲ್ಲ ಎಂಬ ವಾದದೊಂದಿಗೆ 'ಪರ್ಯಾಯವಿಲ್ಲ' (There is no alternative) ವೆಂಬ ಮಾತಿನ ಜೊತೆಯಲ್ಲಿ ರಾಜಿ ಮಾಡಿಕೊಂಡಿದ್ದಾರೆಂಬ ಭಾವನೆಯನ್ನು ಸೃಷ್ಟಿಸುತ್ತದೆ. ಪ್ರಕಟಣೆ ಹೇಳುವಂತೆ ಈ ಕಾರ್ಯಸೂಚಿ ಕುಶಲತೆಯ ಒಂದು ಭಾಗವಾಗಿರಬಹುದು ಆದರೆ ಈ ಜನ-ವಿರೋಧಿ ಜಾಗತೀಕರಣದ ವಿರುದ್ಧದ ಶೋಷಿತ ವರ್ಗದ, ಹೋರಾಟವನ್ನು ಬದಲಿಸಲು ಸಾಧ್ಯವಿಲ್ಲ.

ಭೋಪಾಲ್ ಪ್ರಕಟಣೆಯು ದಲಿತ ಬುದ್ಧಿ ಜೀವಿಗಳ ಹೆಸರಿನಲ್ಲಿ ಪ್ರಕಟಿಸಲಾಗಿದ್ದು ನಿರೀಕ್ಷಿತವಾಗಿಯೇ ಚರ್ಚಾಸ್ಪದವಾಗಿದೆ. ಆದರೆ ಇದು ಮಂಡಲ್‌ನಂತಹ ಕೆಲವು ರಾಜಕೀಯ ಪಕ್ಷಗಳಿಗೆ, ಚುನಾವಣೆಯಲ್ಲಿ ವಿರೋಧಿಗಳನ್ನು ಬಗ್ಗು ಬಡಿಯುವ ಅಸ್ತ್ರವೂ ಆಗಬಹುದು. ಆದರೆ ನಂತರದ ರಾಜಕೀಯ ಕಾಳಗದಲ್ಲಿ ದಲಿತರು ಯಾವುದಾದರೊಂದು ಗುಂಪಿನ ಕಡೆ ವಾಲಿಕೊಂಡು ಎರಡೂ ಕಡೆಯಿಂದ ಥಳಿಸಿಕೊಳ್ಳುವ ಅಂತ್ಯಕ್ಕೆ ಹೋಗುತ್ತಾರೆ. ನಾವು ಬಲಿಷ್ಠವಾಗಿರುವವರೆಗೆ ಈ ರೀತಿಯ ಘಟನೆಗಳ ಸರಳಿಯನ್ನು ನಿಷ್ಫಲಗೊಳಿಸಲಾಗುವುದಿಲ್ಲ. ಹಾಗೆಯೇ ವಿರೋಧಿಗಳ ಗುಂಪಿನಲ್ಲಿಯೂ ಖಂಡನೆ, ವಿರೋಧಗಳನ್ನು ಉಪಯೋಗಿಸುವುದನ್ನು ಕೂಡ ಯೋಚಿಸಲಾಗುವುದಿಲ್ಲ.

ದಲಿತ ಬುದ್ಧಿ ಜೀವಿಗಳ ಜವಾಬ್ದಾರಿಯು ಒಂದು ಸುಂದರ ಕರಡು ಪತ್ರ ಅಥವಾ ನಕ್ಷೆಯನ್ನು ರೂಪಿಸುವಲ್ಲಿಗೆ ಮುಗಿಯುವುದಿಲ್ಲ ಬದಲಾಗಿ ಇಲ್ಲಿಂದ ಪ್ರಾರಂಭವಾಗುತ್ತದೆ. ಈಗ ಅವರು ಆ ಕರಡು ಪತ್ರವನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಪ್ರಸ್ತುತ ಅಸ್ತಿತ್ವದಲ್ಲಿರುವ ಪರಿಸ್ಥಿತಿಯ ಚಿತ್ರಣವನ್ನು ನೀಡಿದ್ದು ಅವರು ರಾಜ್ಯ ವಿರೋಧಿ, ಜಾಗತೀಕರಣ ವಿರೋಧಿ ಹೋರಾಟಗಳನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿ ಕಾರ್ಯತಂತ್ರಗಳನ್ನು ರೂಪಿಸಬೇಕು. ಅವರು ಒಂದು ಸರ್ಕಾರ ಅಥವಾ ಇತರೆ ಬಾಹ್ಯ ವ್ಯಕ್ತಿ ಅವರ ಚಿಂತನೆಗಳಿಗೆ ಮಧ್ಯವರ್ತಿಯಾಗುವವರೆಗೆ ಕಾಯಬಾರದು. ಇದು ಅವರು ತಮ್ಮ ಬೌದ್ಧಿಕ, ಎದೆಗಾರಿಕೆ, ಸಾಮರ್ಥ್ಯವನ್ನು ನಿರೂಪಿಸಲು ಮತ್ತು ಜನರೊಂದಿಗೆ ತಮ್ಮ ಸಂಬಂಧವನ್ನು ಮರುಸ್ಥಾಪಿಸಿಕೊಳ್ಳುವ ಚಾರಿತ್ರಿಕ ಅವಕಾಶವಾಗಿದೆ. ಹಾಗಾದಾಗ ಮಾತ್ರ ಈ ಪ್ರಕಟಣೆಯು ಒಂದು ದಲಿತ ಪ್ರಣಾಳಿಕೆಯಾಗಿ ಗೌರವವನ್ನು ಪಡೆಯುವುದು ಮನಸ್ಸಾಕ್ಷಿಯಲ್ಲಿ ಕೇವಲ ಉದ್ರೇಕವಾಗದೇ ಉಳಿಯುವುದು. ●

ಸೌಜನ್ಯ : ದಿ ದಲಿತ್

ದಲಿತರ ಆರ್ಥಿಕ ಅಜೆಂಡಾ :

ಭೋಪಾಲ್ ಸಮಾವೇಶದ ಘೋಷಣೆಗಳು

(31ನೇ ಪುಟದಿಂದ)

ಪ್ರಕಾರ ಜಾರಿಯಾಗುವಂತೆ ಮಾಡುವುದು, ಮತ್ತು ಅವುಗಳ ಮೇರೆಗೆ ದೌರ್ಜನ್ಯವೆಸಗುವ ಮೇಲ್ಜಾತಿ ನಾಯಕರು ಮತ್ತು ಜಾತಿ ಕಲಹಗಳಲ್ಲಿ ತೊಡಗುವ ಅವರ ಚೇಲಾಗಳು ಮತ್ತು ಅವರೊಡನೆ ಸಹಕರಿಸುವ ಪೊಲೀಸ್ ಅಧಿಕಾರಿಗಳನ್ನು ಶಿಕ್ಷಿಸುವುದು. ಎಸ್.ಸಿ./ಎಸ್.ಟಿ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಒಂದು ಸಾಮುದಾಯಿಕ ಶಿಕ್ಷಾ ವ್ಯವಸ್ಥೆಯನ್ನು ರೂಪಿಸಬೇಕು. ಏಕೆಂದರೆ ಶೋಷಕರು ಸಮುದಾಯ ಬೆಂಬಲವನ್ನು ಹೊಂದಿದ್ದು ಕಾನೂನಿನಿಂದ ತಪ್ಪಿಸಿಕೊಳ್ಳುತ್ತಾರೆ.

13. ಭಾರತದ ಸಾರ್ವಜನಿಕ ಸಂಸ್ಥೆಗಳಾದ ವಿಶ್ವವಿದ್ಯಾನಿಲಯಗಳು, ಅಥವಾ ಅಕಾಡೆಮಿಕ್ ಅಥವಾ ಸ್ವತಂತ್ರವಾದ ಅಥವಾ ನೋಂದಾಯಿತ ಮಂಡಳಿಗಳಲ್ಲಿ ಇರಬೇಕು. ಎಸ್.ಸಿ/ಎಸ್.ಟಿ. ಪ್ರಾತಿನಿಧ್ಯವನ್ನು ಅಥವಾ ಅವುಗಳಲ್ಲಿ ವೈವಿಧ್ಯತೆಯನ್ನು ಇರುವಂತೆ ನೋಡಬೇಕು. ಯಾವ ಸಂಸ್ಥೆಗಳು ಈ ಸಾಕಾರಾತ್ಮಕ ಕ್ರಿಯೆಯನ್ನು ಅನುಸರಿಸುವುದಿಲ್ಲವೋ ಅವುಗಳಿಗೆ ದೊರೆಯುವ ಸರ್ಕಾರಿ ಮಾನ್ಯತೆ ಮತ್ತು ಅನುದಾನ ನಿಲ್ಲಿಸಬೇಕು. ಇದನ್ನು ಎಲ್ಲಾ ಖಾಸಗೀ ಕಾರ್ಖಾನೆ/ಸಂಘಟಿತ ನಿಗಮಗಳು ತಮ್ಮ ನೌಕರಿ ಸಿಬ್ಬಂದಿಯಲ್ಲಿ ಈ ಕೂಡಲೇ ಜಾರಿಯಾಗಿಸತಕ್ಕದ್ದು.

14. ಎಸ್.ಸಿ. /ಎಸ್.ಟಿ. ಜನಸಂಖ್ಯೆಗನುಗುಣವಾಗಿ ಎಲ್ಲಾ ರಾಜ್ಯ ಮತ್ತು ರಾಷ್ಟ್ರ ಬಜೆಟ್‌ಗಳಲ್ಲಿ ಸಾಕಷ್ಟು ನಿಧಿಯನ್ನು ನಿಗದಿಗೊಳಿಸತಕ್ಕದ್ದು ಮತ್ತು ಈ ಜನಕ್ಕಾಗಿ ವಿನಿಯೋಗ ಮಾಡದ ಅಥವಾ ಸರಿಯಾಗಿ ಉಪಯೋಗಿಸಿದೆ ಇರುವವರ ವಿರುದ್ಧ ಕಾನೂನುಕ್ರಮ ಜರುಗಿಸತಕ್ಕದ್ದು.

15. ಸಾಮಾಜಿಕವಾಗಿ ಅನಾನುಕೂಲ ಸ್ಥಿತಿಯ ಎಲ್ಲಾ ವಸ್ತು ಮತ್ತು ಸೇವೆಗಳ ವಾಣಿಜ್ಯ ಮತ್ತು ವ್ಯವಹಾರ ವೈವಿಧ್ಯತೆಯಲ್ಲಿ ಪೂರ್ವಕಾ ವೈವಿಧ್ಯತೆಯಲ್ಲಿ ಜಾರಿಯಾಗಿಸುವಂತೆ ಯಾವುದೇ ಸರ್ಕಾರಿ ಮತ್ತು ಖಾಸಗೀ ಸಂಸ್ಥೆಗಳು ಮಾಡತಕ್ಕದ್ದು.

16. ಎಸ್.ಸಿ./ಎಸ್.ಟಿ.ಗಳ ರಕ್ಷಣೆಯ ಪೂರ್ಣ ಜವಾಬ್ದಾರಿಯನ್ನು ರಾಜ್ಯಾಂಗ ವಹಿಸಬೇಕು. ಅದು ಯಾವ ಕ್ಷೇತ್ರ ದೌರ್ಜನ್ಯ ಪೀಡಿತ ಎಂಬುದನ್ನು ಗುರುತಿಸಿ, ಅದನ್ನು ಮಟ್ಟಹಾಕಲು ಅಲ್ಲಿ ಶಸ್ತ್ರ ಬಲವನ್ನೂ ಏರ್ಪಡಿಸಬೇಕು. ಅವರೊಡನೆ ಸ್ವ-ರಕ್ಷಣೆ ಉದ್ದೇಶಕ್ಕಾಗಿ ದೌರ್ಜನ್ಯ ತಡೆ ಕಾನೂನಿನಲ್ಲಿರುವಂತೆ ಎಸ್.ಸಿ./ಎಸ್.ಟಿ.ಗಳಿಗೆ ಶಸ್ತ್ರಗಳನ್ನು ಹೊಂದಲು ಪರವಾನಗಿ ನೀಡತಕ್ಕದ್ದು, ಅದರಂತೆ ಹಳ್ಳಿ ಮಟ್ಟದಲ್ಲಿ ದಲಿತ ರಕ್ಷಣಾ ಗುಂಪುಗಳನ್ನು ರೂಪಿಸತಕ್ಕದ್ದು, ಹಾಗೂ ವಿಶೇಷವಾಗಿ ದಲಿತ ಮಹಿಳೆಯರು ತಮ್ಮ ಶೋಷಕರ ವಿರುದ್ಧ ಸ್ವರಕ್ಷಣೆಯಲ್ಲಿ ತೊಡಗಲು ಬೇಕಾದ ತರಬೇತಿಯನ್ನು ನೀಡತಕ್ಕದ್ದು.

17. ತ್ವರಿತಗತಿಯಲ್ಲಿ ಅವಮಾನವೀಯವಾಗಿ ಮಲ ಹೊರುವುದನ್ನು ನಿಷೇದಿಸಿ, ಅಂತಹವರಿಗೆ ಪರಿಣಾಮಕಾರಿಯಾದ ಪುನರ್ವಸತಿ, ಪರ್ಯಾಯ ಮತ್ತು ಸ್ಥಿರವಾದ ಉದ್ಯೋಗ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕಲ್ಪಿಸತಕ್ಕದ್ದು. ಅಲ್ಲದೆ ಮಲ ಹೊರುವ ಪದ್ಧತಿ ನಿಷೇದ ಮತ್ತು ಒಣ ಶೌಚಾಲಯ ನಿರ್ಮಾಣ ನಿಷೇದ ಕಾಯ್ದೆ, 1993ರ ಪ್ರಕಾರ ಅದನ್ನು ಮಾಡುತ್ತಿರುವ ರೈಲ್ವೇ, ರಕ್ಷಣಾ ಮತ್ತು ನಗರದ ಮಂಡಳಿಗಳ ವಿರುದ್ಧ ಕಾನೂನುಕ್ರಮ ಜರುಗಿತಕ್ಕದ್ದು.

18. ರಾಷ್ಟ್ರ ಮತ್ತು ರಾಜ್ಯ ಮಟ್ಟದ ಎಸ್.ಸಿ./ಎಸ್.ಟಿ. ಮತ್ತು ಸಫಾಯ್ ಕರ್ಮಚಾರಿ ಸಮಿತಿಗಳ ವಾರ್ಷಿಕ ವರದಿಗಳನ್ನು ಪ್ರತಿ ವರ್ಷವು ನೀಡುವಂತೆ ಮಾಡಿ, ಅದನ್ನು ಪಾರ್ಲಿಮೆಂಟ್ ಮತ್ತು ರಾಜ್ಯ ವಿಧಾನ ಸಭೆಗಳು ಚರ್ಚಿಸುವುದನ್ನು ಖಡ್ಡಾಯಗೊಳಿಸತಕ್ಕದ್ದು. ಅಲ್ಲದೆ ಈ ವಾರ್ಷಿಕ ವರದಿಗಳು ಮತ್ತು ಅದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಿಯಾವರದಿಗಳನ್ನು ಸಾರ್ವಜನಿಕವಾಗಿ ಪ್ರಕಟಿಸತಕ್ಕದ್ದು.

19. ಸಾರ್ವಜನಿಕ ವಿಭಾಗ ಮತ್ತು ಸರ್ಕಾರಿ ಇಲಾಖೆಗಳಲ್ಲಿರುವಂತೆ ಮೀಸಲಾತಿಯನ್ನು ಖಾಸಗೀ ನಿಗಮಗಳಲ್ಲಿ ಖಡ್ಡಾಯಗೊಳಿಸಿ, ಈ ಬೇರೆ ಬೇರೆ ನಿಗಮಗಳ ಬೇಡಿಕೆಗಳಿಗೆ ಬೇಕಾದ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ದಲಿತರು ಬೆಳೆಸಿಕೊಳ್ಳಲು ಅನುವು ಮಾಡಿಕೊಡತಕ್ಕದ್ದು.

20. ಹಾಗೆಯೇ ನ್ಯಾಯಾಂಗ ಮತ್ತು ರಕ್ಷಣಾ ವಿಭಾಗದ ಎಲ್ಲಾ ಹಂತಗಳಲ್ಲೂ ಎಸ್.ಸಿ./ಎಸ್.ಟಿ. ಮೀಸಲಾತಿ ನೀತಿಯನ್ನು ಜಾರಿಯಾಗಿಸತಕ್ಕದ್ದು. ಅಲ್ಲದೆ ನ್ಯಾಯಾಂಗ ನೇಮಕಾತಿ ವ್ಯವಸ್ಥೆಯನ್ನು ಬಿಟ್ಟು ಸಾರ್ವಜನಿಕವಾಗಿ ಗೊತ್ತಾಗುವಂತೆ ಆಯ್ಕೆ ಪ್ರಕ್ರಿಯೆಗಳು ನಡೆಯತಕ್ಕದ್ದು.

21. ಕಳೆದ 25 ವರ್ಷಗಳಲ್ಲಿ ಮೀಸಲಾತಿ ಮಟ್ಟ ಹೇಗಿದೆ ಎನ್ನುವುದರ ಬಗ್ಗೆ ಇನ್ನೆರಡು ವರ್ಷಗಳಲ್ಲಿ ಒಂದು ಸತ್ಯಾಂಶ ವರದಿಯನ್ನು ಹೊರ ತಂದು, ಅದನ್ನು ಪಾರ್ಲಿಮೆಂಟ್ ಮತ್ತು ರಾಜ್ಯ ವಿಧಾನ ಸಭೆಗಳು ಚರ್ಚಿಸಿ, ತ್ವರಿತ ಗತಿಯಲ್ಲಿ ದಲಿತರಿಗಾಗಿ ಮೀಸಲಿರುವ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ದಲಿತ ಅಭ್ಯರ್ಥಿಗಳಿಂದಲೇ ತುಂಬಿಸತಕ್ಕದ್ದು. ●

ಕನ್ನಡ ಅನುವಾದ : ವಿದ್ಯಾ ಡೊಮಿನಿಕ್

ದಲಿತ ಚರಿತ್ರೆಯ ಆಕರಗಳು

ಆಧುನಿಕ ಭಾರತದ ಜ್ವಲಂತ ಸಮಸ್ಯೆಗಳಿಗೆ ಊಳಿಗಮಾನ್ಯ ಕಾಲದ ಭಾರತದ ಭೂತ ಬಳುವಳಿಯ ಜತೆ, ವಸಾಹತುಶಾಹಿ ಹುಟ್ಟು ಹಾಕಿದ ವಿದೇಶಿ ಆಡಳಿತ ಕ್ರಮ, ರೋಗದ ಜತೆ ವಿಷ ಬೆರೆತಂತಾಯಿತು. ದುಡಿಯುವ ಜನಕೋಟಿಯ ಅಪಾರ ಸಂಕಷ್ಟಗಳ ಛಿದ್ರಗೊಳ್ಳುತ್ತಿದ್ದ ಭ್ರಮೆಗಳ, ಹುಟ್ಟುತ್ತಿದ್ದ ಕನಸುಗಳ ವಿಚಿತ್ರ ಕಲಸು ಮೇಲೋಗರ ಆ ಕಾಲ. ಇಡೀ ಜನ ಸಮೂಹವೇ ವಿಮೋಚನೆಗೊಳ್ಳಬೇಕಾದ ಒತ್ತಡಕ್ಕೆ ಸಿಕ್ಕಿ ಬಿದ್ದಿತ್ತು. ಗುಡ್ಡಗಾಡುಗಳ ಬುಡಕಟ್ಟು ಜನ, ಗ್ರಾಮ ನಗರಗಳ ದಲಿತರು, ಶೋಷಿತರು ಹಳೆಯದನ್ನು ಸಂಪೂರ್ಣ ಬಿಟ್ಟುಕೊಡದೇ ಹೊಸ ಬದುಕಿಗೆ ಹಂಬಲಿಸಿ ಸೋತು ಸುಣ್ಣವಾಗುತ್ತಿದ್ದ ಬಿಕ್ಕಟ್ಟು.

○ ಎಸ್.ಎಸ್. ಹಿರೇಮಠ

ದಕ್ಷಿಣ, ಭಾರತದ ದಲಿತರ ಚರಿತ್ರೆಯನ್ನು ಪುನರ್ರಚಿಸಿಕೊಳ್ಳುವ ಪ್ರಯತ್ನದಲ್ಲಿ ತಕ್ಷಣ ನೆರವಾಗುವ ಆಧಾರಭೂತ ಅಂಶವೆಂದರೆ; ದಲಿತರು ತದ್ವಿರುದ್ಧವಾದ ದ್ವಂದ್ವ ಸ್ಥಿತಿಯನ್ನು ಉದ್ದಕ್ಕೂ ಬಾಳಿಕೊಂಡು ಬಂದಿರುವರೆಂಬುದು. ಅವರ ಕುರಿತ ಮಾಹಿತಿಗಳು ಎರಡು ಅತಿರೇಕಗಳ ನಡುವೆ ತೂಗುಯ್ಯಾಲೆಯಾಡುತ್ತಿರುವುದರಿಂದಾಗಿ ಅವರು ಎಲ್ಲ ಕಾಲಕ್ಕೂ ಗುಲಾಮ ಸ್ಥಿತಿಯಲ್ಲಿದ್ದರೆಂಬುದನ್ನು ಸಂಶಯಿಸಬೇಕಾಗುತ್ತದೆ. ಅವರು ಮೊದಲಿನಿಂದಲೂ ಗುಲಾಮರಾಗಿರುತ್ತಿದ್ದರೆ ಏಕಮುಖಿ ಮಾಹಿತಿ ಮಾತ್ರ ಲಭ್ಯವಾಗಬೇಕಿತ್ತು. ಆದರೆ ಹಾಗಿಲ್ಲ. ಮಡಿ ಮೈಲಿಗೆ, ಪಾವಿತ್ರ್ಯ-ಅಪಾವಿತ್ರ್ಯ, ದೊರೆತನ-ಗುಲಾಮತನ ಈ ವೈರುಧ್ಯಗಳ ದಲಿತರ ಪ್ರಾಕ್ ಚಾರಿತ್ರ್ಯಕಾಲ ಮತ್ತು ಚರಿತ್ರ ಕಾಲಗಳಿಗೆ ಸಂಬಂಧಿಸಿವೆ.

ಅತ್ಯಂತ ನಿಕೃಷ್ಟವಾದ ಹೀನ ವಾಸ್ತವ ಸ್ಥಿತಿ, ಭವ್ಯವಾದ ಚರಿತ್ರೆಯ ಭೂತಕಾಲದ ಸ್ಮೃತಿ, ಇವು ಅಧ್ಯಾಯನಕಾರರನ್ನು ದಿಗ್ಭ್ರಮೆಗೊಳಿಸುತ್ತವೆ. ನಿದರ್ಶನಕ್ಕೆ : ಬ್ರಾಹ್ಮಣರಾದಿಯಾಗಿ ಇತರೆಲ್ಲ ಜಾತಿ ಜನರಿಂದ ನಿರ್ದಿಷ್ಟ ಸಂಖ್ಯೆಯ ಅಡಿ ದೂರದಲ್ಲಿದ್ದು ಅಸ್ಪೃಶ್ಯತೆ ಆಚರಿಸಬೇಕಿದ್ದ ಕೇರಳದ ದಲಿತರು ಹೊಲಗದ್ದೆಗಳಲ್ಲಿ ಅದ್ಯಾವ ಮೈಲಿಗೆಯ ಲವಲೇಶವೂ ಇಲ್ಲದಂತೆ ಅಥವಾ ತದ್ವಿರುದ್ಧವಾಗಿ ಕೃಷಿ ಚಟುವಟಿಕೆಗೆ ಸಂಬಂಧಿಸಿದ್ದ ಎಲ್ಲ ವಿಧಿಯಾಚರಣೆಗಳ ನೇತೃತ್ವವನ್ನು (ಪೂಜಾರಿಕೆ) ವಹಿಸುವುದು ಕಡ್ಡಾಯವಾಗಿತ್ತು. ಊರಲ್ಲಿದ್ದ ಕಟ್ಟುಪಾಡು ಜಮೀನಿನಲ್ಲಿರಲಿಲ್ಲ. ಉತ್ತುವ, ಬಿತ್ತುವ, ಸುಗ್ಗಿ ಮಾಡುವುದೇ ಮೊದಲಾದ ಎಲ್ಲ ಕೆಲಸ ಕಾರ್ಯಗಳನ್ನು ನಿರ್ಮುಕ್ತವಾಗಿ ದಲಿತರು ಪೂರೈಸುವುದು ಇಂದಿಗೂ ಎಲ್ಲೆಡೆ ಕಾಣಬರುವ ಸಾಮಾನ್ಯ ದೃಶ್ಯ. ಇದಕ್ಕೆ ಕಾರಣ ಸ್ಪಷ್ಟ-ಭಾರತದಲ್ಲಿ ಕೃಷಿ ದಲಿತರ ಶೋಧನೆ.

ಚಾರಿತ್ರಿಕ ಬೆಳವಣಿಗೆಯ ಸಹಜ ಮತ್ತು ಅನಿವಾರ್ಯ ಪ್ರಕ್ರಿಯೆಯಲ್ಲಿ ಇಲ್ಲಿ ಗುಲಾಮಗಿರಿ ಹುಟ್ಟಲಿಲ್ಲ. ಭವ್ಯವಾಗಿ ಬಾಳಿದ, ಆಳಿದ ಸ್ಥಳೀಯರನ್ನು, ಬಲಾತ್ಕಾರವಾಗಿ ಗುಲಾಮರನ್ನಾಗಿ ಮಾಡಲಾಯಿತು.

ಜಮೀನುಗಳ ಮೊಟ್ಟ ಮೊದಲ ಉಳುಮೆಗಾರರು ಮತ್ತು ಆ ಕಾರಣದಿಂದ ಭೂ ಒಡೆಯರಾಗಿದ್ದ, ಬುಡಕಟ್ಟು ರಾಜ್ಯಗಳನ್ನು ಕಟ್ಟಿ ಆಡಳಿತ ಮಾಡುತ್ತಿದ್ದ ಚರಿತ್ರಪೂರ್ವ ಕಾಲದ ದಲಿತರನ್ನು ಗುಲಾಮರನ್ನಾಗಿ ಪರಿವರ್ತಿಸಿದ ಸಂಕ್ರಮಣ ಘಟ್ಟದಿಂದಾಗಿಯೇ ಚರಿತ್ರಯುಗ ಪ್ರಾರಂಭವಾಯಿತು.

ಈ ಎಲ್ಲ ನೆನಪುಗಳು ದಲಿತರ ವೈರಿಗಳಾದ ವೈದಿಕರ ಪುರಾಣ, ಮಹಾಕಾವ್ಯಾದಿಗಳಲ್ಲಿ, ಕತೆ, ಐತಿಹ್ಯ, ಮಿಥ್‌ಗಳ ರೂಪದಲ್ಲಿ ದೊರಕುತ್ತಿರುವುದು ವಿಪರ್ಯಾಸ. ಬಹು ವಿಸ್ತಾರವಾದ ಪುರಾಣಗಳು ಮತ್ತು ರಾಷ್ಟ್ರೀಯ ಕಾವ್ಯಾದಿಗಳು ದಲಿತರನ್ನು ರಾಕ್ಷಸರೆಂದು ಸಂಬೋಧಿಸಿರುವ ಸಾಧ್ಯತೆಯನ್ನು ನಿರಾಕರಿಸುವ ಬಲವಾದ ಸಂಗತಿಗಳು ತೀರ ಕಡಿಮೆ.

ಚರಿತ್ರೆಯ ರಚನೆಗೆ ಪುರಾಣ, ಕಾವ್ಯ ಕಥೆಗಳು ವಿಶ್ವಾಸಾರ್ಹ ಆಕರವಲ್ಲ ಎಂಬುದು ನಿಜವೇ. ಆದರೆ ಬೇರಾವ ಅಧಿಕೃತ ಮೂಲಗಳಿಲ್ಲದಿದ್ದಾಗ ಸತ್ಯಗಳನ್ನು ಪರೋಕ್ಷವಾಗಿ ಸೂಚಿಸುವ, ವಾಸ್ತವಗಳನ್ನು ಧ್ವನಿಸುವ ಅವನ್ನು ಕೈ ಬಿಡುವುದೂ ಜಾಣತನವಲ್ಲ.

ಈ ಲೇಖನದಲ್ಲಿ 20ನೇ ಶತಮಾನದ ಆದಿಭಾಗದಲ್ಲಿ ಈ ಥರ್‌ಸ್ಟನ್ ಕೇರಳದ ದಲಿತರ ಕುರಿತು ತಲೆ ಹಾಕಿರುವ ಮಾಹಿತಿಗಳು ನಮ್ಮ ಗ್ರಹಿಕೆಗಳನ್ನು ಹೇಗೆ ಸಮರ್ಥಿಸಿವೆ ಎಂಬುದನ್ನು ಚರ್ಚಿಸಲಿದ್ದೇನೆ.

ಇದಕ್ಕೂ ಮೊದಲು ಈ ಥರ್‌ಸ್ಟನ್ ಯಾವ ಚಾರಿತ್ರಿಕ ಹಿನ್ನೆಲೆಯಲ್ಲಿ ತನ್ನ "ಕಾಸ್ಟ್ ಎಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ"ದ ("ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು") 7 ಸಂಪುಟಗಳನ್ನು ರಚಿಸಲು ತೊಡಗಿಕೊಂಡ ಎಂಬುದರ ಬಗ್ಗೆ ಕೆಲವು ಸಂಗತಿಗಳು-

ಆಧುನಿಕ ಭಾರತದ ಜ್ವಲಂತ ಸಮಸ್ಯೆಗಳಿಗೆ ಊಳಿಗಮಾನ್ಯ ಕಾಲದ ಭಾರತದ ಭೂತ ಬಳುವಳಿಯ ಜತೆ, ವಸಾಹತುಶಾಹಿ ಹುಟ್ಟು ಹಾಕಿದ ವಿದೇಶಿ ಆಡಳಿತ ಕ್ರಮ, ರೋಗದ ಜತೆ ವಿಷ ಬೆರೆತಂತಾಯಿತು. ದುಡಿಯುವ ಜನಕೋಟಿಯ ಅಪಾರ ಸಂಕಷ್ಟಗಳ ಛಿದ್ರಗೊಳ್ಳುತ್ತಿದ್ದ ಭ್ರಮೆಗಳ, ಹುಟ್ಟುತ್ತಿದ್ದ ಕನಸುಗಳ ವಿಚಿತ್ರ ಕಲಸು ಮೇಲೋಗರ ಆ ಕಾಲ. ಇಡೀ ಜನ ಸಮೂಹವೇ ವಿಮೋಚನೆಗೊಳ್ಳಬೇಕಾದ ಒತ್ತಡಕ್ಕೆ ಸಿಕ್ಕಿ ಬಿದ್ದಿತ್ತು. ಗುಡ್ಡಗಾಡುಗಳ ಬುಡಕಟ್ಟು ಜನ, ಗ್ರಾಮ ನಗರಗಳ ದಲಿತರು, ಶೋಷಿತರು ಹಳೆಯದನ್ನು ಸಂಪೂರ್ಣ ಬಿಟ್ಟುಕೊಡದೇ ಹೊಸ ಬದುಕಿಗೆ ಹಂಬಲಿಸಿ ಸೋತು ಸುಣ್ಣವಾಗುತ್ತಿದ್ದ ಬಿಕ್ಕಟ್ಟು.

ಯಾವ ದಾರಿ ಸೂಕ್ತ? ಗಾಂಧಿಯದೋ? ಅಂಬೇಡ್ಕರರದ್ದೋ? ಪೆರಿಯಾರರದ್ದೋ? ಕಮ್ಯುನಿಸ್ಟರದೋ? ಬಹುಮುಖಿ ಭಾಷೆ, ಸಂಸ್ಕೃತಿ, ಪ್ರದೇಶ, ಸಮೂಹಗಳಿಂದ ಕೂಡಿದ ಭಾರತದಲ್ಲಿ ಮೊಟ್ಟ ಮೊದಲ ಐಕ್ಯತೆ ಹುಟ್ಟುವ ಅವಕಾಶವಿದ್ದರೂ ಅಸಾಧ್ಯವಿದ್ದ ಸ್ಥಿತಿ. ವೈವಿಧ್ಯತೆಯೇ ಇದಕ್ಕಿದ್ದ ಪ್ರಬಲ ಕಾರಣ. ಒಂದೆಡೆ

ಈ ವೈವಿಧ್ಯತೆಯನ್ನು ಆಳವಾಗಿ ಅರಿತು ಶಾಶ್ವತವಾಗಿ ತಳವೂರಬೇಕೆಂಬ ಹುನ್ನಾರಿನ ವಸಾಹತು ಆಡಳಿತಶಾಹಿ; ಇನ್ನೊಂದೆಡೆ ಎಷ್ಟೇ ವೈವಿಧ್ಯತೆಯಲ್ಲೂ ಐಕ್ಯತೆಯನ್ನು ಕಂಡು, ಕಾಣಿಸಿ ಪ್ರಬಲ ಪ್ರತಿರೋಧವನ್ನು ಒಡ್ಡಬೇಕೆನ್ನುವ ರಾಷ್ಟ್ರೀಯವಾದಿಗಳು.

ಸಂಪ್ರದಾಯಿಕ ಭಾರತೀಯ ಸಮಾಜದ ಒಳ ರೋಗಗಳನ್ನು ಬಳಸಿಕೊಂಡು, ಉದ್ಧಾರಕ ಪಾತ್ರವಾದ ಬಯಸಿದ ವಸಾಹತುಶಾಹಿ ಸ್ಥಳೀಯ ಸಮೂಹಗಳನ್ನು ಅರಿತುಕೊಳ್ಳಲೆತ್ನಿಸುತ್ತಿತ್ತು. 20ನೇ ಶತಮಾನದ ಆದಿ ಭಾಗದಲ್ಲಿ ಈ ಉದ್ದೇಶಕ್ಕಾಗಿ ಬ್ರಿಟೀಷ್ ಸರಕಾರ ಎಥ್ನೊ ಗ್ರಾಫಿಕ್ ಸರ್ವೇಗಾಗಿ ಪ್ರತಿ ಪ್ರಾಂತಕ್ಕೆ ಮಾನವ ಕುಲ ಶಾಸ್ತ್ರೀಯ ಅಧೀಕ್ಷಕರನ್ನು ನೇಮಿಸಿತು. ದಕ್ಷಿಣ ಭಾರತದ ಮದ್ರಾಸ್ ಪ್ರೆಸಿಡೆನ್ಸಿಗೆ ಹಾಗೆ ನೇಮಕಗೊಂಡವ ಈಥರ್‌ಸ್ಟನ್. ಈತನ ವಿಶೇಷ ಪ್ರಯತ್ನಶೀಲತೆ ಮತ್ತು ವೈಯಕ್ತಿಕ ಅಭಿರುಚಿಯಿಂದಾಗಿ ದಕ್ಷಿಣ ಭಾರತದ ಜಾತಿ ಬುಡಕಟ್ಟುಗಳ ಹುಟ್ಟಿನ ಕತೆ, ಐತಿಹ್ಯ, ಮದುವೆ, ಜನನ, ಸಾವಿನ ಸಂಸ್ಕಾರ ಸಂಬಂಧಿ ವಿಷಯಗಳು, ಹಬ್ಬ ಜಾತ್ರೆ ಮುಂತಾದ ವಿಶೇಷಾಂಕಗಳನ್ನು ಕಲೆ ಹಾಕುವ ಮಹತ್ವದ ಕೆಲಸ ಪೂರೈಸಿದ. ಹಾಗಾಗಿ ಆತನ 7 ಸಂಪುಟಗಳು ಇಂದಿಗೂ ಅಧಿಕೃತ ಆಕರ ಗ್ರಂಥ.

ಇಂದು ವಿಭಿನ್ನ ರೀತಿಯಿಂದ, ಸಾಕಷ್ಟು ವ್ಯಾಪಕವಾಗಿ ಮತ್ತು ಆಳವಾಗಿ ಅಧ್ಯಯನ-ಮಾಡುವ ಕ್ರಮ ಬೆಳೆದಿದ್ದರೂ ಅದಕ್ಕೆ ಅಡಿಪಾಯ ಹಾಕಿದ ಕೆಲಸ ಥರ್‌ಸ್ಟನ್‌ನದಾಯಿತು.

ಆತ ಸಂಗ್ರಹಿಸಿರುವ ದಲಿತರ ಕುರಿತ ಮಾಹಿತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ದಲಿತರ ಇತಿಹಾಸ ರಚನೆಗೆ ಬೇಕಾದ ಹಲವಾರು ಮೂಲಾಂಶಗಳು ಅಲ್ಲಿ ಲಭಿಸುತ್ತವೆ.

ಪೊಲಿ : ಕೇರಳದ ದಲಿತರು ಚೇರ್‌ಮಾನ್‌ರು. "ಚೆರ್‌ಮನ್ ಅಥವಾ ಚೆರು ಮಕ್ಕಳು ಕೃಷಿಕೂಲಿಕಾರಾರು, ಅಸ್ಪೃಶ್ಯರು ಜಮೀನುಗಳಿಗೆ ಬಿಡಲಾಗದಂತೆ ಅಂಟಿಕೊಂಡಿರುವ ಉಳುಮೆಗಾರರು".

"1891ರ ಮದ್ರಾಸ್ ಗಣತಿ ವರದಿಯಲ್ಲಿ ಇವರಿಗೆ ದಕ್ಷಿಣ ಮಲಬಾರಿನಲ್ಲಿ 'ಚೆರುಮನ್; ಉತ್ತರ ಮಲಬಾರಿನಲ್ಲಿ 'ಪುಲಯನ್' ಎಂಬ ಹೆಸರಿರುವುದಾಗಿ ದಾಖಲಾಗಿದೆ. ದಕ್ಷಿಣ ಮಲಬಾರಿನಲ್ಲಿ 30 ಸಾವಿರದಷ್ಟಿರುವ ಪುಲಚೆರುಮಾನರದು ದೊಡ್ಡ ಉಪವಿಭಾಗ (1900) ಚೆರುಮ ಅಥವಾ ಚೆರು ಮಕ್ಕಳ್ ಎಂದರೆ ಭೂಮಿಯ ಮಕ್ಕಳು, ಸಣ್ಣ ಮಕ್ಕಳು ಎಂಬರ್ಥವೂ ಇದೆ 'ಚೆರಿಯ ಮಕ್ಕಳ್‌ಗೆ".

ಥರ್‌ಸ್ಟನ್ ಲೇಖನ ಪ್ರಾರಂಭದ ಈ ಮಾಹಿತಿಯಿಂದ ನಮಗೆ ತೋಚುವುದೇನೆಂದರೆ ಕೇರಳದ ಉತ್ತರ ಭಾಗ ಕರ್ನಾಟಕದ ಕರಾವಳಿಗೆ ಅಂಟಿಕೊಂಡಿರುವುದರಿಂದ ಕನ್ನಡ 'ಪೊಲೆಯ' ಪದದ ಪ್ರಭಾವದಿಂದಾಗಿ ಅಲ್ಲಿ 'ಪುಲಯ'-ಎಂಬ ಮಲೆಯಾಳಿ ಪದ ಸೃಷ್ಟಿಗೊಂಡಿರುವ ಸಾಧ್ಯತೆ.

'ಪುಲ'ಕ್ಕೆ ಮೈಲಿಗೆ ಎಂಬರ್ಥವೂ ಇದೆಯಂತೆ. ಇದರಿಂದ 'ಪುಲಯ' ಹುಟ್ಟಿರಬೇಕೆಂದು ಕೂಡ ಥರ್‌ಸ್ಟನ್ ಸೂಚಿಸುತ್ತಾನೆ. ಕನ್ನಡದ ಹೊಲೆಯರ ಕುರಿತು

20ನೇ ಶತಮಾನದ ಆದಿ ಭಾಗದಲ್ಲಿ ಈ ಉದ್ದೇಶಕ್ಕಾಗಿ ಬ್ರಿಟೀಷ್ ಸರಕಾರ ಎಥ್ನೊ ಗ್ರಾಫಿಕ್ ಸರ್ವೇಗಾಗಿ ಪ್ರತಿ ಪ್ರಾಂತಕ್ಕೆ ಮಾನವ ಕುಲ ಶಾಸ್ತ್ರೀಯ ಅಧೀಕ್ಷಕರನ್ನು ನೇಮಿಸಿತು. ದಕ್ಷಿಣ ಭಾರತದ ಮದ್ರಾಸ್ ಪ್ರೆಸಿಡೆನ್ಸಿಗೆ ಹಾಗೆ ನೇಮಕಗೊಂಡವ ಈಥರ್‌ಸ್ಟನ್. ಈತನ ವಿಶೇಷ ಪ್ರಯತ್ನಶೀಲತೆ ಮತ್ತು ವೈಯಕ್ತಿಕ ಅಭಿರುಚಿಯಿಂದಾಗಿ ದಕ್ಷಿಣ ಭಾರತದ ಜಾತಿ ಬುಡಕಟ್ಟುಗಳ ಹುಟ್ಟಿನ ಕತೆ, ಐತಿಹ್ಯ, ಮದುವೆ, ಜನನ, ಸಾವಿನ ಸಂಸ್ಕಾರ ಸಂಬಂಧಿ ವಿಷಯಗಳು, ಹಬ್ಬ ಜಾತ್ರೆ ಮುಂತಾದ ವಿಶೇಷಾಂಕಗಳನ್ನು ಕಲೆ ಹಾಕುವ ಮಹತ್ವದ ಕೆಲಸ ಪೂರೈಸಿದ.

ಹೇಳುವಾಗಲೂ ಕೂಡ ಥರ್‌ಸ್ಟನ್ ಇಂಥದೇ ವಿವರ ನೀಡುತ್ತಾನೆ. "ಮೈಲಿಗೆ" ಎಂಬುದು ದಲಿತರನ್ನು ಉದ್ದೇಶಪೂರ್ವಕವಾಗಿ ಕೀಳ್ಗೆಯ್ಯಲು ಮಾಡಿದ ಕುತಂತ್ರದಿಂದಾಗಿ ಹುಟ್ಟಿದ ಮತ್ತು ನೆಲೆಗೊಂಡ ಅರ್ಥ.

ನಾನು ಬೇರೆಡೆ ವಿವರವಾಗಿ ಚರ್ಚಿಸಿರುವುದಂತೆ (ಕರ್ನಾಟಕ ದಲಿತ ಸಂಸ್ಕೃತಿ-ಪರಂಪರೆ" ಭಾಗ 2- "ಜಾತ್ರೆಗಳು") 'ಪೊಲಿ ಎಂಬ ತುಂಬ ಮಹತ್ವಪೂರ್ಣ ಪರಿಭಾಷೆಯಿಂದ (ಹುಲಿಗ್ಯೊ) ಪೊಲೆಯ, ಪುಲಯನ್ ಪರದಗಳು ಉಗಮಿಸಿವೆ. ಮುಂಡಾ-ದ್ರಾವಿಡ ಸಂಸ್ಕೃತಿಯ ಅತ್ಯಂತ ಘನವಾದ ವಿಚಾರ 'ಪೊಲಿ'.

ದೊರೆಗಳಾಗಿದ್ದವರು: 1906ರಲ್ಲಿ ಎಲ್.ಕೆ. ಅನಂತ ಕೃಷ್ಣ ಅಯ್ಯರ್ ಬರೆದರಂದೆ ಥರ್‌ಸ್ಟನ್ ಹೇಳುತ್ತಾನೆ. ಅದು ಈ ದೇಶದ ಅನೇಕ ಭಾಗಗಳಲ್ಲಿ ಪುಲಯರ ಹಿಡಿತವಿತ್ತು. ಅಯಿಕ್ಕರ ಯಜಮಾನನ ಪೂರ್ವಜರು ಪುಲಯರಾಜರು. ಉತ್ತರ ತ್ರಾವಣಕೊರದ ಪುಲಯರು ಈಗಲೂ ಆಯಿಕ್ಕರ ಯಜಮಾನನಿಗೆ ತಮ್ಮ ನೇತಾರನೆಂದು ಗೌರವ ಸಲ್ಲಿಸುತ್ತಾರೆ. ಕುನ್ನೇಟನಾಡ ತಾಲ್ಲೂಕಿನ "ಆಯಿಕ್ಕರ ನಾಡು" ಈ ಕತೆಗೆ ಬೆಂಬಲವಾಗಿದೆ.

ತ್ರಿವೇಂದ್ರಂನ ವೆಲ್ಲಿ ಸರೋವರದ ಸಮೀಪ "ಪುಲಯನಾರ್ ಕೊಟ್ಟ" ಎಂಬ ಬೆಟ್ಟ ಪ್ರದೇಶದಲ್ಲಿ ಹಿಂದೊಮ್ಮೆ ಪುಲಯ ಅರಸ ಆಳಿದ್ದನೆಂಬುದು ಐತಿಹ್ಯ. ಇತರ ಸ್ಥಳಗಳಲ್ಲೂ ಪುಲಯ ಅರಸರ ಪ್ರಾಬಲ್ಯವಿತ್ತು. ತ್ರಿವೇಂದ್ರಂನ ಪದ್ಮನಾಭ ದೇವರು ಪುಲಯನ್‌ರಿಗೆ ನಿಕಟವಾಗಿ ಸಂಬಂಧಿಸಿದ್ದು.

ತ್ರಾವಣಕೋರ ಕೋಟೆಯ ಹತ್ತಿರ ಹೊಲೆಯ ಅರಸನ ಅರಮನೆಯಿತ್ತೆಂದು ಈ ಭಾಗದ ಪುಲಯರ ದೃಢವಾದ ನಂಬಿಕೆ.

ಲೊಗನ್‌ರ ಪ್ರಕಾರ ಮಲಬಾರ ಕರಾವಳಿ ಹಿಂದೊಮ್ಮೆ ಬೇಡರ ರಾಜ್ಯ. (ಬೇರನಾಡು) 'ಕೇರಳ' ಎಂಬ ಹೆಸರೇ ಇದರಿಂದ ಬಂದದ್ದು. ಕಾಲಿಕತ್‌ನ ಆಗ್ನೇಯಕ್ಕಿರುವ ಪ್ರದೇಶಕ್ಕೆ ಚೆರುನಾಡೆಂದು ಹೆಸರು ಉಳಿದಿದೆ. 'ಚೇರುಮಾನ್ ಪೆರುಮಾಳ್' ಎಂಬುದು ಮಲಬಾರಿನ ಚಕ್ರವರ್ತಿಗೆ ಇದ್ದ ಹೆಸರೆಂಬುದನ್ನು ಕರಾವಳಿಯ ಚಿಕ್ಕ ಮಕ್ಕಳೂ ಬಲ್ಲರು. ಇದು ಬಿರುದು 'ಚೇರ ಜನರ ನೇತಾರ' ಎಂದಿದರರ್ಥ.

ಈ ಎಲ್ಲ ವಿವರಗಳು ಚೆರುಮಾನರ ಭೂತಕಾಲದ ಭೂಮಿ ಚರಿತ್ರೆಯತ್ತ ಬೆರಳು ತೋರುತ್ತಿವೆ. ಮಹಾರದಿಂದಾಗಿ (ಹೊಲೆಯರು) 'ಮಹಾರಾಷ್ಟ್ರ' ಹೆಸರಾಗಿರುವಂತೆ ಚೆರುಮಾನರಿಂದಾಗಿ 'ಕೇರಳ' ಎಂಬ ಹೆಸರಾಯಿತೆಂದು ಹೇಳುವುದು ಊಹೆಯೇನಲ್ಲ.

ಕರ್ನಾಟಕದ ಕರಾವಳಿ ಭಾಗದಲ್ಲೂ ಈ ಬಗೆಯ ಐತಿಹ್ಯ ಮತ್ತು ಚರಿತ್ರಾಂಶಗಳು ದಲಿತರಿಗೆ ಸಂಬಂಧಿಸಿ ದೊರಕುವುದನ್ನು ಇಲ್ಲಿಯ ಚರ್ಚೆಗೆ ಪೂರಕವಾಗಿ ನೆನಪಿಸಿಕೊಳ್ಳಲೇಬೇಕು.

ಹಾಗಿದ್ದರೆ ದಲಿತರು ಯಾವಾಗ ರಾಜರಾಗಿ ಆಳಿದರು? ಆ ಕಾಲದ ಸಾಮಾಜಿಕಾರ್ಥಿಕ ಪರಿಸ್ಥಿತಿ ಹೇಗಿತ್ತು? ಅಂಥ ಉನ್ನತಿಕೆ ಕುಸಿದುಹೋಗಿ ಗುಲಾಮಗಿರಿ ಬರಲು ಕಾರಣಗಳೇನು?

ಉತ್ತರಕ್ಕಾಗಿ ಕಾದು ನಿಂತಿರುವ ಜ್ವಲಂತ ಪ್ರಶ್ನೆಗಳಿವು. ಭೂಮಿಯ ನಿಜ ಹಕ್ಕುದಾರರು : ಪುಲಯದಲ್ಲಿ ಒಂದು ಅದ್ಭುತವಾದ ಕತೆಯಿದೆ. "ಶಿವ ಪುಲಯರಿಗೆ ಕೊಡಲಿ ಸಲಾಕಿಗಳನ್ನು ಕೊಟ್ಟ. ಕಾಡು ಸವರಿ ಭೂಮಿ ಮಾಡಿ ಬೇಸಾಯಗಾರರಾಗುವಂತೆ ವರ ನೀಡಿದ. ಇತರ ಜನ ಈ ಪ್ರದೇಶವನ್ನು ಆಕ್ರಮಿಸಿದಾಗ ಅವರ ಕೈಕೆಳಗೆ ಇವರು ದುಡಿಮೆಗಾರ ಗುಲಾಮರಾಗುವ ಸ್ಥಿತಿಯುಂಟಾಯಿತು".

ಅಸ್ಪೃಶ್ಯರೆಂದರೆ ಕನ್ನಡ ಕರಾವಳಿ ಪ್ರದೇಶದ ಜಾನಪದವನ್ನು ಅಧ್ಯಯನ ಮಾಡಿದ ಹಲವಾರು ವಿದ್ವಾಂಸರು ಆ ಪ್ರದೇಶದ ದಲಿತರ ಬಗ್ಗೆ ಇದೇ ಅಭಿಪ್ರಾಯವನ್ನು ಪ್ರಕಟಪಡಿಸಿರುವುದು.

ಭೂಮಿಯ ಮೊಟ್ಟ ಮೊದಲು ಉಳುಮೆಗಾರರು ಪುಲಯನ್ನರೆಂಬ ಸೂಚನೆ ನೀಡುತ್ತದೆ ಮೇಲಿನ ಕತೆ. ಈ ರೀತಿಯ ಕತೆಯನ್ನು ಕೇರಳದ ಬೇರೆ ಬುಡಕಟ್ಟು ಸಮುದಾಯಗಳು ಕೂಡ ಹೇಳುವುದನ್ನು ಥರ್‌ಸ್ಟನ್‌ನಲ್ಲೇ ಕಾಣುತ್ತೇವೆ. ಉದಾಹರಣೆಗೆ - ದಕ್ಷಿಣ ತ್ರಾವಣಕೋರಿನ ಗುಡ್ಡಗಾಡಿನಲ್ಲಿ ಕುಮ್ರಿ ಬೇಸಾಯ ಮಾಡಿಕೊಂಡಿರುವ 'ಕಾನಿಕರ್' ಎಂಬ ಆದಿವಾಸಿಗಳು ಹೊಲೆಯರೇ ಮೊದಲ ಕೃಷಿಕರೆಂಬ ತುಂಬ ಸುಂದರವಾದ ರೂಪಕ ಕತೆಯೊಂದನ್ನು ಹೇಳುತ್ತಾರೆ.

ಹೊಸದಾಗಿ ನೇಗಿಲು ಹೂಡುವ ಸಂದರ್ಭದಲ್ಲಿ ಜಮೀನಿನ ಮಾಲಿಕ, ರೈತ ಮತ್ತು ಚೆರುಮಾನರು ಸೇರಿ ಮಾಡುವ ವಿಧಿಯಾಚರಣೆಯ ವಿವರವನ್ನು ಕೊಡುತ್ತಾನೆ ಥರ್‌ಸ್ಟನ್. ಅಲ್ಲಿ ಚೆರುಮಾನನ ಪಾತ್ರ ಪ್ರಧಾನವಾದುದು. ಬೆಳೆ ಸಮೃದ್ಧವಾಗಿ ಬರಲಿ ಎಂಬ ಆಶಯದಿಂದ ಮಾಡಲಾಗುವ ಬೇಸಾಯದ ಬೇರೆ ಬೇರೆ ಸಂದರ್ಭಗಳ ವಿಧಿಯಾಚರಣೆಗಳಲ್ಲೆಲ್ಲ ಚೆರುಮಾನರ ಪಾತ್ರ ಮುಖ್ಯ. ಉದಾಹರಣೆಗೆ ಬತ್ತದ ನಾಟಿ ಮುಗಿದ ನಂತರ ಪಶು ಮತ್ತು

(40ನೇ ಪುಟಕ್ಕೆ)



ಕ್ಷೀರ ಸಾಗರದಲ್ಲಿ ವಾಸುಕಿ ಶಯನನಾಗಿ ನಾರಾಯಣ
ಆತನ ಕಾಲನ್ನು ಒತ್ತುತ್ತಾ ಪಾದದ ಬಳಿ ಲಕ್ಷ್ಮಿ ಕುಳಿತಿದ್ದಾಳೆ.
ವಾಮನನಾಗಿ ಅವತಾರ ವೆತ್ತಿದ ವಿಷ್ಣು ಬಲೆಯಲ್ಲಿ ಬೇಡಿದ ಮೂರು ಪಾದದ ಜಾಗ
ಒಂದನೇ ಪಾದದಲ್ಲಿ ಭೂಮಂಡವನ್ನಳೆದ ವಾಮನ
ಎರಡನೇ ಪಾದದಲ್ಲಿ ಆಗಸವನ್ನು ಅಳೆದ
ಮೂರನೇ ಪಾದಕ್ಕೆ ಜಾಗವೆಲ್ಲಿ, ವಾಮನನ ಪ್ರಶ್ನೆ
ತನ್ನ ಶಿರದ ಮೇಲೆ ಪವಿತ್ರಪಾದವಿಟ್ಟು ಅನುಗ್ರಹಿಸೆಂದ ಬಲಿ
ವಾಮನನ ಪವಿತ್ರಪಾದದಿಂದ ಬಲಿಗೆ ಮುಕ್ತಿ

ರಾಮಲಕ್ಷ್ಮಣರನ್ನು ಒಡಗೂಡಿ ಮಿಥಿಲೆಯತ್ತ ವಿಶ್ವಾಮಿತ್ರನ ಪ್ರಯಾಣ
ಮಾರ್ಗ ಮಧ್ಯದಲ್ಲಿ ರಾಮನ ಪಾದ ಬಂಡೆಗೆ ಸ್ಪರ್ಶಿಸಿದಾಗ ಅಹಲ್ಯೆ ಪ್ರತ್ಯಕ್ಷ
ಪತಿಗೌತಮನಿಂದ ಕಲ್ಲಾಗುವಂತೆ ಶಪಿಸಲ್ಪಟ್ಟಿದ್ದ ಅಹಲ್ಯೆಗೆ
ರಾಮನ ಪವಿತ್ರ ಪಾದಸ್ಪರ್ಶದಿಂದ ಶಾಪ ವಿಮುಕ್ತಿ

ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೊರಟ ಶ್ರೀರಾಮ
ಅಣ್ಣನಿಲ್ಲದ ರಾಜ್ಯಕ್ಕೆ ಒಡೆಯನಾಗಲು ಒಪ್ಪದ ಭರತ
ರಾಮನಿಂದ ಬೇಡಿ ತಂದದ್ದು ಪವಿತ್ರ ಪಾದುಕೆ
ಸಿಂಹಾಸನದಲ್ಲಿ ಪಾದಕ್ಕೆ ಪೂಜೆ ರಾಜ್ಯಭಾರ
ವಿಷಕಾರುತ್ತ ನದಿಯನ್ನು ಅಲ್ಲೋಲ ಕಲ್ಲೋಲವಾಗಿಸಿದ್ದ ಕಾಳಿಂಗಸರ್ಪ
ಬಾಲಕೃಷ್ಣ ಪುಟ್ಟಪಾದದಿಂದ ನೃತ್ಯವಾಡಿದ ಹಾವಿನ ಹೆಡೆಯ ಮೇಲೆ
ಕಾಳಿಂಗನ ಗರ್ವಭಂಗ
ಶ್ರೀಕೃಷ್ಣನ ಅನುಗ್ರಹ ಬಯಸಿ ಬಂದ ದುರ್ಯೋಧನ ಕುಳಿತಿದ್ದು ಶಿರದಬಳಿ
ಪಾರ್ಥನು ಪಾದದ ಬಳಿ
ಶಿರದ ಬಳಿ ಕುಳಿತ ಸುಯೋಧನ ಅಂತ್ಯ ಕಂಡ
ಪಾದದ ಬಳಿ ಕುಳಿತ ಅರ್ಜುನ ಧನ್ಯನಾದ

ಆಶ್ರಮದಲ್ಲಿ ಗುರುಗಳ ಪಾದಕ್ಕೆ ಸಾಷ್ಟಾಂಗವೆರಗುತ್ತಾರೆ
ಶಿಷ್ಯರು ಅಂತೆಯೇ ನಾವು ಸಹ

ಯಾಕೆ ಇಷ್ಟೊಂದು ಪಾದ ಪುರಾಣ ಹೇಳತೊಡಗಿದೆ.
ಇದಕ್ಕೂ ಮೊದಲು ತಿಳಿಯಬೇಕಾದದ್ದು ಚಾತುರ್ವರ್ಣದ ರಹಸ್ಯ
ಬ್ರಹ್ಮನ ಮುಖ ಕಮಲದಿಂದ ಉದ್ಭವಿಸಿದವರು ಬ್ರಾಹ್ಮಣರಂತೆ
ಭುಜದಿಂದ ಕ್ಷತ್ರಿಯರು, ತೊಡೆಯಿಂದ ವೈಶ್ಯರು
ಪಾದದಿಂದ ಹುಟ್ಟಿದವರು ಶೂದ್ರರೆ ಅಂದರೆ
ಪಾದ ಎಷ್ಟೊಂದು ಪವಿತ್ರವಾಗಿರಬೇಕಿತ್ತಲ್ಲವೇ? ಇಲ್ಲ
ಶಿರೋದ್ಭವರು ತಮ್ಮನ್ನು ಭೂಸುರರು ಎನ್ನುತ್ತಾ ದೇಹಕ್ಕೆ
ಆಧಾರ ಪ್ರಾಯವಾಗಿದ್ದ ಪಾದವನ್ನು ಕೆಳಕ್ಕೆ ತಳ್ಳಿದರು
ಪಾದದಲ್ಲಿ ಉದ್ಭವಿಸಿದರೆಂದು ಶೂದ್ರರನ್ನು ಅಸ್ಪೃಶ್ಯರೆಂದು
ಹಸು, ನಾಯಿಗಳನ್ನು ಮುದ್ದಿಸಿದವರು, ಮನುಷ್ಯರನ್ನು
ದೂರವಿಟ್ಟರು.

ಸ್ಥಾನ ಮಾನ ವೇದ ಮಂತ್ರಗಳು ನಿಷಿದ್ಧವಾಯಿತು ಪಾದಕ್ಕೆ
ದೇಹದ ಒಂದು ಭಾಗ ಸಂಪೂರ್ಣ ಕಡೆಗಣಿಸಲ್ಪಟ್ಟಿತು,
ಪಟ್ಟಭದ್ರರ ಹಿತಾಸಕ್ತಿಗೆ.

ಇಂದೂ ಕೂಡಾ ಮಹಾತ್ಮರು ನಡೆದ ಹಾದಿ ತುಳಿದ ನೆಲ ಪವಿತ್ರ,
ಅವರ ಪಾದಕ್ಕೆ ನಮನ, ಪೂಜೆ ಪುನಸ್ಕಾರ.
ಪಾದದೂಳಿಯಿಂದ ನಮ್ಮ ಮನೆ ಪವಿತ್ರವಾಯಿತೆಂದು ಪಾದವನ್ನು
ಕೊಂಡಾಡುತ್ತೇವೆ.
ಮಾಡಿದ ತಪ್ಪಿಗೆ ಕ್ಷಮೆ ಯಾಚಿಸಲು ಪಾದವನ್ನು ಹಿಡಿದುಕೊಳ್ಳುತ್ತೇವೆ.
ಪಾದ ಪುರಾಣಗಮನಿಸಿದಾಗ, ಪಾದದ ಪವಿತ್ರತೆ ಮತ್ತು ಶಕ್ತಿಯ
ಅರಿವಾಗುತ್ತದೆ. ಮನುಷ್ಯನಿಗೆ ಶಿರ ಎಷ್ಟು ಮುಖ್ಯವೋ ಪಾದವೂ
ಅಷ್ಟೇ ಮುಖ್ಯ. ಚಲನಶೀಲನಾಗಲು ಪಾದ ಅತ್ಯಗತ್ಯ. ಪಾದವಿಲ್ಲದ
ಮನುಷ್ಯ ಬಂಡೆಯಂತೆ, ನಿಶ್ಚಲ ಹಾಗಿದ್ದರೂ ಏಕೆ ಪಾದಕ್ಕೆ ಬೆಲೆಯಿಲ್ಲ.

ಪಾದವನ್ನು ಪವಿತ್ರವೆಂದು ಹೊಗಳುತ್ತಾ, ಪೂಜಿಸುತ್ತಾ ಬಂದ
ಜನ. ಪಾದಜರೆಂದು ಶೂದ್ರರನ್ನು ಏಕೆ ಅತ್ಯಂತ ನಿಕೃಷ್ಟವಾಗಿ
ನೋಡತೊಡಗಿದರು. ಏಕೆ ಅಜ್ಞಾನದಲ್ಲಿಟ್ಟರು. ಏಕೆ ಸುಲಿಯ
ತೊಡಗಿದರು. ಇದು ದೇಹದ ಉಳಿದ ಭಾಗದ ಸಂಚೆ? ಪಿತೂರಿಯೇ? ಉತ್ತರ ಸುಲಭವಲ್ಲ,
ಘಟನೆ ವಾಸ್ತವ. ಅಜ್ಞಾನದಿಂದ ಅರಿಯದಿದ್ದ
ಘಟನೆ. ಜ್ಞಾನದ ಅರಿವಿನಿಂದ ತಿಳಿದಾಗ ಕ್ರಾಂತಿ ಸಾಧ್ಯ, ಆದರೆ ಅರಿವಿಗೆ
ಮುನ್ನ ಬದಿಗೆ ಸರಿಸುವ ಯತ್ನ, ಏನೇ ಆದರೂ ಕೆಳಗಿದ್ದ ರಥದ
ಚಕ್ರ ಮೇಲೆ ಬರಲೇಬೇಕು. ಆದರೆ ಅಲ್ಲಿಯವರೆಗೆ ರಥ ಎಳೆಯಬೇಕು.

ಪಾದ ಪುರಾಣ ಮುಗಿಸುವ ಮುನ್ನ ನನ್ನ ಸಂದೇಹವೇನೆಂದರೆ
ಪಾದವೇಕೆ ತುಳಿಯಲ್ಪಟ್ಟಿತು. ಎಲ್ಲಾ ಅಂಗಗಳು ಪ್ರಮುಖವಾಗಿರುವಾಗ
ಪಾದವನ್ನು ಬಿಟ್ಟು ಮುನ್ನಡೆಯಲು ಸಾಧ್ಯವೇ? ಇದಕ್ಕೆ ನಿಮ್ಮ
ಉತ್ತರ 'ಇಲ್ಲ' ಎಂದಾದರೆ, ಶಿರ, ಭುಜ, ತೊಡೆಗಳಂತೆ ಪಾದಕ್ಕೂ
ಪಾವಿತ್ರ್ಯತೆ ನೀಡಿ ಒಂದಾಗಿ ಸಾಗಿ, ಅದೇ ಮಾನವ ಜನಾಂಗಕ್ಕೆ
ನೀಡಬಹುದಾದ ಮಹಾನ್ ಕೊಡುಗೆ. ಇತೀ ನಿಮ್ಮ
ಪಾದ ಸೇವಕ.

○ ಎಲ್.ಜಿ. ಶಿವಕುಮಾರ್



ಅಜ್ಜಿಯ ಕತೆಗಳ ಕನಸ
ಕೊಂದು ಬಿಡು.
ರಾಜ ರಾಣಿ ಅರಮನೆ ಸಿಂಹಾಸನ
ವಜ್ರ ವೈಡೂರ್ಯಗಳ ಮನಸ್ಸಲ್ಲೆ ಕರಗಿ
ಸೌದ ಬಂಗಲೆ ಕಾರು ವಗೈರುಗಳ ನೆನಸಿ
ಮನಸ್ಸು ಹಸಿರಾದೀತು

ಮಗು
ರಣರಂಗ ಕತ್ತಿ ವರಸೆ ಬಿಲ್ಲು ಬಾಣಗಳ
ಮರೆತು ಬಿಡು,
ಅಣು ಬಾಂಬ್ ಕ್ಷಿಪಣಿ
ಯುದ್ಧ ನೌಕೆಗಳಿಗೆ
ಭಂಗ ತಂದೀತು.

ಮಗು
ಹಾಲಿಗಾಗಿ ಬಾಯಗಲಿಸಿ
ಮೊಲೆ ಕಚ್ಚಿ ಕಿಬ್ಬೊಟ್ಟೆಗೆ ಹೊದ್ದು
ರಂಪ ಮಾಡದಿರು,
ಹುಟ್ಟುವಾಗಲೇ ಟಾನಿಕ್ ಮಾತ್ರೆ ಕೊಟ್ಟು

ಮಗು
ಬುದ್ಧಿಯ ತಾಲೀಮು ನಡೆಸಬೇಕೇ
ಪುಸ್ತಕ ಗುರು ಕಸರತ್ತುಗಳ ಒತ್ತಟ್ಟಿಗಿಟ್ಟು
ಟೀವಿ, ಕಂಪ್ಯೂಟರ್ ಒಳಗೆ ತಲೆ ಹಿಕ್ಕು
ಜಾಣನಂತೆ ಭ್ರಮಿಸುತ್ತೀಯಾ

ಮಗು
ಕೈ ಕಾಲುಗಳ ದಣಿಸದಿರು,
ಯಂತ್ರಗಳಿಗೆ ತುಕ್ಕು ಹಿಡಿದೀತು.

ಮಗು
ಅಜ್ಜಿಯ ಕತೆಯಲ್ಲಿ ಬರುತ್ತಿದ್ದ
ನರಿ ತೋಳ ಕಾಗೆ, ಆನೆ ಸಿಂಹಗಳ
ನೋಡದಿರು,
ಮಾರ್ಕೆಟ್‌ಲಿ ಸಿಗುತ್ತವೆ
ಶೋಕೇಸ್ಸಿನಲ್ಲಿಟ್ಟು ಆಗಾಗ್ಗೆ
ಧೂಳು ಹೊಡಿ ಅಷ್ಟೇ.

ಮಗು
ದಟ್ಟಡವಿ ಕಾಡನ್ನೆಲ್ಲ ಕಡಿಯಬೇಕೇ
ಕಡಿದು ಬಿಡು
ಹಾಳೆಯ ಮೇಲೆ ಕುಂಚ ಓಡಾಡಿದರೆ
ಎಂದೂ ಮಾಸದ ಕಾಡು, ಯಾವತ್ತು ಬತ್ತದ
ನದಿ ಸರೋವರಗಳು ಝುಳ ಝುಳ ಹರಿಯುತ್ತವೆ

ಮಗು
ನಿನಗೆ ಪ್ರಾಯ ಬಂದೀತೆ
ಪ್ರೀತಿ-ಪ್ರೇಮ ಕಾಮಕ್ಕೂ ಕೊರತೆ ಇಲ್ಲ
ನಿನಗೆ ವಂಶವೃಕ್ಷ ಬೇಕೆ
ಕಸಿ ಮಾಡಿದ ತಳಿಗಳು ಸಿಗುತ್ತವೆ.

ನಾನು ಹೇಳಿದ ಕತೆಯನ್ನು ನಿನ್ನ
ಮಗುವಿಗೆ ಹೇಳಬೇಡ
ಆಗ ನಾನು ಅಜ್ಜಿಯಾಗಿರುತ್ತೇನೆ.

○ ಹಾಲ್ಕುರಿಕೆ ಶಿವಶಂಕರ್

ಸಂವಾದ

ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ಸಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

ಚಂದಾ ವಿವರ

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-) ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು ಡಿಡಿ, ಎಂ.ಓ, ಮೂಲಕ ಮಾತ್ರ ಕಳುಹಿಸಬೇಕು

ಚಂದಾ ಕಳಿಸಬೇಕಾದ ವಿಳಾಸ : ಸಂವಾದ ಮಾಸ ಪತ್ರಿಕೆ

ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - 560 091

ದಲಿತ ಚರಿತ್ರೆಯ ಆಕರಗಳು

(36ನೇ ಪುಟದಿಂದ)

ಭೂಮಿಗಳು ದೈವವಾದ ಮುನಿಗೆ ಕುರಿ ಬಲಿ ನೀಡಿ ಪೂಜೆ ಮಾಡುವವ ಚೆರುಮಾನನೇ. ಕೋಚೀನ ಪ್ರದೇಶದಲ್ಲಿ ಪೂರ್ವದ ಕಡೆ ಮುಖ ಮಾಡಿ ಬತ್ತ ಕೊಯ್ಯುವ ವಿಧಿಯಾಚರಣೆ ಪೂರೈಸುವವ ಪುಲಯನ್. ಮೊದಲೆರಡು ಸಿವುಡು ಒಡೆಯನ ಮತ್ತು ತನ್ನ ದೈವಗಳಿಗೆಂದು ತೆಗೆದಿಡುವ ವಿಧಿ ಇದೆ. ಒಕ್ಕುವಾಗ ಕೂಡ ಪುಲಯ ದೈವಗಳಿಗೆ ಸಿವುಡು ತೆಗೆದಿಟ್ಟು ಅವುಗಳ ಮೇಲೆ ಹೆಂಡ ಸಿಂಪಡಿಸಿ "ಸುಗ್ಗಿ ಕಾಳು ಹೆಚ್ಚಲಿ" ಎಂದು ಕೂಗುತ್ತಾನೆ. (ಬಹುಶಃ 'ಹುಲಿಗ್ಯೊ' ಎಂದೇ ಕೂಗುವುದು)

ಕೇರಳದ ಉತ್ತರ ಭಾಗದಲ್ಲಿ ಮಲ್ಲನ್ ಮತ್ತು ಮುನಿ ದೈವಗಳಿಗೆ ಕುರಿ ಕೋಳಿ ಬಲಿ ನೀಡಿ ಬೆಳೆ ಕೊಯ್ಯುವುದನ್ನು ಪ್ರಾರಂಭಿಸುತ್ತಾರೆ. ಬತ್ತದ ಹೊಲಗಳ ಕೆಲಸಕ್ಕೆ ಅನುಗುಣವಾಗಿ ಪುಲಯರು ತಾತ್ಕಾಲಿಕ ಗುಡಿಸಲುಗಳನ್ನು ಕಿತ್ತು ಹಾಕಿಕೊಳ್ಳುತ್ತಿರುತ್ತಾರೆ.

ಈ ಎಲ್ಲ ವಿವರಗಳು ಈ ಲೇಖನದ ಪ್ರಾರಂಭದಲ್ಲಿ ಹೇಳಲಾದ ವಿಚಾರಗಳಿಗೆ ಸಾಕ್ಷ್ಯಾಧಾರವಾಗಿವೆ. ಚೆರ್‌ಮನ್ ಅಥವಾ ಪುಲಯರೇ ಭೂಮಿಯ ಮೊದಲ ಮಾಲಿಕರು. ಹೊಸ ಮಾಲಿಕರು ಬಂದು ಬಲಾತ್ಕಾರದಿಂದ ಎದೆ ಮೇಲೆ ಕೂತ ನಂತರವೂ ಅವರ ಮೂಲದ ವಿಧಿಯಾಚರಣೆಗಳು ಸ್ವಲ್ಪ ಮಾರ್ಪಾಟನೊಂದಿಗೆ ಉಳಿದುಬಂದವು. ಇಲ್ಲದಿದ್ದರೆ ಪುಲಯರಿಗೆ ಕೃಷಿ ಆಚರಣೆಗಳಲ್ಲಿ ಪ್ರಥಮ ಪ್ರಾಶಸ್ತ್ಯ ಸಲ್ಲುವ ಪ್ರಶ್ನೆಯೇ ಇರುತ್ತಿದ್ದಿಲ್ಲ. ಕುರಿ ಕೋಳಿ ಬಲಿ (ಪೂಲಿ), ಹೆಂಡದ ಬಳಕೆ ಇವೆಲ್ಲ ಪಂಚ'ಮ'ಕಾರದ ತಾಂತ್ರಿಕ ಮಾಟದ ಭಾಗವಾಗಿರುವುದನ್ನೇ ಖಚಿತಪಡಿಸುತ್ತವೆ.

"ಚೆರುಮ ಪಾದ"

ಎಷ್ಟು ಅಡಿ ದೂರ ? : ಶೋಷಕರಿಗೆ ದುಡಿಯಬೇಕಾದ ಜಮೀನುಗಳಲ್ಲಿ ಈ ಸ್ಥಿತಿಯಿದ್ದರೆ ಇದಕ್ಕೆ ತದ್ವಿರುದ್ಧವಾಗಿ ಊರುಗಳಲ್ಲಿ ಕ್ರೂರ ಅಸ್ಪೃಶ್ಯತೆ.

ಸವರ್ಣಿಯರಿಂದ ಚೆರುಮಾನರು 30 ಅಡಿ ದೂರವಿರಬೇಕಿತ್ತು. ಇದರೊಳಗೆ ಬಂದರೆ ಮೈಲಿಗೆ, ಸ್ನಾನ ಮಾಡಿ ಶುದ್ಧರಾಗಬೇಕಿತ್ತು. ಬ್ರಾಹ್ಮಣರ ಕೇರಿ ದೇಗುಲ ಕೆರೆಗಳ ಹತ್ತಿರ ಚೆರುಮಾನರಿಗೆ ಪ್ರವೇಶವಿರಲಿಲ್ಲ. ಬೀದಿಗಳಲ್ಲಿ 'ಓ ಹೋಜ' ಎಂದು ಕೂಗಿಕೊಂಡು ಬರಬೇಕಿತ್ತು. ಪಾಲಘಾಟದ ಬಜಾರಿನಲ್ಲಿ ತವರಿಗೆ ಪ್ರವೇಶವೇ ಇರಲಿಲ್ಲ.

ಮೈಲಿಗೆ ಆಗುವಷ್ಟು ಹತ್ತಿರ ಬಂದರೆ ನಾಯರ್ ಮೊದಲಾದ ಜಾತಿ ಜನ ಬಡಿಗೆಯಿಂದ ಹೊಡೆಯುತ್ತಿದ್ದರು. ಎಷ್ಟೋ ಸಲ ಕೊಲೆ ಮಾಡುತ್ತಿದ್ದರು. ದಕ್ಷಿಣದ ಪುಲಯನರು ಬ್ರಾಹ್ಮಣರಿಂದ 90ಅಡಿ, ನಾಯರರಿಂದ 64 ಅಡಿ ದೂರವಿರಬೇಕಿತ್ತು. ಇತರ ಜಾತಿ ಜನಗಳ ಹತ್ತಿರ ಅಡಿ ಪ್ರಮಾಣ ಕಡಿಮೆಯಾಗುತ್ತಿತ್ತು. ದನದ ಮಾಂಸ ಸೇವಿಸುತ್ತಿದ್ದ ಪುಲ ಚೆರುಮ, ಪರಯ, ನಾಯಾಡಿ, ಉಳ್ಳಾಡನ್‌ರು ತಮಗಿಂತ ಕೀಳೆಂದು ಚೆರುಮಾನರ ನಂಬಿಕೆಯಾಗಿತ್ತು. ನಾಯಾಡಿ ಮುಟ್ಟಿದರೆ ಚೆರುಮಾನ್ 7 ಕೆರೆಗಳಲ್ಲಿ ಸ್ನಾನ ಮಾಡಬೇಕಿತ್ತು. ಮತ್ತು ತನ್ನ ಬೆರಳನ್ನು ಕೊಯ್ದುಕೊಂಡು ಸ್ವಲ್ಪ ರಕ್ತ ಹರಿಸಬೇಕಿತ್ತು.

ಕೊಳ್ಳಾಟ-ಮಾರಾಟ : 18-19ನೇ ಶತಮಾನಗಲಲ್ಲಿ ಚೆರುಮಾನ್ ಗುಲಾಮರ ಮಾರಾಟ ಪದ್ಧತಿ-ನಿಲ್ಲಿಸಲು ಬ್ರಿಟೀಷ್ ಸರಕಾರ ಅರೆಬರೆ ಮನಸ್ಸಿನ ಪ್ರಯತ್ನ ಮಾಡಿದ್ದರಿಂದ, ಅದು ನಿಂತಿರಲಿಲ್ಲ. 1836ರಲ್ಲಿ ಮಲಬಾರಿನ ಸರಕಾರಿ ಭೂಮಿಗೆ, ಸಂಬಂಧಿಸಿದ ಚೆರುಮಾನರಿಂದ ಕೂಡುತ್ತಿದ್ದ ವಾರ್ಷಿಕ ಕಂದಾಯ 927 ರೂ. 13 ಆಣೆಗಳನ್ನು ಮಾಫ್ ಮಾಡಿ ಸರಕಾರಿ ಭೂಮಿಗಳಿಂದ ಮುಕ್ತಗೊಳಿಸಲಾಯಿತು.

ಮಕ್ಕಳನ್ನು ಹೆರುವ ಗುಲಾಮ ಹೆಂಗಸರ ಮಾರುಕಟ್ಟೆ ಬೆಲೆ ಗಂಡಸರಿಗಿಂತ ಹೆಚ್ಚಿತ್ತು. ಒಬ್ಬ ಯುವಕನ ಬೆಲೆ 3-8-0ರೂ. ನ್ಯಾಯಾಲಯದ ಹರಾಜಿನಲ್ಲಿ 10 ತಿಂಗಳ ಮಗು 1-10-6 (ರೂ. ಆಣೆ. ಪೈ)ಗೆ ಮಾರಾಟವಾಯಿತು. ತಾಯಿಗೆ ಪ್ರತ್ಯೇಕ ಬೆಲೆ.

ಕಂದಾಯದ ಬಾಕಿ ತುಂಬುವುದಕ್ಕಾಗಿ ಒಡೆಯರು ಚೆರುಮಾನ್ ಗುಲಾಮರನ್ನು ಮಾರಾಟ ಮಾಡುತ್ತಿದ್ದರು. 1835ರ ಗಣತಿ ಪ್ರಕಾರ 14,4000 ಗುಲಾಮರಿದ್ದರು. 1842ರಲ್ಲಿ ಈ ಸಂಖ್ಯೆ ಹೆಚ್ಚಿ 15,9000 ಜನರಾದುದನ್ನು ನೋಡಿದರೆ ಗುಲಾಮಗಿರಿ ಹೆಚ್ಚುತ್ತಿದ್ದುದು ಗೊತ್ತಾಗುತ್ತದೆ. 1871ರಲ್ಲಿ ಮಲಬಾರಿನಲ್ಲಿ ಚೆರುಮಾನರ ಸಂಖ್ಯೆ 99009 ಇದ್ದರೆ 1881ರಲ್ಲಿ 64735ಕ್ಕಿಳಿಯಿತು. ಕಾರಣವೇನೆಂದರೆ ಗುಲಾಮಗಿರಿಯಿಂದ ವಿಮೋಚನೆಗೊಳ್ಳಲು ಸುಮಾರು 40 ಸಾವಿರ ಚೆರುಮಾನರು ಇಸ್ಲಾಂಗೆ ಮತಾಂತರ ಗೊಂಡಿದ್ದುದು. ಪದೆ ಪದೆ ಆಗುತ್ತಿದ್ದ ಮಾಪಿಳ್ಳಾ ದಂಗೆಗಳಲ್ಲಿ ಇವರು ಪಾಲ್ಗೊಳ್ಳುತ್ತಿದ್ದರು.

ನಾಮಕಾವಾಸ್ತೆ ಬ್ರಿಟೀಷ್ ಸರಕಾರದ ಕಾನೂನಿದ್ದರೂ ಗುಲಾಮರನ್ನು ಮಾರುವ, ಕೊಳ್ಳುವ, ಬಾಡಿಗೆ ನೀಡುವ ಕೆಲಸ ಗುಪ್ತವಾಗಿ ನಡೆದೆ ಇತ್ತು. "ಗುಲಾಮಗಿರಿ ನಾಶ ಮಾಡಿದರೂ 'ವಲ್ಲಿಯಾಳ' (ವಲ್ಲಿ ಪಡೆವ ಆಳು, ವಲ್ಲಿ ಗುಲಾಮರಿಗೆ ಕೊಡುವ ಬತ್ತ) ಹೆಸರು ಈಗಲೂ ಚಾಲ್ತಿಯಲ್ಲಿದೆ" ಎಂದು ಅಯ್ಯರ್ ಬರೆಯುತ್ತಾರೆ.

ಹೀಗೆ ಎರಡು ಅತಿರೇಕಗಳ ನಡುವೆ ಕೇರಳದ ದಲಿತರ ಸಂಸ್ಕೃತಿ ಚರಿತ್ರೆ ಏರಿಳಿಯುತ್ತಿರುವುದರಿಂದ ಚರಿತ್ರೆಯ ಎರಡು ನಿರ್ಣಾಯಕ ಘಟ್ಟಗಳಲ್ಲಿ ದಲಿತರನ್ನು ಅಧ್ಯಯನ ಮಾಡುವುದು ಅವಶ್ಯವಾಗಿದೆ. ●

ವಸಂತಮೂನರ ಅಗಲಿಕೆ ; ಭರಿಸಲಾಗದ ನಷ್ಟ



ವಸಂತಮೂನ್ ನಮ್ಮನ್ನಗಲಿದ್ದಾರೆ. ನಾಗಪುರದಲ್ಲಿ ಅವರು ಸ್ಥಾಪಿಸಿರುವ ಗ್ರಂಥಾಲಯ, ಅನೇಕ ದಲಿತ ಚಳುವಳಿಯ ಪತ್ರಿಕೆಗಳಾದ 'ಜನತ', 'ಮೂಕ್‌ನಾಯಕ್'ಗಳ ಸಂಚಿಕೆಗಳು ಮತ್ತು ಇತರೆ ಪುಸ್ತಕಗಳನ್ನು ಶೇಖರಿಸಿದ್ದು, ಅವರನ್ನು ನೆನಪು ಮಾಡಿಕೊಡುವ ಜೀವಂತ ಸ್ಮಾರಕವಾಗಿದ್ದರೂ ಕೂಡ ಅವರ ಖಾಲಿತನವನ್ನು ತೋರಿಸುತ್ತದೆ. ಮಹಾರಾಷ್ಟ್ರ ಸರ್ಕಾರಕ್ಕೆ ಇವರು ಸಂಪಾದಿಸಿದ ಡಾ|| ಬಿ.ಆರ್. ಅಂಬೇಡ್ಕರ್‌ರ ಇಂಗ್ಲೀಷ್ ಬರಹಗಳ ಹದಿನೇಳು ಸಂಚಿಕೆಗಳು ಅವರ ಕೊಡುಗೆಯ ಮತ್ತೊಂದು ಮೈಲಿಗಲ್ಲು.

ದಲಿತ ಚಳುವಳಿಯ ಇತಿಹಾಸಕಾರ ವಸಂತಮೂನ್ ನಮ್ಮನ್ನಗಲಿದ್ದಾರೆ. ನಾಗಪುರದಲ್ಲಿ ಅವರು ಸ್ಥಾಪಿಸಿರುವ ಗ್ರಂಥಾಲಯ, ಅನೇಕ ದಲಿತ ಚಳುವಳಿಯ ಪತ್ರಿಕೆಗಳಾದ 'ಜನತ' (Janatha) ಮೂಕ್‌ನಾಯಕ್ (mook nayak)ಗಳ ಸಂಚಿಕೆಗಳು ಮತ್ತು ಇತರೆ ಪುಸ್ತಕಗಳನ್ನು ಶೇಖರಿಸಿದ್ದು, ಅವರನ್ನು ನೆನಪು ಮಾಡಿಕೊಡುವ ಜೀವಂತ ಸ್ಮಾರಕವಾಗಿದ್ದರೂ ಕೂಡ ಅವರ ಖಾಲಿತನವನ್ನು ತೋರಿಸುತ್ತದೆ. ಮಹಾರಾಷ್ಟ್ರ ಸರ್ಕಾರಕ್ಕೆ ಇವರು ಸಂಪಾದಿಸಿದ ಡಾ|| ಬಿ.ಆರ್. ಅಂಬೇಡ್ಕರ್‌ರ ಇಂಗ್ಲೀಷ್ ಬರಹಗಳ ಹದಿನೇಳು ಸಂಚಿಕೆಗಳು ಅವರ ಕೊಡುಗೆಯ ಮತ್ತೊಂದು ಮೈಲಿಗಲ್ಲು.

ವಸಂತ ಮೂನ್‌ರ ಜೀವನವು (1932-2002) ತನ್ನ ಸಮುದಾಯದ ಜೀವನ, ಸಂಘರ್ಷಗಳಲ್ಲಿ ಬೆರೆತಿರುವ ಮನುಷ್ಯನ ಜೀವನವಾಗಿತ್ತು. ಅವರು ತಮ್ಮ ಆತ್ಮಚರಿತ್ರೆಯನ್ನು (ಭಾರತದಲ್ಲಿ ಅಸ್ಪೃಶ್ಯನ ಬೆಳವಣಿಗೆ- Growing up untouchable in India) ನಾಗಪುರದಲ್ಲಿ ತಾವು ಬೆಳೆದ ಸಮುದಾಯದ ಹೆಸರನ್ನು, ಸರಳವಾಗಿ 'ವಾಸ್ತಿ' (Vasti) ಎಂದು ಕರೆದುಕೊಂಡಿದ್ದಾರೆ. ಇದು ಮಹಾರಾಷ್ಟ್ರದಲ್ಲಿ ಅತಿದೊಡ್ಡ ಜಾತಿಯಾಗಿರುವ 'ಮಹರ್' (Mohar)ಗಳ ನೆಲೆಗಳನ್ನು ಕುರಿತದ್ದಾಗಿದ್ದು, ಈ ಜಾತಿಯು ಮಹಾರಾಷ್ಟ್ರದ ಜೀವನದ ಜೊತೆಯಲ್ಲಿ ಎಷ್ಟು ಬೆರೆತುಹೋಗಿದೆ ಎಂದರೆ ಜೋತಿಬಾ ಫುಲೆಯವರು ಮಹಾರಾಷ್ಟ್ರ ರಾಜ್ಯಕ್ಕೆ ಅದರ ಹೆಸರು 'ಮಹರ್'ನಿಂದ ಬಂದುದಾಗಿ ಮತ್ತು ಅವರಿಗೆ ಆ ಹೆಸರನ್ನು ಆರ್ಯರೇ ನೀಡಿದ್ದಾರೆ ಏಕೆಂದರೆ ಆರ್ಯರು ಮಹರ್‌ಗಳನ್ನು ಅತಿದೊಡ್ಡ ಶತೃಗಳೆಂದು ಪರಿಗಣಿಸಿ ಹೋರಾಡಿದ್ದರೆಂದು ವಾದಿಸುತ್ತಾರೆ.

ಮೂನ್‌ರ ಕುಟುಂಬ ಮತ್ತು ಬಾಲ್ಯವೇ ಅವರ ಬಡತನದ ಎಲ್ಲ ಸಮಸ್ಯೆ ಮತ್ತು ಜೀವನ ಮಟ್ಟವನ್ನು ಸಮಷ್ಟಿಯಾಗಿ ತೆರೆದಿಡುತ್ತದೆ. ಹಾಗೆಯೇ ಇಡೀ ಸ್ವಾಭಿಮಾನಿ ದಲಿತ ಸಮುದಾಯವನ್ನು ಕೂಡ. ಅವರ ತಾತ ಸಮುದಾಯದ ಮುಖ್ಯಸ್ಥರಾಗಿದ್ದರು ಮತ್ತು ಬ್ರಿಟೀಷ್ ಅಧಿಕಾರಿಗಳ ಕೆಳಗೆ ಕೆಲಸ ಮಾಡುತ್ತಿದ್ದರು (ಬ್ರಿಟೀಷ್ ಸೈನ್ಯದಲ್ಲಿ ದಲಿತರ ಪಾತ್ರ-ಸನಿಕರಾಗಿ ಮಂಚೂಣಿಯಲ್ಲಿದ್ದು ಪ್ರಾರಂಭವನ್ನು ಒದಗಿಸುವುದಲ್ಲದೆ, ಆಪತ್ತು ಮತ್ತು ಅಪಾಯಕಾರಿ ದಂಡು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವುದು) ಮತ್ತು ಶಿಕ್ಷಣದ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ಮೈಗೂಡಿಕೊಂಡಿದ್ದರು. ಆದರೆ ಅವರ ತಂದೆ ಕುಡುಕನಾಗಿದ್ದು ಅವರ ತಾಯಿಯನ್ನು ಬಡತನ ಮತ್ತು ಅಸಹಾಯಕತನಕ್ಕೆ ತಳ್ಳಿ ತನ್ನಲ್ಲೆ ಅನುಭವವನ್ನು ಹೊರತುಪಡಿಸಿ ಹೊರಹೋಗಿ ದುಡಿಯುವಂತೆ ಒತ್ತಾಯಿಸಿದರು ಮತ್ತು ಅವರ ತಾಯಿ ಮೊದಲಿಂದಲೂ ಯಾವ 'ಹಿಂದೂ' ಕುಟುಂಬ ಕೂಡ ತನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ತಿಳಿದಿದ್ದರು ಹಾಗಾಗಿ ಅವರು ಪಾರ್ಸಿ ಕುಟುಂಬಗಳಲ್ಲಿ ಕೆಲಸ ಹುಡುಕುವ ಪ್ರಯತ್ನ ಮಾಡುತ್ತಿದ್ದರು.

ಮೂನ್‌ರವರ ಜೀವನವು ಹೋರಾಟಗಳಲ್ಲೊಂದಾಗಿದೆ; ಹಿಂದೂ-ಮಹರ್‌ಗಳಲ್ಲಿ ದಲಿತರು ತಮ್ಮ ಕುಸ್ತಿಪಟುಗಳು ಮತ್ತು ಸಂಘರ್ಷದ ಪರಂಪರೆಯೊಂದಿಗೆ ಹಿಂದೂಗಳಿಗೆ ವಿರುದ್ಧವಾಗಿ ತಮ್ಮನ್ನು ತಾವೇ ಕಟ್ಟಿಕೊಳ್ಳಬಹುದು. ಆದರೆ, ಸಂಪೂರ್ಣ ಹೋರಾಟದೊಂದಿಗೆ ಅವರ ಬಾಲ್ಯವು ಸಂತೋಷ ದಾಯಕವೇ ಆಗಿತ್ತು. ವಸಂತ ಮೂನ್ ಮತ್ತು ಅವರ ಸ್ನೇಹಿತರು ನಾಗಪುರದ ವನಗಳನ್ನೆಲ್ಲಾ ಸುತ್ತಾಡುತ್ತಿದ್ದರು, ಉರಿವ ಬೇಸಿಗೆಯ ಬಿಸಿಲಿನಲ್ಲಿ ಅಲೆದಾಡುತ್ತಿದ್ದರು, ನದಿಯ ದಡದುದ್ದಕ್ಕೂ ಏಡಿಗಳನ್ನು ಹಿಡಿಯುತ್ತಿದ್ದರು, ಮರಗಳಿಂದ ಹಣ್ಣುಗಳನ್ನು ಕೀಳುತ್ತಿದ್ದರು, ಮತ್ತು ಶಾಲೆಗೆ ಹೋಗಲು ಪ್ರಾರಂಭಿಸಿ ಆ ಮೂಲಕ ಈ ಹಂತದಲ್ಲಿ ಬೆಳೆಯುತ್ತಿರುವ ದಲಿತ ಯುವ ಪೀಳಿಗೆಯ ಒಂದು ಭಾಗವಾದರು. ಈ ಪೀಳಿಗೆಯು ಡಾ|| ಅಂಬೇಡ್ಕರ್ ಮುನ್ನಡೆಸುತ್ತಿದ್ದ ಚಳುವಳಿಯ ಭಾಗವಾಗಿದ್ದು ವಿದ್ಯಾರ್ಥಿವೇತನ ಪಡೆಯಲು ತಮ್ಮನ್ನು ತಾವು 'ಹರಿಜನ' ಎಂದು ಗುರುತಿಸಿಕೊಳ್ಳಲು ನಿರಾಕರಿಸಿದಾಗ ಗಾಂಧಿವಾದಿ ಶಿಕ್ಷಕರ ಆಶ್ರಯವನ್ನು ಕೂಡ ತಿರಸ್ಕರಿಸಿತು.

ತಮ್ಮದೇ ಆದ 'ಸಮತಾ ಸೈನಿಕ ದಳ' (Samata Sainika Dala)ವನ್ನು ಸ್ಥಾಪಿಸಿಕೊಂಡು, ಅದರ ಪೋಷಾಕು, ಕವಾಯತು, ಸೈನಿಕ ಪ್ರದರ್ಶನಗಳ ಬಗ್ಗೆ ಹೆಮ್ಮೆಪಡುತ್ತಿದ್ದರು. ತಮ್ಮ ಸಮುದಾಯದ ಪುರಾತನ ದೇವರುಗಳನ್ನು ಮತ್ತು ಅವರ ಮೂಢ ನಂಬಿಕೆಗಳನ್ನು ಖಂಡಿಸಿ ಮೂರ್ತಿಗಳನ್ನು ಒಡೆದುಹಾಕುವುದರ ಜೊತೆಗೆ ಪಾರಂಪರಿಕ ಉತ್ಸವಗಳಲ್ಲಿ ಭಾಗವಹಿಸುವುದನ್ನು ತಿರಸ್ಕರಿಸಿದರು. ಪೆರಿಯಾರ್ ಚಳುವಳಿ ಮತ್ತು ಹಿಂದೂ ಧರ್ಮದ ಹೆಸರಿನಲ್ಲಿ ನಡೆಸಲಾದ ದೌರ್ಜನ್ಯಗಳನ್ನು ಓದಿ ತಿಳಿದುಕೊಳ್ಳತೊಡಗಿದರು. ಬೌದ್ಧಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಸಂಗ್ರಹಿಸುವುದರ ಜೊತೆಗೆ ಉಪನ್ಯಾಸ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸತೊಡಗಿದರು. ಡಾ|| ಅಂಬೇಡ್ಕರ್‌ರ ನೇತೃತ್ವದಲ್ಲಿ ನಿರ್ಣಾಯಕ 'ಧಮ್ಮದೀಕ್ಷ' ಮತಾಂತರ ಆಚಾರವಿಧಿಗಳು, ನಡೆಯುವುದಕ್ಕೆ ಬಹು ಹಿಂದೆ ನಾಗಪುರದ ಮಹರ್ ಜನರ ಸಮಷ್ಟಿ ಜೀವನವು ಸಾಂಸ್ಕೃತಿಕ ರೂಪಾಂತರದಿಂದ ಆವರಿಸಿತ್ತು. ಈ ಎಲ್ಲದರ ಹಿಂದೆ ಮೂನ್‌ರವರು ಪ್ರಮುಖ ಕಾರ್ಯಕರ್ತರಾಗಿದ್ದರು.

ಇಂಗ್ಲೀಷ್‌ನಲ್ಲಿ ಉತ್ತೀರ್ಣನಾಗುವುದೇ ಇಲ್ಲವೆಂದು ಶಿಕ್ಷಕರೊಬ್ಬರು ಮೂನ್‌ರವರಿಗೆ 'ಶಾಪ' ಹಾಕಿದ್ದರು. ಆದರೆ ಅವರು ಉತ್ತೀರ್ಣನಾಗುವುದಷ್ಟೇ ಅಲ್ಲ 'ಸಾಹೇಬ'ನಾಗಲು ಸರ್ಕಾರಿ ನೌಕರಿಗೆ ಸೇರಿಕೊಳ್ಳುವುದರ ಜೊತೆಗೆ ಡಾ|| ಅಂಬೇಡ್ಕರರ ಇಂಗ್ಲೀಷ್ ಬರಹಗಳಿಗೆ ಸಂಪಾದಕನಾಗುವ ಮಹತ್ತರ ಜವಾಬ್ದಾರಿಯನ್ನು ಕೂಡ ವಹಿಸಿಕೊಂಡರು. 'ಸ್ಟಡೀಸ್ ಆನ್ ಬುದ್ಧಿಸಮ್ (Studies on Buddhism) 'ಪ್ರೀ-ಹಿಸ್ಟಾರಿಕ್ ದಲಿತ್ ಲೀಡರ್ಸ್ ಆಫ್ ನಾಗಪುರ್ (Pre historical Dalit Leaders of Nagpur)ನಂತಹ ಪುಸ್ತಕಗಳು ಕೂಡ ಇವರ ಕೊಡುಗೆಯಾಗಿದ್ದು ಅವರ ಇಂಗ್ಲೀಷ್ ಭಾಷೆಯಲ್ಲಿ ಹೊಂದಿದ್ದ ಪ್ರಾವಿಣ್ಯತೆಯನ್ನು ತೋರಿಸುತ್ತದೆ. ಇವುಗಳನ್ನು ಗುರುತಿಸಲು, ಜಾತಿ ವ್ಯವಸ್ಥೆಯಿಂದ ಕೂಡಿದ, ಅವುಗಳನ್ನು ಒಪ್ಪಿಕೊಳ್ಳಲು ಇಚ್ಛಿಸದ, ಸಮಾಜದಲ್ಲಿ ದಲಿತರ ಸಾಮರ್ಥ್ಯಕ್ಕೆ 'ಸಾಧನೆ'ಯೇ ಸಾಕ್ಷಿಯಾಗುತ್ತದೆ. ಅವರು ತಮ್ಮ ಪತ್ನಿ ಮೀನಾಕ್ಷಿ (ಕಾರ್ಯಕರ್ತೆ ಮತ್ತು ಮಹಿಳೆಯರ ಮರಾಠಿ ಪತ್ರಿಕೆಯ ಸಂಪಾದಕರು), ನಾಲ್ಕು ಜನ ಮಕ್ಕಳು, ಮೊಮ್ಮಕ್ಕಳು ಹಾಗೂ ತಾವು ನಡೆಸಿಕೊಂಡು, ಕಾಪಾಡಿಕೊಂಡು ಬಂದ ಅಂಬೇಡ್ಕರ್ ಚಾಲಿತ ದಲಿತ ಚಳುವಳಿಯ ದಾಖಲೆಗಳಿಂದ ಫಲ ಉಂಡ ಮತ್ತು ಅವರನ್ನು ಬಲ್ಲ ಎಲ್ಲರ ಕೃತಜ್ಞತೆ ಮತ್ತು ಪ್ರೀತಿಯ ಜೊತೆಯಲ್ಲಿ ನಮ್ಮೊಡನೆ ಜೀವಂತವಾಗಿದ್ದಾರೆ. ಅವರ ಅಗಲಿಕೆ ಒಂದು ಬಹು ದೊಡ್ಡ ಕಂದರವನ್ನು ನಿರ್ಮಿಸಿದ್ದು ಈ ಕಂದರವನ್ನು ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ಚಳುವಳಿಯ ಕಾರ್ಯವನ್ನು ಮುಂದುವರೆಸುವ ಮೂಲಕ ಮಾತ್ರ ತುಂಬಲು ಸಾಧ್ಯ. ●

○ ಗೇಲ್ ಓಮ್‌ವೆಡ್ಟ್

ಜಾತಿ ಪ್ರಜ್ಞೆಯ ಮೂಲ ಹುಡುಕುತ್ತಾ...

(ಹಿಂದಿನ ಸಂಚಿಕೆಯಿಂದ)

ಗೇಬ್ರಿಯಲ್ ಟರ್ಡೇ ಅವರು ಈ ಅನುಕರಣ ಪ್ರವೃತ್ತಿಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿದ್ದಾರೆ. ಅವರು ಮೂರು ಅನುಕರಣ ನಿಯಮಗಳನ್ನು ಪ್ರತಿಪಾದಿಸಿದ್ದಾರೆ. ಈ ಮೂರು ನಿಯಮಗಳಲ್ಲಿ ಒಂದೆಂದರೆ, ಅನುಕರಣೆಯೆಂಬುದು ಮೇಲಿನಿಂದ ಕೆಳಕ್ಕೆ ಹರಿಯುತ್ತದೆಂಬುದು; ಅಥವಾ ಅವರ ಮಾತುಗಳನ್ನೇ ಉದಾಹರಿಸಬಹುದು: "ಅವಕಾಶ ಕೊಟ್ಟಲ್ಲಿ, ಉತ್ತಮ ವರ್ಗ ಯಾವಾಗಲೂ ಮತ್ತು ಎಲ್ಲೆಡೆಗಳಲ್ಲೂ ತನ್ನ ಮುಂದಾಳುಗಳು, ರಾಜರು ಅಥವಾ ಸಾರ್ವಭೌಮರನ್ನು ಅನುಕರಿಸುತ್ತದೆ; ಅದರಂತೆ ಅವಕಾಶ ದೊರೆತಾಗ ಜನತೆ ತನ್ನ ಶ್ರೀಮಂತ ವರ್ಗಗಳನ್ನು ಅನುಕರಿಸುತ್ತದೆ". ಟರ್ಡೇ ಅವರು ಹೇಳುವ ಅನುಕರಣ ನಿಯಮಗಳಲ್ಲಿ ಇನ್ನೊಂದೆಂದರೆ-ಅನುಕರಣೆಯ ವ್ಯಾಪ್ತಿ ಅಥವಾ ತೀವ್ರತೆಯು ದೂರದ ಅಂತರವನ್ನು ಅವಲಂಬಿಸಿ ತಲೆಕೆಳಗಾಗಿ ವ್ಯತ್ಯಾಸಗೊಳ್ಳುತ್ತದೆ; ಅಥವಾ ಅವರ ಮಾತುಗಳಲ್ಲೇ ಹೇಳುವುದಾದರೆ; "ಸಮೀಪವಿರುವ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದುದನ್ನು ಅತ್ಯಧಿಕವಾಗಿ ಅನುಕರಣೆ ಮಾಡಲಾಗುತ್ತದೆ. ವಾಸ್ತವವಾಗಿ ತನಗಿಂತ ಉತ್ಕೃಷ್ಟವಾದ ಮಾದರಿಗಳ ಉದಾಹರಣೆಯ ಪ್ರಭಾವವು, ಅದರ ದೂರವನ್ನು ಅನುಸರಿಸಿ, ನೇರವಾಗಿಯೂ ವಿಪರ್ಯಯವಾಗಿಯೂ ಪರಿಣಾಮಕಾರಿಯಾಗಿದೆ. ಇಲ್ಲಿ ದೂರವೆಂಬುದು ಅದರ ಸಾಮಾಜಿಕ ಅರ್ಥದಲ್ಲಿ ಪರಿಗ್ರಹಿಸಲಾಗಿದೆ. ಈ ದೃಷ್ಟಿಕೋನದಿಂದ ಒಬ್ಬ ಹೊಸಬ ಪರಿಸರದಿಂದ ಅದೆಷ್ಟೋ ದೂರವಿದ್ದರೂ ಕೂಡ ಅವನು ಹತ್ತಿರವಿದ್ದಂತೆಯೇ; ಏನೆಂದರೆ ಆತನೊಡನೆ ನಾವು ಅನೇಕ ಮತ್ತು ದಿನನಿತ್ಯದ ಸಂಬಂಧ ಹೊಂದಿರಬೇಕು, ಹಾಗೂ ಆತನನ್ನು ಅನುಕರಿಸುವ ಅಪೇಕ್ಷೆಯನ್ನು ತೃಪ್ತಿಗೊಳಿಸುವ ಎಲ್ಲ ಅನುಕೂಲವೂ ನಮಗಿರಬೇಕು. ಹತ್ತಿರದವರನ್ನು, ಅತ್ಯಂತ ಕಡಿಮೆ ದೂರದಲ್ಲಿರುವವರನ್ನು ಅನುಕರಿಸುವ ಈ ನಿಯಮವು, ಉನ್ನತ ಸಾಮಾಜಿಕ ಸ್ತರಗಳವರು ಹಾಕಿರುವ ಮೇಲ್ಪಂಕ್ತಿಯು ಕ್ರಮೇಣ ಹಾಗೂ ಪರಿಣಾಮದ ಹಬ್ಬುವಿಕೆಯ ಸ್ವರೂಪವನ್ನು ವಿವರಿಸುತ್ತದೆ.

ಕೆಲವು ಜಾತಿಗಳು ಅನುಕರಣೆಯಿಂದ ಹುಟ್ಟಿಕೊಂಡಿವೆಯೆಂಬ ನನ್ನ ಈ ವಾದದ ಸಮರ್ಥನೆಗೆ, ಬೇರೆ ಪುರಾವೆಗಳ ಅಗತ್ಯವಿಲ್ಲವಾದರೂ ಅತ್ಯುತ್ತಮ ಮಾರ್ಗವೆಂದರೆ, ಹಿಂದೂ ಸಮಾಜದಲ್ಲಿ ಅನುಕರಣೆಯಿಂದಾದ ಜಾತಿಗಳ ರಚನೆಗೆ ಜೀವಂತ ಸ್ಥಿತಿಗತಿಗಳು ಇದ್ದುವೆ ಇಲ್ಲವೆ ಎಂಬುದನ್ನು ಕಂಡುಕೊಳ್ಳುವುದೇ ಆಗಿದೆಯೆಂದು ನನಗೆ ತೋರುತ್ತದೆ. ಈ ಪ್ರಮಾಣಿತ ಆಧಾರದ ಪ್ರಕಾರ ಅನುಕರಣೆಗೆ ಇರುವ ಪರಿಸ್ಥಿತಿಗಳು : (1) ಅನುಕರಣೆಗಿರುವ ಮೂಲ ಆಕರವು ಗುಂಪಿನಲ್ಲಿ ಪ್ರತಿಷ್ಠಿತವೆನಿಸಿರಬೇಕು. (2) ಒಂದು ಗುಂಪಿನ ಸದಸ್ಯರೊಳಗೆ ಅನೇಕ ಮತ್ತು ದಿನನಿತ್ಯದ ಸಂಬಂಧಗಳು

ಶಾಸ್ತ್ರಗಳಿಂದ ದೈವಮೂರ್ತಿಯೆಂದು ಪುರಸ್ಕೃತನಾದ ಮತ್ತು ಪುರೋಹಿತರಿಂದ ತುಂಬಿ ಹೋದ ಜನ ಸಮುದಾಯದಿಂದ ಪೂಜಿತನಾದ ಅಂಥ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಅನಂತರದ ಮಾನವ ಸಮುದಾಯದ ಮೇಲೆ ಹರಿಸದೆ ಬಿಡುತ್ತಾನೆಯೆ? ಅಷ್ಟೇ ಏಕೆ, ಈ ಕಥೆ ನಿಜವೇ ಆದರೆ, ಆತನೇ ಸೃಷ್ಟಿಯ ತುದಿಯೆಂದೂ ನಂಬಲಾಗಿದೆ. ಅಂಥ ಪ್ರಾಣಿಯೊಂದು, ಕೇವಲ ಅನುಕರಣೆಗಿಂತ ಹೆಚ್ಚಿನದಕ್ಕೆ ಯೋಗ್ಯನೆ ಆದರೂ, ಕನಿಷ್ಠ ಅನುಕರಣ ಯೋಗ್ಯನಂತೂ ಹೌದು: ಆತ ಸ್ವಜಾತಿ ಪದ್ಧತಿಯ ಪರಿಧಿಯೊಳಗೆ ವಾಸಿಸಿದರೆ ಉಳಿದವರೂ ಕೂಡ ಆತನ ಉದಾಹರಣೆಯನ್ನು ಅನುಸರಿಸಬೇಡವೆ?

ಇರಲೇಬೇಕು. ಈ ಪರಿಸ್ಥಿತಿ ಭಾರತದಲ್ಲಿ ಇತ್ತೆ ಎಂಬುದನ್ನು ಸಂದೇಹಿಸಲು ಸ್ವಲ್ಪವೂ ಕಾರಣವಿಲ್ಲ. ಬ್ರಾಹ್ಮಣನು ಅರೆದೇವತೆ ಹಾಗೂ ಬಹುಮಟ್ಟಿಗೆ ದೈವಾಂಶ ಸಂಭೂತ. ಆತ ಒಂದು ಮಾದರಿಯನ್ನು ತಯಾರಿಸಿ ಉಳಿದುವನ್ನು ಅದರಂತೆ ರೂಪಿಸುತ್ತಾನೆ. ಆತನ ಪ್ರತಿಷ್ಠೆ ಪ್ರಶ್ನಾತೀತವಾದುದು. ಆತ ಪರಮಸುಖದ ಮತ್ತು ಉತ್ತಮವಾದುದರ ಉಗಮಸ್ಥಾನ. ಶಾಸ್ತ್ರಗಳಿಂದ ದೈವಮೂರ್ತಿಯೆಂದು ಪುರಸ್ಕೃತನಾದ ಮತ್ತು ಪುರೋಹಿತರಿಂದ ತುಂಬಿ ಹೋದ ಜನ ಸಮುದಾಯದಿಂದ ಪೂಜಿತನಾದ ಅಂಥ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಅನಂತರದ ಮಾನವ ಸಮುದಾಯದ ಮೇಲೆ ಹರಿಸದೆ ಬಿಡುತ್ತಾನೆಯೆ? ಅಷ್ಟೇ ಏಕೆ, ಈ ಕಥೆ ನಿಜವೇ ಆದರೆ, ಆತನೇ ಸೃಷ್ಟಿಯ ತುದಿಯೆಂದೂ ನಂಬಲಾಗಿದೆ. ಅಂಥ ಪ್ರಾಣಿಯೊಂದು, ಕೇವಲ ಅನುಕರಣೆಗಿಂತ ಹೆಚ್ಚಿನದಕ್ಕೆ ಯೋಗ್ಯನೆ ಆದರೂ, ಕನಿಷ್ಠ ಅನುಕರಣ ಯೋಗ್ಯನಂತೂ ಹೌದು: ಆತ ಸ್ವಜಾತಿ ಪದ್ಧತಿಯ ಪರಿಧಿಯೊಳಗೆ ವಾಸಿಸಿದರೆ ಉಳಿದವರೂ ಕೂಡ ಆತನ ಉದಾಹರಣೆಯನ್ನು ಅನುಸರಿಸಬೇಡವೆ? ದುರ್ಬಲ ಮಾನವ ಕುಲವೆ! ಇಂಥದೊಂದು ವಿಚಾರ ತುಂಬಿಕೊಂಡ ತತ್ವಜ್ಞಾನಿಯಾಗಲಿ, ಸಾಧಾರಣ ಮನೆಗೆಲಸದವಳಾಗಲಿ ಗೋರಿಯಲ್ಲಿದ್ದರೂ ಅದಕ್ಕೆ ತುತ್ತಾಗುತ್ತಾರೆ. ಅದು ಬೇರೆಯಾಗಲು ಸಾಧ್ಯವೇ ಇಲ್ಲ. ಅನುಕರಣೆ ಸುಲಭ, ನಿರ್ಮಾಣ ಕಷ್ಟ.

ಜಾತಿಗಳು ರೂಪುಗೊಳ್ಳುವುದರಲ್ಲಿ ಅನುಕರಣೆಯ ಪಾತ್ರವನ್ನು ಸಾಧಿಸಿ ತೋರಿಸಲು ಇನ್ನೂ ಒಂದು ಮಾರ್ಗವಿದೆ. ಬ್ರಾಹ್ಮಣೇತರ ವರ್ಗಗಳ ಧೋರಣೆಯನ್ನು ಅರ್ಥ ಮಾಡಿಕೊಳ್ಳಬೇಕು; ಇತಿಹಾಸದ ಬೆಳವಣಿಗೆಯಲ್ಲಿ ಈ ಪದ್ಧತಿಗಳು ಹಿಂದೂ ಬುದ್ಧಿಯಲ್ಲಿ ಗಟ್ಟಿಯಾಗಿ ಕುಳಿತುಬಿಟ್ಟವು, ಮತ್ತು ಇಂದಿಗೂ ಅವು ಕೆರೆಯ ಮೇಲಿನ ಪಾಚಿಯ ಹಾಗೆ ಯಾವ ಸಹಾಯವೂ ಇಲ್ಲದೆ ಅಲ್ಲಿಯೇ ನೇತಾಡುತ್ತಿವೆ. ಅವಕ್ಕೆಂದು ಯಾವ ಆಸರೆಯೂ ಬೇಕಾಗಿಲ್ಲ, ನಂಬಿಕೆಯೇ ಸಾಕು. ಆದರೆ ಒಂದು ರೀತಿಯಲ್ಲಿ ಮಾತ್ರ, ಹಿಂದೂ ಸಮಾಜದಲ್ಲಿ ಜಾತಿಯ ಪ್ರತಿಷ್ಠೆಯು ನೇರವಾಗಿ-'ಸತಿ', ಒತ್ತಾಯದ ವೈಧವ್ಯ ಮತ್ತು ಬಾಲ್ಯವಿವಾಹ ಈ ಪದ್ಧತಿಗಳ ಆಚರಣೆಯ ವ್ಯಾಪ್ತಿಯೊಂದಿಗೆ-ಹೆಚ್ಚು ಕಡಿಮೆಯಾಗುತ್ತದೆ. ಆದರೆ ಈ ಸಂಪ್ರದಾಯಗಳ ಆಚರಣೆ ಕೂಡ ನೇರವಾಗಿ (ನಾನು ಟರ್ಡೆಯವರ ಅರ್ಥದಲ್ಲಿ ಈ ಶಬ್ದವನ್ನು ಬಳಸುತ್ತಿದ್ದೇವೆ) ಜಾತಿಯನ್ನು ಬೇರ್ಪಡಿಸುವ ಅಂತರಕ್ಕನುಗುಣವಾಗಿ ವ್ಯತ್ಯಾಸಗೊಳ್ಳುತ್ತದೆ. ಬ್ರಾಹ್ಮಣರಿಗೆ ಸಮೀಪತರವಾಗಿರುವ ಆ ಜಾತಿಗಳು ಮೂರೂ ಸಂಪ್ರದಾಯಗಳನ್ನು ಅನುಕರಿಸಿವೆ ಮತ್ತು ಅವುಗಳ ಕಟ್ಟುನಿಟ್ಟಾದ ಆಚರಣೆಗೆ ಒತ್ತಾಯಿಸಿವೆ. ಕಡಿಮೆ ಅಂತರದಲ್ಲಿರುವ ಜಾತಿಗಳ ಕಡ್ಡಾಯ ವೈಧವ್ಯ ಮತ್ತು ಬಾಲ್ಯವಿವಾಹವನ್ನು ಅನುಕರಿಸಿವೆ; ಉಳಿದವರು, ಇನ್ನೂ ಸ್ವಲ್ಪ ದೂರದಲ್ಲಿರುವವರು, ಬಾಲ್ಯವಿವಾಹವನ್ನಷ್ಟೇ ಅನುಕರಿಸಿದ್ದಾರೆ; ಇನ್ನೂ ಹೆಚ್ಚು ದೂರದಲ್ಲಿ ಇರುವವರು ಜಾತಿ ನಿಯಮದ ನಂಬಿಕೆಯನ್ನಷ್ಟೇ ಅನುಕರಿಸಿದ್ದಾರೆ; ಈ ಅಪೂರ್ಣ ಅನುಕರಣೆಗೆ-ಭಾಗಶಃ ಟರ್ಡೆಯವರು ಹೇಳುವಂತೆ 'ಅಂತರ'ವೂ, ಭಾಗಶಃ ಈ ಸಂಪ್ರದಾಯಗಳ ಅನಾಗರಿಕ ಲಕ್ಷಣವೂ ಕಾರಣವಾಗಿವೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈ ಸಂಗತಿಯು ಟರ್ಡೆಯವರು ಹೇಳುವ ನಿಯಮಕ್ಕೆ ಪೂರ್ಣ ನಿದರ್ಶನವಾಗಿದೆ; ಭಾರತದಲ್ಲಿ ಜಾತಿ-ರಚನೆಯು ಮೇಲುವರ್ಗದವರನ್ನು ಕೆಳವರ್ಗದವರು ಅನುಕರಿಸುವ ಪ್ರಕ್ರಿಯೆಯೇ ಆಗಿದೆಯೆಂಬುದರಲ್ಲಿ ಸಂಶಯ ಉಳಿಯುವುದಿಲ್ಲ. ಈ ಹಂತದಲ್ಲಿ ನಾನು ನನ್ನೊಂದು ಹಿಂದಿನ ತೀರ್ಮಾನವನ್ನು

ಬೆಂಬಲಿಸುವ ಸಲುವಾಗಿ ಹಿಂದಕ್ಕೆ ಹೊರಳುತ್ತೇನೆ ನಿಮಗೆ, ನನ್ನ ಹಿಂದಿನ ತೀರ್ಮಾನವು, ತೀರ ದುಡುಕಿನದೆಂದೂ ಅಥವಾ ಆಧಾರ ರಹಿತವೆಂದೂ ತೋರಿರಲೂಬಹುದು. ಪ್ರಶ್ನಿಸಲಾಗುತ್ತಿರುವ ಆ ಮೂರು ಸಂಪ್ರದಾಯಗಳ ಸಹಾಯದಿಂದ ಬ್ರಾಹ್ಮಣವರ್ಗವು ಮೊದಲು ಜಾತಿಯ ರಚನೆಯನ್ನು ನಿರ್ಮಿಸಿತೆಂದು ನಾನು ಹೇಳಿದ್ದೇನೆ. ಆ ತೀರ್ಮಾನಕ್ಕೆ ನನ್ನ ತರ್ಕ ಯಾವುದೆಂದರೆ ಉಳಿದ ವರ್ಗಗಳಲ್ಲಿ ಅವುಗಳ ಅಸ್ತಿತ್ವವು ನಿಷ್ಪನ್ನವಾದುದು. ಬ್ರಾಹ್ಮಣೇತರ ಜಾತಿಗಳಲ್ಲಿ ಈ ಸಂಪ್ರದಾಯಗಳು ಅನುಕರಣೆಯ ಪಾತ್ರ ಕುರಿತು ನಾನು ಹೇಳಿದ್ದೇನೆಂದರೆ, ಅನುಕರಣೆಯು ಒಂದು ಸಾಧನ ಅಥವಾ ಆದರ್ಶ. ಅನುಕರಿಸುವವರಿಗೆ ಅದರ ಅರಿವೇ ಇರಲಿಲ್ಲವಾದರೂ ಅವು ನಿಷ್ಪನ್ನವಾಗಿದ್ದು ಅವರಲ್ಲಿ ರೂಢಿಯಲ್ಲಿವೆ. ಹೀಗೆ ಅವು ಇನ್ನೊಂದರಿಂದ ನಿಷ್ಪನ್ನವೆಂದಾದರೆ, ಅವರಿಗೆ ಮಾದರಿಯಾಗಿ ನಿಲ್ಲುವಷ್ಟು ಉನ್ನತವಾದ ಮೂಲ ಜಾತಿಯೊಂದು ಇದ್ದಿರಲೇಬೇಕು. ಆದರೆ ಅರ್ಚಕರೇ ಆಳುವ ಸಮಾಜದಲ್ಲಿ ದೇವರ ಸೇವಕನ ಹೊರತು ಬೇರೆ ಯಾರು ತಾನೆ ಮಾದರಿಯಾಗಿರಲು ಸಾಧ್ಯವಿದೆ?

ತಮ್ಮ ಕದಗಳನ್ನು ಮುಚ್ಚುವಷ್ಟು ದುರ್ಬಲರಾದವರ ಕಥೆ ಇಲ್ಲಿಗೆ ಮುಗಿಯುತ್ತದೆ. ತಮಗೆ ಒಳಗೆ ಬಿಡದಂತೆ ಬಾಗಿಲು ಹಾಕಿಕೊಂಡ ಕಾರಣದಿಂದ ಹೊರಗೇ ಉಳಿದ ಇತರರೂ ಹೇಗೆ ಕದ ಮುಚ್ಚಿಕೊಂಡರೆಂಬುದನ್ನು ಈಗ ನಾವು ನೋಡೋಣ. ಇದನ್ನು ನಾನು ಜಾತಿ ರಚನೆಯ ಒಂದು ಯಾಂತ್ರಿಕ ಪ್ರಕ್ರಿಯೆನ್ನುತ್ತೇನೆ. ಅದು ಯಾಂತ್ರಿಕವಾದುದು, ಏಕಂದರೆ ಅದು ಅನಿವಾರ್ಯವಾಗಿತ್ತು. ವಿಷಯವನ್ನು ವಿವರಿಸುವುದರಲ್ಲಿ ಈ ಧಾಟಿಯ ವಿಶ್ಲೇಷಣೆ ಹಾಗೂ ಮಾನಸಿಕ ವಿವರಮೆ ನನಗಿಂತ ಹಿಂದಿನವರಿಂದ ಜಾರಿ ಹೋಗಿದೆ, ಅದಕ್ಕೆ ಕಾರಣವೆಂದರೆ ಅವರು ಜಾತಿಯನ್ನು, ಜಾತಿ ವ್ಯವಸ್ಥೆಯೊಳಗಿನದೇ ಆದ ಒಂದು ಘಟಕವೆಂದು ಪರಿಭಾವಿಸದೆ ಅದು ತನಗೆ ತಾನೆ ಇರುವ ಘಟಕವೆಂದು ಭಾವಿಸಿದ್ದು, ಈ ಬಗೆಯ ಅಜಾಗರೂಕತೆ ಅಥವಾ ದೃಷ್ಟಿದೋಷದ ಪರಿಣಾಮವಾಗಿ, ಜಾತಿ ವಿಷಯವನ್ನು ಸಮಂಜಸವಾಗಿ ಅರ್ಥೈಸಲೂ ಮತ್ತು ಆ ಮೂಲಕ ಜಾತಿಯನ್ನು ಸರಿಯಾಗಿ ವಿವರಿಸಲೂ, ಬಾಧಕವಾಗಿ ಪರಿಣಮಿಸಿದೆ. ನನ್ನದೇ ವಿವರಣೆಯನ್ನು ಕೊಡತೊಡಗುತ್ತೇನೆ: ಇದರ ಸಂಬಂಧದಲ್ಲಿ ನನ್ನ ಒಂದು ಹೇಳಿಕೆಯನ್ನು ನಿರಂತರವಾಗಿ ನೆನಪಿಡಬೇಕೆಂದು ಆಗ್ರಹಪಡಿಸುತ್ತೇನೆ. ಅದೆಂದರೆ : ಏಕವಚನದಲ್ಲಿ ಜಾತಿ ಎಂಬುದು ಅವಾಸ್ತವ : ಜಾತಿಗಳು ಯಾವಾಗಲೂ ಬಹುವಚನದಲ್ಲೇ ಬದುಕಿರುತ್ತವೆ. ಜಾತಿ ಎಂಬಂಥ ಪದಾರ್ಥವಿಲ್ಲ; ಯಾವಾಗಲೂ ಜಾತಿಗಳು ಇರುತ್ತವೆ. ನನ್ನ ಅರ್ಥವೇನೆಂಬುದನ್ನು ದೃಷ್ಟಾಂತೀಕರಿಸುತ್ತೇನೆ ತಮ್ಮನ್ನೇ ಒಂದು ಜಾತಿಯಾಗಿಸಿಕೊಂಡು ಬ್ರಾಹ್ಮಣರು ಇದರ ಪ್ರಭಾವದಿಂದ ಬ್ರಾಹ್ಮಣೇತರ ಜಾತಿಯನ್ನು ಮಾಡಿದರು; ಅಥವಾ ಇದನ್ನು ತನ್ನದೇ ಆದ ವಿಧಾನದಲ್ಲಿ ವ್ಯಕ್ತ ಪಡಿಸುವುದಾದರೆ, ಬ್ರಾಹ್ಮಣರು ತಾವು ಒಳಗೆ ಸೇರಿ ಬಾಗಿಲು ಮುಚ್ಚಿಕೊಳ್ಳುವುದರ ಮೂಲಕ ಉಳಿದವರನ್ನು

ಬ್ರಾಹ್ಮಣೇತರ ಜಾತಿಗಳಲ್ಲಿ ಈ ಸಂಪ್ರದಾಯಗಳು ಅನುಕರಣೆಯ ಪಾತ್ರ ಕುರಿತು ನಾನು ಹೇಳಿದ್ದೇನೆಂದರೆ, ಅನುಕರಣೆಯು ಒಂದು ಸಾಧನ ಅಥವಾ ಆದರ್ಶ. ಅನುಕರಿಸುವವರಿಗೆ ಅದರ ಅರಿವೇ ಇರಲಿಲ್ಲವಾದರೂ ಅವು ನಿಷ್ಪನ್ನವಾಗಿದ್ದು ಅವರಲ್ಲಿ ರೂಢಿಯಲ್ಲಿವೆ. ಹೀಗೆ ಅವು ಇನ್ನೊಂದರಿಂದ ನಿಷ್ಪನ್ನವೆಂದಾದರೆ, ಅವರಿಗೆ ಮಾದರಿಯಾಗಿ ನಿಲ್ಲುವಷ್ಟು ಉನ್ನತವಾದ ಮೂಲ ಜಾತಿಯೊಂದು ಇದ್ದಿರಲೇಬೇಕು. ಆದರೆ ಅರ್ಚಕರೇ ಆಳುವ ಸಮಾಜದಲ್ಲಿ ದೇವರ ಸೇವಕನ ಹೊರತು ಬೇರೆ ಯಾರು ತಾನೆ ಮಾದರಿಯಾಗಿರಲು ಸಾಧ್ಯವಿದೆ?

ಹೊರಕ್ಕೆ ದಬ್ಬಿದರು; ಇನ್ನೊಂದು ದೃಷ್ಟಾಂತದೊಂದಿಗೆ ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ. ಭಾರತ ದೇಶವನ್ನು ಅದರ ವಿವಿಧ ಕೋಮುಗಳೊಂದಿಗೆ ಒಟ್ಟಿಗೆ ನೋಡೋಣ: ಇಲ್ಲಿನ ವಿವಿಧ ಕೋಮುಗಳು ನಾನಾ ಉಪಜಾತಿಗಳ ಉಪಾಧಿಗಳಿಂದ ಕೂಡಿದ್ದು ಅವುಗಳಿಗೆ ನಿಷ್ಠೆಯಿಂದಿವೆ : ಹಿಂದೂಗಳು, ಮುಹಮ್ಮದೀಯರು, ಯೆಹೂದ್ಯರು, ಕ್ರಿಶ್ಚಿಯನ್ನರು ಮತ್ತು ಪಾರಸಿಗಳು-ಇವರನ್ನು ನಾನು ಚೆನ್ನಾಗಿ ಬಲ್ಲೆ. ಇವರಲ್ಲಿ ಹಿಂದೂಗಳನ್ನು ಬಿಟ್ಟರೆ ಉಳಿದವರು ಅವರವರೊಳಗೆ ಜಾತಿಯಿಲ್ಲದ ಕೋಮುಗಳು, ಆದರೆ ಪರಸ್ಪರವಾಗಿ ಮಾತ್ರ ಅವರೆಲ್ಲಾ ಜಾತಿಗಳೇ, ಮತ್ತೆ, ಮೇಲೆ ಹೆಸರಿಸಿದ ಐವರಲ್ಲಿ ಮೊದಲನೆಯ ನಾಲ್ಕು ಕೋಮುಗಳವರು ತಾವೇ ಬಾಗಿಲು ಹಾಕಿಕೊಂಡಲ್ಲಿ, ಪಾರಸಿಗಳು ನೇರವಾಗಿ ಹೊರಗುಳಿಯುತ್ತಾರೆ. ಹಾಗೂ ಪರ್ಯಾಯವಾಗಿ ಅವರೂ ತಮ್ಮೊಳಗೇ ಸೇರುತ್ತಾರೆ. ಸಾಂಕೇತಿಕವಾಗಿ 'ಎ' ಗುಂಪು ಸ್ವಗೋತ್ರಿಗಳಾಗ ಬಯಸಿದರೆ 'ಬಿ' ಗುಂಪು ಕೂಡ, ಕೇವಲ ಪರಿಸ್ಥಿತಿಯ ಒತ್ತಡದಿಂದಾಗಿ, ಹಾಗೇ ಆಗಬೇಕಾಗುತ್ತದೆ.

ಈಗ ಇದೇ ತರ್ಕವನ್ನು ಹಿಂದೂ ಸಮಾಜಕ್ಕೂ ಅನ್ವಯಿಸಿರಿ; ಅದರಲ್ಲಿ ಅಂತರ್ನಿಹಿತವಾಗಿರು, ತನಗೆ ತಾನೇ ಇಮ್ಮಡಿಯಾಗುತ್ತಾ ಹೋಗುವ ಸ್ವಭಾವದ ಪ್ರಭಾವದಿಂದಾಗಿಯೇ ಬಿರಿದು ಬೇರೆ ಬೇರೆಯಾಗುವ ಜಾತಿಯ ಈ ಲಕ್ಷಣ ಕುರಿತ ಇನ್ನೊಂದು ವಿವರಣೆಯೂ ನಿಮ್ಮ ಮುಂದಿದೆ. ಜಾತಿಯ ನೈತಿಕ, ಧಾರ್ಮಿಕ, ಸಾಮಾಜಿಕ ಸಂಹಿತೆಯನ್ನು ಗಂಭೀರವಾಗಿ ವಿರೋಧಿಸುವ ಯಾವುದೇ ಹೊಸ ಬದಲಾವಣೆಯನ್ನೂ ಜಾತಿಯು ಸಹಿಸಲಾರದು; ಒಂದು ಜಾತಿಯಲ್ಲಿ ತನಗೆ ಮಣಿಯದಿರುವ ಸದಸ್ಯರನ್ನು ಗಂಭೀರವಾಗಿ ವಿರೋಧಿಸುವ ಯಾವುದೇ ಹೊಸ ಬದಲಾವಣೆಯನ್ನೂ ಜಾತಿಯು ಸಹಿಸಲಾರದು; ಒಂದು ಜಾತಿಯಲ್ಲಿ ತನಗೆ ಮಣಿಯದಿರುವ ಸದಸ್ಯರನ್ನು ಜಾತಿಯಿಂದ ಹೊರಗೆ ಹಾಕುವ ಅಪಾಯವಿದೆ; ಅಂಥವರಿಗೆ ಬೇರೆ ಜಾತಿಗಳವರು ತಮ್ಮೊಳಗೆ ಸೇರಿಸಿಕೊಳ್ಳುವ ಅಥವಾ ಬರಮಾಡಿಕೊಳ್ಳುವ ಪರ್ಯಾಯ ವ್ಯವಸ್ಥೆಯಿಲ್ಲದೆ ಅವರ ಪಾಡಿಗೆ ಅವರನ್ನು ಬಿಟ್ಟು ಬಿಡಲಾಗುವುದು. ಜಾತಿಯ ಕಟ್ಟುಪಾಡುಗಳು ಎಷ್ಟು ಕಠೋರವಾಗಿವೆಯೆಂದರೆ ಅಪರಾಧಗಳ ಸ್ವರೂಪ ಭಿನ್ನತೆಯ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸುವುದಿಲ್ಲ. ಹೊಸತನವೆಂಬುದು ಯಾವುದೇ ಸ್ವರೂಪದ್ದಾಗಿರಬಹುದು, ಆದರೆ ಅವೆಲ್ಲವೂ ಒಂದೇ ಬಗೆಯ ದಂಡವನ್ನು ಅನುಭವಿಸುತ್ತವೆ. ಹೊಸ ಬಗೆಯ ಆಲೋಚನೆಯು ಇನ್ನೊಂದು ಜಾತಿಯನ್ನು ಸೃಷ್ಟಿಸುತ್ತದೆಂದು ಹಳೆಯ ಜಾತಿಗಳು ಅದನ್ನು ಸಹಿಸುವುದಿಲ್ಲ. ಒಳ್ಳೆಯದನ್ನು ಆಲೋಚಿಸುವವನನ್ನು ಗೌರವದಿಂದ ಗುರು (ಪ್ರವಾದಿ) ಎಂದು ಕರೆಯಲಾಗುತ್ತಿದ್ದು ಆತ ಕೂಡ, ಅನೈತಿಕ ಪ್ರೇಮದಲ್ಲಿ ತಪ್ಪಿತಸ್ಥರಾದವರು ಅನುಭವಿಸುವಂತಹ ಪಾಡಿಗೆ, ಗುರಿಯಾಗುತ್ತಾನೆ. ಗುರು (ಪ್ರವಾದಿ) ಧಾರ್ಮಿಕ ಮತ ಸ್ವರೂಪದ ಜಾತಿಯನ್ನೂ, ಅನೈತಿಕ ಪ್ರೇಮಿಗಳು ಸಮ್ಮಿಶ್ರಿತ ಜಾತಿಯನ್ನೂ ಸೃಷ್ಟಿಸುತ್ತಾರೆ. ಸಂಹಿತೆಯನ್ನು ಉಲ್ಲಂಘಿಸುವ ಧೈರ್ಯಶಾಲಿಯಾದ ತಪ್ಪಿತಸ್ಥನಿಗೆ ಜಾತಿಗಳು ದಯೆ ತೋರುವುದಿಲ್ಲ. ಅವನಿಗೆ ದಂಡನೆಯೆಂದರೆ ಬಹಿಷ್ಕಾರ ಹಾಕುವುದು ಇದರ ಫಲಿತಾಂಶವೆಂದರೆ ಇನ್ನೊಂದು ಹೊಸ ಜಾತಿ. ಬಹಿಷ್ಕೃತರಾದವರು ತಾವೇ ಒಂದು ಜಾತಿಯಾಗಲು ಪ್ರೇರೇಪಿಸಿದ್ದು ವಿಚಿತ್ರವಾದ ಹಿಂದೂ ಮನೋಧರ್ಮವಲ್ಲ; ಅದು ಅದಕ್ಕಿಂತಲೂ ದೂರವೇ ಇದೆ. ಇದಕ್ಕೆ ತದ್ವಿರುದ್ಧವಾಗಿ, ಬಹು ವಾಡಿಕೆಯಾಗಿರುವುದೆಂದರೆ, ಬಹಿಷ್ಕರಿಸಲ್ಪಟ್ಟವರು ಅವರನ್ನು ತಮ್ಮೊಳಗೆ ಬರಮಾಡಿಕೊಳ್ಳುವುದಕ್ಕೆ ಸಿದ್ಧವಿರುವ ಯಾವುದೇ (ಸಾಧ್ಯವಾದರೆ ಮೇಲುಮಟ್ಟದ) ಜಾತಿಯ ವಿನೀತ ಸದಸ್ಯರಾಗಿರಲು ಇಷ್ಟಪಡುತ್ತಾರೆ. ಆದರೆ ಜಾತಿಗಳು ಬೇರಿ ಹಾಕಿಕೊಂಡ ಘಟಕಗಳು. ಆ ಜಾತಿಗಳ ತೀರ ಪ್ರಜ್ಞಾಪೂರ್ವಕವಾದ ಒಳಸಂಚೇ ಬಹಿಷ್ಕೃತರನ್ನು ತಮ್ಮೊಳಗೇ ಒಂದು ಜಾತಿಯಾಗುವಂತೆ ಒತ್ತಾಯಿಸುವುದು. ಈ ಹಟಮಾರಿತನದ ಪರಿಸ್ಥಿತಿಯ ತರ್ಕವು ನಿರ್ದಯವಾದುದು. ಅದರ ಒತ್ತಡಕ್ಕೆ ಮಣಿದಿದ್ದರಿಂದ, ಕೆಲವು ದುರಾದೃಷ್ಟದ ಗುಂಪುಗಳು, ತಾವೂ ಕೂಡ ಆವರಣ ಕಟ್ಟಿಕೊಂಡಿರುವುದನ್ನು ಗುರುತಿಸಿಕೊಳ್ಳುತ್ತೇವೆ, ಏಕೆಂದರೆ ಇತರರೂ ತಮ್ಮನ್ನು ತಾವು ಬೇಲಿ ಕಟ್ಟಿಕೊಳ್ಳುವುದರ ಮೂಲಕ ಇವರನ್ನು ಹೊರಗಟ್ಟಿದ್ದರು. ಇದರ ಪರಿಣಾಮ ಹೊಸ ಗುಂಪುಗಳು (ಜಾತಿ ಕಟ್ಟಳೆಗೆ ವಿರುದ್ಧ ಭಾವದ ಯಾವುದೇ ಆಧಾರದಿಂದ ರಚಿತವಾಗಿದ್ದು) ಯಾಂತ್ರಿಕ ನಿಯಮಗಳಿಂದ ಸತತವಾಗಿ ಜಾತಿಗಳಾಗಿ ಅಚ್ಚರಿಯಾಗುವಂಥ ಹಲವು ಭಾಗಗಳಾಗಿ ಪರಿವರ್ತಿತ ವಾಗುತ್ತವೆ. ಭಾರತದಲ್ಲಿ ಜಾತಿ ರಚನೆಯ ಪ್ರಕ್ರಿಯೆಯಲ್ಲಿ ಎರಡನೆಯ ಕಥೆಯನ್ನು ಹಾಗೆ ಹೇಳಲಾಗಿದೆ.

(ಮುಂದಿನ ಸಂಚಿಕೆಗೆ)

'SAMVADA' Kannada Monthly JUNE - 2003 RNI-KAR KAN/2002/9246 CPMG/KA/BGW-706/2003-05

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) ಕಾಡಿನ ದಾವೇದಾರ ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) ಉಮರಾವ್ ಜಾನ್ ಅದಾ ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) ಹಾವಿನ ಡೊಂಕು ರೂ. 50/-
(ಸ್ವೀಡಿಷ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)
ಅನುವಾದ : ವನಮಾಲಾ ವಿಶ್ವನಾಥ್, ಹಾನ್ಸ್ ಉ ಹೊಮ್‌ಸ್ತ್ರಮ್)

4) ಕಾರ್ಮೆಲೀನ ರೂ. 100/-
(ಕೊಂಕಣಿ ಮೂಲ : ದಾಮೋದರ ಮಾವಜೊ, ಅನುವಾದ : ಶಾ.ಮಂ. ಕೃಷ್ಣರಾಯ)

ಕಥೆಗಳು

1) ಕೊಂಕಣಿ ಕಥಾ ಸಂಗ್ರಹ ರೂ. 125/-
(ಸಂಪಾದಕ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ.ಮಂ. ಕೃಷ್ಣರಾಯ)

2) ಒಂದು ಪೀಳಿಗೆಯ ತೆಲುಗು ಕಥೆಗಳು ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು ರೂ. 150/-
(ಸಂಪಾದಕ : ಗೋಪಿ ಚಂದ್ ನಾರಂಗ್, ಅನುವಾದ : ಡಿ.ಎ. ಶಂಕರ್)

4) ಮಧುರಾಂತಕಂ ರಾಜಾರಾಂ ಕಥೆಗಳು ರೂ. 150/-
(ತೆಲುಗು ಮೂಲ : ಮಧುರಾಂತಕಂ ರಾಜಾರಾಂ
ಅನುವಾದ : ಲಕ್ಷ್ಮೀಪತಿ, ಕೋಲಾರ)

5) ದಕ್ಷಿಣ ಕಾಮರೂಪದ ಒಂದು ಕಥಾನಕ ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ,
ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) ಯಕೃತ್ತು ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್,
ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

1) ಆಡು ಹಾವೇ ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್, ಅನುವಾದ : ಡಾ. ಬಸವರಾಜ ಕಲ್ಗುಡಿ)

2) ಶ್ರೀರಾಧಾ ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್)

3) ಶ್ರೀ ಬಸವಣ್ಣನವರ ವಚನ ಸಂಗ್ರಹ ರೂ. 65/-
(ಸಂಪಾದಕ : ಸ.ಸ. ಮಾಳವಾಡ)

4) ಎರಡು ದಶಕದ ಕವಿತೆ ರೂ. 65/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) ತೆಲುಗು ಕಾವ್ಯಮಾಲೆ ರೂ. 125/-
(ಸಂಪಾದಕ, ದೇವುಲಪಲ್ಲಿ ರಾಮಾನುಜರಾವ್
ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) ಗೊರೂರು ರಾಮಸ್ವಾಮಿ ಅಯ್ಯಂಗಾರ್ ರೂ. 25/-
(ಲೇಖಕರು : ಸಿ.ಜಿ. ವೆಂಕಟಯ್ಯ)

2) ಶಂಬಾ ಜೋಶಿ ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) ಭೀಮಾಜಿಯಿ ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ ಪಿಸ್ಸೆ)

4) ಮೋಹನ್ ರಾಕೇಶ್ ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್. ಜಿ. ಶ್ರೀಮತಿ)

5) ಚಿಲಕಮುರ್ತಿ ಲಕ್ಷ್ಮೀನರಸಿಂಹಮ್ ರೂ. 25/-
(ಲೇಖಕರು : ವಿ.ವಿ. ಎಲ್. ನರಸಿಂಹರಾವ್, ಅನುವಾದ : ಕೆ. ಮರುಳಸಿದ್ದಪ್ಪ)

6) ಅನ್ನಮಾಚಾರ್ಯ ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) ಶಾಂತಿನಾಥ ದೇಸಾಯಿ ರೂ. 25/-
(ಲೇಖಕರು : ಜಿ.ಎಸ್. ಆಮೂರ್)

8) ಎಂ.ಎಸ್. ಪುಟ್ಟಣ್ಣ ರೂ. 25/-
(ಲೇಖಕರು : ಎಸ್.ಎಸ್. ಸುಜಾತ)

9) ದೇವುಡು ರೂ. 25/-
(ಲೇಖಕರು : ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ)

10) ಕುಮಾರವ್ಯಾಸ ರೂ. 25/-
(ಲೇಖಕರು : ಕೀರ್ತಿನಾಥ ಕುರ್ತಕೋಟಿ)

11) ಸಂ.ಶಿ. ಭೂಸನೂರಮಠ ರೂ. 25/-
(ಲೇಖಕರು : ಶಾಂತಾ ಇಮ್ರಾಪೂರ)

12) ಸೇಡಿಯಾಪು ಕೃಷ್ಣಭಟ್ಟ ರೂ. 25/-
(ಲೇಖಕರು : ಎಂ. ರಾಮಚಂದ್ರ)

13) ಅಭಿನವಗುಪ್ತ ರೂ. 25/-
(ಲೇಖಕರು : ಜಿ.ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) ಮಂದಾರ ರಾಮಾಯಣ ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) ಕಲಾಪೂರ್ಣೋದಯ ರೂ. 100/-
(ಅನುವಾದ : ಆರ್. ಶೇಷಶಾಸ್ತ್ರಿ, ಜೆ. ಸದಾನಂದಂ)

3) ನನ್ನ ಜೀವಾವಧಿಯ ಶಿಕ್ಷೆ ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ
ಅನುವಾದ : ವಿರೂಪಾಕ್ಷ ಕುಲಕರ್ಣಿ)

4) ವನದೇವತೆ ರೂ. 25/-
(ಲೇಖಕರು : 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ :

ಕೇಂದ್ರ ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
ದೂರವಾಣಿ : 2245152